ಸೋಮೇಶ್ವರ ಶತಕ

ಭಾವಾರ್ಥ, ಟಿಪ್ಪಣಿ, ಪೂರ್ವಕಥೆಗಳಿಂದ ಕೂಡಿದೆ

ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು

೧೯೬೧

ಸೋಮೇಶ್ವರ ಶತಕ

ಭಾವಾರ್ಥ, ಟಿಪ್ಪಣಿ, ಪೂರ್ವಕಥೆಗಳಿಂದ ಕೂಡಿದೆ

ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು
೧೯೬೧

ಮೊದಲನೆಯ ಮುದ್ರಣ: ೧೯೨೩
ಎರಡನೆಯ ಮುದ್ರಣ: ೧೯೪೯
ಮೂರನೆಯ ಮುದ್ರಣ: ೧೯೫೪
ನಾಲ್ಕನೆಯ ಮುದ್ರಣ: ೧೯೬೧

ಬೆಲೆ : ರೂ. ೧-೫೦ ನ.ಪೈ.

ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟ
ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ, ಬೆಂಗಳೂರು-೧೮

ಪ್ರಕಾಶಕರ ಮುನ್ನುಡಿ

ಸೋಮೇಶ್ವರ ಶತಕವು ಕನ್ನಡ ಸಾಹಿತ್ಯ ಪರಿಷತ್ತಿನಿಂದ ಮೊಟ್ಟ ಮೊದಲು ೧೯೨೩ರಲ್ಲಿ ಪ್ರಕಟವಾಯಿತು. ಆಮೇಲೆ ೧೯೪೯ರಲ್ಲಿ ಎರಡನೆಯ ಬಾರಿಯೂ ೧೯೫೪ರಲ್ಲಿ ಮೂರನೆಯ ಬಾರಿಯೂ ಅಚ್ಚಾಯಿತು. ಈ ಎಲ್ಲ ಮುದ್ರಣಗಳೂ ಈಗ ಮುಗಿದಿವೆ. ಜನಪ್ರಿಯವಾದ ಈ ಗ್ರಂಥವು ಪರಿಷತ್ತಿನ ಪರೀಕ್ಷೆಗಳಿಗೆ ಮತ್ತೆ ಪಠ್ಯ ಪುಸ್ತಕವಾಗಿರುವುದರಿಂದಲೂ, ಈ ಗ್ರಂಥಕ್ಕೆ ಜನಗಳಿಂದ ಬೇಡಿಕೆ ಹೆಚ್ಚಾಗಿ ಬಂದಿರುವುದರಿಂದಲೂ, ಈಗ ಇದನ್ನು ನಾಲ್ಕನೆಯ ಬಾರಿಗೆ ಪರಿಷತ್ತು ಪ್ರಕಟಿಸಿದೆ.

ಈ ರೀತಿ ಈ ಶತಕಕ್ಕೆ ಮೇಲಿಂದ ಮೇಲೆ ಪ್ರೋತ್ಸಾಹವನ್ನೀಯುತ್ತಿರುವ ಕನ್ನಡನಾಡಿನ ಬಂಧು ಭಗಿನಿಯರಿಗೆ ಪರಿಷತ್ತಿನ ಪರವಾಗಿ ನಮ್ಮ ವಂದನೆಗಳು.

೧೯೨೩ರಲ್ಲಿ ಹಿರಿಯ ಸಾಹಿತಿಗಳೂ ಕೀರ್ತಿಶೇಷರೂ ಆದ ಶ್ರೀ ಬೆಳ್ಳಾವೆ ವೆಂಕಟನಾರಾಯಣಪ್ಪನವರು ಈ ಗ್ರಂಥವನ್ನು ಪರಿಷ್ಕರಿಸಿ ಟಿಪ್ಪಣಿಗಳನ್ನು ಬರೆಸಿ ಪೂರ್ವಕಥೆಗಳನ್ನು ಸಂಗ್ರಹಿಸಿ ಪರಿಷತ್ತಿನಿಂದ ಅಚ್ಚು ಮಾಡಿಸಿದರು. ಆಗ ಅವರು ಈ ಗ್ರಂಥವನ್ನು ಕುರಿತು ಬರೆದ ಬೆಲೆಯುಳ್ಳ ಅಭಿಪ್ರಾಯಗಳನ್ನು ಪೀಠಿಕೆಯಿಂದ ಅರಿಯಬಹುದು.

ಈ ಸಲದ ಮುದ್ರಣದಲ್ಲಿ ಪರಿಷತ್ತಿನ ಅಧ್ಯಕ್ಷ ಆಸ್ಥಾನವಿದ್ವಾನ್, ಪಂಡಿತರತ್ನಂ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು ಕವಿ ಕಾವ್ಯ ವಿಚಾರವಾಗಿಯೂ ಕನ್ನಡದಲ್ಲಿ ಬಳೆದು ಬಂದಿರುವ ಶತಕ ಸಾಹಿತ್ಯದ ವಿಚಾರವಾಗಿಯೂ ಕೆಲವು ಉಪಯುಕ್ತ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ಇದು ಈ ಗ್ರಂಥದ ಓದುಗರಿಗೆ ಹೆಚ್ಚು ಪ್ರಯೋಜನವಾಗುವುದೆಂದು ನಾವು ನಂಬುತ್ತೇವೆ.

ಅನ್ನದಾನಯ್ಯ ಪುರಾಣಿಕ
ಕೆ. ಎಂ. ಕೃಷ್ಣರಾವ್
ಗೌರವ ಕಾರ್ಯದರ್ಶಿಗಳು.

ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು-೧೮.

ಪೀಠಿಕೆ

ಗ್ರಂಥದ ವಿಷಯ.—ಈಗ ಮೂವತ್ತು ನಾಲ್ವತ್ತು ವರುಷಗಳ ಹಿಂದೆ ಕನ್ನಡ ವಿದ್ಯಾಭ್ಯಾಸ ಮಾಡಿದ ಬಾಲಕರಲ್ಲಿ ಸೋಮೇಶ್ವರ ಶತಕವನ್ನು ಓದದಿದ್ದವರು ಇರಲೇ ಇಲ್ಲವೆಂದು ಹೇಳಿದರೆ ಅತಿಶೋಕ್ತಿಯಾಗಲಾರದು. ಈಗಲೂ ಈ ಶತಕದಲ್ಲಿರುವ ಅನೇಕ ವಾಕ್ಯಗಳನ್ನು ಕನ್ನಡಿಗರು ತಾವಾಡುವ ಮಾತಿನಲ್ಲಿ *ಗಾದೆಗಳಂತೆ ಉಪಯೋಗಿಸುತ್ತಿರುವರು. ಆದರೆ ಈಚೆಗೆ ಈ ಗ್ರಂಥದ ಪ್ರಾಚುರ್ಯವು ಕಡಿಮೆಯಾಗುತ್ತ ಬಂದು ಈಗಿನ ಕನ್ನಡ ಶಾಲೆಗಳಲ್ಲಿಯ ಬಾಲಕ ಬಾಲಕಿಯರಿಗೆ ಇದರ ವಿಷಯವೇ ತಿಳಿಯದಂತಾಗಿದೆ. ಈ ಕವಿತೆಯ ಪ್ರತಿಗಳಲ್ಲಿ ಅಬದ್ಧಗಳು ಕ್ರಮೇಣ ಹೆಚ್ಚುತ್ತ ಬಂದು ಕೆಲವರು ಅವನ್ನು ತಮಗೆ ತೋರಿದ ರೀತಿಯಲ್ಲಿ ತಿದ್ದಿರುವುದರಿಂದ ಈಗ ಕೆಲವು ಪದ್ಯಗಳಲ್ಲಿ ಕವಿಯ ಅಭಿಪ್ರಾಯವು ಏನೆಂಬುದು ಸ್ಪಷ್ಟವಾಗಿ ತಿಳಿಯದಂತಾಗಿದೆ. ಇದರ ಜೊತೆಗೆ ಮುದ್ರಣಕಾರರು ಜನಸಾಮಾನ್ಯಕ್ಕೆ ಪುಸ್ತಕವನ್ನು ಅಗ್ಗವಾಗಿ ದೊರಕಿಸಬೇಕೆಂಬ ಕುತೂಹಲದಿಂದ ಬಹಳ ಕೀಳ್ತರದ ಕಾಗದವನ್ನುಪಯೋಗಿಸಿ ಮುದ್ರಣದ ತಪ್ಪುಗಳನ್ನು ತಿದ್ದುವ ಶ್ರಮವನ್ನು ಕಡಿಮೆಮಾಡಿಕೊಂಡಿರುವುದರಿಂದಲೂ, ಗ್ರಂಥದಲ್ಲಿ ಕೆಲವು ಲಜ್ಜಾವಹವಾದ ಪದ್ಯಗಳನ್ನು ಕೊಟ್ಟಿರುವುದರಿಂದಲೂ ಈ ಗ್ರಂಥವು ಬಾಲಕ ಬಾಲಿಕೆಯರು ಓದಲು ಅರ್ಹವಾದುದಲ್ಲವೆಂದು ಕೆಲವರು ಅಭಿಪ್ರಾಯಪಟ್ಟಿರುವಂತೆ ತೋರುತ್ತದೆ. ಈ ಕುಂದು ಕೊರತೆಗಳನ್ನು ಸಾಧ್ಯವಾದಮಟ್ಟಿಗೆ ದೂರಮಾಡಿ

---

* ಗಾದೆಗಳಂತೆ ರೂಢಿಯಲ್ಲಿರುವ ಕೆಲವು ಪದ್ಯ ಭಾಗಗಳು.— ಪಲವುಂ ಪಳ್ಳ ಸಮುದ್ರವೈ (ಪ. ೧). ಸತಿಗೆ ಪಾತಿವ್ರತ್ಯವೇ ಭೂಷಣಂ (೫). ಪಡೆದಷ್ಟಲ್ಲದೆ ಬರ್ಪುದೇ (೨೮). ಬಡವಂ ಬಲ್ಲಿದನಾಗನೇ (೩೫). ಗಣಕಂ ಹೆಗ್ಗಣಕಂ ಸಮಂ (೬೩). ಅರೆಯುಂ ಸೀಳುವೊಡಾನೆ ಮೆಟ್ಟಲಹುದೇ (೭೬). ಸನ್ನೆ ಸಾವಿರ ಕಾಲಾಳಿನ ಸತ್ಯವೈ (೭೬). ತೆರಬಲ್ಲರ್ ಪೊಣೆಯಪ್ಪುದೈ (೭೭). ಕೊಡುಬೇಕುತ್ತಮನಾದವಂಗೆ ಮಗಳಂ ಸತ್ಪಾತ್ರಕಂ ದಾನಮುಂ (೭೯). ತೆರಬೇಡೊತ್ತೆಗೆ ಬಡ್ಡಿಯಿಂ (೮೨). ಕವಿಯೋ ರಾಜರ ಕಣ್ಣಿಲ್ಲೈ (೮೬). ಮಡಿಯೋ ನಿರ್ಮಲ ಚಿತ್ತವೈ (೯೭).

ಈ ನೀತಿ ಶತಕವು ಬಾಲಕ ಬಾಲಿಕೆಯರಿಗೆ ಉಪಯೋಗವಾಗುವಂತೆ ಮಾಡಬೇಕೆಂಬುದೇ ನಮ್ಮ ಈ ಮುದ್ರಣದ ಮುಖ್ಯೋದ್ದೇಶವಾಗಿರುವುದು.

ವಾಚಕರ ಮನಸ್ಸಿಗೆ ಹತ್ತುವಂತೆ ಬಳಕೆಯಲ್ಲಿರುವ ಮಾತುಗಳನ್ನುಪಯೋಗಿಸಿ ಇಷ್ಟು ಸುಲಭ ಶೈಲಿಯಲ್ಲಿ ಮನೋಹರವಾದ ಛಂದೋರಚನೆಯಿಂದ ಸಹಜವಾಗಿ ಹೇಳಿರುವ ನೀತಿಬೋಧಕವಾದ ಕವಿತೆಯು ಕನ್ನಡ ಭಾಷೆಯಲ್ಲಿ ಅಪೂರ್ವವೆಂದೇ ಹೇಳಬೇಕು. ಕವಿಯು ಈ ಗ್ರಂಥವನ್ನು ರಚಿಸಿದುದು ತನ್ನ ಕೌಶಲವನ್ನು ತೋರಿಸಬೇಕೆಂದಲ್ಲ ; ಸಾಮಾನ್ಯ ಜನರಿಗೆ ಅವರು ಅನುಸರಿಸಬೇಕಾದ ಸಾಮಾನ್ಯ ನೀತಿಗಳನ್ನು ಮನಸ್ಸಿಗೆ ನಾಟುವಂತೆ ತಿಳಿಸಬೇಕೆಂಬುದೇ ಆಗಿರುವುದು. ಆದುದರಿಂದ ಇದರಲ್ಲಿ ವ್ಯಾಕರಣ ದೋಷಗಳಿದ್ದರೂ ವಾಚಕರು ಅದಕ್ಕೆ ಹೆಚ್ಚು ಗಮನ ಕೊಡದೆ ನೀತಿಬೋಧೆಯ ಪ್ರಾಮುಖ್ಯತೆಯನ್ನೇ ಮುಂದಾಗಿಟ್ಟುಕೊಂಡು ಓದಬೇಕೆಂಬುದೇ ನಮ್ಮ ಅಭಿಪ್ರಾಯ.

ಈ ಗ್ರಂಥದಲ್ಲಿರುವ ದೋಷಗಳನ್ನು ತಿದ್ದಬೇಕೆಂಬ ಉದ್ದೇಶದಿಂದ ಕೆಲವರು ತಮಗೆ ತೋರಿದಂತೆ ಮಾರ್ಪಾಟುಗಳನ್ನು ಮಾಡಿರುವರು. ಇದರಿಂದ ಕವಿಯ ಸಹಜವಾದ ಶೈಲಿಯ ಸರಳತೆಗೆ ಭಂಗವನ್ನುಂಟುಮಾಡುವ ಕ್ಲಿಷ್ಟ ಪದ ಪ್ರಯೋಗಾದಿಗಳು ಅಲ್ಲಲ್ಲಿ ಕಂಡುಬರುವುವು. ನಾವು ಈ ಗ್ರಂಥವನ್ನು ಪರಿಷ್ಕರಿಸುವುದರಲ್ಲಿ ನಮಗೆ ದೊರೆತ ಎಂಟು ಅಚ್ಚಿನ ಪ್ರತಿಗಳನ್ನೂ, ಮೈಸೂರು ಓರಿಯಂಟಲ್ ಲೈಬ್ರೆರಿಯಲ್ಲಿರುವ ಒಂದು ತಾಳೆಯೋಲೆಯ ಪ್ರತಿಯನ್ನೂ ಪರೀಕ್ಷಿಸಿ ಈ ಕವಿಯ ಶೈಲಿಗೆ ಸಹಜವಾದುದೆಂದು ನಮಗೆ ತೋರಿದ ಪಾಠವನ್ನು ಇಲ್ಲಿ ಕೊಟ್ಟಿರುವೆವು. *ಕೆಲವೆಡೆಗಳಲ್ಲಿ ಮಾತ್ರ ಸರಿಯಾದ ಅರ್ಥವಾಗುವುದಕ್ಕಾಗಿ ಇತರ ಪುಸ್ತಕಗಳಲ್ಲಿರುವ ಪಾಠವನ್ನು ತಿದ್ದಿರುವೆವು. ಮೈಸೂರು ಸರಕಾರದ ಮುದ್ರಣಾಲಯದಲ್ಲಿ ಅಚ್ಚಾದ ಪುಸ್ತಕದಲ್ಲಿ ವಿನಾ ಇತರ ಯಾವ ಹಿಂದಿನ ಪುಸ್ತಕದಲ್ಲಿಯೂ ಪದ್ಯಗಳನ್ನು ವಿಷಯಾನುಕ್ರಮದಲ್ಲಿ

---

* ಕೊಲುವಂತೂಟವು (ಪ. ೨೩). ಹರತಾಂ ಕುಂಟಣಿಯಾಗೆ ನಂಬಿ ಜರೆದಂ (೭೪). ಜಡದೇಹಂ (ಗಾತ್ರವೇ) (ಗೆ ಜರೇ) (ಗೆ ಜ್ವರಂ) ಬೆಟ್ಟ (೮೫). ಶುಭ್ರಾಂಶುವಾ ಭವ ನೇತ್ರಂ ವಿಧಿ ವಿಷ್ಣುಗಳ್ಗೆ ಕಮಲಂ ಕಣ್ (೮೬). ಮೊಳೆಯಲ್ಲಿಕ್ಕಿದ ಜೇನು (೯೧). ಪಶುಗಳ್ ಕ್ರೂರ ಮೃಗಂಗಳಂಗನೆಯರುಂ (೯೪).

ವಿಂಗಡಿಸಿಲ್ಲ. ನಾವು ವಾಚಕರ ಸೌಕರ್ಯಕ್ಕಾಗಿ ಪದ್ಯಗಳನ್ನು ನಮಗೆ ಯುಕ್ತವೆಂದು ತೋರಿದಂತೆ ವಿಭಾಗಿಸಿರುವೆವು.

ಇಂಗ್ಲೆಂಡು ಮೊದಲಾದ ಪಾಶ್ಚಾತ್ಯ ದೇಶಗಳಲ್ಲಿ ಮಕ್ಕಳು ಓದತಕ್ಕ ಪುಸ್ತಕಗಳನ್ನು ದಪ್ಪವಾದ ಕಾಗದದ ಮೇಲೆ ಅಂದವಾದ ಅಕ್ಷರಗಳಿಂದ ರಮ್ಯವಾಗಿರುವಂತೆ ಮುದ್ರಿಸಿ ಮುದ್ರಣದ ತಪ್ಪು ಒಂದಾದರೂ ಇಲ್ಲದಂತೆ ಸರಿನೋಡಿ ಮನೋಹರವಾಗಿರುವಂತೆ ಚಿತ್ರಪಟಗಳನ್ನು ಸೇರಿಸಿ ಪ್ರಕಟಿಸುವರು. ನಾನಾ ವಿಷಯಗಳಮೇಲೆ ಬರೆದ ಇಂತಹ ಪುಸ್ತಕಗಳು ಮಕ್ಕಳಿಗೆ ಅನೇಕವಾಗಿ ದೊರೆಯುವುವು. ಇವುಗಳನ್ನು ನೋಡಿದೊಡನೆಯೇ ಎಂತಹ ಹುಡುಗನಿಗೂ ಓದಬೇಕೆಂಬ ಆಸೆಯು ಸಹಜವಾಗಿ ಹುಟ್ಟುವುದು. ಆದರೆ ನಮ್ಮ ದೇಶದಲ್ಲಿ ದೊರೆಯುವ ಮಕ್ಕಳ ಪುಸ್ತಕಗಳು ಸಾಮಾನ್ಯವಾಗಿ ಈ ಸ್ಥಿತಿಗೆ ವಿಪರೀತವಾಗಿರುವುದರಿಂದ ಹುಡುಗರಿಗೆ ಓದುವುದೆಂದರೆ ಜುಗುಪ್ಸೆಯುಂಟಾಗುವುದು. ಈ ದುಸ್ಸ್ಥಿತಿಯನ್ನು ಸ್ವಲ್ಪ ಮಟ್ಟಿಗಾದರೂ ತಪ್ಪಿಸಬೇಕೆಂಬ ಅಭಿಲಾಷೆಯಿಂದ ನಮಗೆ ಸಾಧ್ಯವಾದಮಟ್ಟಿಗೆ ಈ ಗ್ರಂಥದ ರಚನೆಯನ್ನು ಸರಿಪಡಿಸಿರುವೆವು.

ಕವಿಯ ವಿಷಯ.—ಈ ಗ್ರಂಥದ ಕವಿಯ ವಿಷಯವು ನಮಗೆ ಹೆಚ್ಚಾಗಿ ತಿಳಿಯದು. ಪೀಠಿಕೆಯ ೨ನೆಯ ಪದ್ಯದಲ್ಲಿ ಕವಿಯು ತನ್ನ ಹೆಸರು ಸೋಮನೆಂದು ಹೇಳಿಕೊಂಡಿರುವನು. ಹನ್ನೆರಡನೆಯ ಶತಮಾನದ ಅಂತ್ಯದಲ್ಲಿದ್ದು ಸಂಸ್ಕೃತ, ತೆಲುಗು, ಕನ್ನಡ—ಈ ಮೂರು ಭಾಷೆಗಳಲ್ಲಿಯೂ ಕವಿತ್ವ ಮಾಡಿ ಪ್ರಸಿದ್ಧನಾದ ಪಾಲ್ಕುರಿಕೆಯ ಸೋಮನೇ ಸೋಮೇಶ್ವರ ಶತಕವನ್ನು ರಚಿಸಿದನೆಂದು ಪ್ರತೀತಿ ಇರುವುದು. ಮೈಸೂರು ಸರಕಾರದ ಪುಸ್ತಕದಲ್ಲಿಯೂ, ಇತರ ಕೆಲವು ಪುಸ್ತಕಗಳಲ್ಲಿಯೂ ಪಾಲ್ಕುರಿಕೆಯ ಸೋಮನು ಈ ಶತಕವನ್ನು ರಚಿಸಿದನೆಂದು ಪೀಠಿಕೆಯಲ್ಲಿ ಹೇಳಿದೆ. ಆದರೆ ಅಷ್ಟು ಪಾಂಡಿತ್ಯವನ್ನು ಪಡೆದ ಪಾಲ್ಕುರಿಕೆಯ ಸೋಮನು ವ್ಯಾಕರಣ ಸೌಷ್ಠವವಿಲ್ಲದ ಈ ಗ್ರಂಥವನ್ನು ರಚಿಸಿದನೆಂದು ನಂಬುವುದಕ್ಕಾಗುವುದಿಲ್ಲ. *ಕವಿಚರಿತೆಕಾರರೂ ಈ ವಿಷಯದಲ್ಲಿ ಸಂಶಯವನ್ನು ತೋರ್ಪಡಿಸಿರುವರು. ಅವರು ಹೇಳುವುದೇನೆಂದರೆ :—

---

* ಕವಿಚರಿತೆ 1, ಪುಟ ೨೩೧.

" ಈ ಶತಕವು ಬಹಳ ಅಶುದ್ಧವಾಗಿದೆ. ಇದರಲ್ಲಿ ವ್ಯಾಕರಣ ವಿರುದ್ಧವಾದ ಅನೇಕ ಪ್ರಯೋಗಗಳಿವೆ. ಇದನ್ನು ಸಂಸ್ಕೃತದಲ್ಲಿ ಪಂಡಿತನಾಗಿದ್ದ ಪಾಲ್ಕುರಿಕೆ ಸೋಮನು ರಚಿಸಿದನೆಂದು ಹೇಳುವುದು ಕಷ್ಟವಾಗಿದೆ. ಅಲ್ಲದೆ ಶತಕಕಾರನ ಲಿಂಗವು ಪುಲಿಗೆರೆಯಲ್ಲಿದ್ದಂತೆ ಗ್ರಂಥದಿಂದ ತಿಳಿಯುತ್ತದೆ. ಪಾಲ್ಕುರಿಕೆಯ ಸೋಮನ ಸಂಸ್ಕೃತಾಂಧ್ರ ಗ್ರಂಥಗಳಲ್ಲಿ 'ಪಾಲ್ಕುರಿಕೆಯ ಸೋಮ'ನೆಂದೇ ತನ್ನ ಹೆಸರನ್ನು ಹೇಳಿಕೊಂಡಿದ್ದಾನೆ. ಈ ಶತಕದಲ್ಲಿ ಗ್ರಂಥಕರ್ತನ ಹೆಸರು ಸುಮ್ಮನೆ 'ಸೋಮ' ಎಂದು ಇದೆ. ಇದೂ ಅಲ್ಲದೆ ವೀರಶೈವ ಗ್ರಂಥಗಳಲ್ಲಿ ಪಾಲ್ಕುರಿಕೆ ಸೋಮಕೃತವೆಂದು ಹೇಳಿರುವ ಗ್ರಂಥಗಳಲ್ಲಿ ಈ ಶತಕವು ಉಕ್ತವಾಗಿಲ್ಲ. ಈ ಕಾರಣಗಳಿಂದ ಶತಕಕಾರನು ಪಾಲ್ಕುರಿಕೆ ಸೋಮನೋ ಅಲ್ಲವೋ ಎಂದು ಸಂದೇಹಿಸಲು ಅವಕಾಶವುಂಟು."

ಈ ಇಬ್ಬರು ಕವಿಗಳೂ ಬೇರೆ ಬೇರೆಯೆಂದು ಊಹಿಸಲು ಇತರ ಕಾರಣಗಳೂ ಇರುವುವು—(೧) ಪಾಲ್ಕುರಿಕೆ ಇರುವುದು ಗೋದಾವರೀ ಡಿಸ್ಟ್ರಿಕ್ಟಿನಲ್ಲಿ, ಪುಲಿಗೆರೆಯು ಧಾರವಾಡ ಡಿಸ್ಟ್ರಿಕ್ಟಿನಲ್ಲಿ. ಪುಲಿಗೆರೆಯ ಸೋಮೇಶ್ವರನ ಅಂಕಿತದಿಂದ ಈ ಕವಿತೆಯು ರಚಿತವಾಗಿರುವುದರಿಂದ ಇದರ ಕವಿಯು ಪುಲಿಗೆರೆಯ ಪ್ರಾಂತದಲ್ಲಿದ್ದವನೆಂದು ಊಹಿಸುವುದಕ್ಕೆ ಹೆಚ್ಚು ಅವಕಾಶವಿರುವುದು* (೨) ಪಾಲ್ಕುರಿಕೆಯ ಸೋಮನು ಸುಮಾರು ಕ್ರಿ. ಶ. ೧೧೯೫ರಲ್ಲಿ ಇದ್ದಿರಬೇಕೆಂದು* "ಕವಿಚರಿತೆಕಾರರು ನಿರ್ಧರಿಸಿರುವರು. ಪುಲಿಗೆರೆಯ ಸೋಮನು ಕಲಿಯುಗದಲ್ಲಿ ೪,೪೦೦ ವರುಷಗಳು ಕಳೆದಮೇಲೆ ಸೋಮೇಶ್ವರ ಶತಕವನ್ನು ರಚಿಸಿದಂತೆ ಈ ಶತಕದ ಕೊನೆಯ ಪದ್ಯದಲ್ಲಿ ಹೇಳಿಕೊಂಡಿರುತ್ತಾನೆ.† ಇದರಿಂದ ಈತನು ಕ್ರಿ. ಶ. ೧೩೦೦ರ ಸುಮಾರಿನಲ್ಲಿ ಇದ್ದಂತೆ ತೋರುವುದು. (೩) ಈ ಶತಕದಲ್ಲಿ ‡ಶಿವಪಾರಮ್ಯವು ಕೆಲವು ಕಡೆ ಸ್ಪಷ್ಟವಾಗಿ ಹೇಳಿರುವುದರಿಂದಲೂ ಶೈವಪುರಾಣಗಳಲ್ಲಿಯ ಕಥೆಗಳು ಕೆಲವಿರುವುದರಿಂದಲೂ ಈತನು ವೀರಶೈವನೆಂದು ಊಹಿಸಬಹುದಾಗಿದೆ. ಆದರೆ ವೀರಶೈವರ ಗ್ರಂಥಗಳಲ್ಲಿ

---

* ಈ ವಿಷಯವನ್ನು ಮೇಲೆ ಕೊಟ್ಟಿರುವ 'ಕವಿಚರಿತೆ'ಯ ಭಾಗದಿಂದ ಊಹಿಸಬಹುದು.

† ಸೋಮೇಶ್ವರ ಶತಕದಲ್ಲಿಯ ಈ ಕೊನೆಯ ಪದ್ಯವು ಹಳೆಯ ಪ್ರತಿಗಳಲ್ಲಿ ಸಾಮಾನ್ಯವಾಗಿ ದೊರೆಯುವುದಿಲ್ಲ. ಇದು ಈಚೆಗೆ ಇತರರು ಸೇರಿಸಿದ್ದಾಗಿರಬಹುದೆ?

‡ ಪದ್ಯ ೪, ೬, ೧೩, ೧೪, ೨೨, ೭೯, ೮೬.

ಸಾಮಾನ್ಯವಾಗಿ ದೊರೆಯದ ವಿಷ್ಣುಪರವಾದ ಕಥೆಗಳೂ, ವೀರಶೈವರು ಸಾಮಾನ್ಯವಾಗಿ ಹೇಳದ ಇತರ ಪೌರಾಣಿಕ ಕಥೆಗಳೂ ಈ ಶತಕದಲ್ಲಿ ಅನೇಕವಾಗಿ ಕಂಡುಬರುವುವು. ಮೈಸೂರು ಸರಕಾರದ ಪುಸ್ತಕದ ಪೀಠಿಕೆಯಲ್ಲಿ ಉಕ್ತವಾಗಿರುವಂತೆ ಈ ಕವಿಯು ಮೊದಲು ಆರಾಧ್ಯ ಬ್ರಾಹ್ಮಣನಾಗಿದ್ದು ತರುವಾಯ ವೀರಶೈವ ಮತವನ್ನು ಅವಲಂಬಿಸಿದವನಾಗಿರಬಹುದೆ? ಪಾಲ್ಕುರಿಕೆಯ ಸೋಮನು ವೀರಶೈವನೆಂದು ಆತನ ಗ್ರಂಥಗಳಿಂದ ಸ್ಪಷ್ಟವಾಗಿ ಗೊತ್ತಾಗುವುದರಿಂದ ಈ ಕವಿಗಳಿಬ್ಬರೂ ಬೇರೆ ಬೇರೆಯೆಂದು ಹೇಳಲು ಅವಕಾಶವಿರುವಂತೆ ತೋರುತ್ತದೆ.

ಭಾಷೆಯ ಏಕೀಕರಣ.—ಮಾತನಾಡುವ ಕನ್ನಡ ಭಾಷೆಯು ಕರ್ಣಾಟಕದ ಎಲ್ಲ ಪ್ರಾಂತಗಳಲ್ಲಿಯೂ ಒಂದೇ ಸಮವಾಗಿರುವುದಿಲ್ಲ. ಈ ಸ್ಥಿತಿಯು ನಮ್ಮ ದೇಶದಲ್ಲಿ ಮಾತ್ರವೇ ಅಲ್ಲ, ಇತರ ದೇಶಗಳಲ್ಲಿಯೂ ಇರುವುದು ; ಇದು ಸಹಜವಾದುದೇ. ಆದರೆ ಗ್ರಾಂಥಿಕ ಭಾಷೆಯು ಮಾತ್ರ ದೇಶದ ಎಲ್ಲ ಪ್ರಾಂತಗಳಲ್ಲಿಯೂ ಒಂದೇ ಆಗಿರಬೇಕಾದುದು ಅವಶ್ಯಕ. ಕರ್ಣಾಟಕದಲ್ಲಿರುವ ಗ್ರಾಂಥಿಕ ಭಾಷಾ ಭೇದಗಳನ್ನು ಸರಿಪಡಿಸಿ ಭಾಷೆಯ ಏಕೀಕರಣವನ್ನು ಮಾಡಬೇಕೆಂಬುದು ಕರ್ಣಾಟಕ ಸಾಹಿತ್ಯ ಪರಿಷತ್ತಿನ ಮುಖ್ಯೋದ್ದೇಶಗಳಲ್ಲೊಂದಾಗಿರುವುದು. ಈ ಸಂಸ್ಥೆಯು ಹುಟ್ಟಿದಂದಿನಿಂದೀಚೆಗೆ ಈ ಕಾರ್ಯವು ಕ್ರಮೇಣ ತಾನಾಗಿಯೇ ನಡೆಯುತ್ತಿರುವುದು. ಆದರೆ ಈ ವಿಷಯದಲ್ಲಿ ಆತುರಪಟ್ಟು ಪ್ರಯೋಜನವಿಲ್ಲ. ಮಕ್ಕಳು ಓದುವ ಪುಸ್ತಕಗಳನ್ನು ಭಾಷೆಯ ಏಕೀಕರಣದ ಉದ್ದೇಶದಿಂದ ತಕ್ಕಂತೆ ಬರೆಯಬೇಕು. ಇತರ ಪ್ರಾಂತಗಳಲ್ಲಿ ಮಾತ್ರ ಬಳಕೆಯಲ್ಲಿರುವ ಪದಗಳನ್ನೂ, ಪ್ರಯೋಗಗಳನ್ನೂ ಸ್ವಲ್ಪ ಸ್ವಲ್ಪವಾಗಿ ಪುಸ್ತಕಗಳಲ್ಲಿ ಸೇರಿಸುತ್ತ ಬರಬೇಕು. ಸೋಮೇಶ್ವರ ಶತಕಕ್ಕೆ ಭಾವಾರ್ಥ, ಟಿಪ್ಪಣಿ, ಪೂರ್ವಕಥೆಗಳನ್ನು ಬರೆಯುವುದರಲ್ಲಿ ನಾವು ಇದೇ ಉದ್ದೇಶವನ್ನಿಟ್ಟುಕೊಂಡು ಹೊರಟೆವು. ಧಾರವಾಡದ ಪಂಡಿತರು ಮ|| ರಾ|| ಶ್ರೀ ಪ್ರಭಾಕರ ಪೂಜಾರ ಮಹಾದೇವ ಶಾಸ್ತ್ರಿಗಳು ನಮ್ಮ ಬರೆವಣಿಗೆಯನ್ನು ಆಮೂಲಾಗ್ರವಾಗಿ ಓದಿ ತಮ್ಮ ಪ್ರಾಂತದವರಿಗೆ ರುಚಿಸದಿರುವ ಪದಗಳನ್ನೂ, ಪ್ರಯೋಗಗಳನ್ನೂ, ತೆಗೆದುಹಾಕಿ ಧಾರವಾಡದ ಪ್ರಾಂತದ ಕೆಲವು ಪದಗಳನ್ನೂ ಪ್ರಯೋಗಗಳನ್ನೂ ಇದರಲ್ಲಿ ಸೇರಿಸಿರುವರು.

ಈ ಗ್ರಂಥದ ಭಾಷೆಯು ಧಾರವಾಡ ಪ್ರಾಂತದವರಿಗೆ ಅಷ್ಟು ಮಾನ್ಯವಾಗಿ ತೋರದಿದ್ದರೂ ಭಾಷೆಯ ಏಕೀಕರಣ ಸೌಧಕ್ಕೆ ಇದು ಮೊದಲನೆಯ ಮೆಟ್ಟಲೆಂದು ಹೇಳಬಹುದು.

ಈ ಕೆಲಸಕ್ಕಾಗಿಯೇ ಧಾರವಾಡದಿಂದ ಬೆಂಗಳೂರಿಗೆ ಬಂದು ನಮಗೆ ವಿಶೇಷ ಸಹಾಯಮಾಡಿ ಸಯುಕ್ತಿಕವಾದ ಕೆಲವು ಸಲಹೆಗಳನ್ನು ಕೊಟ್ಟಿದ್ದಕ್ಕಾಗಿ ಮ|| ರಾ|| ಶ್ರೀ ಪ್ರಭಾಕರ ಪೂಜಾರ ಮಹಾದೇವ ಶಾಸ್ತ್ರಿಗಳಿಗೆ ನಮ್ಮ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಅರ್ಪಿಸುವೆವು. ಈ ಗ್ರಂಥವನ್ನು ಮುದ್ರಣಕ್ಕೆ ಸಿದ್ಧಪಡಿಸುವುದರಲ್ಲಿ ಅನೇಕ ಮಂದಿ ಸಹಾಯ ಮಾಡಿರುವರು. ಕೋಲಾರದ ಡಿಸ್ಟ್ರಿಕ್ಟು ನಾರ್ಮಲ್ ಸ್ಕೂಲಿನ ಅಧ್ಯಾಪಕರಾದ ಮ|| ರಾ|| ಶ್ರೀ ಬೆಳ್ಳಾವೆ ನರಹರಿ ಶಾಸ್ತ್ರಿಗಳವರು ಪದ್ಯಗಳನ್ನು ಸರಿಪಡಿಸುವುದರಲ್ಲಿಯೂ, ಈ ಗ್ರಂಥದಲ್ಲಿಯ ಪೂರ್ವ ಕಥೆಗಳು ದೊರೆಯುವ ಸ್ಥಳಗಳನ್ನು ನಿರ್ದೇಶಿಸುವುದರಲ್ಲಿಯೂ ಬಹಳ ಸಹಾಯ ಮಾಡಿರುತ್ತಾರೆ. ಈ ಪಂಡಿತರುಗಳಿಗೆಲ್ಲರಿಗೂ ಕೃತಜ್ಞತಾಪೂರ್ವಕವಾದ ನಮ್ಮ ಧನ್ಯವಾದಗಳನ್ನರ್ಪಿಸುವೆವು. ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು ಕನ್ನಡ ಭಾಷೆಯ ಏಕೀಕರಣದ ಉದ್ದೇಶದಿಂದ ಪರಿಷತ್ತಿಗೆ ಉದಾರವಾಗಿ ದ್ರವ್ಯ ಸಹಾಯ ಮಾಡಿರುವುದಕ್ಕಾಗಿ ಕನ್ನಡಿಗರೆಲ್ಲರೂ ಅವರಿಗೆ ಕೇವಲ ಕೃತಜ್ಞರಾಗಿರಬೇಕು.

ಕರ್ಣಾಟಕ ಸಾಹಿತ್ಯ ಪರಿಷತ್ತು
ಬೆಂಗಳೂರು,
ರುಧಿರೋದ್ಗಾರಿ ಸಂ॥ ಕಾರ್ತಿಕ ಶು|| ೮

ಸಂಪಾದಕರು.

ಕವಿ ಕಾವ್ಯ ವಿಚಾರ

'ಸೋಮೇಶ್ವರ ಶತಕ'ವು ಕನ್ನಡಿಗರಿಗೆ ಅತ್ಯಂತ ಪ್ರಿಯವಾದ ಗ್ರಂಥಗಳಲ್ಲಿ ಒಂದು. ಅರ್ಧ ಶತಮಾನದ ಹಿಂದೆ ಕನ್ನಡ ನಾಡಿನಲ್ಲಿ ಹೆಚ್ಚು ಜನಪ್ರಿಯವಾಗಿದ್ದು, ಕನ್ನಡ ಭಾರತ, ಹರಿಭಕ್ತಿಸಾರ, ಜೈಮಿನಿ ಭಾರತ, ಚೆನ್ನಬಸವ ಪುರಾಣ, ಬಸವ ಪುರಾಣ, ತೊರವೆ ರಾಮಾಯಣ, ರಾಜಶೇಖರ ವಿಳಾಸ, ಸರ್ವಜ್ಞ ವಚನಗಳು, ನಿಜಗುಣರ ಕೃತಿಗಳು, ಮತ್ತು ಪುರಂದರದಾಸರ ಹಾಡುಗಳು–ಇವುಗಳ ಜತೆಯಲ್ಲಿ ಸೋಮೇಶ್ವರ ಶತಕವೂ ಕನ್ನಡಿಗರ ನಾಲಗೆಯಲ್ಲಿ ನಲಿದಾಡುವ ಗ್ರಂಥವೆನಿಸಿತ್ತು. ಇತ್ತೀಚಿನ ಪರಿಸ್ಥಿತಿ ನಾಡಿನಲ್ಲಿ ಬದಲಾವಣೆಯಾದ ಮೇಲೆ, ಜನಾಭಿರುಚಿ ವ್ಯತ್ಯಾಸಗೊಂಡು ಸೋಮೇಶ್ವರ ಶತಕದ ಹೆಸರು ಕೊಂಚ ಹಿಂದೆ ಹೋಯಿತು ಎಂದು ಹೇಳಬಹುದು. ಜನಪ್ರಿಯವಾದ ಈ ಶತಕವು ಮೊದಮೊದಲು ಬಹಳ ಅಶುದ್ಧವಾಗಿ ಅಚ್ಚಾಗಿ ಪೇಟೆಗೆ ಮಾರಾಟಕ್ಕೆ ಬಂದಿತು. ಅದನ್ನೇ ಕೊಂಡು ನಮ್ಮ ಜನ ಅಕ್ಕರೆಯಿಂದ ಓದುತ್ತಿದ್ದರು. ಆ ಕಾಲದಲ್ಲಿ ಈ 'ಸೋಮೇಶ್ವರ ಶತಕ'ದ ಪದ್ಯಗಳ ಅಂಕಿತವನ್ನು ಕೆಲವು ವಿಧರ್ಮಿಗಳು "ನರನೆಲಾ ಕೇಳ್ದಪ್ಪುದೀ ಬುದ್ಧಿಯಾ" ಎಂದು ಬದಲಾಯಿಸಿ ಪ್ರಕಟಿಸಿದುದೂ ಉಂಟು. (ಶಬರ ಶಂಕರ ವಿಳಾಸಂ, ಪೀಠಿಕೆ, ಪುಟ ೩೩, ಧಾರವಾಡ, ಲಿಂ. ವಿ. ವೃ. ಸಮಿತಿ ಪ್ರಕಟನೆ.) ಹೀಗೆ 'ಸೋಮೇಶ್ವರ ಶತಕ'ವು ಹಲವಾರು ಗಂಡಾಂತರಗಳನ್ನು ಜಯಿಸಿ ಈಗ ಕನ್ನಡಿಗರ ಕೈಗೆ ಶುದ್ಧರೂಪದಲ್ಲಿ ದೊರೆತಿರುವುದು ನಮ್ಮ ನಾಡಿನ ಹಾಗೂ ನುಡಿಯ ಪುಣ್ಯವೆಂದೇ ಹೇಳಬಹುದು.

೧೯೨೦ರಲ್ಲಿ ಬೆಂಗಳೂರಿನಲ್ಲಿ **ನೀತಿಸಾರ** ಎಂಬ ಹೆಸರಿನ ಗ್ರಂಥ ಗುಚ್ಛದಲ್ಲಿ ಬೆಂಗಳೂರು ಮುದ್ರಣಾಲಯದಲ್ಲಿ ಇದು ಮೊದಲು ಅಚ್ಚಾಗಿ ಬೆಳಕಿಗೆ ಬಂದಿತು. ಇದು ಸುಂದರವಾಗಿ ಬಿಳಿಯ ಕಾಗದದಲ್ಲಿ ಅಚ್ಚಾಗಿದ್ದರೂ ಶುದ್ಧವಾಗಿ ಸಂಶೋಧಿಸಲ್ಪಟ್ಟು ಪ್ರಕಟವಾಗಲಿಲ್ಲ ಎಂದು ಹೇಳದೆ ವಿಧಿಯಿಲ್ಲ. ಇದರಲ್ಲಿ ೧೧೯ ವೃತ್ತಗಳಿವೆ. ೧೯೩೩ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನವರು ಈ ಶತಕವನ್ನು ಶುದ್ಧವಾಗಿಯೂ, ಸುಂದರ

ವಾಗಿಯೂ ಸಂಪಾದಿಸಿ ಶುದ್ಧವಾದ ಪಾಠಸಹಿತ, ಭಾವಾರ್ಥ, ಟಿಪ್ಪಣಿ, ಪೂರ್ವದ ಕಥೆಗಳು, ಸಂಬಂಧಪಟ್ಟ ಚಿತ್ರಗಳು ಇವನ್ನೆಲ್ಲಾ ಕೂಡಿಸಿ ಪ್ರಕಟಿಸಿ ಕನ್ನಡಿಗರಿಗೆ ಉಪಕಾರ ಮಾಡಿದರು. ಅಲ್ಲಿಂದೀಚೆಗೆ ಸೋಮೇಶ್ವರ ಶತಕವು ಎಲ್ಲ ವಿದ್ವಾಂಸರ ಮನ್ನಣೆಗೂ ಅರ್ಹವಾಗಿ ಶಾಲೆಯ ಮಕ್ಕಳ ಪಠ್ಯ ಪುಸ್ತಕಗಳಲ್ಲಿಯೂ ಕಾಣಿಸಿಕೊಂಡು ಮತ್ತೆ ಪ್ರಖ್ಯಾತಿಗೆ ಬಂದಿದೆ.

ಗ್ರಂಥಕರ್ತೃ:— ಸೋಮೇಶ್ವರ ಶತಕವನ್ನು ಬರೆದ ಕವಿ ಪುಲಿಗೆರೆಯ ಸೋಮ. ಕವಿಯೇ ಶತಕದ ಎರಡನೆಯ ಪದ್ಯದಲ್ಲಿ "ಪೇಳಿದ ಸೋಮಂ" ಎಂದು ಹೇಳಿ ತನ್ನ ಹೆಸರನ್ನು ಸ್ಪಷ್ಟಗೊಳಿಸಿದ್ದಾನೆ. ಗ್ರಂಥದ ನಾಂದಿ ಪದ್ಯದಲ್ಲಿ ಕವಿಯು ತನ್ನ ಇಷ್ಟದೇವತೆಯಾದ "ಪುಲಿಗಿರಿ ನಗರೀ ಶಾಸನಾಂಕಂ ಮೃಗಾಂಕಂ **ಸೋಮೇಶಂ** ಸರ್ಪಭೂಷಂ ಸಲಹುಗೆ ಜಗಮಂ" ಎಂದು ಹೇಳುವಲ್ಲಿ ತಾನು ಪುಲಿಗೆರೆಯ ಸೋಮೇಶ್ವರನ ಭಕ್ತನೆಂದೂ ಈ ಗ್ರಂಥವು ಪುಲಿಗೆರೆ ಸೋಮೇಶನಿಗೆ ಅಂಕಿತವಾದುದೆಂದೂ ಸ್ಪಷ್ಟವಾಗಿ ನಿರೂಪಿಸಿದ್ದಾನೆ. ಆದರೂ ಈ ಕವಿಯ ವಿಷಯವಾಗಿ ವಿದ್ವತ್ಪ್ರಪಂಚದಲ್ಲಿ ಕೂಡ ಸಂದೇಹ ಮತ್ತು ತಪ್ಪು ಭಾವನೆಗಳು ಪ್ರಚುರವಾಗಿರುವುದರಿಂದ ಈ ವಿಷಯವನ್ನು ನಾವು ಇಲ್ಲಿ ಕೊಂಚ ಪರಿಶೀಲಿಸಬೇಕಾಗಿದೆ.

ಕರ್ಣಾಟಕ ಕವಿಚರಿತೆಯಲ್ಲಿ ಪಾಲ್ಕುರಿಕೆ ಸೋಮನಾಥ (ಸು. ೧೧೯೫) ನ ವಿಷಯವನ್ನು ಪ್ರಸ್ತಾಪಿಸುವಾಗ ಸೋಮೇಶ್ವರ ಶತಕದ ವಿಚಾರ ಬಂದಿದೆ. (ಭಾಗ ೧, ಪು. ೨೯೩) "ಈ ಶತಕಕ್ಕೆ ಸೋಮಾರಾಧ್ಯ ಶತಕ" ಎಂಬ ಹೆಸರೂ ಉಂಟು. ಇದು ಬಹಳ ಅಶುದ್ಧವಾಗಿದೆ. ಇದರಲ್ಲಿ ವ್ಯಾಕರಣ ವಿರುದ್ಧವಾದ ಅನೇಕ ಪ್ರಯೋಗಗಳಿವೆ. ಇದನ್ನು ಸಂಸ್ಕೃತದಲ್ಲಿ ಪಂಡಿತನಾಗಿದ್ದ ಪಾಲ್ಕುರಿಕೆ ಸೋಮನಾಥನು ರಚಿಸಿದನೆಂದು ಹೇಳುವುದು ಕಷ್ಟವಾಗಿದೆ. ಅಲ್ಲದೆ ಶತಕಕಾರನ ಲಿಂಗವು ಪುಲಿಗೆರೆಯಲ್ಲಿದ್ದಂತೆ ಗ್ರಂಥದಿಂದ ತಿಳಿದುಬರುತ್ತದೆ. ಪಾಲ್ಕುರಿಕೆ ಸೋಮನಾಥನು ಸಂಸ್ಕೃತಾಂಧ್ರ ಗ್ರಂಥಗಳಲ್ಲಿ "ಪಾಲ್ಕುರಿಕೆಯ ಸೋಮ" ಎಂದೇ ತನ್ನ ಹೆಸರನ್ನು ಹೇಳಿಕೊಂಡಿದ್ದಾನೆ. ಈ ಶತಕದಲ್ಲಿ

ಗ್ರಂಥಕರ್ತನ ಹೆಸರು ಸುಮ್ಮನೆ 'ಸೋಮ' ಎಂದಿದೆ. ಇದೂ ಅಲ್ಲದೆ ಪಾಲ್ಕುರಿಕೆ ಸೋಮ ಕೃತ ಎಂದು ಹೇಳಿರುವ ಗ್ರಂಥಗಳಲ್ಲಿ ಈ ಶತಕವು ಉಕ್ತವಾಗಿಲ್ಲ. ಈ ಕಾರಣಗಳಿಂದ ಶತಕಕಾರನು ಪಾಲ್ಕುರಿಕೆಯ ಸೋಮನೋ ಅಲ್ಲವೋ ಎಂದು ಸಂದೇಹಿಸಲು ಅವಕಾಶವುಂಟು. ಆದರೂ ಈತನೇ ಶತಕವನ್ನು ಮಾಡಿದನೆಂದು ಪ್ರತೀತಿಯಿರುವುದರಿಂದ ತದನುರೋಧೇನ ಈ ಗ್ರಂಥವು ಇಲ್ಲಿ ಸೇರಿಸಲ್ಪಟ್ಟಿದೆ.

ಇದು ನೀತಿಬೋಧಕವಾದ ಗ್ರಂಥ. ಇದರಲ್ಲಿ ೧೦೭ ಮತ್ತೇಭ ವಿಕ್ರೀಡಿತ ವೃತ್ತಗಳಿವೆ. ಛಂದೋಂಬುಧಿಯ ಉಪೋದ್ಘಾತದಲ್ಲಿ ಇದರಲ್ಲಿ (ಪು. ೫೫) ೧೧೦ ಪದ್ಯಗಳಿವೆಯೆಂದು ಡಾ|| ಕಿಟ್ಟೆಲ್ ಹೇಳುತ್ತಾರೆ. ಪ್ರತಿ ಪದ್ಯವೂ 'ಶ್ರೀ ಚೆನ್ನ ಸೋಮೇಶ್ವರ' ಎಂದು ಮುಗಿಯುತ್ತದೆ. "ನೀತಿಯೆ ಸಾಧನಂ ಸಕಲ ಲೋಕಕ್ಕಾಗಬೇಕೆಂದು ಪೇಳಿದ ಸೋಮಂ" ಎಂಬ ಪದ್ಯಭಾಗದಲ್ಲಿ ಗ್ರಂಥದ ಸ್ವರೂಪವು ಉಕ್ತವಾಗಿದೆ. ಗ್ರಂಥಾವತಾರದಲ್ಲಿ ಕವಿ ಪುಲಿಗೆರೆಯ ಸೋಮೇಶನನ್ನು ಸ್ತುತಿಸಿದ್ದಾನೆ. ಈ ಶತಕದಿಂದ ಉಂಟಾಗುವ ಪ್ರಯೋಜನವನ್ನು ಈ ಶತಕದ ಕೊನೆಯ ಪದ್ಯದಲ್ಲಿ ಹೇಳಿದ್ದಾನೆ" ಎಂದು ಕವಿಚರಿತಕಾರರು ಅಭಿಪ್ರಾಯಪಟ್ಟಿದ್ದಾರೆ.

ಶತಕಕಾರನು ತನ್ನ ಹೆಸರು ಮತ್ತು ಸ್ಥಳವನ್ನು ಸ್ಪಷ್ಟವಾಗಿ ಹೇಳಿರುವುದರಿಂದಲೂ, ಆಂಧ್ರ ಪ್ರಾಂತದ ಪಾಲ್ಕುರಿಕೆ, ಕರ್ಣಾಟಕ ರಾಜ್ಯದ ಪುಲಿಗೆರೆ ಇವೆರಡೂ ಭಿನ್ನಭಿನ್ನವಾದುದರಿಂದಲೂ, ಪ್ರಾಚೀನ ವೀರಶೈವ ಕವಿಗಳು ಪಾಲ್ಕುರಿಕೆ ಸೋಮನಾಥನ ಗ್ರಂಥಗಳ ಪಟ್ಟಿಯಲ್ಲಿ ಸೋಮೇಶ್ವರ ಶತಕವನ್ನು ಸೇರಿಸಿಲ್ಲವಾದುದರಿಂದಲೂ, ಮಹಾ ವಿದ್ವಾಂಸನಾದ ಪಾಲ್ಕುರಿಕೆ ಸೋಮನಾಥನು ಸೋಮೇಶ್ವರ ಶತಕದಂತಹ ಸಾಮಾನ್ಯ ಗ್ರಂಥವನ್ನು ಬರೆದನೆಂದು ಊಹಿಸುವುದು ತರ್ಕಬದ್ಧವಲ್ಲದುದರಿಂದಲೂ ಸೋಮೇಶ್ವರ ಶತಕಕ್ಕೂ ಪಾಲ್ಕುರಿಕೆ ಸೋಮನಾಥನಿಗೂ ಏನೇನೂ ಸಂಬಂಧವಿಲ್ಲವೆಂದು ನಾವು ಸ್ಪಷ್ಟವಾಗಿ ಹೇಳಬಹುದು. ಕೇವಲ ನಾಮ ಸಾದೃಶ್ಯದಿಂದ ಹೇಳುವುದಾದರೆ, 'ಶೃಂಗಾರಸಾರ'ದ ಸೋಮ

ರಾಜನಿಗೂ ಈ ಶತಕಕಾರನಿಗೂ ಏತಕ್ಕೆ ಸಂಬಂಧ ಕಲ್ಪಿಸಬಾರದು ಎಂಬ ಪ್ರಶ್ನೆ ಕೂಡ ನಮ್ಮ ಮುಂದೆ ನಿಲ್ಲುವುದಿಲ್ಲವೆ?.

ಈ ಸೋಮೇಶ್ವರ ಶತಕವನ್ನು ಭರತೇಶವೈಭವ, ರತ್ನಾಕರ ಶತಕ ಮೊದಲಾದುವನ್ನು ಬರೆದು ವಿಖ್ಯಾತನಾಗಿರುವ ಮಹಾಕವಿ ರತ್ನಾಕರ ವರ್ಣಿ ಬರೆದನೆಂಬ ಒಂದು ವಾದವನ್ನು ದಿನಾಂಕ ೩೦-೪-೧೯೫೯ರ ವಿಶ್ವಬಂಧು ಪತ್ರಿಕೆಯಲ್ಲಿ ಆಸ್ಥಾನವಿದ್ವಾನ್ ಶ್ರೀ ಎಂ. ಜಿ. ನಂಜುಂಡಾರಾಧ್ಯರು ಎತ್ತಿರುತ್ತಾರೆ. ಅವರ ಅಂಬೋಣ ಹೀಗಿದೆ: "ನನ್ನ ಜೈನ ಸ್ನೇಹಿತರೊಬ್ಬರಿಂದ ನನಗೆ ದೊರೆತ ಸೋಮೇಶ್ವರ ಶತಕದ ಒಂದು ಪುರಾತನ ತಾಳಪತ್ರದ ಪ್ರತಿಯಲ್ಲಿ....

ವರಸಮ್ಯಕ್ತ್ವ ಸುಧರ್ಮ ಜೈನಮತದೊಳ್ ತಾಂಪುಟ್ಟಿಯಾದೀಕ್ಷೆಯುಂ|
ಧರಿಸೀ ಸನ್ನುತ ಕಾವ್ಯಶಾಸ್ತ್ರಗಳನಾ ನಿರ್ಮಾಣಮುಂ ಮಾಡುತಂ ||
ವರ ರತ್ನಾಕರ ಯೋಗಿಯೆಂದು ನಿರತಂ ವೈರಾಗ್ಯ ಬಂದೇರಲಾಂ |
ಹರದೀಕ್ಷಾವ್ರತನಾದೆನೈ ಹರಹರಾ ಶ್ರೀ ಚೆನ್ನ ಸೋಮೇಶ್ವರಾ ||

"ಈ ಪದ್ಯವು ಈಚೆಗಿನ ಕೆಲವು ಅಚ್ಚಿನ ಪ್ರತಿಗಳಲ್ಲಿರುವುದಿಲ್ಲ. ಯಾವ ಕಾರಣಗಳಿಂದ ಈ ಪದ್ಯವು ತೆಗೆಯಲ್ಪಟ್ಟಿತೆಂಬುದು ಗೊತ್ತಿಲ್ಲ. ಅಲ್ಲದೆ ಅನೇಕ ಶತಕಗಳಲ್ಲಿ ೧೦೮ ಪದ್ಯಗಳೇ ಇರುತ್ತವೆ. ಈ ಎಲ್ಲಾ ಕಾರಣಗಳಿಂದ ಈ ಶತಕದ ಕರ್ತನು ರತ್ನಾಕರನೆಂದೇ ವ್ಯಕ್ತವಾಗುವುದಲ್ಲದೆ ಅವನು ಜೈನಮತವನ್ನು ತೊರೆದನಂತರ ವೀರಶೈವನಾಗಿ ಈ ಶತಕವನ್ನು ರಚಿಸಿರುವುದಾಗಿ ವ್ಯಕ್ತವಾಗುತ್ತದೆ. ಆದುದರಿಂದ ಸೋಮೇಶ್ವರ ಶತಕವು ಪಾಲ್ಕುರಿಕೆ ಸೋಮನಾರಾಧ್ಯರಿಂದಾಗಲಿ ಮತ್ತಾವ ವೀರಶೈವರಿಂದಾಗಲಿ ರಚಿತವಾಗಿರದೆ ಕನ್ನಡ ಕವಿಶ್ರೇಷ್ಠನಾದ ರತ್ನಾಕರ ಕವಿಯಿಂದಲೇ ರಚಿತವಾಗಿದೆಯೆಂದು ಮುಕ್ತ ಕಂಠದಿಂದ ಹೇಳಬಹುದು."

ಶ್ರೀ ಎಂ. ಜಿ. ನಂಜುಂಡಾರಾಧ್ಯರು ಹೇಳುವಂತೆ ಸೋಮೇಶ್ವರ ಶತಕವು ರತ್ನಾಕರ ಕವಿ ವಿರಚಿತವೆಂದು ಹೇಳಲು ಸಾಧ್ಯವಿಲ್ಲ. ಏತಕ್ಕೆಂದರೆ (೧) ಉಪಲಬ್ಧವಿರುವ ನೂರಾರು ಸೋಮೇಶ್ವರ ಶತಕದ

ತಾಳೆಯೋಲೆಯ ಗ್ರಂಥಗಳಲ್ಲಿ-ಶ್ರೀ ಆರಾಧ್ಯರು ಹೇಳುವ ಪದ್ಯ ಇಲ್ಲ. ಆದುದರಿಂದ ಈ ಶ್ಲೋಕವು ಪ್ರಕ್ಷಿಪ್ತವೆಂದು ಕಂಡುಬರುತ್ತದೆ. ಪರಿಷತ್ತಿನವರಿಗಾಗಲಿ, ಬೆಂಗಳೂರು ಪ್ರೆಸ್ಸಿನವರಿಗಾಗಲಿ, ಕವಿಚರಿತಕಾರರಿಗಾಗಲಿ ದೊರೆತ ಸೋಮೇಶ್ವರ ಶತಕದ ಪ್ರತಿಗಳಲ್ಲಿ ಶ್ರೀ ಆರಾಧ್ಯರು ಹೇಳುವ ಪದ್ಯ ಕಂಡುಬಂದಿಲ್ಲ. ನಮ್ಮ ಕಾರ್ಯಾಲಯದಲ್ಲಿರುವ ತಾಳೆಯೋಲೆ ಗ್ರಂಥಗಳಲ್ಲಿಯೂ ಈ ಪದ್ಯವಿಲ್ಲ. ಮತ್ತೆಲ್ಲಿಯೂ ಕಾಣಬಂದಿಲ್ಲ. ಆದುದರಿಂದ ಇದು ಪ್ರಕ್ಷಿಪ್ತವಿರಬೇಕೆಂದು ನಮಗೆ ಖಚಿತವಾಗಿ ತೋರುತ್ತದೆ.

(೨) ರತ್ನಾಕರನಂತಹ ಓರ್ವ ಮಹಾಕವಿ, ತತ್ವಜ್ಞಾನಿ ಅಡಿಗಡಿಗೆ ಮತಗಳನ್ನು ಬದಲಾಯಿಸುವ ಹುಡುಗಾಟಿಕೆಯ ಕಾರ್ಯಕ್ಕೆ ಹೋಗಿಲ್ಲವೆಂದು ನಾವು ಸುಲಭವಾಗಿ ಹೇಳಬಹುದು. ಪೂರ್ವದ ಪರಸ್ಪರ ಮತದ್ವೇಷಗಳ ಕಾಲದಲ್ಲಿ, ಕುಚೇಷ್ಟೆಗಾಗಿ ಯಾರೋ ಕಟ್ಟಿದ ಕಥೆ ಇದಾಗಿರಬಹುದು. ರುದ್ರಭಟ್ಟ, ಷಡಕ್ಷರ, ಲಕ್ಷ್ಮೀಶರ ಬಾಂಧವ್ಯ ಕುರಿತಾದ ಮತ್ತು ಕುಮಾರವ್ಯಾಸ, ಚಾಮರಸರನ್ನು ಕುರಿತಾದ, ಬ್ರಹ್ಮಶಿವನನ್ನು ಕುರಿತಾದ ಕಟ್ಟುಕಥೆಗಳಂತೆ ಇದೂ ಒಂದು ದಂತಕಥೆಯಾಗಿದೆ.

(೩) ಸಾಹಿತ್ಯ ವಿಮರ್ಶಕರು ಹೇಳುವ ಶೈಲಿಯೇ ಕವಿ (Style is poet) ಎಂಬ ನಿರ್ಣಯದಂತೆ ಕೂಡ ವಿದ್ವತ್ಕವಿಯಾದ ರತ್ನಾಕರನ ಶೈಲಿಗೂ ಸಾಮಾನ್ಯ ಕವಿಯಾದ ಸೋಮನ ಶೈಲಿಗೂ ಆನೆ ಆಡಿಗಿರುವಷ್ಟು ವ್ಯತ್ಯಾಸ ಕಂಡುಬರುತ್ತದೆ. ಆದುದರಿಂದ 'ಪ್ರಬಲೇನ ದುರ್ಬಲಸ್ಯ ಬಾಧಾ' ಎಂಬ ನ್ಯಾಯದಂತೆ ಶ್ರೀ ಎಂ. ಜಿ. ನಂಜುಂಡಾರಾಧ್ಯರು ನಿರೂಪಿಸಿದ ಪೂರ್ವೋಕ್ತ ವಾದವು ತರ್ಕಬದ್ಧವಲ್ಲವೆಂದೂ ಅವರಿಗೆ ಯಾವುದೋ ಒಂದು ಪ್ರತಿಯಲ್ಲಿ ಸಿಕ್ಕಿದ ಪದ್ಯ ಪ್ರಕ್ಷಿಪ್ತವೆಂದೂ ಜನಪ್ರಿಯಕವಿಯಾದ ಸೋಮನು ತಮ್ಮ ಮತದವನೆಂದು ಹೇಳಿಕೊಳ್ಳಲು ಯಾರೋ ಪಟ್ಟ ಪ್ರಯತ್ನ ಇದೆಂದೂ, ಈ ವಾದ ಬುಡಭದ್ರವಿಲ್ಲದ್ದೆಂದೂ ನಾವು ವಿಧಿಯಿಲ್ಲದೆ ಹೇಳಬೇಕಾಗಿದೆ.

ಈ ಮೇಲೆ ಕಂಡ ಎಲ್ಲ ಕಾರಣಗಳಿಂದ ಸೋಮೇಶ್ವರ ಶತಕ ಕಾರನು ಕವಿ ಸೋಮನೇ ಹೊರತು, ರತ್ನಾಕರನೂ ಅಲ್ಲ, ಪಾಲ್ಕುರಿಕೆ ಸೋಮನಾಥನೂ ಅಲ್ಲ ಎಂದು ನಾವು ತೀರ್ಮಾನಿಸಬಹುದಾಗಿದೆ.

ಕವಿಯ ಸ್ಥಳ—ಪುಲಿಗೆರೆ: ಈಗ ಧಾರವಾಡ ಜಿಲ್ಲಾ ಲಕ್ಷ್ಮೇಶ್ವರ ಎಂಬ ಊರು ಹಿಂದಿನ ಶತಮಾನಗಳಲ್ಲಿ 'ಪುಲಿಗೆರೆ' ಎಂದು ಪ್ರಸಿದ್ಧವಾಗಿತ್ತು. ನೃಪತುಂಗನ ಕವಿರಾಜ ಮಾರ್ಗದಲ್ಲಿ ತಿರುಳ್ಗನ್ನಡ ನಾಡನ್ನು ಕುರಿತು ಹೇಳುವಾಗ

"ಅದಱೊಳಗಂ ಕಿಸುವೊಳಲಾ ||
ವಿದಿತಮಹಾ ಕೊಪಣ ನಗರದಾ **ಪುರಿಗೆಱೆಯಾ** ||
ಸದಭಿಸ್ತುತಮಪ್ಪೊಕ್ಕುಂ |
ದದ ನಡುವಣ ನಾಡೆ ನಾಡೆ ಕನ್ನಡದ ತಿರುಳ್ || (೧–೩೭)

ಎಂಬ ಪದ್ಯದಲ್ಲಿ ಮೊಟ್ಟಮೊದಲು **ಪುಲಿಗೆರೆಯು** ಹೆಸರು ನಮಗೆ ತಿಳಿದು ಬಂದಿದೆ. ಕೆಲವು ಕವಿರಾಜಮಾರ್ಗದ ಹಸ್ತಪ್ರತಿಗಳಲ್ಲಿ **ಪುಲಿಗೆರೆ** ಮತ್ತು ಪುರಿಗೆರೆ ಎಂಬ ಪ್ರಯೋಗಗಳೂ ಇವೆ. ಮಹಾಕವಿ ಆದಿ ಪಂಪನು ತನ್ನ ವಿಕ್ರಮಾರ್ಜುನ ವಿಜಯದಲ್ಲಿ,

ಕಂದ|| ರಾಜದ್ರಾಜಕಮೆನಿಸಿದ |
ಸಾಜದ **ಪುಲಿಗೆರೆಯ** ತಿರುಳ ಕನ್ನಡದೊಳ್ನಿ |
ರ್ವ್ಯಾಜದೆಸಕದೊಳೆ ಪುದಿದಂ |
ದೋಜೆಯ ಬಲದಿನಿಯ ಕವಿತೆ ಪಂಪನ ಕವಿತೇ||

(ಪಂಪ ಭಾರತ – ಅ. ೧೪. ಪ. ೫೮)

ಎಂಬಲ್ಲಿ "ಪುಲಿಗೆರೆಯ ತಿರುಳ ಕನ್ನಡದೊಳ್" ತಾನು ಕಾವ್ಯಗಳನ್ನು ಬರೆದಂತೆ ಹೇಳಿದ್ದಾನೆ. ಪದ್ಮರಾಜ ಪುರಾಣದಲ್ಲಿ ಕೆರೆಯ ಪದ್ಮರಸನಿಗೂ, ತ್ರಿಭುವನ ತಾತನಿಗೂ ನಡೆದ ಸಂವಾದದಲ್ಲಿ 'ಹುಲಿಗೆರೆಯ ಮಾಯಿದೇವನು' ಪದ್ಮರಸನ ಪರವಾಗಿ ಭಾಗವಹಿಸಿದ್ದಂತೆ ಹೇಳಿದೆ. (೯–೨೯)

ಕರ್ನಾಟಕ ಕವಿಚರಿತೆಕಾರರು ಸುಮಾರು ೧೫೦೦ರಲ್ಲಿ ಇದ್ದನೆಂದು ಊಹಿಸಿರುವ ಕವಿ ಚಕ್ರವರ್ತಿ ಸುರಂಗನು "ಪುಲಿಗೆರೆಯ ಪುರಾಧಿಪ ಶ್ರೀ ಸೋಮನಾಥ ಭಕ್ತಿಯುಕ್ತಂ" ಎಂದು ಹೇಳಿಕೊಂಡಿರುವುದರಿಂದ ಇವನ ಸ್ಥಳವು ಪುಲಿಗೆರೆಯಾಗಿರಬಹುದು" ಎಂದು ಹೇಳಿರುತ್ತಾರೆ. (ಕ. ಕವಿಚರಿತೆ, ಭಾಗ ೨, ಪುಟ ೧೬೦) ಮಹಾ ಕವಿ ರಾಘವಾಂಕನು ಬರೆದಿರುವ ಸೋಮನಾಥ ಚರಿತೆ ಅಥವಾ ಆದಿಶೆಟ್ಟಿ ಪುರಾಣವು ಪುಲಿಗೆರೆಯ ಸೋಮನಾಥನನ್ನು ಕುರಿತು ವಿರಚಿತವಾಗಿದೆ. ಈ ಆದಿಶೆಟ್ಟಿಯು ಕನ್ನಡದಲ್ಲಿ ಪ್ರಖ್ಯಾತ ವಚನಕಾರನಾಗಿಯೂ, ಪವಾಡ ಪುರುಷನಾಗಿಯೂ ವಿಖ್ಯಾತನಾಗಿದ್ದಾನೆ. ಪ್ರಖ್ಯಾತನಾದ ಏಕಾಂತದ ರಾಮಯ್ಯನು ಹುಲಿಗೆರೆಗೆ ಯಾತ್ರೆ ಬಂದಂತೆ ಪುರಾಣಗಳಲ್ಲಿದೆ.

ಬಂದು ಪುಲಿಗೆರೆಯ ಪಟ್ಟಣವನೊಲವಿಂ ಪೊಕ್ಕು |
ಸಂದಣಿಸಿ ಮೆರೆವುತ್ತೆ ಬರುತಂ ಮನಂ ಮಿಕ್ಕು ||
(ಏ. ರಾ. ರಗಳೆ, ಪು. ೧೨, ಸಾಲು ೫.)

ಪಂಪ ಭಾರತದ ಕಥಾನಾಯಕ ಅರಿಕೇಸರಿಯು "ಪುರಿಗೆರೆಯ ರಾಜ" ನೆಂದು ಹೇಳಿದೆ. (ಕ. ಕ. ಚ. ಪುಟ ೩೦) ಈ ಎಲ್ಲ ಕಾರಣಗಳಿಂದ ಹುಲಿಗೆರೆಯು ೯ನೆಯ ಶತಮಾನದಿಂದ ತಿರುಳ್ಗನ್ನಡಕ್ಕೂ, ಪ್ರಖ್ಯಾತ ಕವಿಗಳಿಗೂ, ಪವಾಡ ಪುರುಷರಿಗೂ ಗಣ್ಯತೆಯನ್ನು ಪಡೆದ ಪುಣ್ಯಪ್ರದವಾದ ಸುಕ್ಷೇತ್ರವೆಂದು ನಾವು ತಿಳಿಯಬಹುದು.

ಹುಲಿಗೆರೆ ಅಥವಾ ಲಕ್ಷ್ಮೇಶ್ವರದಲ್ಲಿ ಈಗಲೂ ಪ್ರಸಿದ್ಧವಾದ ಸೋಮನಾಥ ದೇವಾಲಯ, ವೀರಭದ್ರನ ಗುಡಿ, ಹಲವಾರು ಜಿನಬಸದಿಗಳು, ನೂರಾರು ಶಿಲಾ ಶಾಸನಗಳು ಇವನ್ನೆಲ್ಲ ನಾವು ಕಣ್ಣಾರ ಕಾಣಬಹುದು. ಸೋಮೇಶ್ವರ ಶತಕವನ್ನು ಬರೆದ 'ಕವಿ ಸೋಮನು' ಇಂತಹ ಪ್ರಖ್ಯಾತವಾದ ತಿರುಳ್ಗನ್ನಡ ನಾಡಿನ ಐತಿಹಾಸಿಕ ಸ್ಥಳವಾದ ಹುಲಿಗೆರೆಯಲ್ಲಿ ಇದ್ದವನು ಎಂಬುದು ಇಲ್ಲಿ ಗಮನಾರ್ಹವಾಗಿದೆ.

ಕವಿಯ ಕಾಲ ವಿಚಾರ: ಸೋಮೇಶ್ವರ ಶತಕವನ್ನು ಬರೆದ ಕವಿಯ ಕಾಲದ ವಿಚಾರವಾಗಿ ಹೀಗೆಯೇ ಸರಿ ಎಂದು ಹೇಳುವುದು ಕಷ್ಟ

ವಾಗಿದೆ. ಈ ಶತಕದ ಕಡೆಯ ಪದ್ಯದಲ್ಲಿ ಗ್ರಂಥಕರ್ತನು "ನಾಲ್ಸಾಸಿರದ ನಾಲ್ಕುನೂರು.... ಕಲ್ಯಬ್ದದೆ ಗತಿಸೆ ವಿಕಾರ್ಯಬ್ದದಲ್ಲಿ" ಈ ಗ್ರಂಥವನ್ನು ಬರೆದಂತೆ ಹೇಳುತ್ತಾನೆ. ಇದರಿಂದ ಈತನು ಕ್ರಿ. ಶ. ೧೩೦೦ರಲ್ಲಿದ್ದಂತೆ ತಿಳಿದುಬರುತ್ತದೆ. ಆದರೆ ಸೋಮೇಶ್ವರ ಶತಕದ ಈ ಕೊನೆಯ ಪದ್ಯವು ಹಲವಾರು ಹಳೆಯ ಪ್ರತಿಗಳಲ್ಲಿ ಸಾಮಾನ್ಯವಾಗಿ ದೊರೆಯುವುದಿಲ್ಲ. ಇದು ಈಚೆಗೆ ಇತರರು ಸೇರಿಸಿದ್ದಾಗಿರಬಹುದೆ? (ಪೀಠಿಕೆ. ಪು. ೪) ಎಂದು ಈ ಗ್ರಂಥದ ಸಂಪಾದಕರು ಸಂದೇಹವನ್ನು ವ್ಯಕ್ತಪಡಿಸಿದ್ದಾರೆ. ಕವಿಯ ಗ್ರಂಥವನ್ನು ಪರಿಶೀಲಿಸಿದರೆ ಇವನು ೧೩ನೇ ಶತಕದವನಂತೆ ಕಾಣಬರುವುದಿಲ್ಲ. ಕೊಂಚ ಈಚೆಯವನಂತೆ ಕಾಣುತ್ತಾನೆ. ಆದರೆ ಈ ಶತಕದಲ್ಲಿರುವ ವೃತ್ತಗಳ ಬಗೆಗೆ ತಕ್ಕಷ್ಟು ಸಂಶೋಧನೆ ನಡೆಯ ಬೇಕೆಂದು ಕಾಣುತ್ತದೆ. ಪರಿಷತ್ತಿನ ಪ್ರಕಟಣೆಯಲ್ಲಿ ೧೦೩ ವೃತ್ತ ಗಳಿವೆ.

ಸೋಮೇಶ್ವರ ಶತಕದ ಮೂರನೆಯ ಪದ್ಯದಲ್ಲಿರುವ "ಪಾಲುಂಡು ಮೇಲುಂಬರೆ" ಎಂಬ ಜಾಣ್ನುಡಿ ಮೊಟ್ಟಮೊದಲು ಕನ್ನಡ ಸಾಹಿತ್ಯ ದಲ್ಲಿ ಪ್ರಭುದೇವರ ವಚನದಲ್ಲಿ (ಪ್ರಭುದೇವರ ವಚನಗಳು ಪು. ೮೧–೩೬ ೧೯೩೧, ಶಿವಾನುಭವ ಗ್ರಂಥಮಾಲೆ) ಕಂಡುಬಂದಿದೆ. ಅನಂತರ ಪುಲಿ ಗೆರೆಯ ಸುರಂಗ ಕವಿ ವಿರಚಿತವಾದ ತ್ರಿಷಷ್ಟಿಪುರಾತನ ಚರಿತ್ರೆಯಲ್ಲಿ (ಆಶ್ವಾಸ ೧–೨೮) "ಪಾಲುಂಡು ಮೇಲುಂಬುದೆ" ಎಂಬ ರೂಪದಲ್ಲಿ ಈ ವಾಕ್ಯ ಕಂಡುಬರುತ್ತದೆ. ಸೋಮುಕವಿಯು ಈ ಮಾತನ್ನು ಜನರ ಬಾಯ ಮಾತಿನಲ್ಲಿ ಬಳಕೆಯಿದ್ದ ನಾಣ್ನುಡಿಯಾಗಿ ಸ್ವೀಕರಿಸಿದನೋ ಅಥವಾ ಪೂರ್ವೋಕ್ತ ಗ್ರಂಥಗಳಿಂದ ಸಂಗ್ರಹಿಸಿದನೋ ಸ್ಪಷ್ಟವಾಗಿ ಹೇಳುವುದು ಸಾಧ್ಯವಿಲ್ಲ. ಒಂದು ವೇಳೆ ಹಿಂದಿನ ಕವಿಗಳಿಂದಲೇ ಈ ಸುಂದರ ವಾಕ್ಯವನ್ನು ಶತಕಕಾರನು ಸ್ವೀಕರಿಸಿದ್ದರೂ ಇರಬಹುದೆಂದು ತರ್ಕಿಸಲು ಅವಕಾಶವಿದೆ.

೧೬ನೆಯ ಶತಮಾನದಲ್ಲಿ ಕನ್ನಡ ನಾಡಿನಲ್ಲಿ ಪ್ರಸಿದ್ಧನಾಗಿದ್ದ ಸರ್ವಜ್ಞಮೂರ್ತಿಯು "ಸರ್ವರೊಳಗೊಂದೊಂದು ನುಡಿಗಲ್ತು ವಿದ್ಯದ ಪರ್ವತವೇ ಆದ" ಎಂದು ಆಡಿರುವ ಮಾತು ಸೋಮೇಶ್ವರ ಶತಕದಲ್ಲಿ

ಬರುವ "ಕೆಲವಂ ಬಲ್ಲವರಿಂದ ಕಲ್ತು.... ಸರ್ವಜ್ಞನಪ್ಪಂನರಂ" ಎಂಬ ಪದ್ಯದಿಂದ ಸ್ಫೂರ್ತಿಯನ್ನು ಪಡೆದಿರಬಹುದೆಂದು ನಾವು ತಿಳಿಯಬಹುದೆ? ಒಟ್ಟಿನಲ್ಲಿ ಯಾವ ಐತಿಹಾಸಿಕ ಕಾರಣಗಳೂ ಲಭಿಸದಿರುವುದರಿಂದ ಈ ಕವಿಯ ಕಾಲವು ಇಂಥದೇ ಎಂದು ಹೇಳುವುದು ಸಾಧ್ಯವಿಲ್ಲವಾಗಿದೆ. ಆದರೆ ಗ್ರಂಥದ ಶೈಲಿ, ಭಾಷೆ ಮುಂತಾದನ್ನು ನೋಡಿದರೆ ಈತನು ೧೬ನೆಯ ಶತಮಾನಕ್ಕೆ ಈಚಿನವನೆಂದು ನಾವು ಸ್ಥೂಲವಾಗಿ ಊಹಿಸಬಹುದು.

ಕವಿಯ ಮತ : ಸೋಮೇಶ್ವರ ಶತಕಕಾರನು ಶಿವಭಕ್ತನೆಂದು ಅವನ ಗ್ರಂಥದಲ್ಲಿ ನಾವು ಹೆಜ್ಜೆ ಹೆಜ್ಜೆಗೂ ಗುರುತಿಸಬಹುದು. ಅವನು ತನ್ನ ಶತಕವನ್ನು 'ಪುಲಿಗೆರೆಯ ಸೋಮೇಶನಿಗೆ' ಅಂಕಿತ ಮಾಡಿದ್ದಾನೆ. ಅಲ್ಲದೆ ಮೇಲಿಂದ ಮೇಲೆ ಶಿವಾಧಿಕ್ಯವನ್ನು ಈ ಮುಂದಿನ ವಾಕ್ಯಗಳಲ್ಲಿ ಸಾರಿ ಹೇಳಿದ್ದಾನೆ. ಉದಾಹರಣೆಗೆ "ಶಿವನೇ ದೇವರೊಳುತ್ತಮಂ" (ಪದ್ಯ, ೪) "ಹರನಿಂದುರ್ವಿಗೆ ದೈವವೇ ?" (ಪದ್ಯ, ೬) "ದೈವಂಗಳೊಳು ಶಿವಂ" (ಪದ್ಯ, ೧೩) "ಶಿವನೇ ದೇವರ್ಕಳ್ಗೆ ತಾನಾಶ್ರಯಂ" (ಪದ್ಯ, ೧೪) "ಶಿವನಂ ಬಿಟ್ಟವ ಶಿಷ್ಟನೇ" (ಪದ್ಯ, ೨೨) "ಹರ ಕೊಲ್ಲಲ್ ಪರಕಾಯ್ವನೇ" (ಪದ್ಯ, ೨೯) "ಮೃಡ ಸೀನಲ್ಲದದಾರು ಕಾಯ್ವರು" (ಪದ್ಯ, ೨೮) "ಈಶ್ವರ ಭಕ್ತನಾಗಿ" (ಪದ್ಯ, ೩೬) "ಇಡಬೇಕೀಶ್ವರನಲ್ಲಿ ಭಕ್ತಿರಸಮಂ" (ಪದ್ಯ, ೭೯) "ಶಿವ ಸುಜ್ಞಾನವೆ ಯೋಗಿಗಳ್ಗೆ ನಯನಂ" (ಪದ್ಯ, ೮೬) ಎಂಬಿವನ್ನು ನಾವು ಗಮನಿಸಬಹುದು. ಅಲ್ಲದೆ ಶಿವಶರಣರ ಕಥೆಗಳನ್ನು ಅನೇಕ ನಿದರ್ಶನಗಳನ್ನಾಗಿ ಶತಕದಲ್ಲಿ ನಿರೂಪಿಸಿದ್ದಾನೆ. ಈ ಕಾರಣಗಳಿಂದ ಇವನು ವೀರಶೈವ ಕವಿಯೆಂದು ನಾವು ಸುಲಭವಾಗಿ ಹೇಳಬಹುದು.

ಕವಿ ಸೋಮನ ನೀತಿಬೋಧೆ : ಶತಕಕಾರರ ಹಿರಿಯ ಗುರಿಗಳಲ್ಲಿ ನೀತಿಬೋಧೆಯೂ ಒಂದಾಗಿದೆ. ಕನ್ನಡದಲ್ಲಿ ಸಿದ್ಧ ನೀತಿ, ವಿರೂಪಾಕ್ಷ ನೀತಿ, ಸದಾಶಿವ ನೀತಿ, ನೀತಿಸಾರ, ನೀತಿಮಂಜರಿ ಮೊದಲಾದ ಹೆಸರುಗಳಿಂದ ಕೆಲವು ಶತಕಗಳಿರುವುದನ್ನು ನಾವಿಲ್ಲಿ ಸ್ಮರಿಸಿಕೊಳ್ಳಬಹುದು. ಸೋಮೇಶ್ವರ ಶತಕಕಾರನು "ನೀತಿಯೆ ಸಾಧನಂ

ಸಕಲ ಲೋಕಕ್ಕಾಗಬೇಕು" ಎಂಬ ಉದ್ದೇಶದಿಂದಲೇ ಈ ಶತಕವನ್ನು ಹೇಳಿದ್ದಾನೆ. ಕಾರಣ ಅವನ ಶತಕದಲ್ಲಿ ಮೊದಲಿಂದ ಕಡೆಯುವರೆಗೂ ನಾವು ನೀತಿಬೋಧೆಯನ್ನು ಯಥೇಚ್ಛವಾಗಿ ನೋಡಬಹುದು.

"ಸಖರಿಂದುನ್ನತ ವಸ್ತುವೇ, ಕವಿಯೇ ಸರ್ವರೊಳುತ್ತಮಂ, ಕುಲವೆಣ್ಣಿಂಗೆಣೆ ಯಾವುದೈ, ಸುತನೇ ಸದ್ಗತಿದಾತನೈ, ದ್ವಿಜನಾಚಾರತೆಯುಳ್ಳವಂ, ಕವಿತಾವಿದ್ಯೆ ಸುವಿದ್ಯೆಯೊಳ್, ಆಪತ್ತಿನೊಳ್ ಮಣಿದುಂ ನೋಡದ ಬಂಧುವೇತಕೆ, ಕಾಲೋಚಿತಕ್ಕೈದಿದಾ ತೃಣವೇ ಪರ್ವತವಲ್ಲವೇ, ದುರ್ಮಾರ್ಗರೊಳು ಸ್ನೇಹಂ ಬರಿಗೆಯ್ಯಂ ಸುರಿದಂತಲ್ತೆ, ತರುಗಳ್ ಜೀವಿಗಳಲ್ಲವೆ, ಮತಿವಂತರ್ ಮರುಳಪ್ಪರೆ, ನುಡಿದುಂ ತಪ್ಪುವ ರಾಜನಂ ಸುಡು, ಅವಿನೀತಂ ಮಗನೇ, ದುಸ್ಸಂಗದೊಳಿರೆ ಹಾನಿಯೈ, ವಿಧಿಯಂ ಮೀರುವನಾವನೈ, ಪಡೆದಷ್ಟಲ್ಲದೆ ಬಪ್ಪುದೆ, ಸಿರಿ ಬಂದುಂ ನಿಲೆ ಪುಣ್ಯವೈ, ಪೂರ್ವದೊಳ್ ಪಡೆದಷ್ಟುಣ್ಣದೆ ಪೋಪರೇ, ಕೊಡುವರ್ ಕೊಂಬರು ಮರ್ತ್ಯರೆ, ಬಡವಂ ಬಲ್ಲಿದನಾಗನೆ, ವಿಧಿ ಕಾಡಲ್ ಸುಖಮಾಂಪರೆ, ಪಲವುಂ ಪಳ್ಳ ಸಮುದ್ರವೈ, ಅತಿಕಾಮರ್ಗತಿಹಾನಿಯೈ, ದುರುಳಂ ಬಲ್ಲನೆ ಬಾಳ್ವನಂ, ಪಗೆಯಂ ಬಾಲಕನೆಂಬರೆ, ಕಳವೇಂ ಕೊಲ್ಲದೆ ಕಾಯ್ಪುದೇ, ಬಲು ಗರ್ವಂ ಕೊಲದಿರ್ಪುದೆ, ಗಜದೊಳ್ ಸುಂಡಗೆ ಯುದ್ಧವೆ, ಯುಗಧರ್ಮಂ ನರರ್ಗಪ್ಪುದೈ, ಬಿಡ ತನ್ನಂದವ ನೀಚತಾಂ, ಮನುಜರ್ಗೆತ್ತಣ ನೀತಿಯೈ, ಕಡು ಮೂರ್ಖಂ ಹಿತ ಕೇಳ್ವನೇ, ನೆಲಮುಟ್ಟಲ್ ಮುನಿದಪ್ಪುದೈ, ಧನಿಕಂ ಸತ್ಕುಲಜಾತನೈ, ಸಿರಿವಂತರ್ ನೆಲೆಗಾಣರೈ, ದೊರೆಗಳ್ಗೆತ್ತಣ ನೆಂಟರೈ, ಬಲು ಭಾಗ್ಯಂ ದೊರೆಗಪ್ಪುದೈ, ದೊರೆಗಳ್ಗೆಚ್ಚರು ಬೇಕೆಲೈ, ದೊರೆಗಳ್ಗೆತ್ತಣ ನೀತಿಯೈ, ಪತಿಕಾರ್ಯಂವರ ಮಂತ್ರಿಯೈ, ಶಕುನಂ ಶೋಭನ ಕಾಸ್ಪದಂ, ಕೊಡುಗೈ ವೇಶ್ಯೆಯ ವಶ್ಯವೈ, ಪರಸೇವಾ ಸ್ಥಿತಿ ಕಷ್ಟವೈ, ಸನ್ನೆ ಸಾವಿರ ಕಾಲಾಳಿನ ಸತ್ವವೈ, ತೆರಬಲ್ಲರ್ ಪೊಣೆಯಪ್ಪುದೈ, ಕದನಕ್ಕಂಜುವ ವೀರನೆ, ಕೊಡಬೇಕುತ್ತಮನಾದವಂಗೆ ಮಗಳಂ, ಸತಿಯಾ ಚಿತ್ತವಭೇದ್ಯವೈ, ಋಣಭಾರಕ್ಕೆಣೆಯಾವುದೈ, ತೆರಬೇಡೊತ್ತೆಗೆ ಬಡ್ಡಿಯಂ, ಜನರಂ ಮೆಚ್ಚಿಸಲಾಗದೈ, ಕೊಡುವರ್ಗಾವುದು ದೊಡ್ಡಿತೈ, ಕಡುಲೋ

ಭಂಗಿಡೆ ಬೆಟ್ಟವೈ, ಕವಿಯೇ ರಾಜರ ಕಣ್ಣೆಲೈ, ಮುದಿಗಾ ಯೌವನೆ ಶತ್ರುವೈ, ಮರ್ತ್ಯರೊಳ್ ಮಥನಂ ವೆಗ್ಗಳವಲ್ಲವೇ, ಸಿರಿ ಪುಲ್ಲಗ್ರದ ತುಂತುರೈ, ಬಹು ವಿದ್ವಾಂಸನು ಭ್ರಾಂತನೈ, ವಚನಕ್ಕೇನು ದರಿದ್ರವೈ, ಜರೆಯಲ್ ಸಿಂಗವ ಕುಸ್ನಿಯೇಂ, ಮಡಿಯೇ ನಿರ್ಮಲ ಚಿತ್ತವೈ, ವಚನ ಬ್ರಹ್ಮದೆ ಮುಕ್ತಿಯೇ?" ಈ ಮೊದಲಾದ ನೀತಿ ವಾಕ್ಯಗಳು ಕವಿಯ ನೀತಿ ಧರ್ಮ ಪ್ರತಿಪಾದನೆಗೆ ಸೊಗಸಾದ ನಿದರ್ಶನವೆನಿಸಿವೆ.

ಕನ್ನಡದಲ್ಲಿ ಶತಕ ಸಾಹಿತ್ಯ :– ವಿಶಾಲವೂ ಪ್ರಾಚೀನವೂ ಆದ ಕನ್ನಡ ಸಾಹಿತ್ಯದಲ್ಲಿ ಶತಕ ಸಾಹಿತ್ಯವು ತನ್ನದೇ ಆದ ಕೆಲವು ವಿಶೇಷ ಗುಣಗಳಿಂದ ಕಂಗೊಳಿಸುತ್ತಿದೆ. ಭಕ್ತಿ, ಜ್ಞಾನ, ವೈರಾಗ್ಯ ಮತ್ತು ನೀತಿ ವಿಚಾರಗಳನ್ನು ಹಿತಮಿತವಾಗಿ—ಲೋಕಾನುಭವದ ಹಲವು ನಿದರ್ಶನಗಳನ್ನು ಕೊಟ್ಟು—ಪ್ರತಿಪಾದಿಸುವುದು ಶತಕಕಾರರ ಮುಖ್ಯ ಉದ್ದೇಶವಾಗಿದೆ. ಇದಕ್ಕೆ ಅಪವಾದವಾಗಿ ಕವಿಕಾಮನು (೧೨೦೦) 'ಸ್ತನಶತಕ' ವನ್ನು ಬರೆದಿರುವುದೂ ಉಂಟು. ಆದರೆ ಈ ಜಾತಿಯ ಶತಕಗಳು ಬಹಳ ವಿರಳ. ಭಕ್ತಿ ಜ್ಞಾನ ಬೋಧೆಗೆ ಹರಿಹರನ ಪಂಪಾ ಶತಕ, ರಕ್ಷಾಶತಕ, ಕನಕದಾಸನ ಹರಿಭಕ್ತಿಸಾರ, ರತ್ನಾಕರನ ಅಪರಾಜಿತೇಶ್ವರ ಶತಕ, ರತ್ನಾಕರಾಧೀಶ್ವರ ಶತಕ, ಗುಮ್ಮಟಾಚಾರ್ಯನ ಗುಮ್ಮಟ ಶತಕ, ಮುಮ್ಮಡಿ ಕೃಷ್ಣರಾಜರ ಸಿರಿ ನಂಜುಂಡ ಶತಕ ಮತ್ತು ಪಾರ್ವತೀ ವಲ್ಲಭ ಶತಕ ಮುಂತಾದುವನ್ನು ನಿದರ್ಶನವಾಗಿ ಹೇಳಬಹುದು. ಲೋಕನೀತಿ ಮತ್ತು ಅನುಭವಗಳ ನಿರೂಪಣೆಗೆ ಕನ್ನಡ ಭರ್ತೃಹರಿಶತಕ, ಸ್ವಾದಿ ಸದಾಶಿವರಾಜರ ಪಂಚಶತ ನೀತಿಗಳು, ಚೆಲ್ವನಾರಾಯಣ ಶತಕ, ನಯಶತಕ ಇವುಗಳನ್ನು ನಾವು ಹೆಸರಿಸಬಹುದು. ಆದರೆ ಲೋಕ ನೀತಿಯನ್ನು ಹೇಳುವ ಕ್ರಮದಲ್ಲಿ ಸೋಮಕವಿಯ ರೀತಿ ಅಗ್ರಗಣ್ಯವೆಂದು ನಾವು ಒಪ್ಪಿಕೊಳ್ಳಬೇಕಾಗಿದೆ.

ಮತಧರ್ಮ ನಿರೂಪಣೆಗಾಗಿಯೂ ಶತಕಗಳನ್ನು ಬರೆದವರು ಕನ್ನಡದಲ್ಲಿ ಉಂಟು. ಮಗ್ಗೆಯ ಮಾಯಿದೇವನ ಶಿವಾವಲ್ಲಭ ಶತಕ, ಐಪುರೀಶ್ವರ ಶತಕ, ಶಿವಾಧವ ಶತಕಗಳೂ, ಶಂಕರಲಿಂಗ, ನಿರಂಜನಲಿಂಗ ಮೊದಲಾದ ಶತಕಗಳೂ ಇದಕ್ಕೆ ಉದಾಹರಣೆಗಳು.

ಶತಕಗಳು, ಕಂದ, ವೃತ್ತ, ಷಟ್ಪದಿ, ಸಾಂಗತ್ಯ ಛಂದಸ್ಸುಗಳಲ್ಲಿ ವಿರಚಿತವಾಗಿವೆ. 'ಶತಕ',ಎಂದರೆ ನೂರು ಎಂದರ್ಥ. ಕೆಲವು ಶತಕಗಳಲ್ಲಿ ೧೦೧, ೧೦೮, ೧೨೦, ೧೨೫, ಈ ಬಗೆಯಲ್ಲಿ ಪದ್ಯಗಳು ಹೆಚ್ಚಿರುವುದೂ ಉಂಟು. ಈ ಶತಕಕಾರರು, ಶ್ರೀ ಪುರಂದರದಾಸರು, ಸರ್ವಜ್ಞಮೂರ್ತಿ ಮೊದಲಾದ ನೀತಿಬೋಧಕರಂತೆ ನಾಣ್ಣುಡಿಗಳನ್ನು ವಿಪುಲವಾಗಿ ಬಳಸಿಕೊಂಡಿರುವುದರಿಂದ ಅವು ಹೆಚ್ಚು ಜನಪ್ರಿಯವಾಗಿವೆ. ಅಲ್ಲದೆ ಶತಕಕಾರರ ಶೈಲಿ ಕೂಡ ಸುಲಭವಾಗಿ ದ್ರಾಕ್ಷಾಪಾಕದಿಂದ ಕೂಡಿರುವುದು ಅವುಗಳ ಇನ್ನೊಂದು ಹಿರಿಯ ಗುಣ. ಹಾಗೂ ಜನಪ್ರಿಯತೆಗೆ ಕಾರಣ.

ಕನ್ನಡದಲ್ಲಿ ಕ್ರಿ. ಶ. ೧೦೭೦ರಲ್ಲಿದ್ದ ನಾಗವರ್ಮಾಚಾರ್ಯನ "ಚಂದ್ರಚೂಡಾಮಣಿ ಶತಕ"ವೇ ಮೊದಲ ಶತಕವೆಂದು ತೋರುತ್ತದೆ. ಅಲ್ಲಿಂದ ಮುಂದೆ (ಕ್ರಿ. ಶ. ೧೧೬೮ ರಲ್ಲಿದ್ದ) ಕೊಂಡಗೂಳಿ ಕೇಶಿರಾಜನ "ಷಡಕ್ಷರ ಕಂದ" ಅನಂತರ (ಸು. ಕ್ರಿ. ಶ. ೧೨೦೦ ರಲ್ಲಿದ್ದ) ಹರೀಶ್ವರನ ಪಂಪಾಶತಕ, ರಕ್ಷಾ ಶತಕಗಳು ಸಾಹಿತ್ಯದಲ್ಲಿ ಪ್ರಖ್ಯಾತವೆನಿಸಿವೆ. ಮುಂದೆ ಚಂದ್ರಕವಿಯ ಗುರುಮೂರ್ತಿ ಶಂಕರ ಶತಕ, ಗುಮ್ಮಟಾಚಾರ್ಯನ ಅರ್ಧೇಂದು ಮೌಳಿ ಶತಕ, ವೀರಭದ್ರರಾಜನ ಪಾರ್ವತೀವಲ್ಲಭ ಶತಕ ಮೊದಲಾದುವು ಗಮನಾರ್ಹವಾದುವು. ಮಹಾಕವಿ ಚಿಕುಪಾಧ್ಯಾಯನ ಶತಕ ಸಾಂಗತ್ಯಗಳೂ ಈ ಸಂದರ್ಭದಲ್ಲಿ ನೆನೆಯಲರ್ಹವಾಗಿವೆ. ಕಡೆಯದಾಗಿ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರವರ ಕಾಲದಲ್ಲಿ ಸ್ವಯಂ ಮಹಾಪ್ರಭುಗಳೂ, ಅಳಿಯ ಲಿಂಗರಾಜರೂ, ದೇವಲಾಪುರದ ನಂಜುಂಡ ಕವಿಯೂ ಹಲವಾರು ಶತಕಗಳನ್ನು ರಚಿಸಿ ಕನ್ನಡದ ಸಂಪತ್ತನ್ನು ಹೆಚ್ಚಿಸಿದ್ದಾರೆ. ಅನಂತರ ಶ್ರೀ ಚಾಮರಾಜ ಒಡೆಯರ ಕಾಲದಲ್ಲಿ ಮಹಾಕವಿ ಬಸವಪ್ಪ ಶಾಸ್ತ್ರಿಗಳು ಸುಪ್ರಸಿದ್ಧ ಭರ್ತೃಹರಿಯ ಶತಕತ್ರಯವನ್ನು ಕನ್ನಡಕ್ಕೆ ಭಾಷಾಂತರಿಸಿಕೊಟ್ಟುದಲ್ಲದೆ ಶಂಕರ ಶತಕ, ನೀತಿಸಾರ ಶತಕ, ಆರ್ಯಾ ಶತಕ, ಮುಂತಾದವನ್ನು ರಚಿಸಿ ಉಪಕರಿಸಿದರು. ಇದೇ ಸುಮಾರಿನಲ್ಲಿ ಶ್ರೀನಿವಾಸ ಕವಿಯ ವರ್ಷ ವರ್ಧಂತಿ ಶತಕವೂ, ಕರ್ಣಾಟಕ ಭಾಷಾರತ್ನ ಕರಿಬಸವ ಶಾಸ್ತ್ರಿಗಳ ನಯ ಶತಕವೂ,

ದೇವಶಿಖಾಮಣಿ ಕವಿ ಅಳಸಿಂಗಾಚಾರ್ಯರ ಚೆಲ್ವನಾರಾಯಣ ಶತಕವೂ ಸುದೈವದಿಂದ ರಚಿತವಾಗಿ ಸಾಹಿತ್ಯಸಂಪತ್ತಿಗೆ ಕಾರಣವಾದುವು. ಕನ್ನಡ ಶತಕಕಾರರಿಗೆ, ಸಂಸ್ಕೃತದ ಮಯೂರ ಶತಕ, ಅಮರುಕ ಶತಕ, ಭರ್ತೃಹರಿ ಶತಕ, ಸುದರ್ಶನ ಶತಕ, ದಯಾ ಶತಕ, ಜ್ಞಾನ ಶತಕ, ನ್ಯಾಯ ಶತಕ ಮುಂತಾದ ಹಲವು ಶತಕಗಳು ಸ್ಫೂರ್ತಿಯನ್ನು ಕೊಟ್ಟಿರುವುವೆಂದು ನಾವು ಎಣಿಸಬಹುದು. ಸೋದರ ಭಾಷೆಯಾದ ತೆಲುಗಿನಲ್ಲಿ ಕೂಡ ಸುಮತಿ ಶತಕ, ವೃಷಾಧಿಪ ಶತಕ, ಪಾಲ್ಕುರಿಕೆ ಸೋಮನಾಥ ಶತಕ, ಸರ್ವಮಾನ್ಯ ಶತಕ ಮೊದಲಾದುವು ಗಣ್ಯವಾದುವು. ಒಟ್ಟಿನಲ್ಲಿ ಭಾರತೀಯ ಸಾಹಿತ್ಯದಲ್ಲಿಯೂ ಕನ್ನಡ ವಾಙ್ಮಯದಲ್ಲಿಯೂ ಶತಕ ವಾಙ್ಮಯವು ತನ್ನದೇ ಆದ ಹಲವು ವೈಲಕ್ಷಣ್ಯಗಳಿಂದ ಕೂಡಿ ಮನೋಹರವೆನಿಸಿದೆ. ಪ್ರಕೃತ 'ಸೋಮೇಶ್ವರ ಶತಕ'ವು ಕನ್ನಡದಲ್ಲಿ ವಿರಚಿತವಾಗಿ ನಮ್ಮ ಸಾಹಿತ್ಯಕ್ಕೆ ಹೆಚ್ಚಿನ ಶೋಭೆಯನ್ನು ಉಂಟುಮಾಡಿದೆ. ಲೋಕಾನುಭವವನ್ನು ಪಡೆಯಲಿಚ್ಛಿಸುವವರು, ಶರಣರ ವಚನ, ದಾಸರ ಹಾಡು, ಸರ್ವಜ್ಞನ ತ್ರಿಪದಿ ಇವುಗಳ ಜತೆಯಲ್ಲಿ ಸೋಮೇಶ್ವರ ಶತಕವನ್ನು ಅಭ್ಯಾಸ ಮಾಡುವುದರಿಂದ ಇಹಪರ ಸುಖಗಳ ಸಂಪತ್ತನ್ನು ಪಡೆಯಬಹುದೆಂದು ನಾವು ಭಾವಿಸುತ್ತೇವೆ. ಸೋಮೇಶ್ವರ ಶತಕ ಮನೆಯಲ್ಲಿದ್ದರೆ ಸದಾ ಹಿತವನ್ನು ಬಯಸುವ ಒಬ್ಬ ಹಿರಿಯರೂ ಮಕ್ಕಳ ಹಿತೈಷಿಗಳೂ ಮನೆಯಲ್ಲಿ ಇದ್ದಂತೆ ಎಂದು ನಾವು ಹೇಳ ಬಯಸುತ್ತೇವೆ.

॥ ಸಿರಿಗನ್ನಡಂ ಗೆಲ್ಗೆ-ಬಾಳ್ಗೆ ॥

ಬಿ. ಶಿವಮೂರ್ತಿಶಾಸ್ತ್ರೀ
ಅಧ್ಯಕ್ಷರು,
ಕನ್ನಡ ಸಾಹಿತ್ಯ ಪರಿಷತ್ತು.

ದಿನಾಂಕ ೨೦-೫-೧೯೬೧
ಬೆಂಗಳೂರು-೧೮.

ವಿಷಯ ಸೂಚಿಕೆ

೧. ಪದ್ಯಗಳು

೨. ಪೂರ್ವ ಕಥೆಗಳು

ಸೋಮೇಶ್ವರ ಶತಕ

(ಸ್ರಗ್ಧರಾವೃತ್ತ)

ಶ್ರೀಮತ್ಕೈಲಾಸವಾಸಂ ಸ್ಮಿತಮೃದುವಚನಂ ಪಂಚವಕ್ತ್ರಂ ತ್ರಿಣೇತ್ರಂ ।
ಪ್ರೇಮಾಂಕಂ ಪೂರ್ಣಕಾಮಂ ಪರಮ ಪರಶಿವಂ ಪಾರ್ವತೀಶಂ ಪರೇಶಂ ॥
ಧೀಮಂತಂ ದೇವದೇವಂ ಪುಲಿಗಿರಿ ನಗರೀ ಶಾಸನಾಂಕಂ ಮೃಗಾಂಕಂ ।
ಸೋಮೇಶಂ ಸರ್ಪಭೂಷಂ ಸಲಹುಗೆ ಜಗಮಂ ಸರ್ವದಾ ಸುಪ್ರಸನ್ನಂ ॥

ಭಾವಾರ್ಥ.—ಶ್ರೀಮತ್ಕೈಲಾಸವಾಸಿಯಾದ ನಗೆಯಿಂದ ಕೂಡಿದ, ಮೃದುವಾದ ಮಾತುಳ್ಳ, ಐದು ಮುಖವುಳ್ಳ, ಮೂರು ಕಣ್ಣುಳ್ಳ, ಪ್ರೇಮವೇ ಗುರುತಾಗುಳ್ಳ, ಸರ್ವ ಸಮೃದ್ಧಿಯನ್ನೊಳಗೊಂಡಿರುವ, ಸರ್ವೋತ್ಕೃಷ್ಟ ಮಂಗಳಸ್ವರೂಪನಾದ, ಪಾರ್ವತೀಪತಿಯಾದ, ಸರ್ವೇಶ್ವರನಾದ, ಜ್ಞಾನಿಯಾದ, ದೇವತೆಗಳಿಗೆ ದೇವನಾದ, ಪುಲಿಗಿರಿ ನಗರಿಯ ಪಾಲನೆಯೇ ಲಕ್ಷಣವಾಗುಳ್ಳ, ಜಿಂಕೆಯನ್ನು ಕೈಯಲ್ಲಿ ಧರಿಸಿರುವ, ನಾಗಾಭರಣನಾದ ಸೋಮೇಶ್ವರನು ಸರ್ವದಾ ದಯೆಯಿಂದ ಲೋಕವನ್ನು ರಕ್ಷಿಸಲಿ.

ಟಿಪ್ಪಣಿ.—ಶ್ರೀಃ-ಮಂಗಳ, ಸಂಪತ್ತು; ಸ್ಮಿತ–ನಗೆ, ವಕ್ತ್ರ-ಮುಖ, ಅಂಕ-ಗುರುತು, ಲಕ್ಷಣ; ಕಾಮ–ಮನೋರಥ, ಕೋರಿಕೆ; ಶಿವ–ಮಂಗಳ, ಪರ-ಶ್ರೇಷ್ಠವಾದ, ಧೀಃ–ಬುದ್ಧಿ, ಶಾಸನ–ರಕ್ಷಣೆ, ಮೃಗ-ಜಿಂಕೆ, ಸೋಮ–(ಉಮಾ) ಪಾರ್ವತಿಯಿಂದ ಕೂಡಿದ.

ಪೀಠಿಕೆ

(ಮತ್ತೇಭವಿಕ್ರೀಡಿತ ವೃತ್ತ)

ಕೆಲವಂ ಬಲ್ಲವರಿಂದ ಕಲ್ತು ಕೆಲವಂ ಶಾಸ್ತ್ರಂಗಳಂ ಕೇಳುತಂ |
ಕೆಲವಂ ಮಾಳ್ಪವರಿಂದ ಕಂಡು ಕೆಲವಂ ಸುಜ್ಞಾನದಿಂ ನೋಡುತಂ ||
ಕೆಲವಂ ಸಜ್ಜನಸಂಗದಿಂದಲರಿಯಲ್ ಸರ್ವಜ್ಞನಪ್ಪಂ ನರಂ |
ಪಲವುಂ ಪಳ್ಳ ಸಮುದ್ರವೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ‖ ೧ ‖

ಭಾ || ಅನೇಕ ತೊರೆಗಳು ಬಂದು ಸೇರಿ ಒಂದು ದೊಡ್ಡ ಸಮುದ್ರವಾಗುವಂತೆ ಮನುಷ್ಯನು ಕೆಲವು ವಿಷಯಗಳನ್ನು ಪಂಡಿತರಿಂದಲೂ, ಕೆಲವನ್ನು ಶಾಸ್ತ್ರಗಳಿಂದಲೂ, ಕೆಲವನ್ನು ಇತರರ ಆಚರಣೆಯಿಂದಲೂ, ಕೆಲವನ್ನು ಸ್ವಬುದ್ಧಿಯಿಂದಲೂ, ಕೆಲವನ್ನು ಸುಜನರ ಸಹವಾಸದಿಂದಲೂ ತಿಳಿದುಕೊಳ್ಳುವುದರಿಂದ ಸರ್ವಜ್ಞನಾಗುವನು.

ಟಿ || ಸರ್ವಜ್ಞ-ಎಲ್ಲವನ್ನೂ ತಿಳಿದವನು, ಪಲವು-ಅನೇಕ, ಪಳ್ಳ-ಹಳ್ಳ, ತೊರೆ; ಹರ ಹರಾ ಶ್ರೀ ಚೆನ್ನಸೋಮೇಶ್ವರಾ-ಪ್ರತಿ ಪದ್ಯದ ಕೊನೆಯಲ್ಲಿಯೂ ಬರುವ ಈ ಮಾತುಗಳು ಕವಿಯ ಇಷ್ಟದೈವದ ಸ್ಮರಣೆಯಾಗಿದೆ.

ಅದರಿಂ ನೀತಿಯೆ ಸಾಧನಂ ಸಕಲ ಲೋಕಕ್ಕಾಗಬೇಕೆಂದು ಪೇ |
ಳಿದ ಸೋಮಂ ಸುಜನರ್ಕಳೀಶತಕದೊಳ್ ತಪ್ಪಿರ್ದೊಡಂ ತಿದ್ದಿ ತೋ |
ರ್ಪುದು ನಿಮ್ಮುತ್ತಮ ಸದ್ಗುಣಂಗಳ ಜಗದ್ವಿಖ್ಯಾತಮಂ ಮಾಳ್ಪುದಾಂ |
ಮುದದಿಂ ನಿಮ್ಮವನೆಂಬುದೈ ಹರ ಹರಾ ಶ್ರೀ ಚೆನ್ನಸೋಮೇಶ್ವರಾ ‖ ೨ ‖

ಭಾ || ಆದಕಾರಣ ಸಕಲರಿಗೂ ನೀತಿಯು ಸಹಾಯವಾಗಬೇಕೆಂದು ಸೋಮನೆಂಬ (ಕವಿಯಾದ) ನಾನು ಈ ಸೋಮೇಶ್ವರ ಶತಕವನ್ನು ರಚಿಸಿದೆನು. ಇದರಲ್ಲಿ ತಪ್ಪುಗಳಿದ್ದರೆ ಸಜ್ಜನರು ಅವನ್ನು ತಿದ್ದಿ ತೋರಿಸಿ ತಮ್ಮ ಸದ್ಗುಣಗಳನ್ನು ಲೋಕದಲ್ಲಿ ಹರಡಬೇಕಲ್ಲದೆ ನಾನೂ ನಿಮ್ಮಲ್ಲಿ ಸೇರಿದವನೇ ಎಂದು ಭಾವಿಸಬೇಕು.

ಟಿ || ಸಾಧನ-ಸಹಾಯಕ ಸಾಮಗ್ರಿ.

ಶ್ರೇಷ್ಠತೆ

ಮುಕುರಂ ಕೈಯೊಳಿರಲ್ಕೆ ನೀರ ನೆಳಲೇಕೈ ಕಾಮಧೇನಿರ್ದುಮೂ |
ಟಕೆ ಗೊಡ್ಡಾಕಳನಾಳ್ವರೇ ಗುಣಯುತರ್ ಪಾಲುಂಡು ಮೇಲುಂಬರೇ ||
ಶುಕನೋದಿಂಗುರೆ ಚೆಲ್ವೆ ಕಾಕರವ ರಂಭಾನೃತ್ಯಕಂ ಡೊಂಬರೇ |
ಸಖರಿಂದುನ್ನತ ವಸ್ತುವೇ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ || ೩ ||

ಭಾ || ಕೈಯಲ್ಲಿ ಕನ್ನಡಿಯಿದ್ದರೂ (ಬಿಟ್ಟು) ನೀರಿನಲ್ಲಿ ಮುಖದ ನೆರಳನ್ನು ನೋಡಿಕೊಳ್ಳಬಹುದೇ? ಕಾಮಧೇನುವಿದ್ದರೂ ಹಾಲಿಗಾಗಿ ಗೊಡ್ಡು ಹಸುವನ್ನು ಸಾಕುತ್ತಾರೆಯೇ? ಗುಣವಂತರು ಹಾಲನ್ನು ಊಟಮಾಡಿದ ಮೇಲೆ ಬೇರೆ ಪದಾರ್ಥವನ್ನು ತಿನ್ನುವರೇ? ಗಿಳಿಯು ಮಾತಿನಲ್ಲಿರುವ ಇಂಪಿಗಿಂತಲೂ ಕಾಗೆಯ ಕೂಗಿನಲ್ಲಿ ಹೆಚ್ಚಾದ ಇಂಪಿರುವುದೇ? ಅಪ್ಸರ ಸ್ತ್ರೀಯಾದ ರಂಭೆಯ ನರ್ತನಕ್ಕಿಂತಲೂ ಡೊಂಬರ ಕುಣಿತವು ಚೆನ್ನಾಗಿರುವುದೇ? ಸ್ನೇಹಿತರಿಗಿಂತಲೂ ಹೆಚ್ಚಿನ ವಸ್ತು ಮತ್ತೊಂದು ಉಂಟೇ?

ಟಿ || ಮುಕುರ-ಕನ್ನಡಿ, ಕಾಮಧೇನು-ಕೇಳಿದುದನ್ನು ಕೊಡುವ ದೇವಲೋಕದ ಆಕಳು, ಕಾಕರವ-ಕಾಗೆಯ ಕೂಗು, ಸಖ-ಸ್ನೇಹಿತ, ಉನ್ನತ-ಶ್ರೇಷ್ಠ.

ಕವಿಯೇ ಸರ್ವರೊಳುತ್ತಮಂ ಕನಕವೇ ಲೋಹಂಗಳೊಳ್ ಶ್ರೇಷ್ಠ ಜಾ |
ಹ್ನವಿಯೇ ತೀರ್ಥದೊಳುನ್ನತಂ ಗರತಿಯೇ ಸ್ತ್ರೀಜಾತಿಯೊಳ್ ವೆಗ್ಗಳಂ ||
ರವಿ ಮುಖ್ಯಂ ಗ್ರಹವರ್ಗದೊಳ್ ರಸಗಳೊಳ್ ಶೃಂಗಾರವೇ ಬಲ್ಮೆ ಕೇಳ್ |
ಶಿವನೇ ದೇವರೊಳುತ್ತಮಂ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ || ೪ ||

ಭಾ || ಮನುಷ್ಯರಲ್ಲಿ ಕವಿಯೂ, ಲೋಹಗಳಲ್ಲಿ ಚಿನ್ನವೂ, ಪವಿತ್ರವಾದ ಜಲಗಳಲ್ಲಿ ಗಂಗೆಯೂ, ಹೆಂಗಸರಲ್ಲಿ ಪ್ರತಿವ್ರತೆಯೂ, ಗ್ರಹಗಳಲ್ಲಿ ಸೂರ್ಯನೂ, ರಸಗಳಲ್ಲಿ ಶೃಂಗಾರ ರಸವೂ, ದೇವತೆಗಳಲ್ಲಿ ಶಿವನೂ ಶ್ರೇಷ್ಠ.

ಟಿ || ಕನಕ-ಚಿನ್ನ, ಜಾಹ್ನವಿ-ಜಹ್ನುಮುನಿಯ ಮಗಳು ಗಂಗೆ, ಗರತಿ-ಪತಿವ್ರತೆ, ವೆಗ್ಗಳಂ-ಶ್ರೇಷ್ಠ, ರವಿ-ಸೂರ್ಯ, ವರ್ಗ-ಗುಂಪು, ಬಲ್ಮೆ-ಬಲವಾದುದು.

ರವಿಯಾಕಾಶಕೆ ಭೂಷಣಂ ರಜನಿಗಾಚಂದ್ರಂ ಮಹಾ ಭೂಷಣಂ ।
ಕುವರಂ ವಂಶಕೆ ಭೂಷಣಂ ಸರಸಿಗಂಭೋಜಾತಗಳ್ ಭೂಷಣಂ ॥
ಹವಿ ಯಜ್ಞಾಳಿಗೆ ಭೂಷಣಂ ಸತಿಗೆ ಪಾತಿವ್ರತ್ಯವೇ ಭೂಷಣಂ ।
ಕವಿಯಾಸ್ಥಾನಕೆ ಭೂಷಣಂ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ॥ ೫ ॥

ಭಾ || ಆಕಾಶಕ್ಕೆ ಸೂರ್ಯನೂ, ರಾತ್ರಿಗೆ ಚಂದ್ರನೂ, ವಂಶಕ್ಕೆ ಮಗನೂ ಸರೋವರಕ್ಕೆ ಕಮಲವೂ, ಯಜ್ಞಕ್ಕೆ ಹೋಮಮಾಡುವ ಪದಾರ್ಥವೂ, ಹೆಂಗಸಿಗೆ ಪಾತಿವ್ರತ್ಯವೂ, ರಾಜಸಭೆಗೆ ಕವಿಯೂ ಅಲಂಕಾರವು.

ಟಿ || ರವಿ-ಸೂರ್ಯ, ರಜನಿ-ರಾತ್ರಿ, ಕುವರ-ಮಗ, ಅಂಭೋಜಾತ-ಕಮಲ, ಹವಿ-ಅಗ್ನಿಯಲ್ಲಿ ಹೋಮ ಮಾಡುವ ಪದಾರ್ಥ, ಸತಿ-ಹೆಂಗಸು, ಆಸ್ಥಾನ-ರಾಜ ಸಭೆ.

ಹರನಿಂದುರ್ವಿಗೆ ದೈವವೇ ಕಿರಣಕಿಂದುಂ ಬಿಟ್ಟು ಸೊಂಪುಂಟೆ ಪೆ ।
ತ್ತರಿಗಿಂತುಂಟೆ ಹಿತರ್ಕಳುಂ ಮಡದಿಯಿಂ ಬೇರಾಪ್ತರಿನ್ನಿರ್ಪರೇ ।
ಸರಿಯೇ ವಿದ್ಯಕೆ ಬಂಧು ಮಾರನಿದಿರೊಳ್ ಬಿಲ್ಲಾಳಿ ಮೂಲೋಕದೊಳ್ ।
ಗುರುವಿಂಪುನ್ನತ ಸೇವ್ಯನೇ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ॥ ೬ ॥

ಭಾ || ಲೋಕದಲ್ಲಿ ಶಿವನಿಗಿಂತ ದೊಡ್ಡ ದೇವರೂ, ಚಂದ್ರಕಿರಣಕ್ಕಿಂತ ಹೆಚ್ಚಾಗಿ ಆನಂದವನ್ನು ಕೊಡುವ ಕಿರಣವೂ, ತಂದೆ ತಾಯಿಗಳನ್ನು ಮೀರಿದ ಹಿತಚಿಂತಕರೂ, ಹೆಂಡತಿಗಿಂತ ಹೆಚ್ಚಿನವರಾದ ಆಪ್ತರೂ, ವಿದ್ಯೆಗಿಂತ ಹೆಚ್ಚಾದ ನಂಟರೂ, ಮನ್ಮಥನನ್ನು ಮೀರಿದ ಬಿಲ್ಲಾಳೂ, ಸೇವೆ ಮಾಡಿಸಿಕೊಳ್ಳುವುದಕ್ಕೆ ಗುರುವಿಗಿಂತ ಉತ್ತಮನಾದವನೂ ಇಲ್ಲ.

ಟಿ || ಹರನಿಂದ-ಹರನಿಗಿಂತ, ಉರ್ವಿ-ಭೂಮಿ, ಕಿರಣ-ಕಾಂತಿ, ಪೆತ್ತರು-ಹೆತ್ತವರು, ಮಡದಿಯಿಂ-ಹೆಂಡತಿಗಿಂತಲೂ, ಮಾರ-ಮನ್ಮಥ, ಬಿಲ್ಲಾಳು-ಬಿಲ್ಲನ್ನು ಹಿಡಿದು ಯುದ್ಧ ಮಾಡುವವನು.

ಪಳಿಯರ್ ಬಂಜೆಯೆನುತ್ತ ಪುತ್ರವತಿಯೆಂಬರ್ ದೇವ ಪಿತ್ರರ್ಚನಂ |
ಗಳಿಗಂ ಸುವ್ರತಕಂ ವಿವಾಹಕೆ ಶುಭಕ್ಕಂ ಯೋಗ್ಯಳನ್ನೋದಕಂ ||
ಗಳ ನೀಡಲ್ ಕುಲಕೋಟಿ ಮುಕ್ತಿದಳೆಗುಂ ಸುಜ್ಞಾನದೊಳ್ ಕೂಡಿದಾ |
ಕುಲವೆಣ್ಣಿಂಗೆಣೆಯಾವುದೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ || ೭ ||

ಭಾ || ಒಳ್ಳೆಯ ಕುಲದಲ್ಲಿ ಹುಟ್ಟಿ ವಿವೇಕವುಳ್ಳವಳೂ, ಗುಣವತಿಯೂ ಆದ ಸ್ತ್ರೀಯು ಬಂಜೆಯಾಗಿದ್ದರೂ ಆಕೆಯನ್ನು ಬಂಜೆಯೆಂದು ಯಾರೂ ನಿಂದಿಸುವುದಿಲ್ಲ, ಮಕ್ಕಳೊಂದಿಗಳಂತೆಯೇ ಭಾವಿಸುವರು ; ದೇವರ ಪೂಜೆ, ಶ್ರಾದ್ಧ, ವಿವಾಹ, ವ್ರತಾಚರಣೆ ಮೊದಲಾದ ಶುಭಕಾರ್ಯಗಳಿಗೆ ಆಕೆಯು ಯೋಗ್ಯಳು ; ಆಕೆಯು ಅನ್ನೋದಕಗಳನ್ನು ದಾನಮಾಡಿದರೆ ಆಕೆಯ ವಂಶವೆಲ್ಲವೂ ಮುಕ್ತಿಯನ್ನು ಪಡೆಯುವುದು.

ಟಿ || ಪಳಿ-ನಿಂದಿಸು, ನೀಡು-ಕೊಡು, ತಳೆಗುಂ-ಹೊಂದುವುದು, ಕುಲವೆಣ್ಣು-ಒಳ್ಳೆಯ ವಂಶದಲ್ಲಿ ಹುಟ್ಟಿದವಳು, ಎಣೆ-ಸಮಾನ.

ಹಿತವಂ ತೋರುವನಾತ್ಮಬಂಧು ಪೊರೆವಾತಂ ತಂದೆ ಸದ್ಧರ್ಮದಾ |
ಸತಿಯೇ ಸರ್ವಕೆ ಸಾಧನಂ ಕಲಿಸಿದಾತಂ ವರ್ಣಮಾತ್ರಂ ಗುರು ||
ಶ್ರುತಿಮಾರ್ಗಂ ಬಿಡದಾತ ಸುವ್ರತಿ ಮಹಾ ಸದ್ವಿದ್ಯೆಯೇ ಪುಣ್ಯದಂ |
ಸುತನೇ ಸದ್ಗತಿದಾತನೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ || ೮ ||

ಭಾ || ತನಗೆ ಒಳ್ಳೆಯದನ್ನು ಮಾಡುವವನೇ ನಂಟ, ತನ್ನನ್ನು ಕಾಪಾಡುವವನೇ ತಂದೆ, ಧರ್ಮಮಾರ್ಗದಲ್ಲಿ ನಡೆವ ಹೆಂಡತಿಯೇ ಸಕಲ ಸುಖಕ್ಕೂ ಕಾರಣ, ಒಂದಕ್ಷರವನ್ನು ಕಲಿಸಿದವನೂ ಗುರು, ವೇದ ಮಾರ್ಗವನ್ನು ಬಿಡದೆ ನಡೆಯುವವನೇ ಮುನಿ, ಒಳ್ಳೆಯ ವಿದ್ಯೆಯೇ (ಬ್ರಹ್ಮವಿದ್ಯೆಯೇ) ಪುಣ್ಯವನ್ನು ಕೊಡುವುದು, ಮಗನೇ ಸದ್ಗತಿಗೆ ಕಾರಣನು.

ಟಿ || ಆತ್ಮ-ತನ್ನ, ಪೊರೆ-ಕಾಪಾಡು, ಸಾಧನ-ಸಹಾಯ, ವರ್ಣ-ಅಕ್ಷರ, ಶ್ರುತಿ-ವೇದ, ವ್ರತಿ-ಮುನಿ.

ಪ್ರಜೆಯಂ ಪಾಲಿಸಬಲ್ಲೊಡಾತನರಸಂ ಕೈಯಾಸೆಯಂ ಮಾಡದಂ |
ನಿಜ ಮಂತ್ರೀಶ್ವರ ತಂದೆ ತಾಯ ಸಲಹಲ್ ಬಲ್ಲಾತನೇ ಧಾರ್ಮಿಕಂ ||
ಭಜಕಂ ದೈವದ ಭಕ್ತಿಯುಳ್ಳೊಡೆ ಭಟಂ ನಿರ್ಭೀತ ತಾನಾದವಂ |
ದ್ವಿಜನಾಚಾರತೆಯುಳ್ಳವಂ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ || ೯ ||

ಭಾ || ಪ್ರಜೆಗಳನ್ನು ಚೆನ್ನಾಗಿ ರಕ್ಷಿಸಬಲ್ಲವನೇ ದೊರೆ, ಲಂಚಕ್ಕಾಸೆ ಪಡದವನೇ ಯೋಗ್ಯನಾದ ಮಂತ್ರಿ, ತಂದೆ ತಾಯಿಗಳನ್ನು ಸಲಹಬಲ್ಲವನೇ ಧರ್ಮಿಷ್ಠನು, ದೇವರಲ್ಲಿ ಭಕ್ತಿಯುಳ್ಳವನೇ ಭಕ್ತನು, ನಿರ್ಭಯನಾದವನೇ ಸೈನಿಕನು, ಒಳ್ಳೆಯ ನಡತೆಯುಳ್ಳವನೇ ಬ್ರಾಹ್ಮಣನು.

ಟಿ || ಕೈಯಾಸೆ-ಲಂಚ, ಭಜಕ-ಭಕ್ತ, ಭಟ-ಯುದ್ಧಮಾಡುವವನು, ದ್ವಿಜ-ಬ್ರಾಹ್ಮಣ.

ಸರಿಯೇ ಸೂರ್ಯಗೆ ಕೋಟಿ ಮಿಂಚುಬುಳುಗಳ್ ನಕ್ಷತ್ರವೆಷ್ಟಾದೊಡಂ |
ದೊರೆಯೇ ಚಂದ್ರಗೆ ಜೀವರತ್ನಕೆಣೆಯೇ ಮಿಕ್ಕಾದ ಪಾಷಾಣಗಳ್ ||
ಉರಗೇಂದ್ರಂಗೆ ಸಮಾನಮೊಳ್ಳೆಯೆ ಸುಪರ್ಣಂಗೀಡೆ ಕಾಕಾಳಿ ಸ |
ಕ್ಕರೆಗುಪ್ಪಂ ಸರಿಮಾಳ್ಪರೇ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ || ೧೦ ||

ಭಾ || ಮಿಂಚು ಹುಳುಗಳು (ಹೊನ್ನೆ ಹುಳು) ಕೋಟಿಯಿದ್ದರೂ ಒಬ್ಬ ಸೂರ್ಯನಿಗೆ ಸಮವಾಗುವುವೇ! ನಕ್ಷತ್ರಗಳೆಷ್ಟಾದರೂ ಚಂದ್ರನಿಗೆ ಸರಿಯೇ? ಸಾಮಾನ್ಯವಾದ ಕಲ್ಲುಗಳು ಜೀವರತ್ನಕ್ಕೆ ಎಣೆಯೇ? ನೀರು ಹಾವು ಆದಿಶೇಷನಿಗೆ ಸಾಟಿಯೇ? ಕಾಗೆಯ ಗುಂಪು ಗರುಡನಿಗೆ ಸಮವೇ? ಉಪ್ಪನ್ನು ಸಕ್ಕರೆಗೆ ಹೋಲಿಸುವರೇ?

ಟಿ || ಮಿಂಚುಬುಳು-ಮಿಣುಕು (ಹೊನ್ನೆ) ಹುಳು, ದೊರೆ-ಸಮಾನ, ಪಾಷಾಣ-ಕಲ್ಲು, ಎಣೆ-ಸಮಾನ, ಉರಗೇಂದ್ರ-ಆದಿಶೇಷ, ಒಳ್ಳೆ-ನೀರುಹಾವು, ಸುಪರ್ಣ-ಗರುಡ, ಕಾಕಾಳಿ-ಕಾಗೆಗಳ ಗುಂಪು.

ಧರಣೀಶಂ ಧುರ ಧೀರನಾಗೆ ಧನಮುಳ್ಳಂ ತ್ಯಾಗಿಯಾಗಲ್ ಕವೀ ।
ಶ್ವರ ಸಂಗೀತದಿ ಜಾಣನಾಗೆ ಸುಕಲಾ ಪ್ರೌಢಂಗಿರಲ್ ಪ್ರೌಢೆವೆಣ್ ॥
ಬರೆವಂ ಧಾರ್ಮಿಕನಾಗೆ ಮಂತ್ರಿ ಚತುರೋಪಾಯಂಗಳಂ ಬಲ್ಲೊಡಂ ।
ದೊರೆವೋಲ್ ಚಿನ್ನಕೆ ಸೌರಭಂ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ॥೧೧॥

ಭಾ ॥ ದೊರೆಗೆ ಯುದ್ಧದಲ್ಲಿ ಧೈರ್ಯವೂ, ಧನಿಕನಿಗೆ ದಾನಮಾಡುವ ಬುದ್ಧಿಯೂ, ಕವಿತ್ವಮಾಡುವವನಿಗೆ ಸಂಗೀತದಲ್ಲಿ ಪಾಂಡಿತ್ಯವೂ, ಸಂಗೀತ, ಚಿತ್ರ ಮೊದಲಾದ (ಲಲಿತ ಕಲೆಗಳಲ್ಲಿ) ಕುಶಲ ವಿದ್ಯೆಗಳಲ್ಲಿ ನಿಪುಣನಾದವನಿಗೆ ಚತುರಳಾದ ಹೆಂಡತಿಯೂ, ಕರಣಿಕನಿಗೆ ಧರ್ಮದಲ್ಲಿ ಬುದ್ಧಿಯೂ, ಮಂತ್ರಿಗೆ ಸಾಮ ದಾನ ಭೇದ ದಂಡಗಳೆಂಬ ನಾಲ್ಕು ಉಪಾಯಗಳ ತಿಳಿವೂ ಇದ್ದರೆ ಅದು ಚಿನ್ನಕ್ಕೆ ಸುವಾಸನೆಯುಂಟಾದಂತೆ ಶೋಭಿಸುತ್ತದೆ.

ಟಿ ॥ ಧುರ-ಯುದ್ಧ, ಕಲಾ-ಸಂಗೀತ, ಚಿತ್ರ ಮೊದಲಾದ ವಿದ್ಯೆ, ಪ್ರೌಢ-ನಿಪುಣ, ಬರೆವಂ-ಶಾನುಭೋಗ ಮೊದಲಾದವರು, ದೊರೆವೋಲ್-ಉಂಟಾಗುವ ಹಾಗೆ, ಸೌರಭ-ಸುವಾಸನೆ.

ಧನಕಂ ಧಾನ್ಯಕೆ ಭೂಷಣಾಂಬರ ಸುಪುಷ್ಪಂಗಳ್ಗೆ ಮೃಷ್ಟಾನ್ನ ಭೋ ।
ಜನಕಂ ಸತ್ಫಲಕಂಜನಾದಿಯನುಲೇಪಂಗಳ್ಗೆ ಸಮ್ಮೋಹ ಸಂ ॥
ಜನಕಾನಂದಕೆ ರಾಜಭೋಗಕೆ ಸುವಿದ್ಯಂಗಳ್ಗದಾರಾದೊಡಂ ।
ಮನದೊಳ್ ಕಾಮಿಸದಿರ್ಪರೇ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ॥೧೨॥

ಭಾ ॥ ಧನ, ಧಾನ್ಯ, ಅಲಂಕಾರ, ವಸ್ತ್ರ, ಸುಗಂಧವುಳ್ಳ ಹೂ, ಒಳ್ಳೆಯ ಪದಾರ್ಥಗಳ ಊಟ, ಉತ್ತಮವಾದ ಹಣ್ಣು, ಕಾಡಿಗೆ ಮೊದಲಾದ ಬಳಿದುಕೊಳ್ಳುವ ಸುವಾಸನಾದ್ರವ್ಯಗಳು, ಸಮ್ಮೋಹವನ್ನು ಹುಟ್ಟಿಸುವ ಆನಂದ, ರಾಜಭೋಗ, ಸುವಿದ್ಯೆ—ಇವುಗಳನ್ನು ಮನಸ್ಸಿನಲ್ಲಿ ಬಯಸದಿರುವವರು ಯಾರೂ ಇಲ್ಲ.

ಟಿ ॥ ಭೂಷಣ-ಒಡವೆ, ಅಂಬರ-ವಸ್ತ್ರ, ಅಂಜನ-ಕಾಡಿಗೆ, ಅನುಲೇಪ-ಮೈಗೆ ಬಳಿದುಕೊಳ್ಳುವ ಸುಗಂಧದ್ರವ್ಯ, ಸಮ್ಮೋಹ ಸಂಜನಕ-ಮನಸ್ಸನ್ನು ಮರುಳುಮಾಡುವ, ಕಾಮಿಸು-ಬಯಸು.

ಸವಿವಣ್ಣಲ್ಲಿನಿಮಾವು ಸರ್ವರಸದೊಳ್ ಶೃಂಗಾರ ಸಂಭಾರದೊಳ್ |
ಲವಣಂ ಕೇಳಲು ಬಾಲಭಾಷೆ ಸಿರಿಯೊಳ್ಳಾರೋಗ್ಯ ದೈವಂಗಳೊಳ್ ||
ಶಿವ ಬಿಲ್ಲಾಳ್ಗಳೊಳಂಗಜಂ ಜನಿಸುವಾ ಜನ್ಮಂಗಳೊಳ್ ಮಾನುಷಂ |
ಕವಿತಾ ವಿದ್ಯೆ ಸುವಿದ್ಯೆಯೊಳ್ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ||೧೩||

ಭಾ || ರುಚಿಯಾದ ಹಣ್ಣುಗಳಲ್ಲಿ ಸಿಹಿ ಮಾವೂ, ನವರಸಗಳಲ್ಲಿ ಶೃಂಗಾರವೂ, ಸಂಭಾರಗಳಲ್ಲಿ ಉಪ್ಪೂ, ಮಾತುಗಳಲ್ಲಿ ಎಳೆಯ ಮಕ್ಕಳ ಮಾತೂ, ಭಾಗ್ಯಗಳಲ್ಲಿ ಆರೋಗ್ಯಭಾಗ್ಯವೂ, ದೇವರುಗಳಲ್ಲಿ ಶಿವನೂ, ಬಿಲ್ಲನ್ನು ಹಿಡಿದು ಯುದ್ಧಮಾಡುವ ಶೂರರಲ್ಲಿ ಮನ್ಮಥನೂ, ಜನ್ಮಗಳಲ್ಲಿ ಮನುಷ್ಯ ಜನ್ಮವೂ, ವಿದ್ಯೆಗಳಲ್ಲಿ ಕವಿತ್ವ ವಿದ್ಯೆಯೂ ಶ್ರೇಷ್ಠವಾದುವು.

ಟಿ || ಸವಿವಣ್ಣು–ರುಚಿಯಾದ ಹಣ್ಣು, ಇನಿಮಾವು–ಸಿಹಿ ಮಾವು, ಅಂಗಜ–ಮನ್ಮಥ.

ಮಳೆಯೇ ಸರ್ವ ಜನಾಶ್ರಯಂ ಶಿವನೆ ದೇವರ್ಕಳ್ಗೆ ತಾನಾಶ್ರಯಂ |
ಬೆಳೆಯೇ ಸರ್ವರ ಜೀವನಂ ಬಡವನೇ ಸರ್ವರ್ಗೆ ಸಾಧಾರಣಂ ||
ಬಳೆಯೇ ಸರ್ವ ವಿಭೂಷಣಕ್ಕೆ ಮೊದಲೈ ಪುತ್ರೋತ್ಸವಂ ಸೂತ್ಸವಂ ||
ಕೆಳೆಯೇ ಸರ್ವರೊಳುತ್ತಮಂ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ||೧೪||

ಭಾ || ಎಲ್ಲ ಜನಕ್ಕೂ ಮಳೆಯೇ ಆಧಾರ, ಎಲ್ಲ ದೇವತೆಗಳಿಗೂ ಶಿವನೇ ಆಶ್ರಯ, ಎಲ್ಲರ ಜೀವನಕ್ಕೂ ಬೆಳೆಯೇ ಕಾರಣ, ಎಲ್ಲ ಜನರಿಗೂ ಬಡವನೇ ಸುಲಭನು (ಕೆಲಸಕ್ಕೊದಗುವವನು), ಒಡವೆಗಳಲ್ಲೆಲ್ಲ ಬಳೆಯೇ ಮುಖ್ಯ, ಉತ್ಸವಗಳಲ್ಲಿ ಪುತ್ರೋತ್ಸವವೇ ಶ್ರೇಷ್ಠ, ಎಲ್ಲರಲ್ಲಿಯೂ ಸ್ನೇಹಿತನೇ ಉತ್ತಮನು.

ಟಿ || ಸೂತ್ಸವಂ–ಒಳ್ಳೆಯ ಉತ್ಸವ.

ನಿಕೃಷ್ಟತೆ

ಫಲವತ್ತಿಲ್ಲದ ರಾಜ್ಯದಲ್ಲಿ ಪ್ರಭು ದಂಡಕ್ಕಾಸೆಗೆಯ್ವಲ್ಲಿ ಬಲ್ |
ಪುಲಿಗಳ್ ಸಿಂಗಗಳಿಕ್ಕೆಯಲ್ಲಿ ಪೆರವೆಣ್ಣಿರ್ದಲ್ಲಿ ಕುಗ್ರಾಮದೊಳ್ |
ಗೆಲವಂ ತೋರದೆ ದುಃಖಮಪ್ಪ ಕಡೆಯೊಳ್ ಭೂತಂಗಳಾವಾಸದೊಳ್ |
ಸಲ್ಲೆ ಬಲ್ಲರ್ ನಿಲೆ ಸಲ್ಲದೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ॥ ೧೫ ॥

ಭಾ ॥ ಬೆಳೆಯು ಚೆನ್ನಾಗಿ ಆಗದ ದೇಶದಲ್ಲಿಯೂ, ಯಾವಾಗಲೂ ತೆರಿಗೆಯನ್ನು ತೆಗೆದುಕೊಳ್ಳುವುದರಲ್ಲಿಯೇ ಅಭಿಲಾಷೆಯುಳ್ಳ ದೊರೆಯ ರಾಜ್ಯದಲ್ಲಿಯೂ, ಹುಲಿಗಳೂ ಸಿಂಹಗಳೂ ಹೆಚ್ಚಾಗಿ ಸೇರಿಕೊಂಡಿರುವ ಎಡೆಯಲ್ಲಿಯೂ, ಪರಸ್ತ್ರೀ ಇರುವ ಸ್ಥಳದಲ್ಲಿಯೂ, ಅನುಕೂಲತೆಯಿಲ್ಲದ ಊರಲ್ಲಿಯೂ, ಉಲ್ಲಾಸವನ್ನುಂಟುಮಾಡದೆ ದುಃಖವನ್ನುಂಟುಮಾಡುವ ಕಡೆಯಲ್ಲಿಯೂ, ಪಿಶಾಚಗಳು ವಾಸಮಾಡುವ ಪ್ರದೇಶದಲ್ಲಿಯೂ ವಿವೇಕಿಗಳಾದವರು ವಾಸಮಾಡಬಾರದು.

ಟಿ ॥ ದಂಡ-ತೆರಿಗೆ, ಇಕ್ಕೆ-ವಾಸಸ್ಥಳ, ಸಲೆ-ಚೆನ್ನಾಗಿ, ಬಲ್ಲರ್-ತಿಳಿದವರು ಸಲ್ಲದು-ತಕ್ಕದ್ದಲ್ಲ.

ಉಣದಿರ್ಪಾ ಧನಮಿರ್ದೊಡೇನು ಸುತನಿರ್ದೇಂ ಮುಪ್ಪಿನಲ್ಲಾಗದಾ |
ಒಣಗಲ್ಪೈರಿಗೆ ಬಾರದಿರ್ದ ಮಳೆ ತಾಂ ಬಂದೇನದಾಪತ್ತಿನೊಳ್ ॥
ಮಣಿದುಂ ನೋಡದ ಬಂಧುವೇತಕೆಣಿಸಲ್ ಕಾಲೋಚಿತಕ್ಕೈದಿದಾ |
ತೃಣವೇ ಪರ್ವತವಲ್ಲವೇ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ | ೧೬ ॥

ಭಾ ॥ ಉಪಯೋಗಿಸದಿರುವ ಹಣವೂ, ಮುಪ್ಪಿನಲ್ಲಿ ಸಲಹದ ಮಗನೂ, ಪೈರು ಒಣಗುತ್ತಿರುವ ಕಾಲದಲ್ಲಿ ಬಾರದಿರುವ ಮಳೆಯೂ, ಕಷ್ಟಕಾಲದಲ್ಲಿ ಬಂದು ವಿಚಾರಿಸಿಕೊಳ್ಳದ ನಂಟನೂ ನಿಷ್ಪ್ರಯೋಜನವು. ಸಮಯಕ್ಕೆ ದೊರೆತ ಸಹಾಯವು ಅಲ್ಪವಾದರೂ ಅದೇ ಮಹತ್ತರವಾದದ್ದು.

ಟಿ ॥ ಮಣಿದು-ಬಗ್ಗಿ, ಇಣಿಕಿ; ಐದಿದ-ಒದಗಿದ.

ತೆರನಂ ಕಾಣದ ಬಾಳ್ಕೆಯಲ್ಪಮತಿ ಕ್ಷುದ್ರಾರಂಭಮಲ್ಪಾಶ್ರಯಂ |
ಕಿರುದೋಟಂ ಕಡೆವಳ್ಳಿ ಬೀಳುಮನೆ ಮುಂಗೆಯ್ವಾರ್ಭಟಂ ಸಾಲದಾ
ದೊರೆಕಾರ್ಯಂ ಘೃತಮಿಲ್ಲದೂಟದ ಸುಖಂ ದುರ್ಮಾರ್ಗರೊಳ್ ಸ್ನೇಹಮುಂ
ಬರಿಗೈಯಂ ಸುರಿದಂತೆಲೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರ || ೧೭ ||

ಭಾ || ರೀತಿಕೆಟ್ಟ ಬದುಕು, ಅಲ್ಪಬುದ್ಧಿ, ಅಲ್ಪ ಕಾರ್ಯವನ್ನು ಹಿಡಿಯುವುದು, ನೀಚರನ್ನು ಆಶ್ರಯಿಸುವುದು, ಸಣ್ಣ ತೋಟ, ತೀರ ಕೊನೆಯಲ್ಲಿರುವ ಹಳ್ಳಿ, ಹಾಳಾಗುತ್ತಿರುವ ಮನೆ, ಮೊದಲಿಗೇ ಮಾಡುವ ಗದ್ದಲ(ಆರಂಭ ಶೂರತ್ವ), ಸಾಲಮಾಡಿ ಮಾಡುವ ಆಡಂಬರದ ಕೆಲಸ, ತುಪ್ಪವಿಲ್ಲದ ಊಟ, ದುರ್ಮಾರ್ಗದಲ್ಲಿ ಸ್ನೇಹ—ಇವೆಲ್ಲವೂ ವ್ಯರ್ಥವು.

ಟಿ || ತೆರ-ರೀತಿ, ಬಾಳ್ಕೆ-ಬದುಕು, ಕ್ಷುದ್ರ-ಅಲ್ಪ, ಕಿರುದೋಟ-ಕಿರಿದಾದ ತೋಟ, ದೊರೆ ಕಾರ್ಯಂ-ಆಡಂಬರದ ಕೆಲಸ, ಸುರಿದಂತೆ-ಸೊರ್ರನೆ ಸುರಿದುಕೊಂಡಂತೆ.

ಪೊರೆದೇಂ ಬಾಳವೆ ಪಂದಿನಾಯ್ಗಳೊಡಲಂ ಮಾತಾಡವೇ ಭೂತಗಳ್ |
ತರುಗಳ್ ಜೀವಿಗಳಲ್ಲವೇ ಪ್ರತಿಮೆಗಳ್ ಕಾದಾಡವೇ ತಿತ್ತಿಗಳ್ ||
ಮೊರೆಯುತ್ತೇನುಸಿರಿಕ್ಕವೇ ಗ್ರಹ ಗೃಹಂ ಚೆಲ್ವಾಗಿರಲ್ ಸೇರದೇ |
ನಿರಲೇಕಜ್ಞರನೇಕದಿಂ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ || ೧೮ |

ಭಾ || ಹಂದಿ ನಾಯಿಗಳು ಹೊಟ್ಟೆಹೊರೆದುಕೊಂಡು ಬದುಕುವುದಿಲ್ಲವೇ? ಪಿಶಾಚಗಳು ಮಾತಾಡುವುದಿಲ್ಲವೇ? ಗಿಡಗಳಿಗೆ ಜೀವವಿಲ್ಲವೇ? ಬೊಂಬೆಗಳು (ಸೂತ್ರ ಹಿಡಿದು ಎಳೆಯುವುದರಿಂದ) ಕಾದಾಡುವುದಿಲ್ಲವೇ? ತಿದಿಗಳು (ಒತ್ತುವುದರಿಂದ) ಉಸಿರಾಡುವುದಿಲ್ಲವೇ? ಒಳ್ಳೆಯ ಮನೆಗಳಲ್ಲಿ ಗ್ರಹಗಳು ಬಂದು ಸೇರುವುದಿಲ್ಲವೇ? ಅವುಗಳಂತೆಯೇ ಮೂಢರನೇಕರಿರುವುದರಿಂದ ಫಲವೇನು?

ಟಿ || ಪೊರೆದು-ರಕ್ಷಿಸಿಕೊಂಡು, ಒಡಲು-ದೇಹ, ತರು-ಗಿಡ, ತಿತ್ತಿ-(ಕಮ್ಮಾರರೂ, ಅಕ್ಕಸಾಲಿಗರೂ ಉಪಯೋಗಿಸುವ ಚರ್ಮದ) ತಿದಿ, ಮೊರೆಯುತ್ತ-ಶಬ್ದಮಾಡುತ್ತ, ಉಸಿರಿಕ್ಕು-ಉಸಿರಾಡಿಸು, ಗ್ರಹ-ಪಿಶಾಚಿ ಮೊದಲಾದುವು, ಅಜ್ಞರು-ಮೂಢರು.

ಜಡನಂ ಮೂರ್ಖನ ಕೋಪಿಯಂ ಪಿಸುಣನಂ ದುರ್ಮಾರ್ಗಿಯಂ ಪೆಂಡಿರಂ ।
ಬಡಿದುಂ ಬೈವನ ನಂಟರುಣ್ಣಲುಡಲುಂಟಾಗಿರ್ದುದಂ ತಾಳದಾ ॥
ಕಡು ಪಾಪಿಷ್ಠನ ಜಾಣ್ಮೆಯಿಲ್ಲದನನಿಷ್ಟಂ ಮಾಳ್ಪನಂ ನೋಡಿಯುಂ ।
ನುಡಿಸಲ್ ಸಜ್ಜನರೊಲ್ವರೇ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ॥ ೧೯ ॥

ಭಾ ॥ ಸೋಮಾರಿ, ಹಟಮಾರಿ, ಸಿಟ್ಟಿನವ, ಚಾಡಿಕೋರ, ದುರಾಚಾರಿ, ಹೆಂಡತಿಯನ್ನು ಯಾವಾಗಲೂ ಬೈದು ಹೊಡೆಯುತ್ತಿರುವವ, ಉಣ್ಣುವುದಕ್ಕೂ, ಉಡುವುದಕ್ಕೂ ಅನುಕೂಲವಿರುವ ನಂಟರನ್ನು ನೋಡಿ ಸೈರಿಸದ ಪಾಪಿ, ಜಾಣತನವಿಲ್ಲದವ, ಕೆಟ್ಟದನ್ನು ಮಾಡುವವ—ಇವರನ್ನು ಸುಜನರು ಕಂಡರೂ ಮಾತನಾಡಿಸುವುದಕ್ಕೆ ಇಷ್ಟಪಡುವುದಿಲ್ಲ. (ಇವರೆಲ್ಲರೂ ಸಂಭಾಷಣೆಗೂ ಅರ್ಹರಲ್ಲವೆಂದು ಭಾವವು).

ಟಿ ॥ ಪಿಸುಣ-ಚಾಡಿಕೋರ, ಕಡು-ಹೆಚ್ಚಾದ, ಒಲ್ವರೇ-ಒಪ್ಪುವರೇ?

ಸತಿಯಾಲಾಪಕೆ ಸೋಲ್ವ ಜೂಜಿಗೆ ಖಳರ್ ಕೊಂಡಾಡುತಿರ್ಪಲ್ಲಿಗಂ ।
ಅತಿ ಪಾಪಂ ಬಹ ಕಾರ್ಯಕಲ್ಪ ವಿಷಯಕ್ಕಂ ದಾಸಿಯಾ ಗೋಷ್ಠಿಗಂ ॥
ಪ್ರತಿ ತಾನಿಲ್ಲದ ಮದ್ದು ಮಂತ್ರ ಮಣಿಗಂ ಸಂದೇಹಮಪ್ಪಲ್ಲಿಗಂ ।
ಮತಿವಂತರ್ ಮರುಳಪ್ಪರೇ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ॥ ೨೦ ॥

ಭಾ ॥ ಹೆಂಗಸಿನ ಮಾತಿಗೂ, ಸೋಲುವ ಜೂಜಾಟಕ್ಕೂ, ನೀಚರ ಹೊಗಳಿಕೆಗೂ, ಬಹಳ ಪಾಪ ಬರುವ ಕೆಲಸಕ್ಕೂ, ಅಲ್ಪ ವಿಷಯಕ್ಕೂ, ಸೇವಕಿಯರ ಸಹವಾಸಕ್ಕೂ, ಪ್ರತೀಕಾರವಿಲ್ಲದ (ಕೆಡಕನ್ನು ಮೊದಲು ಉಂಟುಮಾಡಿ ತರುವಾಯ ತಪ್ಪಿಸುವುದಕ್ಕೆ ಕೈಯಲ್ಲಾಗದ) ಔಷಧ ಮಂತ್ರ ಮಣಿಗಳಿಗೂ, ಸಂಶಯ ತೋರುವ ಸ್ಥಳಕ್ಕೂ ಬುದ್ಧಿಶಾಲಿಗಳು ಮರುಳಾಗರು.

ಟಿ ॥ ಆಲಾಪ-ಮಾತು, ಖಳ-ನೀಚ, ಮರುಳು-ಭ್ರಾಂತಿ.

ಸುಡು ಸೂಪಂ ಘೃತಮಿಲ್ಲದೂಟವ ಪರಾನ್ನಾಪೇಕ್ಷೆಯಾ ಜಿಹ್ವೆಯಂ|
ಸುಡು ದಾರಿದ್ರ್ಯದ ಬಾಳ್ಕೆಯಂ ಕಲಹ ಕೋಪಂ ಮಾಳ್ಪ ಸಂಗಾತಿಯಂ ||
ಸುಡು ತಾಂಬೂಲವಿಹೀನ ವಕ್ತ್ರವ ಪರಸ್ತ್ರೀ ನೋಡುವಾ ಕಣ್ಗಳಂ |
ನುಡಿದುಂ ತಪ್ಪುವ ರಾಜನಂ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ || ೨೧||

ಭಾ || ತುಪ್ಪ, ತೊವ್ವೆ ಇವುಗಳಿಲ್ಲದ ಊಟವನ್ನೂ, ಇತರರ ಮನೆಯ ಊಟವನ್ನೇ ಯಾವಾಗಲೂ ಬಯಸುತ್ತಿರುವ ನಾಲಗೆಯನ್ನೂ, ಬಡತನದ ಜೀವನವನ್ನೂ, ಕೋಪಿಸಿಕೊಳ್ಳುತ್ತಲೂ ಜಗಳವಾಡುತ್ತಲೂ ಇರುವ ಹೆಂಡತಿಯನ್ನೂ, ತಾಂಬೂಲ ಹಾಕಿಕೊಳ್ಳದಿರುವ ಬಾಯಿಯನ್ನೂ, ಪರಸ್ತ್ರೀಯನ್ನು ನೋಡುವ ಕಣ್ಣನ್ನೂ, ಆಡಿದ ಮಾತಿಗೆ ತಪ್ಪುವ ದೊರೆಯನ್ನೂ ಅತಿ ನಿಕೃಷ್ಟವೆಂದು ಭಾವಿಸತಕ್ಕದ್ದು.

ಟಿ || ಸೂಪ-ತೊವ್ವೆ, ಜಿಹ್ವೆ-ನಾಲಗೆ, ಸಂಗಾತಿ-ಹೆಂಡತಿ, ವಿಹೀನ-ಇಲ್ಲದ, ವಕ್ತ್ರ-ಬಾಯಿ.

ಅವಿನೀತಂ ಮಗನೇ ಅಶೌಚಿ ಮುನಿಯೇ ಬೈವಾಕೆ ತಾಂ ಪತ್ನಿಯೇ |
ಸವಿಗೆಟ್ಟನ್ನವದೂಟವೇ ಕುಜನರೊಳ್ ಕೂಡಿರ್ಪವಂ ಮಾನ್ಯನೇ ||
ಬವರಕ್ಕಾಗದ ಬಂಟನೇ ಎಡರಿಗಂ ತಾನಾಗದಂ ನಂಟನೇ |
ಶಿವನಂ ಬಿಟ್ಟವ ಶಿಷ್ಟನೇ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ || ೨೨||

ಭಾ || ವಿನಯವಿಲ್ಲದ ಮಗನೂ, ಪರಿಶುದ್ಧನಲ್ಲದ ಋಷಿಯೂ, ಬೈಯುವ ಹೆಂಡತಿಯೂ, ರುಚಿಗೆಟ್ಟ ಅನ್ನದ ಊಟವೂ, ಕೆಟ್ಟವರ ಸಹವಾಸದಲ್ಲಿರುವ ದೊಡ್ಡ ಮನುಷ್ಯನೂ, ಯುದ್ಧಕೆ ಒದಗದ ಭಟನೂ, ಕಷ್ಟಕ್ಕಾಗದ ನಂಟನೂ, ಶಿವನನ್ನು ಬಿಟ್ಟಿರುವ ಆಚಾರವಂತನೂ ಆಯಾ ಹೆಸರಿಗೆ ಅರ್ಹರಲ್ಲ.

ಟಿ || ಅವಿನೀತ-ವಿನಯವಿಲ್ಲದವ, ಅಶೌಚಿ-ಶುಚಿಯಾಗಿರದವನು, ಮಾನ್ಯ-ಪೂಜ್ಯ, ಬವರ-ಯುದ್ಧ, ಎಡರು-ಕಷ್ಟ, ಶಿಷ್ಟನು-ಯೋಗ್ಯನು.

ಕೆಳೆಲುವಾ ಕೂಟವು ನಷ್ಟಮುಪ್ಪ ಕೆಲಸಂ ಕೈಲಾಗದಾರಂಭಮುಂ ।
ಗೆಲವೇನಿಲ್ಲದ ಯುದ್ಧ ಪಾಳುನೆಲದೊಳ್ ಬೇಸಾಯ ನೀಚಾಶ್ರಯಂ ॥
ಹಲವಾಲೋಚನೆ ಜೂಜು ಲಾಭ ಮನೆ ಮಾರಾಟಂ ರಸಾದ್ಯೌಷಧಂ ।
ಫಲದ ಭ್ರಾಂತಿಯ ತೋರ್ಪುವೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ॥೨೩॥

ಭಾ ॥ ಜನಗಳನ್ನುಕೊಂದು ದೋಚಿಕೊಳ್ಳುವವರ ಸಂಘವೂ, ಆದಾಯವಿಲ್ಲದೆ ನಷ್ಟವಾಗುತ್ತಿರುವ ಕೆಲಸವೂ, ಯೋಗ್ಯತೆಗೆ ಮೀರಿದ ಉದ್ಯೋಗಕ್ಕೆ ಕೈ ಹಾಕುವುದೂ, ಗೆಲ್ಲುವ ಸೂಚನೆ ಇಲ್ಲದಿರುವ ಯುದ್ಧವೂ, ಬೀಳು (ನಿಸ್ಸಾರವಾದ) ನೆಲಕ್ಕೆ ಮಾಡುವ ಬೇಸಾಯವೂ, ಅಲ್ಪನ ಆಶ್ರಯವೂ, ಒಂದು ಕೆಲಸವನ್ನು ಮಾಡುವುದಕ್ಕೆ ನಿಷ್ಕರ್ಷೆಯಾಗಿ ಒಂದು ಮಾರ್ಗವನ್ನಾಲೋಚಿಸದೆ ಬಗೆಬಗೆಯಾಗಿ ಆಲೋಚನೆ ಮಾಡುವುದೂ, ಜೂಜಿನ ಲಾಭವೂ, ಇದ್ದ ಮನೆಯನ್ನು ಮಾರಿಬಿಡುವುದೂ, ಪಾದರಸ, ಪಾಷಾಣಗಳ ಔಷಧವೂ— ಇವೆಲ್ಲವೂ ಪ್ರಯೋಜನವಾದೀತೆಂಬ ಭ್ರಾಂತಿಯನ್ನು ಹುಟ್ಟಿಸುವುವು.

ಟಿ ॥ ಕೂಟ-ಸಂಘ.

ತವೆ ಸಾಪತ್ನಿಯರಾಟ ಸಾಲ ಮಧುಪಾನಂ ಬೇಟದಾ ಜಾರಿಣೀ ।
ನಿವಹಂ ಮಾಡುವ ಮಾಟಮಂತುಟಮಿತಂ ಮೃಷ್ಟಾನ್ನಮೆಂದೂಟದ್ಯೂ ॥
ತವನಾಡುತ್ತಿಹ ಪೋಟ ಸೂಳೆಯರೊಳೊಲ್ದಿರ್ಪಾಟಮಿಂತೆಲ್ಲ ಮುಂ ।
ಸವಿಯಾಗಂತ್ಯದಿ ಕಷ್ಟವೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ॥ ೨೪ ॥

ಭಾ ॥ ಸವತಿಯರು ಗಂಡನಲ್ಲಿ ತೋರಿಸುವ ಆಟಪಾಟಗಳು, ಸಾಲ ಮಾಡುವುದು, ಮದ್ಯಪಾನ ಮಾಡುವುದು, ಜಾರಸ್ತ್ರೀಯರು ತಮ್ಮನ್ನು ಮೋಹಿಸುವಂತೆ ತೋರಿಸುವ ಬೆಡಗು, ಮೃಷ್ಟಾನ್ನವು ಸಿಕ್ಕಿತೆಂದು ಮಿತಿಮೀರಿ ಮಾಡುವ ಊಟ, ಜೂಜಾಡುವ ಪುಂಡರಲ್ಲಿಯೂ ಸೂಳೆಯರಲ್ಲಿಯೂ ವಿನೋದಪಡುವುದು— ಇವು ಮೊದಮೊದಲು ಸುಖಕರವಾಗಿ ಕಂಡು ಬಂದರೂ ಕೊನೆಗೆ ಕಷ್ಟವನ್ನುಂಟುಮಾಡುವುವು.

ಟಿ ॥ ತವೆ-ಚೆನ್ನಾಗಿ, ಸಾಪತ್ನಿ-ಸವತಿ, ಮಧು-ಸಾರಾಯಿ (ಸೆರೆ), ಬೇಟ-ಮೋಹ, ನಿವಹ-ಗುಂಪು, ಮಾಟ-ಕೆಲಸ, ಪೋಟ-ಪೋಲಿ, ಮುಂ-ಪ್ರಾರಂಭದಲ್ಲಿ, ಸವಿ-ರುಚಿ.

ತೆರನಂ ಕಾಣದ ತಾಣದಲ್ಲಿ ಕಪಟಂಗಳ್ ಮಾಳ್ಪರಿರ್ಪಲ್ಲಿ ನಿ |
ಷ್ಠುರ ಭಾಷಾ ನೃಪನಲ್ಲಿ ನಿಂದೆ ಬರಿದೇ ಬರ್ಪಲ್ಲಿಯನ್ನೋದಕಂ ||
ಕಿರಿದಾದಲ್ಲಿ ರಿಪುವ್ರಜಂಗಳೆಡೆಯೊಳ್ ದುಸ್ಸಂಗ ದುರ್ಗೋಷ್ಠಿಯ |
ಲ್ಲಿರಸಲ್ಲಿರ್ದೊಡೆ ಹಾನಿಯೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ || ೨೫ ||

ಭಾ || ಪರಿಚಯವಿಲ್ಲದ ಸ್ಥಳದಲ್ಲಿಯೂ, ಮೋಸಗಾರರಿರುವ ಕಡೆಯಲ್ಲಿಯೂ ಯಾವಾಗಲೂ ನಿಷ್ಠುರೋಕ್ತಿಯನ್ನಾಡುತ್ತಿರುವ ದೊರೆಯ ಬಳಿಯಲ್ಲಿಯೂ, ವ್ಯರ್ಥವಾದ ಅಪವಾದವು ಬರುವ ಸ್ಥಳದಲ್ಲಿಯೂ, ಅನ್ನ ನೀರಿಗೆ ಕೊರತೆಯಾದ ಕಡೆಯಲ್ಲಿಯೂ, ಶತ್ರುಗಳ ಮಧ್ಯದಲ್ಲಿಯೂ, ಕೆಟ್ಟವರ ಸಹವಾಸದಲ್ಲಿಯೂ ದುಷ್ಟರ ಗುಂಪಿನಲ್ಲಿಯೂ ಇರಬಾರದು; ಇದ್ದರೆ ಕೇಡುಂಟಾಗುವುದು.

ಟಿ || ತೆರ-ರೀತಿ, ತಾಣ-ಸ್ಥಾನ [ಸಂ], ಬರಿದೆ-ವ್ಯರ್ಥವಾಗಿ, ರಿಪುವ್ರಜ-ಶತ್ರುಸಮೂಹ, ಗೋಷ್ಠಿ-ಗುಂಪು, ಸಲ್ಲ-ತಕ್ಕದ್ದಲ್ಲ.

ವಿಧಿಮಹಿಮೆ

ಒರೆಪಾರಣ್ಯದ ಪಕ್ಷಿಗೊಂದು ತರು ಗೊಡ್ಡಾಗಲ್ ಫಲಂ ತೀವಿದಾ |
ಮರಗಳ್ ಪುಟ್ಟವೆ ಪುಷ್ಪವೊಂದು ಬಳಲಲ್ ಭೃಂಗಕ್ಕೆ ಪೂವಿಲ್ಲವೇ ||
ನಿರುತಂ ಸತ್ಕವಿಗೊರ್ವ ಗರ್ವಿ ಪುಸಿಯುತ್ತಂ ಲೋಭಿಯಾಗಲ್ ನಿಜಂ |
ಧರೆಯೊಳ್ ದಾತರು ಪುಟ್ಟರೇ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ || ೨೬ ||

ಭಾ || ಕಾಡಿನಲ್ಲಿ ಸುತ್ತುತ್ತಿರುವ ಪಕ್ಷಿಗೆ ಆ ಕಾಡಿನಲ್ಲಿರುವ ಒಂದು ಮರವು ಹಣ್ಣು ಬಿಡದೆ ಹೋದರೆ ಹಣ್ಣುಳ್ಳ ಬೇರೆ ಮರಗಳು ದೊರೆಯುವುದಿಲ್ಲವೇ? ಗಿಡದಲ್ಲಿ ಒಂದು ಹೂ ಬಾಡಿಹೋದರೆ ತುಂಬಿಗೆ ಮಧುವಿರುವ ಬೇರೆ ಹೂ ದೊರೆಯುವುದಿಲ್ಲವೇ ? ಹಾಗೆಯೇ, ಯಾವನೋ ಒಬ್ಬನು ಗರ್ವದಿಂದ ಸತ್ಕವಿಗೆ ಸುಳ್ಳು ಹೇಳುತ್ತ ಜಿಪುಣನಾಗಿದ್ದರೆ ಆ ಕವಿಗೆ ದ್ರವ್ಯ ಸಹಾಯ ಮಾಡುವವರು ಲೋಕದಲ್ಲಿ ಯಾರೂ ಸಿಕ್ಕುವುದೇ ಇಲ್ಲವೇ ?

ಟಿ || ಅರಣ್ಯ-ಕಾಡು, ತೀವಿದ-ತುಂಬಿದ, ಭೃಂಗ-ತುಂಬಿ, ನಿರುತಂ-ನಿಶ್ಚಯವಾಗಿ, ಪುಸಿ-ಸುಳ್ಳು, ದಾತ-ದಾನ ಮಾಡುವವನು.

[1]ಮದನಂ ದೇಹವ ನೀಗಿದಂ [2]ನೃಪವರಂ ಚಂಡಾಲಗಾಳಾದ[3] ಪೋ |
ದುದು ಬೊಮ್ಮಂಗೆ ಶಿರಸ್ಸು [4]ಭಾರ್ಗವನು ಕಣ್ಣಾಗಣಂ [5]ನಳಂ ವಾಜಿಪಂ ||
[6]ಸುಧೆಯಂ ಕೊಟ್ಟು ಸುರೇಂದ್ರ ಸೋಲ್ತು [7]ಸತಿಯಂ ಪೋಗಾಡಿದಂ ರಾಘವಂ|
ವಿಧಿಯಂ ಮಿಾರುವನಾವನೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ || ೨೭ ||

ಭಾ || ಮನ್ಮಥನು ದೇಹವನ್ನೇ ಕಳೆದುಕೊಂಡನು, ರಾಜಶ್ರೇಷ್ಠನಾದ ಹರಿಶ್ಚಂದ್ರನು ಚಂಡಾಲನಿಗೆ ದಾಸನಾದನು, ಬ್ರಹ್ಮನಿಗೆ ಒಂದು ತಲೆಯೇ ಹೋಯಿತು, ಶುಕ್ರಾಚಾರ್ಯನಿಗೆ ಒಂದು ಕಣ್ಣು ಹೋಯಿತು, ನಳನು ಕುದುರೆಯ ಕಾಸ್ತಾರನಾದನು, ಇಂದ್ರನು ಅಮೃತವನ್ನು ಕಳೆದುಕೊಂಡು ಯುದ್ಧದಲ್ಲಿ ಸೋತುಹೋದನು, ಶ್ರೀರಾಮನು ತನ್ನ ಹೆಂಡತಿಯನ್ನು ಕಳೆದುಕೊಂಡನು ; ಹೀಗಿರುವಾಗ ಲೋಕದಲ್ಲಿ ಅದೃಷ್ಟವನ್ನು ಮಿಾರಲು ಯಾರುತಾನೆ ಸಮರ್ಥರು ?

ಟಿ || ಮದನ–ಮನ್ಮಥ, ನೀಗು–ಕಳೆದುಕೊಳ್ಳು, ಬೊಮ್ಮ–ಬ್ರಹ್ಮ (ಸಂ.), ಭಾರ್ಗವ–ಶುಕ್ರಾಚಾರ್ಯ, ವಾಜಿಪಂ–ಕುದುರೆಯ ಅಧಿಕಾರಿ, ಸುಧೆ–ಅಮೃತ.

ಕಡಿದಾಡಲ್ ರಣ ರಂಗದೊಳ್ ನೃಪರೊಳಂ ತಾನಗ್ಗದಿಂ ಕಾದೊಡಂ |
ಮೃಡನಂ ಮೆಚ್ಚಿಸಿ ಕೇಳ್ದೊಡಂ ತೊಳಲಿ ತಾಂ ದೇಶಾಟನಂಗೆಯ್ದೊಡಂ ||
ಕಡಲೇಳಂ ಮುಗುಚಿಟ್ಟೊಡಂ ಕಲಿಯೆ ನಾನಾ ಹೃದ್ಯ ವಿದ್ಯಂಗಳಂ |
ಪಡೆದಷ್ಟಲ್ಲದೆ ಬರ್ಪುದೇ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ || ೨೮ ||

ಭಾ || ಯುದ್ಧದಲ್ಲಿ ಶತ್ರುಗಳನ್ನೆಲ್ಲ ಕಡಿದುಹಾಕಿದರೂ, ದೊರೆಗಳ ಬಳಿ ಹೆಚ್ಚಾಗಿ ಕಾದಿದ್ದರೂ, ಈಶ್ವರನನ್ನು ತಪಸ್ಸಿನಿಂದ ಮೆಚ್ಚಿಸಿ ವರವನ್ನು ಕೇಳಿದರೂ, ಅನೇಕ ದೇಶಗಳನ್ನು ಸುತ್ತಿ ಬಳಸಿದರೂ, ಏಳು ಸಮುದ್ರಗಳನ್ನು ತಲೆಕೆಳಗು ಮಾಡಿದರೂ, ಹೃದಯಂಗಮವಾದ ಅನೇಕ ವಿದ್ಯೆಗಳನ್ನು ಕಲಿತರೂ ತನಗೆಷ್ಟು ಲಭ್ಯವೋ ಅಷ್ಟೇ ಬರುವುದಲ್ಲದೆ ಹೆಚ್ಚಾಗಿ ಬರುವುದಿಲ್ಲ.

ಟಿ || ರಣರಂಗ–ಯುದ್ಧಭೂಮಿ, ಅಗ್ಗದಿಂ–ಹೆಚ್ಚಾಗಿ, ಕಾದೊಡಂ–ಕಾದಿದ್ದರೂ, ಮೃಡ–ಈಶ್ವರ, ತೊಳಲು–ಸುತ್ತು, ಹೃದ್ಯ–ಮನೋಹರವಾದ.

1ರಿಂದ7—ಈ ಸಂಖ್ಯೆಗಳು ಮುಂದೆ ಕೊಟ್ಟಿರುವ ಆಯಾ ಕಥೆಗಳನ್ನು ಸೂಚಿಸುವುವು.

ಧರೆ ಬೀಜಂಗಳ ನುಂಗೆ ಬೇಲಿ ಹೊಲನೆಲ್ಲಂ ಮೇದೊಡಂ ಗಂಡ ಹೆಂ |
ಡಿರನತ್ಯುಗ್ರದಿ ಶಿಕ್ಷಿಸಲ್ ಪ್ರಜೆಗಳಂ ಭೂಪಾಲಕಂ ಬಾಧಿಸಲ್ ||
ತರುವೇ ಪಣ್ಗಳ ಮೆಲ್ಲೆ ಮಾತೆ ವಿಷವಂ ಪೆತ್ತರ್ಭಕಂಗೂಡಿಸಲ್ |
ಹರ ಕೊಲ್ಲಲ್ ಪರ ಕಾಯ್ವನೇ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ||೨೯||

ಭಾ || ನೆಲದಲ್ಲಿ ಬಿತ್ತಿದ ಬೀಜವನ್ನು ನೆಲವೇ ನುಂಗಿದರೂ, ಹೊಲದ ಸುತ್ತಲೂ ಹಾಕಿದ ಬೇಲಿಯು ತಾನೇ ಹೊಲದ ಪೈರನ್ನೆಲ್ಲ ಮೇದುಬಿಟ್ಟರೂ, ಗಂಡನು ತನ್ನ ಹೆಂಡತಿಯನ್ನು ಕ್ರೂರವಾಗಿ ದಂಡಿಸಿದರೂ, ದೊರೆಯೇ ತನ್ನ ಪ್ರಜೆಗಳನ್ನು ಹಿಂಸೆಪಡಿಸಿದರೂ, ಮರವು ತನ್ನಲ್ಲಿ ಬಿಟ್ಟ ಹಣ್ಣುಗಳನ್ನು ತಾನೇ ತಿಂದುಬಿಟ್ಟರೂ, ಹೆತ್ತ ಮಗುವಿಗೆ ತಾಯಿಯೇ ವಿಷವನ್ನುಣಿಸಿದರೂ, ಈಶ್ವರನು ಪ್ರಾಣಿಗಳನ್ನು ತಾನೇ ಕೊಂದುಹಾಕಿದರೂ, ಇತರರು ತಪ್ಪಿಸಿ ಕಾಪಾಡಲು ಸಾಧ್ಯವೇ?

ಟಿ || ಧರೆ-ಭೂಮಿ, ಅತ್ಯುಗ್ರ-ಬಹು ಕ್ರೂರ, ಅರ್ಭಕ-ಮಗು, ಊಡಿಸು-ಉಣಿಸು, ಪರ-ಇತರನು.

[8]ಪುರಗಳ್ ಪುಟ್ಟವೆ ನಿಂದುದಿಲ್ಲ [9]ದಶಕಂಠಂಗಾಯಿತೇ ಲಂಕೆ[9] ಸಾ |
ಗರದೊಳ್ ಪೋಗದೆ ದ್ವಾರಕಾನಗರಿ ಭಿಲ್ಲರ್ಗಾದುದೇ ಗೋಪುರಂ
[10]ದುರುಳರ್ಗಾದುದೆ ಷಟ್ಪುರಂ ಮಧುರೆಯೊಳ್ ಕಂಸಾಸುರಂ ಬಾಳ್ದನೇ |
ಸಿರಿ ಬಂದುಂ ನಿಲೆ ಪುಣ್ಯವೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ || ೩೦ ||

ಭಾ || ತ್ರಿಪುರಗಳು ಹುಟ್ಟಲಿಲ್ಲವೆ? ಆದರೆ ಅವು ಉಳಿಯಲಿಲ್ಲ; ಲಂಕೆಯು ರಾವಣನಿಗೆ ನಿಲ್ಲಲಿಲ್ಲ; ದ್ವಾರಕೆಯು ಸಮುದ್ರದಲ್ಲಿ ಮುಳುಗಿ ಹೋಯಿತು; ಗೋಪುರವು ಭಿಲ್ಲರ ವಶವಾಗಲಿಲ್ಲ; ಷಟ್ಪುರವು ದುಷ್ಟರಾದ ಕುಂಭ ನಿಕುಂಭರಿಗೆ ದಕ್ಕಲಿಲ್ಲ; ಮಧುರೆಯಲ್ಲಿ ಕಂಸಾಸುರನು ಬಾಳಲಿಲ್ಲ; ಆದುದರಿಂದ ಐಶ್ವರ್ಯವು ದೊರೆತರೂ ಅದು ಸ್ಥಿರವಾಗಿ ನಿಲ್ಲುವುದಕ್ಕೆ ಪುಣ್ಯವಿರಬೇಕು.

ಟಿ || ಭಿಲ್ಲರು-ಬೇಡರು, ನಿಲೆ-ನಿಲ್ಲುವುದಕ್ಕೆ.

8ರಿಂದ10– ಈ ಸಂಖ್ಯೆಗಳು ಮುಂದೆ ಕೊಟ್ಟಿರುವ ಆಯಾ ಕಥೆಗಳನ್ನು ಸೂಚಿಸುವುವು.

ಹುಲುಬೇಡಂ ಮುರವೈರಿಯಂ[11]ಕುರುಬನಾ ಶೂದ್ರೀಕನಂ[12]ರಾಮನಂ।
ಬೆಲೆವೆಣ್ಣಿಂದ[12] ಶಿಖಂಡಿ ಭೀಷ್ಮನಂ ಮುನಾ [13]ದ್ರೋಣಾರ್ಯನಂ ವಸ್ತ್ರವಂ॥
ತೊಳೆವಾತಂ ಹತಮಾಡರೇ ಪಣೆಯೊಳಂ ಪೂರ್ವಾರ್ಜಿತಂ ಹಾಗಿರಲ್।
ಕೊಲನೇ ಕ್ಷುದ್ರ ಸಮರ್ಥನಂ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ॥೩೧॥

ಭಾ॥ ಅಲ್ಪನಾದ ಬೇಡರವನೊಬ್ಬನು ಶ್ರೀ ಕೃಷ್ಣನನ್ನೂ, ಕುರುಬನೊಬ್ಬನು ಶೂದ್ರೀಕನೆಂಬ ವೀರನನ್ನೂ, ಅಂಬೆಯೆಂಬ ಹೆಂಗಸು ಪರಶುರಾಮನನ್ನೂ, ಶಿಖಂಡಿಯೆಂಬವನು ಭೀಷ್ಮಾಚಾರ್ಯನನ್ನೂ, ದ್ರೋಣಾಚಾರ್ಯನ ಶಿಷ್ಯನಾಗಿ ಗುರುಗಳ ಬಟ್ಟೆಯನ್ನೊಗೆಯುತ್ತಿದ್ದ ಧೃಷ್ಟದ್ಯುಮ್ನನು ದ್ರೋಣಾಚಾರ್ಯನನ್ನೂ ನಾಶಮಾಡುವುದಕ್ಕೆ ಕಾರಣರಾಗಲಿಲ್ಲವೆ? ಹಣೆಯ ಬರೆಹವು ಹಾಗಿದ್ದರೆ ಸಮರ್ಥನನ್ನು ಅಲ್ಪನಾದವನು ಕೂಡ ಕೊಲ್ಲಲಾಗುವುದು.

ಟಿ॥ ಮುರವೈರಿ–ಕೃಷ್ಣ, ಬೆಲೆವೆಣ್–ಯುದ್ಧವೆಂಬ ಬೆಲೆಗೆ ಭೀಷ್ಮನು ತಂದ ಅಂಬೆಯೆಂಬ ಹೆಂಗಸು, ಪಣೆ-ಹಣೆ, ಪೂರ್ವಾರ್ಜಿತಂ-ಹಿಂದಣ ಜನ್ಮದಲ್ಲಿ ಸಂಪಾದಿಸಿದುದು, ಕ್ಷುದ್ರ–ಅಲ್ಪ.

[3]ಮೃಡ ತಾಂ ಭಿಕ್ಷವಬೇಡನೇ[14] ಮುಖಜೆ ತಾಂ ತೊಳ್ತಾಗಳೇ[14]ಪಾಂಡವರ್।
ಪಿಡಿದೋಡಂ ತಿರಿದುಣ್ಣರೆ [7]ಖಳನ ಕೈಯೊಳ್ ಸಿಕ್ಕಳೇ ಸೀತೆ ತಾಂ ॥
[2]ಸುಡುಗಾಡಿಕ್ಕಿಗೆ ಭಂಟನಾಗನೆ ಹರಿಶ್ಚಂದ್ರಂ ನರರ್ ಪೂರ್ವದೊಳ್ ।
ಪಡೆದಷ್ಟುಣ್ಣದೆ ಪೋಪರೇ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ॥ ೩೨ ॥

ಭಾ॥ ಶಿವನು ಭಿಕ್ಷ ಬೇಡಲಿಲ್ಲವೆ? ದ್ರೌಪದಿಯು ವಿರಾಟ ನಗರದಲ್ಲಿ ದಾಸಿಯಾಗಿರಲಿಲ್ಲವೆ? ಪಾಂಡವರು ಮಡಕೆಯನ್ನು ಹಿಡಿದುಕೊಂಡು ತಿರಿದು ತಿಂದು ಜೀವನ ಮಾಡಲಿಲ್ಲವೇ? ಸೀತೆಯು ರಾವಣನಿಗೆ ಸೆರೆ ಸಿಕ್ಕಲಿಲ್ಲವೆ? ಹರಿಶ್ಚಂದ್ರನು ಶ್ಮಶಾನದ ಕಾವಲುಗಾರನಾಗಲಿಲ್ಲವೆ? ಆದಕಾರಣ ಮನುಷ್ಯರು ಪೂರ್ವಜನ್ಮದಲ್ಲಿ ಮಾಡಿದ ಕರ್ಮಕ್ಕೆ ತಕ್ಕ ಫಲವನ್ನನುಭವಿಸಿಯೇ ತೀರಬೇಕು.

ಟಿ॥ ಮುಖಜೆ–(ಯಜ್ಞ ಕುಂಡದಲ್ಲಿ ಹುಟ್ಟಿದವಳು) -ದ್ರೌಪದಿ, ತೊಳ್ತು–ದಾಸಿ, ಓಡು–ಮಡಕೆ, ಖಳ–ರಾಕ್ಷಸ, ಇಕ್ಕೆ–ಸ್ಥಳ.

2ರಿಂದ14–ಈ ಸಂಖ್ಯೆಗಳು ಮುಂದೆ ಕೊಟ್ಟಿರುವ ಆಯಾ ಕಥೆಗಳನ್ನು ಸೂಚಿಸುವುವು.

ಕೊಡಬಲ್ಲಂಗೆ ದರಿದ್ರಮಂ ಪ್ರವುಢಗಂ ಮೂಢಾಂಗನಾ ಲಾಭಮಂ ।
ಮಡೆಯಂಗುತ್ತಮಜಾತಿ ನಾಯಕಿಯ ಪಾಪಾತ್ಮಂಗೆ ದೀರ್ಘಾಯುಮಂ ॥
ಕಡು ಲೋಭಂಗತಿ ದ್ರವ್ಯಮಂ ಸುಕೃತಿಗಲ್ಪಾಯುಷ್ಯಮಂ ನೀಡುವಂ ।
ಸುಡು ಪಾಪಿಷ್ಠನ ಬೊಮ್ಮನಂ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ॥೩೩॥

ಭಾ॥ ಔದಾರ್ಯವುಳ್ಳವನಿಗೆ ಬಡತನವನ್ನೂ, ವಿದ್ಯಾವಂತನಿಗೆ ತಿಳಿವಳಿಕೆಯಿಲ್ಲದ (ಮಡ್ಡಿ) ಹೆಂಡತಿಯನ್ನೂ, ಮೂಢನಿಗೆ ಚತುರೆಯಾದ ಹೆಂಡತಿಯನ್ನೂ, ಪಾಪಿಷ್ಠನಿಗೆ ದೀರ್ಘಾಯುಷ್ಯವನ್ನೂ, ಜಿಪುಣನಿಗೆ (ಲೋಭಿಗೆ) ಹೆಚ್ಚಾದ ಐಶ್ವರ್ಯವನ್ನೂ, ಸತ್ಕಾರ್ಯ ಮಾಡುವವನಿಗೆ ಅಲ್ಪಾಯುಸ್ಸನ್ನೂ ಕೊಡುವ ಆ ಬ್ರಹ್ಮನು ನಿಂದ್ಯನಲ್ಲವೆ ?

ಟಿ॥ ಪ್ರವುಢ–ಜಾಣ, ಮೂಢಾಂಗನಾ–ದಡ್ಡ ಹೆಂಗಸು, ಮಡೆಯ–ಮೂಢ, ನಾಯಕಿ–ಹೆಂಡತಿ, ಲೋಭ–ಜಿಪುಣ (ಲೋಭಿ), ಸುಕೃತಿ–ಸತ್ಕಾರ್ಯ ಮಾಡುವವನು, ನೀಡು–ಕೊಡು.

ಗಿಡ ವೃಕ್ಷಂಗಳಿಗಾರು ನೀರನೆರೆವರ್ ನಿತ್ಯಂ ಮಹಾರಣ್ಯದೊಳ್ ।
ಕಡು ಕಾರ್ಪಣ್ಯದಿ ಕೇಳ್ವವೇ ಶಿಖಿ ಜಲೋರ್ವೀ ಮಾರುತಾಕಾಶಮಂ ॥
ಮೃಡ ನೀನಲ್ಲದದಾರು ಕಾಯ್ವರು ಜಗದ್ರಕ್ಷಾಕರಂ ನೀನೆಲೈ ।
ಕೊಡುವರ್ ಕೊಂಬರು ಮರ್ತ್ಯರೇ ಹರಹರಾ ಶ್ರೀ ಚೆನ್ನ ಸೋಮೇಶ್ವರಾ॥೩೪॥

ಭಾ॥ ದೊಡ್ಡ ಕಾಡಿನಲ್ಲಿರುವ ಮರಗಳಿಗೆ ನಿತ್ಯವೂ ಯಾರು ನೀರನ್ನು ಹಾಕುವರು? ಅವು ಪಂಚಭೂತಗಳ ಬಳಿಗೆ ಹೋಗಿ ಬಲು ದೈನ್ಯದಿಂದ ಬೇಡಿಕೊಳ್ಳುತ್ತವೆಯೆ? ಎಲೈ ಈಶ್ವರನೇ! ಲೋಕವನ್ನೆಲ್ಲ ರಕ್ಷಿಸುವವನು ನೀನಲ್ಲದೆ ಮತ್ತಾರು? ಕೊಡುವುದಕ್ಕೂ ತೆಗೆದುಕೊಳ್ಳುವುದಕ್ಕೂ ಮನುಷ್ಯರಿಗೆ ಸ್ವಾತಂತ್ರ್ಯವೆಲ್ಲಿಯದು?

ಟಿ॥ ಎರೆ–ಸುರಿ (ಹನಿಸು), ಕಾರ್ಪಣ್ಯತೆ–ದೈನ್ಯ, ಶಿಖಿ–ಬೆಂಕಿ, ಉರ್ವೀ–ಭೂಮಿ, ಮಾರುತ–ಗಾಳಿ.

ಉಡುರಾಜಂ ಕಳೆಗುಂದಿ ಪೆರ್ಚದಿಹನೇ ನ್ಯಗ್ರೋಧ ಬೀಜಂ ಕೆಲಂ |
ಪಿಡಿದುಂ ಪೆರ್ಮರನಾಗದೇ ಎಳೆಗರುಂ ಎತ್ತಾಗದೇ ಲೋಕದೊಳ್ ||
ಮಿಡಿ ಪಣ್ಣಾಗದೆ ದೈವದೊಲ್ಮೆಯಿರಲಾ ಕಾಲಾನುಕಾಲಕ್ಕೆ ತಾಂ |
ಬಡವಂ ಬಲ್ಲಿದನಾಗನೇ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ || ೩೫ ||

ಭಾ|| ಚಂದ್ರನು ಕೃಷ್ಣಪಕ್ಷದಲ್ಲಿ ಕಳೆಗುಂದಿದರೂ ಮರಳಿ ಶುಕ್ಲಪಕ್ಷದಲ್ಲಿ ವೃದ್ಧಿ ಹೊಂದುವುದಿಲ್ಲವೇ? ಬಹಳ ಸಣ್ಣದಾಗಿರುವ ಆಲದ ಬೀಜವು ಸಿಡಿದು ನೆಲದಮೇಲೆ ಬಿದ್ದು ಮೊಳೆತು ದೊಡ್ಡ ಮರವಾಗುವುದಿಲ್ಲವೆ? ಎಳೆಗರುವು ಬೆಳೆದು ದೊಡ್ಡ ಗೂಳಿಯಾಗಲಾರದೆ? ಸಣ್ಣ ಹೀಚು ಬಲಿತು ದೊಡ್ಡ ಹಣ್ಣಾಗುವುದಿಲ್ಲವೆ? ಹಾಗೆಯೇ ಬಡವನು ದೇವರ ದಯೆಯಿದ್ದರೆ ಒಂದಾನೊಂದು ಕಾಲಕ್ಕೆ ಭಾಗ್ಯವಂತನಾಗುವನು.

ಟಿ|| ಉಡುರಾಜ–ನಕ್ಷತ್ರಾಧಿಪತಿ–ಚಂದ್ರ, ನ್ಯಗ್ರೋಧ-ಆಲ, ಕೆಲಂ-ಕೆಲವು, ಪೆರ್ಮರ–ದೊಡ್ಡ ಮರ, ಮಿಡಿ–ಹೀಚು, ಒಲ್ಮೆ–ಪ್ರೀತಿ, ಬಲ್ಲಿದ-(ಬಲಿಷ್ಠ) ಐಶ್ವರ್ಯವಂತ.

ಸ್ವಕುಲೋದ್ಧಾರಕನಾಗಿ ಭಾಗ್ಯಯುತನಾಗಾಯುಷ್ಯಮುಳ್ಳಾತನಾ |
ಅಕಳಂಕಾಸ್ಪದಳಾಗಿ ಬಾಳ್ವ ಸತಿಯಿರ್ದಾನಂದಮಂ ಮಾಳ್ಪ ಬಾ ||
ಲಕನಿರ್ದೀಶ್ವರ ಭಕ್ತನಾಗಿ ತನುವೊಳ್ ದಾರ್ಢ್ಯಂ ಸಮಂತೊಪ್ಪುವಾ |
ಸುಖ ಪೂರ್ವಾರ್ಜಿತ ಪುಣ್ಯವೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ || ೩೬ ||

ಭಾ|| ತನ್ನ ಕುಲವನ್ನು ಉದ್ಧಾರ ಮಾಡುವವನಾಗಿ, ಐಶ್ವರ್ಯವನ್ನೂ ದೀರ್ಘಾಯುಷ್ಯವನ್ನೂ ಪಡೆದು, ದೋಷರಹಿತಳಾಗಿ ಬಾಳುವ ಹೆಂಡತಿಯಿಂದಲೂ ಸಂತೋಷಕರನಾದ ಮಗನಿಂದಲೂ ಕೂಡಿ, ಈಶ್ವರ ಭಕ್ತನಾಗಿ, ದೇಹದಾರ್ಢ್ಯದಿಂದೊಪ್ಪಿದವನಾಗಿ ಬಾಳುವ ಸುಖವು ಪೂರ್ವಜನ್ಮದ ಪುಣ್ಯದಿಂದ ದೊರೆಯಬೇಕಲ್ಲದೆ ಸಾಮಾನ್ಯವಾಗಿ ಸಿಕ್ಕುವುದಿಲ್ಲ.

ಟಿ|| ಅಕಳಂಕಾಸ್ಪದಳು–ಅಪವಾದಕ್ಕೆ ಗುರಿಯಾಗದವಳು, ತನು-ದೇಹ, ದಾರ್ಢ್ಯ–ಬಲ, ಸಮಂತು–ಚೆನ್ನಾಗಿ.

[9]ಮಧುರೇಂದ್ರಂ ಕಡು ದಿಟ್ಟನಾಗಲು ಬಳಿಕ್ಕೇಡೇರಿತೇ [9]ದ್ವಾರಕಾ ।
ಸದನಂ ವಾರ್ಧಿಯ ಕೂಡದೇ [14]ಕುರುಬಲಾಂಭೋರಾಶಿಯೊಳ್ ಸೈಂಧವಂ ॥
ಪುದುಗಲ್ ಬಾಳ್ದನೆ [15]ಭೂಮಿಯುಂ ಬಗಿದು ಪೊಕ್ಕೇಂ ದುಂದುಭಿ
ಕ್ಷೋಣಿಯೊಳ್ ।
ವಿಧಿ ಕಾಡಲ್ ಸುಖಮಾಂಪರೇ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ॥೩೭॥

ಭಾ॥ ಮಥುರಾಪುರದ ದೊರೆಯಾದ ಕಂಸನು ಎಲ್ಲರಿಗೂ ಅಸಾಧ್ಯನಾಗಿದ್ದರೂ ಅವನ ಇಷ್ಟ ನಡೆಯಿತೆ? ದ್ವಾರಕಾಪಟ್ಟಣವು ಸಮುದ್ರದಲ್ಲಿ ಮುಳುಗಿ ಹೋಗಲಿಲ್ಲವೆ? ಸೈಂಧವನು ಕೌರವರ ಸೈನ್ಯದಲ್ಲಿ ಅವಿತುಕೊಂಡಿದ್ದರೂ ಬದುಕಿದನೆ? ದುಂದುಭಿಯೆಂಬ ರಾಕ್ಷಸನು ನೆಲವನ್ನು ಬಗಿದು ಒಳಗೆ ಸೇರಿಕೊಂಡರೂ ಸಾವು ತಪ್ಪಿತೆ? ಆದುದರಿಂದ ದೈವವು ಕಾಡುವಾಗ ಸುಖವಾಗಿ ಬಾಳುವುದು ಸಾಧ್ಯವಲ್ಲ.

ಟಿ॥ ಮಥುರೇಂದ್ರ–ಕಂಸಾಸುರ, ಕಡು ದಿಟ್ಟ–ಬಹು ಶೂರ, ಸದನ–ಮನೆ, ವಾರ್ಧಿ–ಅಂಭೋರಾಶಿ–ಸಮುದ್ರ, ಪುದುಗಲ್–ಹೊಕ್ಕಿರಲು.

ಮರಗಳ್ ಪುಟ್ಟುವ ತಾಣಮೊಂದೆ ಖಗಕಂ ರಾಜ್ಯಂಗಳೇಂ ಪಾಳೆ ಭೂ ।
ವರರೊಳ್ ತ್ಯಾಗಿಗಳಿಲ್ಲವೇ ಕವಿಗೆ ವಿದ್ಯಾಮಾತೃವೇಂ ಬಂಜೆಯೇ ॥
ಧರೆಯೆಲ್ಲಂ ಪಗೆಯಪ್ಪುದೇ ಕರುಣಿಗಳ್ ತಾವಿಲ್ಲವೇ ಲೋಕದೊಳ್ ।
ನರರಂ ಪುಟ್ಟಿಸಿ ಕೊಲ್ವನೇ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ॥ ೩೮ ॥

ಭಾ॥ ಪಕ್ಷಿಗಳಿಗೆ ಅನುಕೂಲವಾದ ಮರಗಳು ಹುಟ್ಟುವುದು ಒಂದೇ ಕಡೆಯಲ್ಲಿಯೆ? ಎಲ್ಲ ದೇಶಗಳೂ ಹಾಳಾಗಿವೆಯೆ? ದೊರೆಗಳಲ್ಲಿ ಕವಿಗಳಿಗೆ ಆಶ್ರಯಕೊಟ್ಟು ಆದರಿಸುವ ಉದಾರ ಗುಣವುಳ್ಳವರು ಯಾರೂ ಇಲ್ಲವೆ? ವಿದ್ಯೆಯೆಂಬ ತಾಯಿಯು ಬಂಜೆಯೆ? ಎಂದರೆ, ವಿದ್ಯೆಯು ಪಂಡಿತರಿಗೆ ಆಶ್ರಯವನ್ನು ದೊರಕಿಸದೆ ಹೋಗುವುದೆ? ಲೋಕದಲ್ಲಿ ಎಲ್ಲರೂ ಶತ್ರುಗಳಾಗುವರೆ? ದಯೆಯುಳ್ಳವರು ಯಾರೂ ಇರುವುದೇ ಇಲ್ಲವೆ? ದೇವರು ಮನುಷ್ಯರನ್ನು ಸೃಷ್ಟಿಮಾಡಿದಮೇಲೆ ಅವರನ್ನು ರಕ್ಷಿಸದೆ ಕೊಲ್ಲುವನೆ?

ಟಿ॥ ತಾಣ–ಸ್ಥಾನ (ಸಂ.) ಸ್ಥಳ, ಖಗ–ಪಕ್ಷಿ, ಭೂವರ–ದೊರೆ, ತ್ಯಾಗಿ–ದಾನಮಾಡುವವನು, ಪಗೆ–ಶತ್ರು.

ದುಸ್ಸ್ವಭಾವ

[16]ಕೃತ ಶಾಪಾನ್ವಿತನಾ ಹಿಮಾಂಶುಗುರುವಿಂ [17]ಗೋತ್ರಾರಿಯನ್ಯಾಂಗನಾ |
ರತಿಯಿಂ [14]ಕೀಚಕನಂ ಬಕಾರಿ ಮುರಿದಂ [7]ಸುಗ್ರೀವನಿಂ ವಾಲಿ ತಾಂ ||
ಹತನಾದಂ [7]ದಶಕಂಠನಾ ಹರಿಶರಕ್ಕೀಡಾದನೇವೇಳ್ವೆನಾ |
ನತಿ ಕಾಮರ್ಗತಿಹಾನಿಯೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ || ೩೯ ||

ಭಾ|| ಪರಸ್ತ್ರೀಯನ್ನು ಬಯಸಿದುದರಿಂದ ಚಂದ್ರನು ಬೃಹಸ್ಪತಿಯ ಶಾಪಕ್ಕೂ, ಇಂದ್ರನು ಗೌತಮನ ಶಾಪಕ್ಕೂ ಗುರಿಯಾದರು; ಕೀಚಕನು ಭೀಮನಿಂದಲೂ, ವಾಲಿಯು ಸುಗ್ರೀವನಿಂದಲೂ, ರಾವಣನು ರಾಮನಿಂದಲೂ ಮರಣ ಹೊಂದಿದರು. ಆದಕಾರಣ ಹೆಚ್ಚಾದ ಸ್ತ್ರೀವ್ಯಾಮೋಹವು ಕೇಡನ್ನುಂಟುಮಾಡುವುದು.

ಟೆ|| ಹಿಮಾಂಶು-ಚಂದ್ರ, ಗೋತ್ರಾರಿ-ಇಂದ್ರ, ಅನ್ಯಾಂಗನಾ-ಪರಸ್ತ್ರೀ, ರತಿ-ಆಸಕ್ತಿ, ಬಕಾರಿ-ಭೀಮ, ಈಡಾದಂ-ಗುರಿಯಾದನು, ಏವೇಳ್ವೆಂ-ಏನ ಹೇಳಲಿ? ಅತಿ ಕಾಮರು-ಹೆಚ್ಚಾದ ಸ್ತ್ರೀವ್ಯಾಮೋಹವುಳ್ಳವರು, ಹಾನಿ-ಕೇಡು.

ಸುರೆಯಿಂ ಸೇವಿಸುವಾತ ಬಲ್ಲನೆ ಮಹಾ ಯೋಗೀಂದ್ರರೆಂದೆಂಬುದಂ |
ದೊರೆಯೊಳ್ ಸ್ನೇಹವನಾಂತವಂ ಬಡವರಂ ತಾಂ ನೋಳ್ಪನೇ ಪ್ರೀತಿಯಿಂ ||
ಪಿರಿಯರ್ ಮಾನಿತರೆಂದು ಕಾಣ್ಬನೆ ಮಹಾ ದುರ್ಮಾರ್ಗನೆಂತಾದೊಡಂ |
ದುರುಳಂ ಬಲ್ಲನೆ ಬಾಳ್ವರಂ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ || ೪೦ ||

ಭಾ|| ಹೆಂಡಕುಡುಕನು (ಸೆರೆಗುಡುಕನು) ಯೋಗಿಯನ್ನು ಪೂಜ್ಯನೆಂದು ತಿಳಿದು ಗೌರವಿಸುವನೆ? ದೊರೆಯಲ್ಲಿ ಸ್ನೇಹವನ್ನು ಸಂಪಾದಿಸಿಕೊಂಡಿರುವವನು ಬಡವರನ್ನು ಪ್ರೀತಿಯಿಂದ ಕಾಣುವನೆ? ದುರ್ಮಾರ್ಗದಲ್ಲಿ ನಡೆಯುವವನು ಇವರು ದೊಡ್ಡವರು, ಇವರು ಪೂಜ್ಯರು ಎಂದು ಗೌರವಿಸುವನೆ? ದುಷ್ಟನು ಸಭ್ಯರಾಗಿ ಬಾಳುವವರನ್ನು ಬಾಧಿಸದೆ ಬಿಡುವನೆ?

ಟೆ|| ಸುರೆ-ಸಾರಾಯಿ, ಆಂತವಂ-ಪಡೆದವನು.

---

16 ರಿಂದ17-ಈ ಸಂಖ್ಯೆಗಳು ಮುಂದೆ ಕೊಟ್ಟಿರುವ ಆಯಾ ಕಥೆಗಳನ್ನು ಸೂಚಿಸುವುವು.

ಒಣೆಗುರೆಂದುಂ ಮೆಲೆ ಬೇವು ಸ್ವಾದುವಹುದೇ ಚೇಳ್ ಚಿಕ್ಕದೆಂದಳ್ಕರಿಂ |
ತೆಗೆಯಲ್ ಕಚ್ಚದೆ ಪಾಲನೂಡಿ ಫಣಿಯಂ ಸಾಕಲ್ಕೆ ವಿಶ್ವಾಸಿಯೇ ||
ಖಗಮಂ ಸಾಕುವೆನೆಂದು ಗೂಗೆ ಮರಿಯಂ ಸಂಪ್ರೀತಿಯಿಂದೋವರೇ |
ಪಗೆಯಂ ಬಾಲಕನೆಂಬರೇ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ || ೪೧ ||

ಭಾ|| ಬೇವಿನೆಲೆಯನ್ನು ಚಿಗುರೆಂದು ತಿಂದರೆ ಸಿಹಿಯಾಗಿರುವುದೆ? ಚೇಳನ್ನು ಚಿಕ್ಕದೆಂದು ಪ್ರೀತಿಯಿಂದ ಹಿಡಿದುಕೊಂಡರೆ ಅದು ಕುಟುಕದೆ ಬಿಡುವುದೆ? ಹಾವಿಗೆ ಹಾಲನ್ನು ಕುಡಿಸಿ ಪೋಷಿಸಿದರೆ ಅದು ನಮಗೆ ವಿಶ್ವಾಸವನ್ನು ತೋರಿಸುವುದೆ? ಹಕ್ಕಿಯನ್ನು ಸಾಕುವ ಅಪೇಕ್ಷೆಯಿಂದ ಗೂಬೆಯ ಮರಿಯನ್ನು ಅಕ್ಕರೆಯಿಂದ ಸಾಕುವರೆ? ಶತ್ರುವನ್ನು ಹುಡುಗನೆಂದು ಅಲಕ್ಷ್ಯಮಾಡುವರೆ?

ಟಿ|| ಸ್ವಾದು-ಸಿಹಿ, ಊಡಿ-ಕುಡಿಸಿ, ವಿಶ್ವಾಸಿ-ನಂಬಿಕೆಗೆ ತಕ್ಕದ್ದು, ಗೂಗೆ-ಗೂಬೆ, ಓವರೇ-ಸಾಕುವರೆ?

7 ಸುಳಿದಾ ಹೊಮ್ಮೃಗವೆಯ್ದೆ ಸೀತೆಯ ಖಳಂ ಕೊಂಡೊಯ್ದು ತಾಂಬಾಳ್ದನೇ |
18 ಇಳಿದಂಭೋಧಿಯ ಬಾಳ್ದನೇ ತಮಸನಂದಾಮ್ನಾಯವಂ ಕದ್ದು ತಾಂ ||
11 ತಲೆಯಂ ಕಟ್ಟರೆ ಕಂಚವಾಳ ಮರದೊಳ್ ಶೂದ್ರೀಕ ವೀರಾಖ್ಯನಂ |
ಕಳವೇಂ ಕೊಲ್ಲದೆ ಕಾಯ್ದುದೇ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ||೪೨||

ಭಾ|| ಚಿನ್ನದ ಜಿಂಕೆಯು ಸುಳಿದಾಡುತ್ತಿರುವಂತೆ ಮಾಡಿ ಅಲ್ಲಿದ್ದ ಸೀತೆಯನ್ನು ಕದ್ದುಕೊಂಡು ಹೋದ ರಾವಣನು ಬದುಕಿದನೆ? ವೇದಗಳನ್ನು ಕದ್ದು ಕೊಂಡು ಹೋದ ರಾಕ್ಷಸನು ಸಮುದ್ರದಲ್ಲಿ ಹೋಗಿ ಅಡಗಿಕೊಂಡರೂ ಉಳಿದನೆ? ಶೂದ್ರೀಕನೆಂಬ ಶೂರನನ್ನು ಕಳ್ಳತನ ಮಾಡಿದುದಕ್ಕಾಗಿ ಕಂಚವಾಳದ ಮರಕ್ಕೆ ನೇಣುಹಾಕದೆ ಬಿಟ್ಟರೆ? ಆದಕಾರಣ ಕಳ್ಳತನ ದಿಂದ ಕೇಡೇ ಹೊರತು ಕ್ಷೇಮವಾಗದು.

ಟಿ|| ಹೊಮ್ಮೃಗ-ಚಿನ್ನದ ಜಿಂಕೆ, ಎಯ್ದೆ-ಹೋಗಲು, ಖಳ-ರಾಕ್ಷಸ, ಅಂಭೋಧಿ-ಸಮುದ್ರ, ತಮಸ-(ಸೋಮಕಾಸುರನೆಂಬ) ರಾಕ್ಷಸ, ಆಮ್ನಾಯ-ವೇದ.

[7]ಪಿಡಿಯಲ್ ಪೊಮ್ಮೃಗವೆಂದು ಪೋಗೆ ರಘುಜಂ ಭೂಪುತ್ರಿ ಸಂನ್ಯಾಸಿಯಿಂ |
ದಡಿಯಿಟ್ಟಳ್ ದಶಕಂಠನುಯ್ದಿವಳನಂದಾಯುಷ್ಯಮಂ ನೀಗಿದಂ ||
[4]ಕೊಡಬೇಡೆಂದೆನೆ ಶುಕ್ರ ರಾಜ್ಯವನಿತಂ ಪೋಗಾಡಿದಂ ರಾಕ್ಷಸಂ |
ಕಡು ಮೋಸಂ ಕೆಡಿಕುಂ ದಲ್ಲೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ|| ೪೩ ||

ಭಾ || ಮಾಯಾಮೃಗವನ್ನು ನಿಜವಾದ ಚಿನ್ನದ ಜಿಂಕೆಯೆಂದು ನಂಬಿ ರಾಮನು ರಾವಣನ ಮೋಸಕ್ಕೊಳಗಾಗಿ ಸೀತೆಯನ್ನಗಲಿ ಹೋಗಲು, ಸೀತಾದೇವಿಯು ರಾವಣನನ್ನು ನಿಜವಾದ ಸಂನ್ಯಾಸಿಯೆಂದು ತಿಳಿದು ಪರ್ಣಶಾಲೆಯಿಂದ ಈಚೆಗೆ ಬಂದು ಅವನ ಕೈಗೆ ಸಿಕ್ಕಿದಳು; ಅವನು ಆಕೆಯನ್ನು ಹೊತ್ತುಕೊಂಡು ಹೋದದ್ದೇ ಅವನ ಸಾವಿಗೆ ಕಾರಣವಾಯಿತು. ಬಲಿಚಕ್ರವರ್ತಿಯು ಯಜ್ಞಮಾಡುತ್ತಿದ್ದಾಗ ಅಲ್ಲಿಗೆ ಬ್ರಹ್ಮಚಾರಿಯಾಗಿ ಬಂದ ವಾಮನನಿಗೆ ದಾನ ಕೊಡಬೇಡವೆಂದು ಶುಕ್ರನು ಎಷ್ಟು ಹೇಳಿದರೂ ಕೇಳದೆ ಬಲಿಯು ವಾಮನನ ಮೋಸಕ್ಕೊಳಗಾಗಿ ರಾಜ್ಯವನ್ನೆಲ್ಲ ಕಳೆದುಕೊಂಡನು. ಆದಕಾರಣ ಹೆಚ್ಚಾದ ಮೋಸವು ನಿಜವಾಗಿ ಕೇಡನ್ನುಂಟುಮಾಡುವುದು.

ಟಿ || ರಘುಜ-ಶ್ರೀರಾಮ, ಭೂಪುತ್ರಿ-ಸೀತೆ, ನೀಗಿದಂ-ಕಳೆದುಕೊಂಡನು.

ಖಳ ವೇದಂಗಳನೊಯ್ದು[19]ನುರ್ವಿತಳಮಂ ತಾಂ ಚಾಪೆವೊಲ್ ಸುತ್ತಿದಂ |
ಛಲದಿಂ ಪೋರಿದರೆಲ್ಲರಂ ಗೆಲಿದು ಬಂದಾ ಪೆಂಣ ಕೊಂಡೋಡಿದಂ ||
ತಲೆಯೊಳ್ ಕಾದಿದರೂರ್ಗಳಂ ಪಡೆದರೆಲ್ಲರ್ ಗೆಲ್ದು ತಾವಾಳ್ದರೇಂ |
ಬಲು ಗರ್ವಂ ಕೊಲದಿರ್ಪುದೇ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ|| ೪೪ ||

ಭಾ || ವೇದಗಳನ್ನು ಕದ್ದುಕೊಂಡು ಹೋದ ಸೋಮುಕಾಸುರನೂ ಭೂಮಿಯನ್ನು ಚಾಪೆಯಂತೆ ಸುತ್ತಿ ಪಾತಾಳಲೋಕಕ್ಕೆ ತೆಗೆದುಕೊಂಡುಹೋದ ಹಿರಣ್ಯಾಕ್ಷನೂ, ಎದುರುಬಿದ್ದ ರಾಜಪುತ್ರರೆಲ್ಲರನ್ನೂ ಯುದ್ಧದಲ್ಲಿ ಗೆದ್ದು ರಾಮನು ಪಡೆದ ಸೀತಾದೇವಿಯನ್ನು ಅಪಹರಿಸಿದ ರಾವಣನೂ, ಬಲದ ಗರ್ವದಿಂದ ಕಾದಿ ಗೆದ್ದು ಹಲವು ಊರುಗಳನ್ನು ಪಡೆದವರೂ ಯಾರೂ ತಾವು ಗೆದ್ದುದನ್ನು ಅನುಭವಿಸಲಿಲ್ಲ. ಆದುದರಿಂದ ಗರ್ವವು ನಾಶಕರವು.

ಟಿ || ಉರ್ವಿತಳ-ಭೂಮಿ.

4ರಿಂದ19-ಈ ಸಂಖ್ಯೆಗಳು ಮುಂದೆ ಕೊಟ್ಟಿರುವ ಆಯಾ ಕಥೆಗಳನ್ನು ಸೂಚಿಸುವುವು.

[1]ತ್ರಿಜಗಾಧೀಶ್ವರನೊಳ್ ಮನೋಜ ಕಲಹಂದಾಳ್ದಗ್ನಿಗೀಡಾದ [20]ವಾ |
ರಿಜನಾಭಂಗಿದಿರಾಗಿ ಬಾಣ ಭುಜಸಾಹಸ್ರಂಗಳಂ ನೀಗಿದಂ ||
[21]ದ್ವಿಜರಾಜಂಗೆಣೆವಂದು ಚಕ್ರಹತಿಯಿಂ ಸ್ವರ್ಭಾನು ತುಂಡಾಗನೇ |
ಗಜದೊಳ್ ಸುಂಡಗೆ ಯುದ್ಧವೇ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ||೪೫||

ಭಾ || ಈಶ್ವರನ ಮೇಲೆ ಹೋರಾಡಿದ ಮನ್ಮಥನು ಸುಟ್ಟು ಬೂದಿಯಾದನು. ವಿಷ್ಣುವಿನ ಮೇಲೆ ಯುದ್ಧ ಮಾಡಿದ ಬಾಣಾಸುರನು ತನ್ನ ಸಾವಿರ ತೋಳುಗಳನ್ನೂ ಕಳೆದುಕೊಂಡನು. ಚಂದ್ರನ ಸಮಕ್ಕೆ ಬಂದು ಕುಳಿತ ರಾಹುವು ವಿಷ್ಣುವಿನ ಚಕ್ರಾಯುಧದಿಂದ ತುಂಡಾದನು. ಆನೆಯಮೇಲೆ ಸುಂಡಿಲಿಯು ಯುದ್ಧ ಮಾಡಲು ಸಾಧ್ಯವೆ? ಎಂದರೆ, ಅಲ್ಪನು ಬಲಿಷ್ಠರಮೇಲೆ ಯುದ್ಧಕ್ಕೆ ಹೋದರೆ ಕೇಡು ತಪ್ಪದು.

ಟಿ || ತ್ರಿಜಗಾಧೀಶ್ವರ–ಮೂರು ಲೋಕಕ್ಕೆ ಒಡೆಯನಾದ ಈಶ್ವರ, ಮನೋಜ ಮನ್ಮಥ, ಕಲಹಂದಾಳ್ದು-ಜಗಳವಾಡಿ, ಈಡಾದ–ಗುರಿಯಾದನು, ವಾರಿಜನಾಭ–ವಿಷ್ಣು, ದ್ವಿಜರಾಜ-ಚಂದ್ರ, ಎಣೆವಂದು-ಸಮಕ್ಕೆ ನಿಂತು, ಸ್ವರ್ಭಾನು-ರಾಹು, ಸುಂಡ-ಸುಂಡಿಲಿ (ಸೊಂಡೆಯಿಲಿ).

ಅಗಲರ್ ಸೂಳೆಯನಾಳರಾ ಕುಲಜೆಯಂ ಸಂಕೀರ್ಣವಂ ಮಾಳ್ಪರಾ |
ವಗ ದುರ್ಗೋಷ್ಠಿಯೊಳಿರ್ಪರೇಳು ಬೆಸನಕ್ಕೀಡಪ್ಪರಾಚಾರಮಂ ||
ಬಗೆಯರ್ ಸ್ವಾತ್ಮವಿಚಾರಕಲ್ಪಮತಿಯೀವರ್ ಧರ್ಮಮಂ ಪಾಲಿಸರ್ |
ಯುಗಧರ್ಮಂ ನರರ್ಗಪ್ಪುದೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ|| ೪೬ ||

ಭಾ || ಸತ್ಕುಲದಲ್ಲಿ ಹುಟ್ಟಿದ ಹೆಣ್ಣನ್ನು ಮದುವೆಯಾಗಿದ್ದರೂ ಸೂಳೆಯ ಸಹವಾಸಕ್ಕೆ ಬಿದ್ದು ಆ ಹೆಣ್ಣಿನಲ್ಲಿ ಅನುರಾಗವನ್ನಿಡದೆಹೋಗುವರು. ಜಾತಿಸಂಕರವನ್ನು ಮಾಡುವುದಕ್ಕೆ ಯತ್ನಿಸಿ ದುಷ್ಟರ ಗುಂಪಿನಲ್ಲಿಯೇ ಯಾವಾಗಲೂ ಇರುತ್ತ, ಸಪ್ತ ವ್ಯಸನಗಳೆಂಬ ದುರಾಶೆಗಳಿಗೆ ಗುರಿಯಾಗಿ ಸದಾಚಾರದಮೇಲೆ ದೃಷ್ಟಿಯಿಡರು. ಆತ್ಮಜ್ಞಾನ ವಿಚಾರವನ್ನು ಬಿಟ್ಟು ತಮ್ಮ ಧರ್ಮವನ್ನು ಕಾಪಾಡಿಕೊಳ್ಳದೆ ಇರುವರು. ಹೀಗಿರುವುದರಿಂದ ಜನರು ಕೆಡುವುದಕ್ಕೆ ಯುಗಧರ್ಮವೇ ಪ್ರಬಲವಾದ ಕಾರಣವು.

ಟಿ || ಕುಲಜೆ–ಸತ್ಕುಲದಲ್ಲಿ ಹುಟ್ಟಿದವಳು, ಸಂಕೀರ್ಣ–ಜಾತಿ ಸಂಕರ, ಏಳು ಬೆಸನ–ಸಪ್ತ ವ್ಯಸನಗಳು, ಬಗೆಯರ್–ಎಣಿಸರು, ಸ್ವಾತ್ಮವಿಚಾರ–ತಮ್ಮನ್ನು ತಾವು ತಿಳಿವ ಆಲೋಚನೆ, ಮತಿ-ಬುದ್ಧಿ, ಮನಸ್ಸು.

1ರಿಂದ21–ಈ ಸಂಖ್ಯೆಗಳು ಮುಂದೆಕೊಟ್ಟಿರುವ ಆಯಾ ಕಥೆಗಳನ್ನು ಸೂಚಿಸುವುವು.

ಪಿಡಿಯಲ್ ಸಿಂಗವ ಮತ್ಸರಂ ಬಿಡುವುದೇ ದುರ್ಗಂಧಮೇಲಾದಿಯೊಳ್ |
ತೊಡೆಯಲ್ ನಾರದೆ ನಾಯ ಬಾಲ ಸೆಡೆಯುಂ ಕಟ್ಟಲ್ಕೆ ಚೆನ್ನಪ್ಪುದೇ ||
ಸುಡುಚೇಳಂ ತೆಗೆಯಲ್ಕೆ ಸುಮ್ಮನಿಹುದೇನೇನೆಂದೊಡೆಷ್ಟಾದೊಡಂ |
ಬಿಡ ತನ್ನಂದವ ನೀಚ ತಾಂ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ|| ೪೭ ||

ಭಾ || ಸಿಂಹವನ್ನು ಪ್ರೀತಿಯಿಂದ ಹಿಡಿದರೆ ಅದು ದ್ವೇಷವನ್ನು ಬಿಡುವುದೆ? ದುರ್ವಾಸನೆಯುಳ್ಳ ಪದಾರ್ಥಕ್ಕೆ ಏಲಕ್ಕಿ ಮೊದಲಾದ ಸುವಾಸನೆಯುಳ್ಳ ಪದಾರ್ಥಗಳನ್ನು ಮೇಲೆ ಬಳಿದರೆ ಅದರ ನಾತವು ಹೋಗುವುದೆ? ನಾಯಿಯ ಡೊಂಕು ಬಾಲವನ್ನು ಕೋಲಿನಿಂದ ಕಟ್ಟಿ ನೇರವಾಗಿ ಮಾಡಿದರೆ ಅದು ನೆಟ್ಟಗಾಗುವುದೆ? ಬೆಂಕಿಗೆ ಬಿದ್ದು ಸುಡುವ ಚೇಳನ್ನು ಕೈಯಿಂದ ತೆಗೆದು ಬದುಕಿಸಿದರೆ ಅದು ಕುಟುಕದೆ ಸುಮ್ಮನಿರುವುದೆ? ಹಾಗೆಯೇ, ನೀಚನಿಗೆ ಎಷ್ಟು ಹೇಳಿದರೂ, ಎಷ್ಟು ಮಾಡಿದರೂ ತನ್ನ ಕೆಟ್ಟ ಸ್ವಭಾವವನ್ನು ಬಿಡನು.

ಟಿ || ಮತ್ಸರ-ಕ್ರೂರತನ, ಏಲಾದಿ-ಏಲಕ್ಕಿ ಮೊದಲಾದುವು, ಸೆಡೆ-ಡೊಂಕು, ಸುಡುಚೇಳು-ಸುಟ್ಟುಹೋಗುತ್ತಿರುವ ಚೇಳು, ಅಂದ-ರೀತಿ.

ಘನ ದೈನ್ಯಂ ಬಡುವರ್ ಗುರುತ್ವಗೆಡುವರ್ ಗ್ರಾಸಕ್ಕೆ ಕುಗ್ರಾಮವಾ |
ಗನುಗೊಟ್ಟಿರ್ಪರು ವೀಕ್ಷಣಕ್ಕೆ ಮುನಿವರ್ ಮಾತಾಡಲುಂ ಬೀಗಿ ಬಿ ||
ರ್ರನೆ ಬಾಗರ್ ತಲೆಗೇರಿ ಸೊಕ್ಕು ತೊನೆವರ್ ತಾವೆಲ್ಲರಂ ನಿಂದಿಪರ್ |
ಮನುಜರ್ಗೆತ್ತಣ ನೀತಿಯೈ ಹರ ಹರ ಶ್ರೀ ಚೆನ್ನ ಸೋಮೇಶ್ವರಾ || ೪೮ ||

ಭಾ || ತಿನ್ನುವುದಕ್ಕೆ ಇಲ್ಲದಿರುವಾಗ ಮನುಷ್ಯರು ಬಹಳ ದೈನ್ಯದಿಂದಿರುವರು, ಗೌರವವನ್ನು ಲಕ್ಷಿಸುವುದಿಲ್ಲ. ಅನುಕೂಲ ಹೊಂದಿರುವವರಾದರೋ, ಯಾರಾದರೂ ತಮ್ಮನ್ನು ನೋಡಿದ ಮಾತ್ರಕ್ಕೇ ಕೋಪಿಸಿಕೊಳ್ಳುವರು, ಮಾತನಾಡಿಸಿದರೆ ಗರ್ವದಿಂದ ಉಬ್ಬಿಹೋಗುವರು, ಮದವೇರಿ ತಲೆ ತಿರುಗಿದವರಾಗಿರುವರು, ಎಲ್ಲರನ್ನೂ ನಿಂದಿಸುವರು. ಹೀಗಿರುವಲ್ಲಿ ಮನುಷ್ಯರಿಗೆ ನೀತಿಯು ಎಲ್ಲಿಯದು?

ಟಿ || ಗುರುತ್ವ-ಗೌರವ, ಗ್ರಾಸ-ತಿಂಡಿ, ಕುಗ್ರಾಮ-(ಸಣ್ಣ ಹಳ್ಳಿ)-ಗತಿಯಿಲ್ಲದಿರುವಿಕೆ, ಅನುಗೊಟ್ಟಿರ್ಪರು-ಅನುಕೂಲ ಹೊಂದಿರುವವರು, ವೀಕ್ಷಣ-ನೋಟ, ಮುನಿವರ್ - ಕೋಪಿಸಿಕೊಳ್ಳುವರು, ಬೀಗಿ -(ಉಬ್ಬಿ)-ಗರ್ವಿಸಿ, ಬಾಗರ್-ತಗ್ಗಿ ನಡೆಯರು, ತೊನೆ-ತೂಗಾಡು.

ಬಡಿಕೋಲಂ ಸಮಮಾಡಲಕ್ಕುಮರೆಯೊಳ್ ಕೂಪಂಗಳಂ ತೋಡಲ |
ಕ್ಕಿಡಿದುಕ್ಕಂ ಮೃದುಮಾಡಲಕ್ಕು ಮಳಲೊಳ್ ತೈಲಂಗಳಂ ಹಿಂಡಲ ||
ಕ್ಕಡವೀ ಸಿಂಗವ ತಿದ್ದಲಕ್ಕು ಕರೆಯಲ್ ಬಕ್ಕುಗ್ರದ ವ್ಯಾಘ್ರಮಂ |
ಕಡು ಮೂರ್ಖಂ ಹಿತಕೇಳ್ವನೇ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ || ೪೯

ಭಾ || ಧಾನ್ಯವನ್ನು ಬಡಿಯುವ ಕೋಲನ್ನು ನೇರವಾಗಿ ಮಾಡಬಹುದು, ಬಂಡೆಯಲ್ಲಿ ಬಾವಿಯನ್ನು ತೋಡಬಹುದು, ಉಕ್ಕನ್ನು ಬಡಿದು ಮೆತ್ತಗೆ ಮಾಡಬಹುದು, ಮಳಲನ್ನು ಹಿಂಡಿ ಎಣ್ಣೆಯನ್ನು ತೆಗೆಯಬಹುದು, ಕಾಡಿನಲ್ಲಿರುವ ಸಿಂಹವನ್ನು ಪಳಗಿಸಬಹುದು, ಕ್ರೂರವಾದ ಹುಲಿಯನ್ನು ಹತ್ತಿರಕ್ಕೆ ಕರೆಯಬಹುದು; ಆದರೆ ಕಡು ಮೂರ್ಖನು ಬುದ್ಧಿವಾದ ವನ್ನು ಕೇಳುವಂತೆ ಮಾಡಲಾಗುವುದಿಲ್ಲ.

ಟಿ || ಅರೆ-ಬಂಡೆ, ಕೂಪ-ಬಾವಿ, ಇಡಿದು-ಕುಟ್ಟಿ, ಬಡಿದು; ಬಕ್ಕು-ಬಹುದು, ಉಗ್ರ-ಕ್ರೂರವಾದ.

ತೊನೆವರ್ಮಾತಿಗೆ ಸೋಲ್ದು ತನ್ನ ತಲೆಯೊಳ್ ತಾನಿಟ್ಟು ಬೊಬ್ಬಿಟ್ಟು ಕೈ
ಯನೆ ಬಿಟ್ಟೆಲ್ಲರ ಮುಂದೆ ತೋಳ ನೆಗಪುತ್ತಂ ಕೋತಿಯಂತೇಡಿಸು ||
ತ್ತಿನಿಸುಂ ಹೇಸದೆ ಲಜ್ಜೆಯಿಲ್ಲದನಿಬರ್ ತಾಂ ಮಾನ್ಯನೆಂದೆನ್ನದಾ |
ಮನುಜಂ ಸದ್ಗತಿ ಕಾಣನೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ || ೫೦

ಭಾ || ತಾನು ಹೇಳಿದುದನ್ನೆಲ್ಲ ಮೆಚ್ಚಿ ತಲೆದೂಗುವವರ ಮಾತಿಗೆ ಮರುಳಾಗಿ ಉಬ್ಬಿ ತನ್ನ ತಲೆಯ ಮೇಲೆ ಕೈಯಿಟ್ಟುಕೊಂಡು ಕೂಗಾಡುತ್ತ ಕೈಗಳ ನ್ನಾಡಿಸುತ್ತ ತೋಳುಗಳನ್ನು ಮೇಲಕ್ಕೆತ್ತುತ್ತ ಕೋತಿಯಂತೆ ಅಂಗಚೇಷ್ಟೆ ಮಾಡಿ ಇತರರನ್ನು ಅಣಕಿಸುತ್ತ ಯಾವ ಕೆಲಸಕ್ಕೂ ಹಿಂದೆಗೆಯದೆ ನಾಚಿಕೆಯನ್ನು ಬಿಟ್ಟು ಇತರರಿಂದ ಯೋಗ್ಯನೆಂದೆನಿಸಿಕೊಳ್ಳದ ಮನುಷ್ಯನು ಸದ್ಗತಿಯನ್ನು ಹೊಂದನು.

ಟಿ || ತೊನೆವರ್ಮಾತಿಗೆ-ತಲೆದೂಗುವವರ ಮಾತಿಗೆ, ಬೊಬ್ಬಿಟ್ಟು-ಆರ್ಭಟಿಸಿ, ನೆಗಪುತ್ತಂ-ಮೇಲಕ್ಕೆತ್ತುತ್ತ, ಏಡಿಸುತ್ತ-ಹಾಸ್ಯಮಾಡುತ್ತ, ಇನಿಸುಂ-ಸ್ವಲ್ಪವೂ, ಅನಿಬರ್-ಎಲ್ಲರೂ, ಮಾನ್ಯನು-ಪೂಜ್ಯನು.

ಧನ ಪ್ರಶಂಸೆ

ಕುಲದೊಳ್ ಕೂಡರು ಕೂಸನೀಯರು ನೃಪರ್ ನಿಷ್ಕಾರಣಂ ದಂಡಿಪರ್ |
ನೆಲೆಯೊಳ್ ಸೇರಲು ಪೋರುಗೈದು ಸತಿ ತಾಂ ಪೋಗಟ್ಟುವಳ್ ಸಾಲಿಗರ್ ||
ಕಲುಗುಂಡಂ ತಲೆಗೇರಿಪರ್ ತೊಲಗಿರಲ್ ಲಕ್ಷ್ಮೀಕಟಾಕ್ಷೇಕ್ಷಣಂ |
ನೆಲ ಮುಟ್ಟಲ್ ಮುನಿದಪ್ಪುದೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ||೫೧||

ಭಾ || ಲಕ್ಷ್ಮೀಕಟಾಕ್ಷವು ತಪ್ಪಿದರೆ (ಎಂದರೆ, ಬಡತನವು ಬಂದರೆ) ಕುಲದವರು ತಮ್ಮಲ್ಲಿ ಸೇರಿಸಿಕೊಳ್ಳದೆ ಬಹಿಷ್ಕಾರ ಹಾಕುವರು, ಹೆಣ್ಣು ಕೊಡುವುದಿಲ್ಲ, ಕಾರಣವಿಲ್ಲದೆ ದೊರೆಯು ದಂಡಿಸುವನು, ಮನೆ ಸೇರಿದರೆ ಹೆಂಡತಿಯು ಜಗಳವಾಡಿ ಓಡಿಸುವಳು, ಸಾಲಗಾರರು ತಲೆಯ ಮೇಲೆ ಕಲ್ಲು ಹೊರಿಸುವರು, ನೆಲವನ್ನು ಮುಟ್ಟಿದರೆ ಅದೂ ಕೋಪಿಸಿಕೊಳ್ಳುವುದು—ಎಂದರೆ, ಬಡತನವು ಬಂದವನಿಗೆ ಎಲ್ಲರೂ ವಿರೋಧಿಗಳಾಗುವರು.

ಟಿ || ನೆಲೆ-ವಾಸಸ್ಥಾನ, ಮನೆ, ಪೋರುಗೈದು-ಜಗಳವಾಡಿ, ಪೋಗಟ್ಟುವಳ್-ಮನೆಯಿಂದ ಅಟ್ಟಬಿಡುವಳು, ಸಾಲಿಗರ್-ಸಾಲಕೊಟ್ಟವರು, ಕಟಾಕ್ಷೇಕ್ಷಣಂ-ಕಡೆಗಣ್ಣಿನ ನೋಟ (ಅನುಗ್ರಹ).

ತೊನೆಯಲ್ ತಾಳ್ಮೆಯನಾಂತವಂ ಬೆರೆತೊಡಂ ನಿರ್ಗರ್ವಿ ಕೊಟ್ಟಾಡಲಾ|
ತನೆ ಸತ್ಯವ್ರತಿ ಸೂರುಳಿಟ್ಟು ಪುಸಿಯಲ್ ಭಾಷಾ ಪರೀಪಾಲಕಂ ||
ಕನಲ್ದುಂ ಸೈರಣೆವಂತನುದ್ಗುಣಯುತಂ ತಾಂ ನಿರ್ಗುಣಂ ದುಷ್ಕುಲಂ |
ಧನಿಕಂ ಸತ್ಕುಲಜಾತನೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ||೫೨||

ಭಾ || ಧನಿಕನು ಸೈರಣೆಯಿಲ್ಲದಿದ್ದರೂ ತಾಳ್ಮೆಯುಳ್ಳವನೆಂದೂ, ಗರ್ವಪಡುತ್ತಿದ್ದರೂ ನಿಗರ್ವಿಯೆಂದೂ, ದಾನಮಾಡಿ ಆಡಿಕೊಂಡರೂ ಸತ್ಯವ್ರತನೆಂದೂ, ಭಾಷೆಕೊಟ್ಟು ತಪ್ಪಿದರೂ ಮಾತು ಉಳಿಸಿಕೊಳ್ಳುವವನೆಂದೂ, ಸಿಟ್ಟುಗೊಂಡರೂ ತಾಳ್ಮೆಯುಳ್ಳವನೆಂದೂ, ಗುಣವಿಲ್ಲದವನಾದರೂ ಉತ್ತಮ ಗುಣವುಳ್ಳವನೆಂದೂ, ನೀಚಕುಲದವನಾಗಿದ್ದರೂ ಉತ್ತಮ ಕುಲದಲ್ಲಿ ಹುಟ್ಟಿದವನೆಂದೂ ಹೇಳಿಸಿಕೊಳ್ಳುವನು—ಎಂದರೆ, ಐಶ್ವರ್ಯವು ಮನುಷ್ಯನ ಎಲ್ಲ ದುರ್ಗುಣಗಳನ್ನೂ ಸುಗುಣಗಳನ್ನಾಗಿ ಮಾಡುವುದು.

ಟಿ || ತೊನೆಯಲ್-(ಸೈರಣೆಯಿಲ್ಲದೆ) ತಲೆಯನ್ನು ಅಲ್ಲಾಡಿಸಿದರೂ, ಬೆರೆತೊಡಂ-ಗರ್ವಪಟ್ಟರೂ, ಸೂರುಳಿಟ್ಟು-ಆಣೆಯಿಟ್ಟುಕೊಂಡು, ಪುಸಿಯಲ್-ಸುಳ್ಳಾಡಲು, ಕನಲ್ದುಂ-ಕೋಪಿಸಿಕೊಂಡರೂ, ಉದ್ಗುಣಯುತಂ-ದೊಡ್ಡ ಗುಣವುಳ್ಳವನು.

ಕರೆಯಲ್ ಕರ್ಣಗಳಿರ್ದು ಕೇಳರು ಕರಂಗಳ್ ಚೆಲ್ವನಾಂತಿರ್ದೊಡಂ |
ಮುರಿದಂತಿರ್ಪ್ಪರ ಮೇಲೆ ಹೇರಿ ನಡೆವರ್ ಮಾತಿರ್ದೊಡಂ ಮೂಕರ ||
ಪ್ಪರು ಕಾಲಿರ್ದೊಡೆ ಕುಂಟರಪ್ಪರಿಡೆ ಕಾಲಂ ಪೂರ್ವ ಪುಣ್ಯಂಗಳಿಂ |
ಸಿರಿವಂತರ್ ನೆಲೆಗಾಣರ್ರೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ || ೫೩ |

ಭಾ || ಪೂರ್ವಜನ್ಮದಲ್ಲಿ ಮಾಡಿದ ಪುಣ್ಯದಿಂದ ಧನವು ಲಭಿಸಿದ ಮಾತ್ರಕ್ಕೆ ಜನರು ತಮ್ಮ ಯೋಗ್ಯತೆಯನ್ನು ತಾವರಿಯದೆ ಮಿತಿಮಿರಿ ಗರ್ವಿಸುತ್ತ ಇತರರು ತಮ್ಮನ್ನು ಕರೆದರೆ ಕಿವುಡರಂತೆ ಕೇಳದ ಹಾಗಿರುವರು, ಕೈಗಳು ಚೆನ್ನಾಗಿದ್ದರೂ ಕೈಮುರಿದವರಂತೆ ಅವನ್ನು ಇಬ್ಬರಮೇಲೆ ಹೇರಿಕೊಂಡು ನಡೆಯುವರು, ಮಾತಾಡಬಲ್ಲವರಾದರೂ ಮೂಕರಂತಿರುವರು, ಕಾಲು ಸರಿಯಾಗಿದ್ದರೂ ನಡೆಯಲು ಹಿಂದೆಗೆಯುವರು.

ಟಿ || ಇಡೆ ಕಾಲಂ-ನಡೆಯುವುದಕ್ಕೆ, ನೆಲೆಗಾಣರ್ರೈ-ತಮ್ಮ ಸ್ಥಿತಿಯನ್ನು ತಾವರಿಯರು.

ರಾಜ ನೀತಿ

[13]ಬರೆ ದಾರಿದ್ರ್ಯದಿ ದ್ರೋಣನಂ ದ್ರುಪದ ಪೂರ್ವ ಸ್ನೇಹದಿಂ ಕಂಡನೇ |
[14]ಕುರು ಭೂಪಾಲನು ಪಾಂಡುಪುತ್ರರು ಮಹಾ ಧರ್ಮಾತ್ಮರೆಂದಿತ್ತನೇ ||
[9]ಹರಿಯಂ ತಂಗಿಯ ಬಾಲನೆಂದು ಬಗೆದೇಂ ಕಂಸಾಸುರಂ ಕಂಡನೇ |
ದೊರೆಗಳ್ಗೆತ್ತಣ ನಂಟರ್ರೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ || ೫೪ |

ಭಾ || ದ್ರುಪದನು ದೊರೆಯಾಗಿದ್ದಾಗ ಅವನ ಬಾಲ್ಯಸ್ನೇಹಿತನಾದ ದ್ರೋಣನು ದಾರಿದ್ರ್ಯದಿಂದ ತನ್ನಲ್ಲಿಗೆ ಬರಲು, ಮೊದಲಿನ ಸ್ನೇಹವನ್ನು ನೆನೆದು ಅವನನ್ನು ಆದರಿಸಿದನೆ? ಪಾಂಡವರು ಧರ್ಮಿಷ್ಠರೆಂದು ತಿಳಿದಿದ್ದರೂ ಅವರಿಗೆ ದುರ್ಯೋಧನನು ರಾಜ್ಯವನ್ನು ಕೊಟ್ಟನೆ? ಕಂಸನು ಕೃಷ್ಣನನ್ನು ತನ್ನ ತಂಗಿಯ ಮಗನೆಂದು ದ್ವೇಷಿಸದೆ ಬಿಟ್ಟನೆ? ಆದಕಾರಣ ದೊರೆಗಳಿಗೆ ನಂಟರು ಎಂಬ ಮಮತೆಯು ಎಲ್ಲಿಂದ ಬಂದೀತು?

ಟಿ || ಕುರುಭೂಪಾಲ-ದುರ್ಯೋಧನ, ಬಗೆದು-ಭಾವಿಸಿ.

9ರಿಂದ14-ಈ ಸಂಖ್ಯೆಗಳು ಮುಂದೆ ಕೊಟ್ಟಿರುವ ಆಯಾ ಕಥೆಗಳನ್ನು ಸೂಚಿಸುವುವು

ಪುರ ದುರ್ಗಂಗಳ ಬಲ್ಮೆಮಾಡದೆ ಪ್ರಜಾಕ್ಷೋಭಂಗಳಂ ನೋಡದೆ |
ಲ್ಲರು ವಿಶ್ವಾಸಿಗಳೆಂದು ನಂಬಿ ಬಹುದಂ ಪೋದಪ್ಪುದಂ ಕಾಣದಾ ||
ತುರದಿಂದುಂಡತಿ ನಿದ್ರೆಗೆಯ್ದು ಮದನಂಗಾಳಾಗಿಹಂ ಲೋಕದೊಳ್ |
ದೊರೆಯೇ ಸೊಕ್ಕಿದ ಕೋಣನೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ || ೫೫ ||

ಭಾ || ಪಟ್ಟಣಗಳನ್ನೂ ಕೋಟೆಗಳನ್ನೂ ಬಲಪಡಿಸದೆ, ಪ್ರಜೆಗಳ ಕಷ್ಟವನ್ನು ಲಕ್ಷಿಸದೆ, ಎಲ್ಲರೂ ತನ್ನಲ್ಲಿ ವಿಶ್ವಾಸವುಳ್ಳವರೆಂದು ನಂಬಿ, ತನ್ನ ಆದಾಯ ವೆಚ್ಚಗಳನ್ನು ವಿಚಾರಮಾಡದೆ, ಬೇಕಾದ ಹಾಗೆ ತಿಂದು ಮಿತಿಮೀರಿ ನಿದ್ದೆ ಮಾಡುತ್ತ ಯಾವಾಗಲೂ ವಿಷಯಾಸಕ್ತನಾಗಿರುವವನು ಸೊಕ್ಕಿದ ಕೋಣನೇ ಹೊರತು ದೊರೆಯಲ್ಲ.

ಟಿ || ಬಲ್ಮೆಮಾಡು – ಬಲಪಡಿಸು, ಕ್ಷೋಭಂಗಳಂ – ಕಷ್ಟನಿಷ್ಠುರಗಳನ್ನು, ಬಹುದಂ-ಬರುವುದನ್ನು.

ಬಲವಂತರ್ ನೆರವಾಗಲಿಕ್ಕೆಲದವರ್ ಮಿತ್ರತ್ವಮಂ ತಾಳ್ದಿರಲ್ |
ನೆಲನೆಲ್ಲಂ ಬೆಸಲಾಗೆ ಧಾನ್ಯತತಿಯಂ ನಿಷ್ಕಾರಣಂ ದಂಡಮಂ ||
ಕೊಳದೆಲ್ಲರ್ ಸೊಗವಾಗೆ ನಂಬುಗೆಗಪೋಹಂ ಬಾರದಂತಾಳೆ ತಾಂ |
ಬಲು ಭಾಗ್ಯಂ ದೊರೆಗಪ್ಪುದೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ || ೫೬ ||

ಭಾ || ಬಲಿಷ್ಠರಾದವರ ಸಹಾಯವಿದ್ದು, ತನ್ನ ದೇಶದ (ಎಡಬಲ ಪಕ್ಕಗಳಲ್ಲಿರುವ) ಸಮೀಪದಲ್ಲಿರುವ ರಾಜರು ಸ್ನೇಹಿತರಾಗಿದ್ದು, ಭೂಮಿಯು ಯಾವಾಗಲೂ ಫಲವತ್ತಾಗಿ ಒಳ್ಳೆಯ ಬೆಳೆಯನ್ನು ಕೊಡುತ್ತಿದ್ದು, ಪ್ರಜೆಗಳಿಂದ ಅನ್ಯಾಯವಾಗಿ ದಂಡವನ್ನು ತೆಗೆದುಕೊಳ್ಳದೆ ಪ್ರಜೆಗಳೆಲ್ಲರೂ ಸುಖವಾಗಿರುವಂತೆ ನೋಡಿಕೊಳ್ಳುತ್ತ, ತನ್ನಲ್ಲಿ ಯಾರಿಗೂ ನಂಬಿಕೆ ಕೆಡದಂತೆ ಆಳುವ ದೊರೆಯು ಭಾಗ್ಯಶಾಲಿಯಾಗುವನು.

ಟಿ || ನೆರವು – ಸಹಾಯ, ಇಕ್ಕೆಲ – ಎರಡು ಪಕ್ಕ, ಬೆಸಲಾಗೆ – (ಹೆರಲು)– ಫಲಿಸಲು, ಸೊಗವಾಗೆ–ಸುಖವನ್ನು ಹೊಂದಿರಲು, ಅಪೋಹ–ನ್ಯೂನತೆ.

ಧುರದೊಳ್ ತನ್ನಯ ವೀರರೊಳ್ ಪ್ರಜೆಗಳೊಳ್ ದಾಯಾದರೊಳ್ ಭೃತ್ಯರೊಳ್ ।
ಪುರದೊಳ್ ಬಂಧುಗಳೊಳ್ ಸುಭೋಜನಗಳೊಳ್ ವೈದ್ಯಂಗಳೊಳ್ ದೈವದೊಳ್ ॥
ಅರಿಯೊಳ್ ಜ್ಯೋತಿಷ ಮಂತ್ರವಾದದೆಡೆಯೊಳ್ ವಿದ್ವಾಂಸರೊಳ್ ಸ್ತ್ರೀಯರೊಳ್ ।
ದೊರೆಗಳ್ಗೆಳ್ಚರು ಬೇಕೆಲೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ॥ ೫೭ ॥

ಭಾ ॥ ಯುದ್ಧದಲ್ಲಿಯೂ, ತನ್ನ ಕಡೆಯ ಶೂರರಲ್ಲಿಯೂ, ದೇಶದ ಜನರಲ್ಲಿಯೂ ಜ್ಞಾತಿಗಳಲ್ಲಿಯೂ, ಸೇವಕರಲ್ಲಿಯೂ, ಪಟ್ಟಣದಲ್ಲಿಯೂ, ನಂಟರಲ್ಲಿಯೂ, ಊಟದಲ್ಲಿಯೂ, ಔಷಧದಲ್ಲಿಯೂ, ದೇವತಾ ವಿಷಯದಲ್ಲಿಯೂ, ಶತ್ರುವಿನಲ್ಲಿಯೂ, ಜ್ಯೋತಿಷ ಮಂತ್ರವಾದಗಳ ವಿಷಯದಲ್ಲಿಯೂ, ವಿದ್ವಾಂಸರಲ್ಲಿಯೂ, ಸ್ತ್ರೀಯರಲ್ಲಿಯೂ ದೊರೆಯು ಯಾವಾಗಲೂ ಜಾಗರೂಕನಾಗಿರಬೇಕು.

ಟಿ ॥ ಧುರ - ಯುದ್ಧ, ದಾಯಾದ - ಜ್ಞಾತಿ, ಮಂತ್ರವಾದಿ - ಶೂನ್ಯ, ಮಾಟ ಮೊದಲಾದ ಮಂತ್ರಗಳನ್ನು ಬಲ್ಲವನು, ಎಳ್ಚರು - ಎಚ್ಚರಿಕೆ.

ವರ ವಿದ್ವತ್ಕವಿವರ್ಯ ಗಾಯಕ ಪುರಾಣಜ್ಞರ್ ಮಹಾ ಪಾಠಕರ್ ।
ಪರಿಹಾಸೋಚಿತಿಹಾಸ ಮಂತ್ರ ಶಕುನಜ್ಞರ್ ವಾಗ್ಮಿಗಳ್ ವೇಶಿಯರ್ ॥
ಶರ ಶಸ್ತ್ರಾದಿ ಸಮಸ್ತ ವಿದ್ಯೆಯರಿದರ್ ಕಾಲಾಳು ಮೇಲಾಳಿರಲ್ ।
ದೊರೆಯೊಡ್ಡೋಲಗಮೊಪ್ಪುಗುಂ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ॥ ೫೮ ॥

ಭಾ ॥ ಶ್ರೇಷ್ಠರಾದ ವಿದ್ವಾಂಸರು, ಕವಿಗಳು, ಸಂಗೀತಗಾರರು, ಪೌರಾಣಿಕರು, ಹೊಗಳುಭಟ್ಟರು, ಹಾಸ್ಯಗಾರರು, ಇತಿಹಾಸಕರು, ಮಂತ್ರಶಾಸ್ತ್ರಜ್ಞರು, ಶಕುನಶಾಸ್ತ್ರಜ್ಞರು, ಯುಕ್ತಿಯಿಂದ ತಕ್ಕ ಮಾತಾಡುವವರು, ವೇಶ್ಯೆಯರು, ಅಸ್ತ್ರವಿದ್ಯೆ ಶಸ್ತ್ರವಿದ್ಯೆ ಮೊದಲಾದ ಸಮಸ್ತ ವಿದ್ಯೆಗಳಲ್ಲಿಯೂ ಗಟ್ಟಿಗರು, ಕಾಲಾಳುಗಳು, ಸೇನಾನಾಯಕರು — ಇವರೆಲ್ಲರೂ ಇದ್ದರೆ ರಾಜಸಭೆಯು ಶೋಭಿಸುವುದು.

ಟಿ ॥ ಕವಿವರ್ಯ - ಕವಿಶ್ರೇಷ್ಠ, ಮಹಾಪಾಠಕರ್ - ಹೊಗಳುಭಟ್ಟರು (ಭಟ್ಟಂಗಿಗಳು) ಇತಿಹಾಸ - ಚರಿತ್ರೆ, ಮೇಲಾಳು - ಸೇನಾನಾಯಕರು.

ಚಪಳರ್ ಚೋರರು ಜೂಜುಗಾರರು ವಿಟರ್ ತಾಂ ಶ್ರೇಷ್ಠರೆಂದೆನ್ನುವರ್ ।
ಕಪಟೋಪಾಯರು ಕೂಟಸಾಕ್ಷಿಯ ಜನರ್ ಕೊಂಡಾಡುವರ್ ಕೊಂಡೆಯರ್॥
ಅಪನಿಂದಾನ್ವಿತರಾತ್ಮಬೋಧ ಕುಹಕರ್ ಸಾಮಿಪ್ಯಮಾತ್ರೇಷ್ಠರುಂ ।
ನೃಪರೊಳ್ ಮಾನ್ಯರೆನಿಪ್ಪರೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ॥ ೫೯ ॥

ಭಾ ॥ ಸ್ಥಿರಮನಸ್ಸಿಲ್ಲದೆ ಚಂಚಲತೆಯುಳ್ಳವರು, ಕಳ್ಳರು, ಜೂಜಾಡುವವರು, ಸೂಳೆಗಾರರು, ಸ್ವಪ್ರತಿಷ್ಠೆಯುಳ್ಳವರು, ಮೋಸಗಾರರು, ಸುಳ್ಳುಸಾಕ್ಷಿ ಹೇಳುವವರು, ಮುಖಸ್ತುತಿ ಮಾಡುವವರು, ಚಾಡಿಕೋರರು, ಕೆಟ್ಟ ಹೆಸರನ್ನು ಪಡೆದವರು, ಬ್ರಹ್ಮಜ್ಞಾನವುಳ್ಳವರೆಂದು ನಟಿಸುವ ಕುತ್ಸಿತರು, ರಾಜಾಶ್ರಯವು ದೊರೆತುದೇ ಸಾಕೆಂದು ಭಾವಿಸುವವರು—ಇವರೇ ದೊರೆಗಳ ಗೌರವಕ್ಕೆ ಪಾತ್ರರಾಗುವವರು.

ಟಿ ॥ ಕೂಟಸಾಕ್ಷಿ-ಸುಳ್ಳುಸಾಕ್ಷಿ, ಕೊಂಡೆಯರ್ – ಚಾಡಿಕೋರರು, ಆತ್ಮ ಬೋಧ-ಬ್ರಹ್ಮಜ್ಞಾನ, ಕುಹಕರ್–ಕುತ್ಸಿತರು.

ಧುರ ಧೀರರ್ಗರೆಗಂಜಿ ಹೇಡಿಗಳಿಗಂ ಮೃಷ್ಟಾನ್ನ ಸತ್ಕೀರ್ತಿಯಂ ।
ಧರೆಯೊಳ್ ಬಿತ್ತುವಗಡ್ಡ ದುಡ್ಡು ಜರೆವರ್ಗಿಷ್ಟಾರ್ಥ ದಾನಂಗಳುಂ ॥
ಅರೆಮೆಯ್ವೆಣ್ಗರೆ ಭೋಗಮೆಲ್ಲ ಸೊಗಮುಂ ವೇಶ್ಯಾಜನಕ್ಕೀಕ್ಷಿಸಲ್ ।
ದೊರೆಗಳ್ಗೆತ್ತಣ ನೀತಿಯೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ॥ ೬೦ ॥

ಭಾ ॥ ಯುದ್ಧದಲ್ಲಿ ಸಮರ್ಥರಾದವರಿಗೆ ಅರೆಹೊಟ್ಟೆಗೆ ಗಂಜಿಯನ್ನೂ, ಕೈಯ ಲ್ಲಾಗದ ಹೇಡಿಗಳಿಗೆ ಮೃಷ್ಟಾನ್ನವನ್ನೂ, ತನ್ನ ಕೀರ್ತಿಯನ್ನು ಪ್ರಸಿದ್ಧಿ ಪಡಿಸುವವನಿಗೆ ಎರಡು ಕಾಸನ್ನೂ, ತನ್ನನ್ನು (ಪರೋಕ್ಷದಲ್ಲಿ) ನಿಂದಿಸು ವವನಿಗೆ ಕೇಳಿದಷ್ಟು ದಾನವನ್ನೂ ಕೊಡುತ್ತಲೂ, ಹೆಂಡತಿಗೆ ಅಲ್ಪ ಸುಖವನ್ನೂ ವೇಶ್ಯೆಗೆ ಸರ್ವ ಸೌಖ್ಯವನ್ನೂ ಉಂಟುಮಾಡುತ್ತಲೂ ಇರುವ ದೊರೆಗೆ ನೀತಿಯೆಲ್ಲಿಯದು?

ಟಿ ॥ ಅಡ್ಡ-ಅರ್ಧ, ಅಡ್ಡದುಡ್ಡು-ಎರಡು ಕಾಸು, ಅರೆಮೆಯ್ವೆಣ್ಗೆ-(ಅರ್ಧಾಂ ಗಿಗೆ)–ಹೆಂಡತಿಗೆ, ಸೊಗ-ಸುಖ.

ಅತಿ ಗಂಭೀರನುದಾರ ಧೀರನು ಮಹಾ ಸಂಪನ್ನ ಸತ್ಯಾತ್ಮನೂ |
ರ್ಜಿತ ನಾನಾಲಿಪಿಭಾಷೆಯೊಳ್ ಪರಿಚಿತಂ ಲಂಚಕ್ಕೆ ಕೈನೀಡದಂ ||
ವ್ರತಿ ಸದ್ಧರ್ಮ ವಿಚಾರಶಾಲಿ ಚತುರೋಪಾಯಂಗಳಂ ಬಲ್ಲವಂ |
ಪತಿಕಾರ್ಯಂ ವರ ಮಂತ್ರಿಯೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ|| ೬೧ ||

ಭಾ || ಬಹಳ ಗಂಭೀರನಾಗಿಯೂ, ಉದಾರಿಯಾಗಿಯೂ, ಧೈರ್ಯಶಾಲಿಯಾಗಿಯೂ, ಗುಣಶಾಲಿಯಾಗಿಯೂ, ಸತ್ಯಸಂಧನಾಗಿಯೂ, ಅನೇಕ ಭಾಷೆಗಳನ್ನೂ ಲಿಪಿಗಳನ್ನೂ ಕಲಿತವನಾಗಿಯೂ, ಲಂಚಕ್ಕೆ ಆಸೆಪಡದವನಾಗಿಯೂ, ನಿಯಮವುಳ್ಳವನಾಗಿಯೂ, ಧರ್ಮವಿಚಾರವುಳ್ಳವನಾಗಿಯೂ, ನಾಲ್ಕು ಬಗೆಯ ಉಪಾಯಗಳನ್ನು ತಿಳಿದವನಾಗಿಯೂ, ಸ್ವಾಮಿಕಾರ್ಯದಲ್ಲಿ ಆಸಕ್ತಿಯುಳ್ಳವನಾಗಿಯೂ ಇರುವವನೇ ಶ್ರೇಷ್ಠನಾದ ಮಂತ್ರಿಯು.

ಟಿ || ಸಂಪನ್ನ-ಗುಣಶಾಲಿ, ಊರ್ಜಿತ-ರೂಢಿಯಲ್ಲಿರುವ, ವ್ರತಿ-ನಿಯಮವುಳ್ಳವನು, ಚತುರೋಪಾಯ-ಸಾಮ ದಾನ ಭೇದ ದಂಡಗಳು, ಪತಿಕಾರ್ಯಂ-ಸ್ವಾಮಿಕಾರ್ಯದಲ್ಲಿ (ಆಸಕ್ತನಾದವನು).

ಬಹುಳೋಪಾಯದೊಳಾರ್ಜಿಸುತ್ತ ಧನಮಂ ತನ್ನಾಳ್ದನಂ ದೈವವೆಂ |
ದಹಿತರ್ ತನ್ನವರನ್ಯರೆನ್ನದಣುಮಾತ್ರಂ ಪೋಗದೊಲ್ ತ್ರಾಸಿಸಂ ||
ತಿಹನೊಕ್ಕಲ್ಗತಿ ಪ್ರೀತಿಪಾತ್ರನಿಳೆಮೆಚ್ಚಲ್ ಶಾನುಭಾಗಾಖ್ಯನೀ |
ಮಹಿ ವಾರಾಣಸಿಯಪ್ಪನೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ || ೬೨ ||

ಭಾ | ರಾಜ್ಯಕ್ಕಾಗಿ ಅನೇಕ ಉಪಾಯಗಳಿಂದ ಹಣವನ್ನು ಸಂಪಾದಿಸಿ, ದೊರೆಯನ್ನು ದೇವರೆಂದು ಭಾವಿಸಿ, ಶತ್ರುಗಳು ನಮ್ಮವರು ಹೊರಗಣವರು ಎಂಬ ಭೇದವನ್ನೆಣಿಸದೆ, ಒಂದು ಕಡೆಗೂ ಬಗ್ಗದೆ ತಕ್ಕಡಿಯಂತೆ ಒಂದೇ ಸಮವಾಗಿದ್ದು ಪ್ರಜೆಗಳಿಗೆ ಪ್ರೀತಿಪಾತ್ರನಾಗಿರುವ ಶಾನುಭೋಗನು ಭೂಲೋಕದಲ್ಲಿ ಕಾಶೀಕ್ಷೇತ್ರದಂತೆ ಪರಿಶುದ್ಧನೆನಿಸುವನು.

ಟಿ || ಅಹಿತರ್-ಶತ್ರುಗಳು, ಒಕ್ಕಲು-ಪ್ರಜೆ, ಮಹಿ-ಭೂಮಿ, ವಾರಾಣಸಿ-ಕಾಶಿ.

ಅಣುಮಾತ್ರಂ ಕೊಸರಿಲ್ಲದಾಳ್ದನೆಡೆಯೊಳ್ ಲಂಚಕ್ಕೊಡಂಬಟ್ಟು ಮಾ |
ರ್ಪಣಮಂ ಕೊಂಡತಿ ವಿತ್ತಮಂ ಕೆಡಿಸಿ ಪೈಶೂನ್ಯೋಕ್ತಿಯಿಂ ದ್ರೋಹಮಂ |
ಎಣಿಸುತ್ತೆಲ್ಲರ ಬಾಳ್ಗೆ ನೀರನೆರೆದಾರುಂ ಕಾಣದೇ ಭಕ್ಷಿಪಾ !
ಗಣಕಂ ಹೆಗ್ಗಣಕಂ ಸಮಂ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ||೬೩||

ಭಾ || ಒಡೆಯನ ಬಳಿಯಲ್ಲಿ ಸ್ವಲ್ಪವೂ ಆಸೆಯನ್ನು ತೋರಿಸದೆ ಹೊರಗಡೆ ಲಂಚಕ್ಕೊಪ್ಪಿಕೊಂಡು, ತಾನು ಮಾಡುವ ಸರಕಾರದ ಕೆಲಸಕ್ಕೆ ಜನರಿಂದ ಪ್ರತಿಫಲವನ್ನು ತೆಗೆದುಕೊಂಡು ದೊರೆಗೆ ಬರುವ ಹೆಚ್ಚು ಲಾಭವನ್ನು ಕೆಡಿಸಿ, ಇತರರ ಮೇಲೆ ಚಾಡಿ ಹೇಳಿ ಅವರಿಗೆ ದ್ರೋಹಮಾಡಿ ಅವರ ಜೀವನವನ್ನು ತಪ್ಪಿಸಿ, ಯಾರೂ ಕಾಣದಂತೆ ರಾಜಾದಾಯವನ್ನು ತಾನೇ ತಿಂದುಹಾಕುವ ಗುಮಾಸ್ತೆಯು ಹೆಗ್ಗಣಕ್ಕೆ ಸಮಾನನು.

ಟಿ || ಅಣುಮಾತ್ರಂ–ಸ್ವಲ್ಪವೂ, ಕೊಸರಿಲ್ಲದೆ-(ಲಂಚದ) ಆಸೆಯನ್ನು ತೋರಿಸದೆ, ಮಾರ್ಪಣ-ಪ್ರತಿ ದ್ರವ್ಯ, ಅತಿ ವಿತ್ತ-ಹೆಚ್ಚು ಲಾಭ, ಪೈಶೂನ್ಯೋಕ್ತಿ–ಚಾಡಿಯ ಮಾತು, ಬಾಳ್ಗೆ ನೀರೆರೆದು-ಜೀವನಕ್ಕೆ ನೀರುಬಿಟ್ಟು (ಜೀವನವನ್ನು ಹಾಳುಮಾಡಿ), ಗಣಕ – ಗುಮಾಸ್ತೆ.

ಇಳೆಯಾಣ್ಮಂ ತನಗಲ್ತೆ ವೆಗ್ಗಳನೆನುತ್ತಂ ಪಾರುಪತ್ಯಂಗಳಂ |
ಖಳಗೀಯಲ್ ಸುಲಿತಿಂದು ರಾಜ್ಯವನಿತಂ ನೀವೇಕೆ ತಾವೇತಕೆಂ ||
ದುಳಿದರ್ಗೀಯದೆ ತಾನೆ ಕಾಲಯಮನಂತತ್ಯುಗ್ರಮಂ ತಾಳ್ದಿದಾ |
ದಳವಾಯೇ ಬಳಿಮಾರಿಯೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ||೬೪

ಭಾ || ದೊಡ್ಡ ಮನುಷ್ಯನೆಂದು ಭಾವಿಸಿ ನೀಚನನ್ನು ದೊರೆಯು ದಳವಾಯಿಯನ್ನಾಗಿ ಮಾಡಿ ಅವನಿಗೆ ಸರ್ವಾಧಿಕಾರವನ್ನು ಕೊಡಲು, ಅವನು ಪ್ರಜೆಗಳನ್ನು ಹಿಂಸಿಸಿ ಸುಲಿಗೆಮಾಡಿ, ತನ್ನ ಅಧಿಕಾರ ಬಲದಿಂದ ಇತರ ಅಧಿಕಾರಿಗಳನ್ನು ಬಾಯ್ಬಡಿದು ಅವರಿಗೇನನ್ನೂ ಕೊಡದೆ ಎಲ್ಲವನ್ನೂ ತಿಂದುಬಿಡುತ್ತ ಕಾಲಯಮನಂತೆ ಕ್ರೂರನಾಗಿರುವನು. ಇಂಥವನು ದಳವಾಯಿಯಲ್ಲ, ಹೆಮ್ಮಾರಿ.

ಟಿ || ಇಳೆಯಾಣ್ಮಂ–ದೊರೆ, ವೆಗ್ಗಳಂ–ದೊಡ್ಡವನು, ಪಾರುಪತ್ಯ–ಅಧಿಕಾರ (ವ್ಯವಸ್ಥೆ), ಖಳ – ನೀಚ, ಸುಲಿತಿಂದು – ತೊಂದರೆ ಕೊಟ್ಟು ತಾನು ಪ್ರಯೋಜನವನ್ನು ಹೊಂದಿ, ಕಾಲ–ಪ್ರಳಯ ಕಾಲದ.

ಒಡೆಯಂಗುತ್ಸವಮಾಗೆ ಸರ್ವ ಜನಮಾನಂದಂಗೊಳಲ್ ರಾಜ್ಯದೊಳ್ |
ಕೊಡದೊಳ್ ತುಂಬಿರೆ ಜೇನು ನಿಚ್ಚ ಪಲ ಪೈರಿಂಗುರ್ವಿ ಯಿಂಬಾಗಿರಲ್ ||
ಗಡಿ ದುರ್ಗಂಗಳು ಭದ್ರಮಾಗೆ ಧನ ಧಾನ್ಯಂ ತೀವೆ ಭಂಡಾರದೊಳ್ |
ನಡೆವಂ ಮಂತ್ರಿವರೇಣ್ಯನೈ ಹರ ಹರಾ ಶ್ರೀ ಚೆನ್ನಸೋಮೇಶ್ವರಾ ||೬೫||

ಭಾ || ದೊರೆಗೆ ಉತ್ಸಾಹವಾಗುವಂತೆಯೂ, ಪ್ರಜೆಗಳೆಲ್ಲರಿಗೂ ಆನಂದ ವುಂಟಾಗುವಂತೆಯೂ, ಜೇನು ಕೊಡವು ಯಾವಾಗಲೂ ಜೇನುತುಪ್ಪ ದಿಂದ ತುಂಬಿರುವಂತೆಯೂ, ಭೂಮಿಯು ಫಲಗಳಿಂದಲೂ, ಪೈರು ಗಳಿಂದಲೂ ಶೋಭಿಸುವಂತೆಯೂ, ರಾಜ್ಯದ ಎಲ್ಲೆಕಟ್ಟುಗಳಲ್ಲಿರುವ ಕೋಟೆಗಳು ಭದ್ರವಾಗಿರುವಂತೆಯೂ, ಭಂಡಾರದಲ್ಲಿ ಧನವೂ, ಧಾನ್ಯವೂ ತುಂಬಿರುವಂತೆಯೂ ಮಾಡುವ ಮಂತ್ರಿಯೇ ಮಂತ್ರಿ ಶ್ರೇಷ್ಠ ನೆನಿಸುವನು.

ಟಿ || ನಿಚ್ಚ-ಯಾವಾಗಲೂ, ಪಲ-ಫಲ, ಉರ್ವಿ-ಭೂಮಿ, ಇಂಬಾಗಿರು-ಶೋಭಿಸು, ಗಡಿ-ಸೇರೆ, ದುರ್ಗ-ಕೋಟೆ, ತೀವೆ-ತುಂಬಲು, ವರೇಣ್ಯ-ಶ್ರೇಷ್ಠ.

ಕಳವಂ ಕೊಂಡವನೆಯ್ದೆ ಹೆಜ್ಜೆವಿಡಿದಾ ಮರ್ಮಂಗಳಂ ಕಾಣದೇ |
ಪೊಳಲೊಳ್ ಪೊಕ್ಕರ ಪೋದರಂ ನುಡಿವ ಮಾತಂ ಕೇಳದೇ ಕಾಣದೇ ||
ಪಳಿವನ್ಯಾಯವ ನೋಡದನ್ಯರೊಳೆ ದೂರಿಟ್ಟೆಲ್ಲರಂ ಬಾಧಿಪಾ |
ತಳವಾರಂ ಬೆಳವಾರನೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ||೬೬||

ಭಾ || ಕಳ್ಳತನ ಮಾಡಿ ಓಡಿಹೋದ ಕಳ್ಳನ ಮಾರ್ಗವನ್ನು ಹಿಡಿದು ಮರ್ಮ ಗಳನ್ನು ತಿಳಿದುಕೊಳ್ಳದೆಯೂ, ಊರಿಗೆ ಬಂದವರನ್ನೂ, ಊರಿನಿಂದ ಹೋಗುವವರನ್ನೂ ಜನರು ಆಡಿಕೊಳ್ಳುವ ಮಾತುಗಳನ್ನೂ ಗಮನಿಸ ದೆಯೂ, ನಿಂದೆಯನ್ನೂ, ಅನ್ಯಾಯವನ್ನೂ ಲಕ್ಷ್ಯಮಾಡದೆ ತಪ್ಪಿಲ್ಲದವರ ಮೇಲೆ ದೂರುಹಾಕಿ ಎಲ್ಲರನ್ನೂ ಬಾಧೆಯಿಡುವ ತಳವಾರನು ನೀಚ ನೆಂದೆನಿಸುವನು.

ಟಿ || ಕಳವಂ-ಕದ್ದ ಪದಾರ್ಥವನ್ನು, ಪೊಳಲು-ಪಟ್ಟಣ, ಪಳಿವ-ನಿಂದೆ ಯನ್ನು, ಬೆಳವಾರ-ನೀಚನು.

ಶಕುನ

ಶುಕ ಶಂಖಂ ಗಜ ವಾಜಿ ವೀಣೆ ಪಶು ತಾಳಂ ಭೇರಿ ಶೋಭಾನ ಪಾ |
ಠಕ ನೃತ್ಯಂ ಗಣಿಕಾಂಗನಾ ತಳಿರುಗಳ್ ಪೂವಣ್ಣು ವಿಪ್ರದ್ವಯಂ ||
ಮುಕುರಂ ಮಾಂಸವು ಮದ್ಯತುಂಬಿದ ಕೊಡಂ ಪೆರ್ಗಿಚ್ಚನಾರ್ ಕಂಡೊಡಂ |
ಶಕುನಂ ಶೋಭನಕಾಸ್ಪದಂ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ || ೬೭ ||

ಭಾ || ಗಿಳಿ, ಶಂಖ, ಆನೆ, ಕುದುರೆ, ವೀಣೆ, ಹಸು, ತಾಳ, ಭೇರಿ, ಮಂಗಳ ಪಾಠಕರು, ನಾಟ್ಯ, ಸೂಳೆಯರು, ಚಿಗುರು, ಹೂ, ಹಣ್ಣು, ಇಬ್ಬರು ಬ್ರಾಹ್ಮಣರು, ಕನ್ನಡಿ, ಮಾಂಸ, ಹೆಂಡ ತುಂಬಿದ ಕೊಡ, ದೊಡ್ಡ ಉರಿ— ಇವು ಶುಭ ಶಕುನಗಳು.

ಟಿ || ಶುಕ-ಗಿಳಿ, ವಾಜಿ–ಕುದುರೆ, ಶೋಭಾನ ಪಾಠಕ-ಮಂಗಳವನ್ನು ಹಾಡುವವರು, ಗಣಿಕಾಂಗನಾ - ಸೂಳೆಯರು, ತಳಿರು - ಚಿಗುರು, ವಿಪ್ರದ್ವಯಂ–ಇಬ್ಬರು ಬ್ರಾಹ್ಮಣರು, ಮುಕುರಂ-ಕನ್ನಡಿ, ಪೆರ್ಗಿಚ್ಚಂ- ದೊಡ್ಡ ಉರಿಯನ್ನು, ಆಸ್ಪದಂ–ಕಾರಣ.

ಕಪಿಯುಂ ಗಾಣಿಗ ಪಾವು ಕಾಷ್ಠ ಜಿನ ತಕ್ರಂ ತೈಲಸಿಕ್ತಂ ವಿರೋ |
ಧಿಪನೊರ್ವಂ ದ್ವಿಜ ಮುಕ್ತಕೇಶಿ ಜಟಿ ರಕ್ತಂ ರಿಕ್ತಕುಂಭಂ ವಿಲಾ ||
ಪಿಪ ಭಗ್ನಾಂಗನ ಕುಷ್ಠಿಯುಂ ವಿಧವೆಯುಂ ಕೊಂದಾಟಮುಂ ಧೂಮಮುಂ |
ನಿಪುಣರ್ ಕಂಡರೆ ಪೋಗರೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ || ೬೮ ||

ಭಾ || ಕೋತಿ, ಗಾಣಿಗ, ಹಾವು, ಕಟ್ಟಿಗೆ, ಜೈನ ಸಂನ್ಯಾಸಿ, ಮಜ್ಜಿಗೆ, ಎಣ್ಣೆ ಹಚ್ಚಿಕೊಂಡಿರುವವನು, ಶತ್ರು, ಒಂಟಿ ಬ್ರಾಹ್ಮಣ, ಜುಟ್ಟು ಕೆದರಿ ಕೊಂಡಿರುವವನು, ಜಟೆಯನ್ನು ಬಿಟ್ಟುಕೊಂಡಿರುವವನು, ರಕ್ತ, ಬರಿಯ ಗಡಿಗೆ, ಅಳುತ್ತಿರುವ ಅಂಗಹೀನ, ಕುಷ್ಠರೋಗವುಳ್ಳವನು, ವಿಧವೆ, ಕೊಂದಾಟ, ಹೊಗೆ—ಇವನ್ನು ಕಂಡರೆ (ಅಪಶಕುನವಾದುದರಿಂದ) ತಿಳಿದವರು ಮುಂದೆ ಹೋಗರು.

ಟಿ || ಪಾವು–ಹಾವು, ಕಾಷ್ಠ-ಸೌದೆ, ತಕ್ರಂ–ಮಜ್ಜಿಗೆ, ತೈಲಸಿಕ್ತಂ–ಎಣ್ಣೆ ಹಚ್ಚಿಕೊಂಡಿರುವವನು, ವಿರೋಧಿಪಂ–ಶತ್ರು, ಒರ್ವಂ ದ್ವಿಜ–ಒಂಟಿ ಬ್ರಾಹ್ಮಣ, ಮುಕ್ತ–ಬಿಚ್ಚಿಕೊಂಡಿರುವ, ಜಟಿ–ಜಟೆಯನ್ನು ಬಿಟ್ಟಿರುವವನು, ರಿಕ್ತ ಕುಂಭ–ಬರಿಯ ಕೊಡ, ವಿಲಾಪಿಪ-ಅಳುತ್ತಿರುವ, ಭಗ್ನಾಂಗನ – ಅಂಗಹೀನನನ್ನು, ಧೂಮ - ಹೊಗೆ, ನಿಪುಣರ್- ತಿಳಿದವರು.

ಸ್ವಪ್ನ

ಕೊಳನಂ ತಾವರೆಯುಂ ತಳಿರ್ತ ವನಮುಂ ಪೂದೋಟಮುಂ ವಾಜಿಯುಂ ||
ಗಿಳಿಯುಂ ಬಾಲ ಮರಾಳನಂ ಬಸವನಂ ಬೆಳ್ಳಕ್ಕಿಯುಂ ಛತ್ರಮುಂ ||
ತಳಿರಂ ಪೂರ್ಣ ತಟಾಕಮುಂ ಕುಮುದಮುಂ ದೇವರ್ಕಳಂ ತುಂಬಿಯುಂ |
ತಿಳಿಯಲ್ ಸ್ವಪ್ನದಿ ಲೇಸೆಲ್ಲೈ ಹರಹರಾ ಶ್ರೀ ಚೆನ್ನ ಸೋಮೇಶ್ವರಾ || ೧೯ ||

ಭಾ || ಕೊಳ, ತಾವರೆ, ಚಿಗುರಿದ ವನ, ಹೂದೋಟ, ಕುದುರೆ, ಗಿಳಿ, ಹಂಸಪಕ್ಷಿಯ ಮರಿ, ಬಸವ, ಬಿಳಿಯ ಹಕ್ಕಿ, ಛತ್ರ, ಚಿಗುರು, ತುಂಬಿದ ಕೆರೆ, ಬಿಳಿಯ ನೈದಿಲೆ, ದೇವತೆಗಳು, ತುಂಬಿ—ಇವನ್ನು ಸ್ವಪ್ನದಲ್ಲಿ ಕಂಡರೆ ಒಳ್ಳೆಯದು.

ಟಿ || ತಳಿರ್ತ – ಚಿಗುರಿದ, ಮರಾಳ–ಹಂಸ ಪಕ್ಷಿ, ಬೆಳ್ವಕ್ಕಿ - ಬಿಳಿಯ ಹಕ್ಕಿ, ಪೂರ್ಣ ತಟಾಕ–ತುಂಬಿದ ಕೆರೆ, ಕುಮುದ - ಬಿಳಿಯ ನೈದಿಲೆ.

ಹಣಮುಂ ನೆತ್ತರನೆಳ್ಳ ಕೋಣ ಕುರಿಯುಂ ಕೈಯಾಯುಧಂ ಬೀಳ್ವುದಂ |
ಕಣನಂ ಲುಬ್ಧಕನಂ ವಿಕಾರ ತನುವಂ ಮೇವಾಡನುಂ ಪತ್ತುವಂ ||
ದಣಮುಂ ಕೆಂಪಿನ ಪೂವನೆಣ್ಣೆದಲೆ ನೂತ್ನಾಗಾರಮುಂ ದೈತ್ಯರಂ |
ಕನಸೊಳ್ ಕಾಣಲು ಬಾರದೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ || ೨೦ ||

ಭಾ || ಹಣ, ರಕ್ತ, ಎಳ್ಳು, ಕೋಣ, ಕುರಿ, ಕೈಯಲ್ಲಿರುವ ಆಯುಧವು ಬೀಳುವುದು, ಯುದ್ಧರಂಗ, ಬೇಡರವ, ಅಂಗಹೀನನು, ಮೇಯುತ್ತಿರುವ ಆಡು, ಪಲ್ಲಕ್ಕಿ, ಕೆಂಪು ಹೂ, ಎಣ್ಣೆ ಹಚ್ಚಿಕೊಂಡಿರುವ ತಲೆ, ಹೊಸ ಮನೆ, ರಾಕ್ಷಸರು—ಇವನ್ನು ಕನಸಿನಲ್ಲಿ ನೋಡಿದರೆ ಕೇಡಾಗುವುದು.

ಟಿ || ನೆತ್ತರು - ರಕ್ತ, ಎಳ್ಳ–ಎಳ್ಳನ್ನು, ಕಣ - ಯುದ್ಧರಂಗ, ಲುಬ್ಧಕ– ಬೇಡರವ, ಮೇವಾಡನುಂ – ಮೇಯುತ್ತಿರುವ ಆಡನ್ನು, ಅಂದಣ – ಪಲ್ಲಕ್ಕಿ, ನೂತ್ನಾಗಾರ - ಹೊಸ ಮನೆ, ದೈತ್ಯ–ರಾಕ್ಷಸ.

ವೇಶ್ಯಾ ಪದ್ಧತಿ

ಕಡು ಮುಪ್ಪಾಗಿರೆ ಕುಂಟನಾಗೆ ಕುರುಡಂ ತಾನಾಗೆ ಯೆತ್ತೇರಿದಾ ।
ಮುಡುಕಂ ಮೂಕನು ಮೊಂಡ ಲಂಡ ಕಿವುಡಂ ಚಂಡಾಲ ತಾನಾದೊಡಂ ।
ಸುಡುಮೆಯ್ ಕುಷ್ಠ ಶರೀರಿಯಾಗಲೊಲಿವರ್ ಪೊನ್ನಿತ್ತೊಡಂ ಸೂಳೆಯರ್ ।
ಕೊಡುಗೈ ವೇಶ್ಯೆಯ ವಶ್ಯವೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ॥ ೭೧ ॥

ಭಾ ॥ ಮುದುಕ, ಕುಂಟ, ಕುರುಡ, ಎತ್ತಿನಮೇಲೆ ಕುಳಿತುಬರುವ ಸೊಟ್ಟ ಮೈಯುಳ್ಳವನು, ಮೂಗ, ಮೂರ್ಖ, ಹೇಡಿ, ಕಿವುಡ, ಚಂಡಾಲ, ಜ್ವರದಿಂದ ಸುಡುತ್ತಿರುವ ಮೈಯುಳ್ಳವನು, ಕುಷ್ಠರೋಗವುಳ್ಳವನು— ಇಂಥವರಲ್ಲಿ ಯಾರನ್ನೇ ಆಗಲಿ, ಹಣ ಕೊಟ್ಟ ಮಾತ್ರಕ್ಕೆ, ಸೂಳೆಯರು ಒಲಿಯುವರು.

ಟಿ ॥ ಮುಡುಕ-ಸೊಟ್ಟ ಮೈಯುಳ್ಳವನು, ಲಂಡ - ಹೇಡಿ, ಪೊನ್ನು - ಹಣ ಕೊಡುಗೈ-ಕೊಡುವ ಕೈ.

ಹಣಮುಳ್ಳಂ ಹೆಣನಾದೊಡಂ ಮಮತೆಯಿಂ ತಾನಾವಗಂ ಬಿಟ್ಟಿರಳ್ ।
ಕ್ಷಣ ಮಾತ್ರಂ ಬಲು ಬೂಟಕಂ ಗಳಪಿ ಹರ್ಷೋತ್ಸಾಹದಿಂ ಹಾಲ ಮುಂ ॥
ದಣ ಬೆಕ್ಕಾಡುವೊಲಾಡಿಕೊಂಡು ಧನಮುಂ ಪೋಗಲ್ಕೆ ಮಾತಾಡಳ್ಳೆ ।
ಗಣಿಕಾಸ್ತ್ರೀ ಗುಣವೇತಕ್ಕೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ॥ ೭೨ ॥

ಭಾ ॥ ಹಣವಿರುವವನು ಹೆಣದಂತೆ ಅವಲಕ್ಷಣವಾಗಿದ್ದರೂ ಸೂಳೆಯು ಅವನನ್ನು ಯಾವಾಗಲೂ ಬಿಟ್ಟಿರದೆ ಪ್ರೀತಿಯನ್ನು ತೋರಿಸುತ್ತಿರುವಳು ; ಬೂಟಾಟಿಕೆಯ ಮಾತುಗಳನ್ನಾಡಿ ಅವನ ಮನಸ್ಸಿಗೆ ಬಹಳ ಸಂತೋಷ ವನ್ನು ಹುಟ್ಟಿಸಿ ಹಾಲ ಮುಂದಣ ಬೆಕ್ಕು ಆಡುವಂತೆ ವಿನೋದವಾಡು ತ್ತಿರುವಳು. ಅವನಲ್ಲಿ ಹಣವು ಮುಗಿದ ಕೂಡಲೆ ಅವನೊಡನೆ ಮಾತನ್ನೂ ಆಡಳು. ಸೂಳೆಯ ಗುಣವೇ ಇಂತಹುದು.

ಟಿ ॥ ಬೂಟಕಂ-ಬೂಟಾಟಿಕೆಯ ಮಾತು, ಗಳಪಿ-ಹರಟಿ, ಗಣಿಕಾ ಸ್ತ್ರೀ- ಸೂಳೆ.

ಕೊರಚಾಡೆಲ್ಲರ ಮುಂದೆ ರಚ್ಚೆಗೆಳೆಯುತ್ತಂ ಕಿತ್ತು ಮೆಯ್ಯೆಲ್ಲವಂ |
ಹರಿತಿಂದುಳ್ಳ ಸುವಸ್ತುವಂ ಕಡೆಯೊಳೊರ್ವಂಗಿತ್ತು ತಾಂ ಭಾಷೆಯಂ ||
ಬರಿಗಂಟಿಕ್ಕುವನೆಂದು ತಾಯ ಹೊಸೆಬಿಟ್ಟೆಳ್ಬಟ್ಟ ಕೊಂಡಾಡುತಂ |
ತಿರುವಳ್ ತಾಂ ನೆರೆ ಸೂಳೆಯೈ ಹರಹರಾ ಶ್ರೀ ಚೆನ್ನ ಸೋಮೇಶ್ವರಾ ||೭೩||

ಭಾ || ಎಲ್ಲರ ಮುಂದೆಯೂ ರಗಳೆಮಾಡಿ ತನ್ನ ನಾಯಕನನ್ನು ಅಲ್ಲಗಳೆದು ಅವನ ಮೈಯೆಲ್ಲವನ್ನೂ ಕಿತ್ತು ಅವನಲ್ಲಿದ್ದ ಒಳ್ಳೆಯ ವಸ್ತುಗಳನ್ನೆಲ್ಲ ಅಪಹರಿಸಿ ತಿಂದು ಕೊನೆಗೆ ಮತ್ತೊಬ್ಬನಿಗೆ ಮಾತು ಕೊಟ್ಟು ಮೊದಲಿನವನು ಹಣವಿಲ್ಲದವನೆಂದು ತನ್ನ ತಾಯಿಯನ್ನು ಅವನಮೇಲೆ ಜಗಳಕ್ಕೆ ಬಿಟ್ಟು ಅವನನ್ನು ಓಡಿಸಿ, ಹೊಸಬನನ್ನು ಕೊಂಡಾಡುತ್ತಿರುವ ಸೂಳೆಯು ಬಹಳ ಗಟ್ಟಿಗಳು.

ಟಿ || ಕೊರಚಾಡಿ-ಅಲ್ಲಗಳೆದು, ರಚ್ಚೆ-ರಗಳೆ, ಹರಿ ತಿಂದು-ಅಪಹರಿಸಿ ತಿಂದು, ಸುವಸ್ತು-ಒಳ್ಳೆಯ ಪದಾರ್ಥ, ಹೊಸೆಬಿಟ್ಟು-ಜಗಳಕ್ಕೆ ಬಿಟ್ಟು, ಎಳ್ಬಟ್ಟ-ಎಬ್ಬಿಸಿ ಅಟ್ಟಿ, ನೆರೆ-ಚಾತುರ್ಯವುಳ್ಳ.

ಪರಸೇವೆ

[22]ಹರತಾಂ ಕುಂಟಣಿಯಾಗೆ ನಂಬಿಯೊರೆದಂ[2] ಚಂದ್ರಾವತೀ ದೇವಿಗಂ |
ಕರ ಕಷ್ಟಂಗಳ ಮಾಡಿದಂ ದ್ವಿಜ [14]ವಿರಾಟಂ ಧರ್ಮಭೂಪಾಲನಂ ||
ಶಿರಮಂ ಚಿಟ್ಟೆಯೊಳಿಟ್ಟ [14]ನಗ್ನಿಜೆಗೆ ಬಂದಾಪತ್ತನೇನೆಂಬೆನಾಂ |
ಪರಸೇವಾ ಸ್ಥಿತಿ ಕಷ್ಟವೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ||೭೪||

ಭಾ || ಭಕ್ತಪರಾಧೀನನಾದ ಶಿವನು ನಂಬಿಯೆಂಬ ತನ್ನ ಭಕ್ತನ ಹೇಳಿಕೆಯಂತೆ ಅವನಿಗೆ ತಲೆಹಿಡುಕನಾದನು. ಕಾಲಕೌಶಿಕನೆಂಬ ಬ್ರಾಹ್ಮಣನು ಹರಿಶ್ಚಂದ್ರನ ಹೆಂಡತಿ ಚಂದ್ರಮತೀ ದೇವಿಗೆ ಅನೇಕ ತೊಂದರೆಗಳನ್ನು ಕೊಟ್ಟನು. ವಿರಾಟರಾಜನು ಧರ್ಮರಾಜನ ತಲೆಯನ್ನು ದಾಳದಿಂದ ಹೊಡೆದನು. ದ್ರೌಪದಿಯು ಅನೇಕ ಕಷ್ಟಗಳಿಗೀಡಾದಳು. ಆದಕಾರಣ ಪರರ ಸೇವೆ ಮಾಡಿಕೊಂಡಿರುವುದು ಬಹಳ ಕಷ್ಟವಾದದ್ದು.

ಟಿ || ಕುಂಟಣಿ–ತಲೆಹಿಡುಕ, ಚಿಟ್ಟೆ-ಪಗಡೆಯ ಆಟದ ದಾಳ, ಅಗ್ನಿಜೆ–ದ್ರೌಪದಿ.

2,14,22–ಈ ಸಂಖ್ಯೆಗಳು ಮುಂದೆ ಕೊಟ್ಟಿರುವ ಆಯಾ ಕಥೆಗಳನ್ನು ಸೂಚಿಸುವುವು.

ಪರರಾಯರ್ಕ್ಕಳ ಸೇನೆಯಂ ಗೆಲಿದು ಮತ್ತೇಭಂಗಳಂ ಸೀಳ್ದುತ
ನ್ನರಿಯೆಂದೆಂಬರನೊಕ್ಕಲಿಕ್ಕುವ ಭಟರ್ಗಂ ಗಂಜಿ ಕೀಳ್ನಾಯ್ಗಳಂ ||
ನಿರುತಂ ಭೋಜ್ಯ ವಿಶೇಷಮಿತ್ತು ಪೊರೆವರ್ ಮಾನಂಗಳೆಲ್ಲಿರ್ಪುವೈ |
ಪರಪೋಷ್ಯಕ್ಕೊಳಗಾಗಿರಲ್ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ||೭೫||

ಭಾ || ಶತ್ರುರಾಜರ ಚತುರಂಗ ಬಲವನ್ನು ಯುದ್ಧದಲ್ಲಿ ನಾಶಮಾಡಿ ತಮಗೆ ಜಯವನ್ನುಂಟುಮಾಡುವ ಸಾಮರ್ಥ್ಯವುಳ್ಳ ಭಟರಿಗೆ ಗಂಜಿಯನ್ನೂ ತಮ್ಮ ಬಳಿಯಲ್ಲಿರುವ ನೀಚಪ್ರಾಣಿಗಳಾದ ನಾಯಿಗಳಿಗೆ ಯಾವಾಗಲೂ ಮೃಷ್ಟಾನ್ನ ಭಕ್ಷ್ಯಭೋಜ್ಯಗಳನ್ನೂ ದೊರೆಗಳು ಕೊಡುವರು. ಆದುದ ರಿಂದ ಜೀವನಕ್ಕಾಗಿ ಮತ್ತೊಬ್ಬನ ಅಧೀನದಲ್ಲಿರುವವನಿಗೆ ಮಾನವು ದೊರೆಯದು.

ಟಿ || ಮತ್ತೇಭ-ಮದಿಸಿದ ಆನೆ, ಒಕ್ಕಲಿಕ್ಕು-ನಾಶಮಾಡು, ಭಟ-ಸೈನಿಕ, ಭೋಜ್ಯ ವಿಶೇಷ-ಉತ್ತಮವಾದ ಆಹಾರಪದಾರ್ಥ, ಪರ ಪೋಷ್ಯ-ಇತರರ ಪೋಷಣೆ.

ಸಾಮಾನ್ಯ ನೀತಿ

ಅರೆಯಂ ಸೀಳುವೊಡಾನೆ ಮೆಟ್ಟಲಹುದೇ ಚಾಣಂಗಳಿಂದಲ್ಲದೇ |
ಕಿರಿದಾಗಿರ್ದೊಡದೇನುಪಾಯಪರನೊರ್ವಂ ಕೋಟಿಗೀಡಕ್ಕು ಹೆ ||
ಮ್ಮರನಿರ್ದೇನದರಿಂದಲೆತ್ತಬಹುದೇ ಬಲ್ಭಾರಮಂ ಸನ್ನೆ ಸಾ |
ವಿರ ಕಾಲಾಳಿನ ಸತ್ವವೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ||೭೬||

ಭಾ || ಬಂಡೆಯನ್ನು ಸೀಳಬೇಕಾದರೆ ಸಣ್ಣದಾಗಿರುವ ಉಕ್ಕಿನ ಉಳಿಯಿಂ ದಲ್ಲದೆ ದೊಡ್ಡ ಶರೀರವುಳ್ಳ ಆನೆಯ ತುಳಿತದಿಂದ ಸಾಧ್ಯವಲ್ಲ. ಉಪಾಯ ಬಲ್ಲವನು ಒಬ್ಬನಾಗಿದ್ದರೂ ಸಾಮಾನ್ಯರಾದ ಕೋಟಿ ಜನಕ್ಕೆ ಸಮನಾಗು ವನು. ಹೆಚ್ಚಾದ ಭಾರವನ್ನು ಎತ್ತಬೇಕಾದರೆ ದೊಡ್ಡ ಮರದಿಂದ ಸಾಧ್ಯವಲ್ಲ; ಭಾರವನ್ನೆತ್ತುವುದಕ್ಕಾಗಿ ಉಪಯೋಗಿಸುವ ಸನ್ನೆಗೆ ಸಾವಿರ ಮಂದಿಯಷ್ಟು ಬಲವಿರುವುದು.

ಟಿ || ಅರೆ-ಬಂಡೆ, ಚಾಣ-ಉಕ್ಕಿನ ಉಳಿ, ಈಡು-ಸಮ, ಹೆಮ್ಮರ-ದೊಡ್ಡ ಮರದ ದಿಮ್ಮಿ, ಸತ್ವ-ಬಲ.

ಇರಿಯಲ್ಬಲ್ಲೊಡೆ ವೀರನಾಗು ಧರೆಯೊಳ್ ನಾನಾ ಚಮತ್ಕಾರಮಂ ।
ಅರಿಯಲ್ಬಲ್ಲೊಡೆ ಮಂತ್ರಿಯಾಗು ವಿಭುವಾಗಾರೆಂದೊಡಂ ಕೋಪಮಂ ।
ತೊರೆಯಲ್ಬಲ್ಲೊಡೆ ಯೋಗಿಯಪ್ಪುದರಿ ಷಡ್ವರ್ಗಂಗಳಂ ಗೆಲ್ವೊಡೇ ।
ತೆರ ಬಲ್ಲಪೊರ್ಣೆಯಪ್ಪುದೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ॥ ೭೭ ॥

ಭಾ ॥ ಯುದ್ಧಮಾಡುವುದಕ್ಕೆ ತಿಳಿದಿರುವವನೇ ಭಟನಾಗಬೇಕು ; ನಾನಾ ವಿಧವಾದ ಚಮತ್ಕಾರವನ್ನು ತಿಳಿದವನೇ ಮಂತ್ರಿಯಾಗಬೇಕು ; ಯಾರು ಏನೆಂದರೂ ಕೋಪಿಸಿಕೊಳ್ಳದೆ ತಾಳ್ಮೆಯಿಂದಿರುವವನೇ ದೊರೆಯಾಗಬೇಕು ; ಕಾಮ ಕ್ರೋಧ ಮೊದಲಾದ ಅರಿಷಡ್ವರ್ಗವನ್ನು ಗೆಲ್ಲುವ ಸಾಮರ್ಥ್ಯವುಳ್ಳವನೇ ಯೋಗಿಯಾಗಬೇಕು ; ತನ್ನ ಕೈಯಿಂದ ದಂಡ ತೆರುವ ಯೋಗ್ಯತೆಯುಳ್ಳವನೇ ಮತ್ತೊಬ್ಬರು ಮಾಡುವ ಸಾಲಕ್ಕೆ ಹೊಣೆಯಾಗಬೇಕು.

ಟಿ ॥ ವಿಭು–ಒಡೆಯ, ದೊರೆ ; ಅರಿಷಡ್ವರ್ಗ–ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೆಂಬ ಆರು ಶತ್ರುಗಳು ; ತೆರು-ಕೊಟ್ಟು ತೀರಿಸು.

ಮದನಂಗಂಜುವ ಯೋಗಿಯೇ ಮನೆಯ ಪೆಣ್ಣಿಂಗಂಜುವಂ ಗಂಡುಸೇ ।
ಮದಕಂಜೋಡುವುದಾನೆಯೇ ನಟನದೊಳ್ ಸೋತೋಡುವಳ್ ಸೂಳೆಯೇ ॥
ಬುಧನೇ ತರ್ಕದೊಳಂಜುವಂ ಶರದ ಘಾತಕ್ಕಂಜೆ ದಿವ್ಯಾಶ್ವವೇ ।
ಕದನಕ್ಕಂಜುವ ವೀರನೇ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ॥ ೭೮ ॥

ಭಾ ॥ ಮನ್ಮಥನಿಗೆ ಹೆದರುವವನು ಯೋಗಿಯಲ್ಲ, ಹೆಂಡತಿಗೆ ಹೆದರುವವನು ಗಂಡುಸಲ್ಲ, ಮದದಾನೆಗೆ ಹೆದರಿ ಓಡಿಹೋಗುವುದು ಆನೆಯಲ್ಲ, ನಾಟ್ಯ ಮಾಡುವುದಕ್ಕೆ ಕೈಯಲ್ಲಾಗದೆ ಓಡಿಹೋಗುವವಳು ಸೂಳೆಯಲ್ಲ, ವಾದ ಮಾಡುವುದಕ್ಕೆ ಹೆದರುವವನು ವಿದ್ವಾಂಸನಲ್ಲ, ಬಾಣದ ಪೆಟ್ಟಿಗೆ ಹೆದರುವುದು ಉತ್ತಮ ಜಾತಿಯ ಕುದುರೆಯಲ್ಲ, ಯುದ್ಧಕ್ಕೆ ಹೆದರುವವನು ವೀರನಲ್ಲ.

ಟಿ ॥ ನಟನ–ಕುಣಿತ, ಶರದ ಘಾತ-ಬಾಣದ ಪೆಟ್ಟು, ಕದನ-ಯುದ್ಧ.

ಕೊಡಬೇಕುತ್ತಮನಾದವಂಗೆ ಮಗಳಂ ಸತ್ಪಾತ್ರಕಂ ದಾನಮಂ |
ಬಿಡಬೇಕೈ ಧನಲೋಭ ಬಂಧುಜನರೊಳ್ ದುಷ್ಟಾತ್ಮರೊಳ್ ಗೋಷ್ಠಿಯಂ ||
ಇಡಬೇಕೀಶ್ವರನಲ್ಲಿ ಭಕ್ತಿರಸಮಂ ವಿಶ್ವಾಸಮಂ ಸ್ವಾಮಿಯೊಳ್ |
ಇಡಬೇಕಿದ್ದುಣಬೇಕೆಲೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ || ೭೯ ||

ಭಾ || ಮಗಳನ್ನು ಯೋಗ್ಯನಾದ ವರನಿಗೂ, ದಾನವನ್ನು ತಕ್ಕ ಅರ್ಹತೆಯುಳ್ಳವನಿಗೂ ಕೊಡಬೇಕು. ನಂಟರ ವಿಚಾರದಲ್ಲಿ ದುಡ್ಡಿನಾಶೆಯನ್ನೂ, ದುಷ್ಟರಲ್ಲಿ ಸಹವಾಸವನ್ನೂ ಬಿಡಬೇಕು. ಈಶ್ವರನಲ್ಲಿ ಭಕ್ತಿಯನ್ನೂ, ತನ್ನ ಒಡೆಯನಲ್ಲಿ ನಂಬಿಕೆಯನ್ನೂ ಇಟ್ಟುಕೊಂಡಿರಬೇಕು. ತನಗೆ ದೇವರು ಕೊಟ್ಟದ್ದಿರುವಲ್ಲಿ ಇತರರಿಗೂ ಊಟಕ್ಕಿಟ್ಟು ತಾನೂ ಊಟಮಾಡಬೇಕು.

ಟಿ || ಸತ್ಪಾತ್ರ-ದಾನಕ್ಕೆ ಯೋಗ್ಯ, ವಿಶ್ವಾಸ-ನಂಬಿಕೆ.

ಕ್ಷಿತಿಯಂ ಶೋಧಿಸಲಕ್ಕು ವೀಚಿಗಳ ಲೆಕ್ಕಂ ಮಾಡಲಕ್ಕಾಗಸೋ |
ನ್ನತಿಯಂ ಕಾಣಲುಬರ್ಕು ಸಾಗರಗಳೇಳಂ ದಾಂಟಲಕ್ಕುಂ ನಭೋ ||
ಗತಿಯಂ ಸಾಧಿಸಲಕ್ಕು ಬೆಟ್ಟಗಳ ಚೂರ್ಣಂ ಮಾಡಲಕ್ಕೀಕ್ಷಿಸಲ್ |
ಸತಿಯಾ ಚಿತ್ತವಭೇದ್ಯವೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ || ೮೦ ||

ಭಾ || ಭೂಮಿಯನ್ನು ಶೋಧಿಸಿ ಅದರಲ್ಲಿ ಏನಿದೆಯೆಂಬುದನ್ನು ತಿಳಿಯಬಹುದು, ಸಮುದ್ರದ ಅಲೆಗಳನ್ನು ಲೆಕ್ಕಮಾಡಬಹುದು, ಆಕಾಶದ ಎತ್ತರವೆಷ್ಟೆಂಬುದನ್ನು ತಿಳಿಯಬಹುದು, ಸಪ್ತ ಸಮುದ್ರಗಳನ್ನೂ ದಾಟಬಹುದು, ಆಕಾಶದಲ್ಲಿ ಸಂಚಾರ ಮಾಡುವುದನ್ನು ಕಲಿಯಬಹುದು, ಬೆಟ್ಟಗಳನ್ನು ಒಡೆದು ಪುಡಿಮಾಡಬಹುದು ; ಆದರೆ ಸ್ತ್ರೀಯರ ಮನಸ್ಸಿನ ಅಭಿಪ್ರಾಯವನ್ನು ತಿಳಿಯುವುದು ಮಾತ್ರ ಸಾಧ್ಯವಲ್ಲ.

ಟಿ || ಕ್ಷಿತಿ-ಭೂಮಿ, ವೀಚಿ-ಅಲೆ, ತೆರೆ ; ನಭೋಗತಿ-ಆಕಾಶದಲ್ಲಿ ಸಂಚಾರ, ಅಭೇದ್ಯ-ತಿಳಿಯುವುದಕ್ಕೆ ಅಸಾಧ್ಯವಾದುದು.

[4]ರಣದೊಳ್ ಶಕ್ರನ ತೇರನೇರಿದ ಮಹಾ ಶೈಲಾಳಿ ಬೆಂಬತ್ತ ಮಾ |
ರ್ಗಣದಿಂ ಚಿಮ್ಮಿದ ಸಪ್ತ ಸಾಗರಗಳಂ ದಿಕ್ಕೆಂಟು ಮೂಲೋಕಮಂ ||
ಕ್ಷಣದೊಳ್ ವೆಚ್ಚವಮಾಡಿ ಬೇಡೆ ಬಲಿ ಸಾಲಕ್ಕಂಜಿ ಬಿಟ್ಟೋಡಿದಂ |
ರುಣಭಾರಕ್ಕೆಣೆ ಯಾವುದೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ||೮೧||

ಭಾ || ಬಲಿಚಕ್ರವರ್ತಿಯು ಯುದ್ಧದಲ್ಲಿ ಇಂದ್ರನನ್ನು ಗೆದ್ದು ಅವನ ರಥವನ್ನು ಹತ್ತಿದನು; ದೊಡ್ಡ ಬೆಟ್ಟಗಳ ಗುಂಪು ಹಿಂದಟ್ಟಿ ಬರಲು ಅವನ್ನು ತನ್ನ ಬಾಣದಿಂದ ಚಿಮ್ಮಿದನು; ಇಂಥವನು ಮೂರಡಿಯ ಭೂಮಿಯನ್ನು ಬೇಡಿದ ವಾಮನನಿಗೆ ಸಪ್ತ ಸಮುದ್ರಗಳನ್ನೂ, ಎಂಟು ದಿಕ್ಕುಗಳನ್ನೂ, ಮೂರು ಲೋಕಗಳನ್ನೂ ಕ್ಷಣಮಾತ್ರದಲ್ಲಿ ದಾನಮಾಡಿಯೂ ಸಾಲವನ್ನು ತೀರಿಸುವುದಕ್ಕೆ ಶಕ್ತಿಯಿಲ್ಲದೆ ಹೆದರಿ ಪಾತಾಳಕ್ಕೆ ಓಡಿಹೋದನು. ಆದಕಾರಣ ಸಾಲಕ್ಕಿಂತ ಹೆಚ್ಚಾದ ಭಾರವು ಯಾವುದೂ ಇಲ್ಲ.

ಟಿ || ಶಕ್ರ–ಇಂದ್ರ, ಮಾರ್ಗಣ-ಬಾಣ.

ಪೊರಬೇಡಂಗಡಿ ಸಾಲ ವೂರ ಹೊಣೆಯಂ ಪಾಪಂಗಳಂ ನಿಂದೆಯಂ |
ಮರೆ ಬೇಡಾತ್ಮಜ ಸತ್ಕಳತ್ರ ಸಖರೊಳ್ ನ್ಯಾಯಂಗಳೊಳ್ ಸತ್ಯದೊಳ್ ||
ಸೆರೆ ಬೇಡರ್ಭಕ ಪಕ್ಷಿ ವೃದ್ಧ ತರುಣೀ ಗೋ ವಿಪ್ರ ದೀನರ್ಕಳಂ |
ತೆರೆಬೇಡೊತ್ತೆಗೆ ಬಡ್ಡಿಯಂ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ||೮೨||

ಭಾ || ಅಂಗಡಿಯ ಸಾಲವನ್ನೂ, ಊರಿನವರಿಗೆಲ್ಲ ಹೊಣೆಯಾಗುವುದನ್ನೂ, ಪಾಪಗಳನ್ನೂ, ನಿಂದೆಯನ್ನೂ ಹೊತ್ತುಕೊಳ್ಳಬೇಡ; ಮಗನಲ್ಲಿಯೂ, ಯೋಗ್ಯಳಾದ ಹೆಂಡತಿಯಲ್ಲಿಯೂ, ಸ್ನೇಹಿತರಲ್ಲಿಯೂ ಮರೆಮಾಚ ಬೇಡ; ನ್ಯಾಯವನ್ನೂ, ಸತ್ಯವನ್ನೂ ಮುಚ್ಚಿಡಬೇಡ, ಎಳೆಯ ಮಕ್ಕಳನ್ನೂ, ಹಕ್ಕಿಗಳನ್ನೂ, ಮುದುಕರನ್ನೂ, ಹೆಂಗಸರನ್ನೂ ಹಸುಗಳನ್ನೂ, ಬ್ರಾಹ್ಮಣರನ್ನೂ, ದಿಕ್ಕಿಲ್ಲದವರನ್ನೂ ಸೆರೆಹಾಕಬೇಡ; ಒಡವೆಯನ್ನು ಒತ್ತೆಯಿಟ್ಟು ಸಾಲಮಾಡಿ ಬಡ್ಡಿಯನ್ನು ತೆರಬೇಡ.

ಟಿ || ಆತ್ಮಜ-ಮಗ, ಸತ್ಕಳತ್ರ–ಒಳ್ಳೆಯ ಹೆಂಡತಿ, ಸಖ – ಸ್ನೇಹಿತ, ಅರ್ಭಕ - ಮಗು.

4—ಈ ಸಂಖ್ಯೆ ಮುಂದೆ ಕೊಟ್ಟಿರುವ ಆ ಕಥೆಯನ್ನು ಸೂಚಿಸುವುದು.

[7]ಅನುಮಾನಂಬಡೆ ರಾಮನಗ್ನಿಯೊಳಪೊಕ್ಕಾ ಸೀತೆ ತಾನ್ಯೈತರಲ್ ।
[23]ವನದೊಳ್ ನೇರಿಳೆವಣ್ಣನಗ್ನಿಜೆ ಬಹು ಪ್ರಖ್ಯಾತಿಯಿಂ ಪತ್ತಿಸಲ್ ॥
[9]ದನುಜಾರಾತಿ ಸ್ಯಮಂತ ರತ್ನವ ನೃಪಂಗೀಯಲ್ಕೆ ದೂರ್ ಪೋದುದೇ ।
ಜನರಂ ಮೆಚ್ಚಿಸಲಾಗದೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ॥೬೩॥

ಭಾ ॥ ಸೀತಾದೇವಿಯು ರಾವಣನ ಬಳಿಯಲ್ಲಿ ಬಹುಕಾಲವಿದ್ದಳೆಂದು ಆಕೆಯನ್ನು ಸ್ವೀಕರಿಸುವುದಕ್ಕೆ ರಾಮನು ಸಂಶಯಪಡಲು ಆ ಸಂಶಯವನ್ನು ಪರಿಹಾರ ಮಾಡುವುದಕ್ಕಾಗಿ ಸೀತೆಯು ಅಗ್ನಿಪ್ರವೇಶಮಾಡಿ ಶುದ್ಧಳೆಂದೆನಿಸಿಕೊಂಡಳು; ಮರದಿಂದ ಕೊಯ್ದ ನೇರಿಲೆ ಹಣ್ಣನ್ನು ದ್ರೌಪದಿಯು ಮರಳಿ ಮರಕ್ಕೆ ಸೇರಿಕೊಳ್ಳುವಂತೆ ಮಾಡಿ ಮಹಾಪತಿವ್ರತೆಯೆಂದೆನಿಸಿಕೊಂಡಳು; ನಷ್ಟವಾಗಿ ಹೋಗಿದ್ದ ಸ್ಯಮಂತಕ ಮಣಿಯನ್ನು ಶ್ರೀ ಕೃಷ್ಣನು ತಂದು ಸತ್ರಾಜಿತನಿಗೆ ಸಭೆಯಲ್ಲಿ ಕೊಟ್ಟು ತನ್ನ ಮೇಲೆ ಬಂದಿದ್ದ ಅಪವಾದವು ಸುಳ್ಳೆಂದು ತೋರಿಸಿದನು. ಹೀಗೆ ಮಾಡಿದರೂ ಇವರುಗಳ ಮೇಲೆ ಬಂದಿದ್ದ ದೂರು ಕೊನೆಗೂ ಹೋಗಲಿಲ್ಲ. ಆದಕಾರಣ ಜನರನ್ನು ಮೆಚ್ಚಿಸುವುದು ಯಾರಿಂದಲೂ ಸಾಧ್ಯವಿಲ್ಲ.

ಟಿ ॥ ಅಗ್ನಿಜೆ–ದ್ರೌಪದಿ, ದನುಜಾರಾತಿ-(ರಾಕ್ಷಸವೈರಿ)–ಕೃಷ್ಣ, ಪತ್ತಿಸಲ್-ಹತ್ತಿಕೊಳ್ಳುವಂತೆ ಮಾಡಲು.

[4]ಅಡಿಮೂರೀಯೆನಲೀಯನೇ ಬಲಿನೃಪಂ ಮೂಲೋಕಮಂ [24]ದೇಹಮಂ ।
ಕಡಿದೀಯೆಂದೆನೆ ಪಕ್ಕಿಗೀಯನೆ ನೃಪಂ ತನ್ನಂಗವಾದ್ಯಂತಮಂ ॥
[25]ಮೃಡ ಬೇಕೆಂದೆನೆ ಸೀಳ್ದು ತನ್ನ ಸುತನಂ ನೈವೇದ್ಯಮಂ ಮಾಡನೇ ॥
ಕೊಡುವರ್ಗಾವುದು ದೊಡ್ಡಿತ್ತೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ॥೬೪॥

ಭಾ ॥ ವಾಮನನು ಮೂರು ಹೆಜ್ಜೆಯಷ್ಟು ನೆಲವನ್ನು ಬೇಡಲು ಬಲಿಚಕ್ರವರ್ತಿಯು ಮೂರು ಲೋಕವನ್ನೂ ಕೊಡಲಿಲ್ಲವೆ? ಗಿಡಗದ ರೂಪದಿಂದ ಬಂದ ಇಂದ್ರನು ಶಿಬಿಚಕ್ರವರ್ತಿಯ ದೇಹದಿಂದ ಮಾಂಸವನ್ನು ಕೊಯ್ದು ಕೊಡೆಂದು ಕೇಳಲು ಆತನು ತನ್ನ ದೇಹವನ್ನೆಲ್ಲ ಕೊಟ್ಟುಬಿಡಲಿಲ್ಲವೆ? ಈಶ್ವರನು ತನ್ನ ಆಹಾರಕ್ಕಾಗಿ ಸಿರಿಯಾಳನ ಮಗನ ಮಾಂಸವನ್ನು ಕೇಳಲು ಸಿರಿಯಾಳನು ಅದನ್ನು ಒದಗಿಸಲಿಲ್ಲವೆ? ಆದುದರಿಂದ ತ್ಯಾಗಿಗಳಿಗೆ ದಾನಮಾಡುವ ವಿಷಯದಲ್ಲಿ ಯಾವುದೂ ಹೆಚ್ಚಲ್ಲ.

ಟಿ ॥ ಅಡಿ–ಪಾದ, ಆದ್ಯಂತಮಂ - ಎಲ್ಲವನ್ನೂ, ಮೃಡ - ಈಶ್ವರ, ದೊಡ್ಡಿತು - ದೊಡ್ಡದು.

4ರಿಂದ25–ಈ ಸಂಖ್ಯೆಗಳು ಮುಂದೆಕೊಟ್ಟಿರುವ ಆಯಾ ಕಥೆಗಳನ್ನು ಸೂಚಿಸುವುವು.

ಮಡೆಯಂಗುತ್ತಮ ವಿದ್ಯೆ ಬೆಟ್ಟ ಕರುಡಂಗಂ ಮಾರ್ಗವೇ ಬೆಟ್ಟ ಕೇಳ್ ।
ಬಡವಂಗೆಲ್ಲರ ವೈರ ಬೆಟ್ಟ ಜಡದೇಹಂಗುಜ್ಜುಗಂ ಬೆಟ್ಟ ಮು ॥
ಪ್ಪಡಸಿರ್ದಾತಗೆ ಪೆಣ್ಣು ಬೆಟ್ಟ ರುಣವೇ ಪೆರ್ಬೆಟ್ಟ ಮೂಲೋಕದೊಳ್ ।
ಕಡು ಲೋಭಂಗಿಡೆ ಬೆಟ್ಟವೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ॥ ೮೫ ॥

ಭಾ ॥ ಮೂಢನಿಗೆ ಉತ್ತಮವಾದ ವಿದ್ಯೆಯೂ, ಕುರುಡನಿಗೆ ದಾರಿಯೂ, ಬಡವನಿಗೆ ಜನರಲ್ಲಿ ದ್ವೇಷವೂ, ಭಾರವಾದ ಮೈಯುಳ್ಳವನಿಗೆ ಕೆಲಸವೂ, ಮುದುಕನಿಗೆ ಪ್ರಾಯದ ಹೆಂಡತಿಯೂ, ಯಾರಿಗೇ ಆಗಲಿ ಸಾಲವೂ, ಬಹಳ ಜಿಪುಣನಿಗೆ ಅನ್ನ ದಾನಮಾಡುವುದೂ ಅತ್ಯಂತ ಕಷ್ಟ ವಾದುವುಗಳು.

ಟಿ ॥ ಮಡೆಯ-ಮೂಢ, ಜಡದೇಹ-ಭಾರವಾದಮೈಯುಳ್ಳವನು, ಉಜ್ಜುಗ (ಉದ್ಯೋಗ) – ಕೆಲಸ, ಅಡಸಿರ್ದ - ಆಕ್ರಮಿಸಿದ, ಕಡು ಲೋಭ-ಬಹಳ ಜಿಪುಣ, ಇಡೆ-ಅನ್ನವಿಡಲು.

ಶಿವಸುಜ್ಞಾನವೆ ಯೋಗಿಗಳ್ಗೆ ನಯನಂ ಚಂಡಾಂಶು ಶುಭ್ರಾಂಶುಗಳ್ ।
ಭವ ನೇತ್ರಂ ಪುರುಷೋತ್ತಮಂಗೆ ಕಮಲಂ ಕಣ್ ರಾತ್ರಿಗಾ ಪಾವಕಂ ॥
ರವಿ ಲೋಕತ್ರಯಕೆಲ್ಲ ದೃಷ್ಟಿ ವಿಭುಧವ್ರಾತಕ್ಕೆ ಶಾಸ್ತ್ರಾಂಬಕಂ ।
ಕವಿಯೇ ರಾಜರ ಕಣ್ಣೆಲೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ॥ ೮೬ ॥

ಭಾ ॥ ಯೋಗಿಗಳಿಗೆ ಈಶ್ವರನ ಸ್ವರೂಪದ ಅರಿವೂ, ಶಿವನಿಗೆ ಸೂರ್ಯ ಚಂದ್ರರೂ, ವಿಷ್ಣುವಿಗೆ ಕಮಲವೂ, ರಾತ್ರಿಗೆ ಅಗ್ನಿಯೂ, ಮೂರು ಲೋಕಕ್ಕೂ ಸೂರ್ಯನೂ, ವಿದ್ವಾಂಸರಿಗೆ ಶಾಸ್ತ್ರವೂ, ರಾಜನಿಗೆ ಕವಿಯೂ ಕಣ್ಣುಗಳು.

ಟಿ ॥ ಚಂಡಾಂಶು–ಸೂರ್ಯ, ಶುಭ್ರಾಂಶು-ಚಂದ್ರ, ಭವ–ಶಿವ, ಪುರುಷೋತ್ತಮ-ವಿಷ್ಣು, ಪಾವಕ–ಅಗ್ನಿ, ದೃಷ್ಟಿ–ಕಣ್ಣು, ವಿಬುಧವ್ರಾತ–ವಿದ್ವಾಂಸರ ಸಮೂಹ, ಅಂಬಕ-ಕಣ್ಣು.

ಮದನಂಗೀಶ್ವರ ಶತ್ರು ಬಂಧುನಿಚಯಕ್ಕಂ ಜಾರೆಯೇ ಶತ್ರು ಪೇ ।
ಳದ ವಿದ್ಯಂಗಳ ತಂದೆ ಶತ್ರು ಕುವರರ್ಗಂ ಶತ್ರು ಸಮ್ಮಾನ್ಯರಾ ॥
ಸದನಕ್ಕಂ ಕಡು ಸಾಲ ರೂಪವತಿ ತಾನೇ ಶತ್ರು ಗಂಡಂಗೆ ಮೇಣ್
ಮುದಿಗಾ ಯವ್ವನೆ ಶತ್ರುವೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ॥ ೮೭ ॥

ಭಾ ॥ ಈಶ್ವರನು ಮನ್ಮಥನಿಗೂ, ಹಾದರಗಿತ್ತಿಯು ಬಂಧುಗಳಿಗೂ, ವಿದ್ಯೆಯನ್ನು ಕಲಿಸದ ತಂದೆಯು ಮಕ್ಕಳಿಗೂ, ಸಾಲವು ಮಾನವಂತರ ಮನೆತನಕ್ಕೂ, ಸುಂದರಿಯಾದ ಹೆಂಡತಿಯು ಗಂಡನಿಗೂ, ಯೌವನಸ್ಥಳಾದ ಹೆಂಡತಿಯು ಮುದುಕನಿಗೂ ಶತ್ರುಗಳು.

ಟಿ ॥ ನಿಚಯ-ಗುಂಪು, ಕುವರ-ಮಗ, ಸದನ-ಮನೆ, ಮುದಿಗೆ-ಮುದುಕನಿಗೆ

ಪೃಥುರೋಮೇಶ ತಿಮಿಂಗಿಲಂ ತಿಮಿಯ ನೂಂಕಲ್ ಸಿಂಧು ತಾನುಕ್ಕದೇ ।
ಶಿಥಿಲತ್ವಂಬಡೆದಿರ್ಪ ವಂಶ ಮೊರೆಯಲ್ ಕಿಚ್ಚೇಳದೇ ಮಂದರಂ ॥
ಮಥಿಸಲ್ ಕ್ಷೀರಸಮುದ್ರದೊಳ್ ಬಹು ವಿಷಂ ತಾಂ ಪುಟ್ಟದೆ ಮರ್ತ್ಯರೊಳ್ ।
ಮಥನಂ ವೆಗ್ಗಳವಲ್ಲವೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ॥ ೮೮ ॥

ಭಾ ॥ ದೊಡ್ಡ ಮೀನಾದ ತಿಮಿಂಗಿಲವು ತಿಮಿಯೆಂಬ 'ಮೀನನ್ನು ತಳ್ಳಲು ಸಮುದ್ರವು ಉಕ್ಕುವುದಿಲ್ಲವೆ? ಬಿದಿರು ಮೆಳೆಯಲ್ಲಿ ಬೇರೆ ಬೇರೆ ಇರುವ ಬಿದಿರುಗಳು ಒಂದಕ್ಕೊಂದು ಉಜ್ಜಿದರೆ ಬೆಂಕಿ ಹುಟ್ಟಿ ಉರಿಯೇಳುವುದಿಲ್ಲವೆ? ಮಂದರ ಪರ್ವತದಿಂದ ಕ್ಷೀರ ಸಮುದ್ರವನ್ನು ಕಡೆಯಲು ಲೋಕವನ್ನೇ ಸುಡುವ ವಿಷವು ಹುಟ್ಟಲಿಲ್ಲವೆ? ಹಾಗೆಯೇ ಮನುಷ್ಯರಲ್ಲಿಯೂ ಒಬ್ಬರಿಗೊಬ್ಬರಿಗೆ ಜಗಳ ಹುಟ್ಟುವುದು ಕೇಡಿಗೆ ಕಾರಣವು.

ಟಿ ॥ ಪೃಥುರೋಮ-ಮೀನು, ಈಶ-ಒಡೆಯ, ಸಿಂಧು-ಸಮುದ್ರ, ವಂಶ-ಬಿದಿರು, ಕಿಚ್ಚು-ಉರಿ, ಮರ್ತ್ಯ-ಮನುಷ್ಯ, ಮಥನ-ತಿಕ್ಕಾಟ, ಜಗಳ; ವೆಗ್ಗಳ-ಶ್ರೇಷ್ಠ.

[26]ಹರಿಯೊಳ್ ನಾರದ ಮಂದಿವಾಳದೆ ಮಹಾ ಶಾಪಂಗಳಂ ತಾಳನೇ ।
[27]ಸುರವೆಣ್ಣಿಂದಲಿ ಪುಷ್ಪದಂತ ವನದೊಳ್ ತಾಂ ಕ್ರೋಡರೂಪಾಗನೇ ॥
ವಿರಸಂ ಬರ್ಪುದು ಬೇಡೆನಲ್ [14]ದೃಪದೆಯಿಂ ಭೀಮಾರಿ ತಾಂ ನೋಯನೇ ॥
ಸರಸಂ ವೆಗ್ಗಳವಾಗದೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ॥ ೪೯ ॥

ಭಾ ॥ ನಾರದನು ವಿಷ್ಣುವಿನಲ್ಲಿ ಹೆಚ್ಚಾದ ಸಲಿಗೆಯನ್ನು ತೋರಿಸಿದುದರಿಂದ ದೊಡ್ಡ ಶಾಪವನ್ನು ಪಡೆಯಲಿಲ್ಲವೆ? ಪುಷ್ಪದಂತನೆಂಬ ಗಂಧರ್ವನು ಒಬ್ಬ ಅಪ್ಸರ ಸ್ತ್ರೀಯನ್ನು ತಡೆದುದರಿಂದ ಹಂದಿಯ ಜನ್ಮವನ್ನು ತಾಳಲಿಲ್ಲವೆ? ದ್ರೌಪದಿಯು ಬೇಡವೆಂದು ಎಷ್ಟು ಬಗೆಯಲ್ಲಿ ಹೇಳಿದರೂ ಕೇಳದೆ ಕೀಚಕನು ಆಕೆಯಲ್ಲಿ ಸರಸವಾಡಲು ಹೋದುದರಿಂದ ಭೀಮನು ಅವನನ್ನು ಕೊಲ್ಲಲಿಲ್ಲವೆ? ಆದಕಾರಣ ಹೆಚ್ಚಾದ ಸರಸವು ಕೇಡನ್ನುಂಟು ಮಾಡದೆ ಬಿಡದು.

ಟಿ ॥ ಮಂದಿವಾಳ-ಸಲಿಗೆ, ಸುರವೆಣ್-ಅಪ್ಸರ ಸ್ತ್ರೀ, ಕ್ರೋಡ-ಹಂದಿ, ವಿರಸಂ-ವಿರೋಧ, ಭೀಮಾರಿ-ಕೀಚಕ

ಸುರಚಾಪಾಯತಮಿಂದ್ರಜಾಲದ ಬಲಂ ಮೇಘಂಗಳಾಕಾರ ಬಾ ।
ಲರು ಕಟ್ಟಾಡುವ ಕಟ್ಟೆ ಸ್ವಪ್ನದ ಧನಂ ನೀರ್ಗುಳ್ಳೆ ಗಾಳೀಸೊಡರ್ ॥
ಪರಿವುತ್ತಿರ್ಪ ಮರೀಚಿಕಾ ಜಲ ಜಲಾವರ್ತಾಕ್ಷರಂ ತೋರುವೈ ।
ಸಿರಿ ಪುಲ್ಲಗ್ರದ ತುಂತುರ್ಕೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ॥ ೫೦ ॥

ಭಾ । ಕಾಮನ ಬಿಲ್ಲು, ಇಂದ್ರಜಾಲ ವಿದ್ಯೆಯಿಂದ (ಕಣ್ಕಟ್ಟಿನಿಂದ) ತೋರಿಸಿದ ಸೈನ್ಯ, ಮೋಡಗಳು ಹೊಂದುವ ಬಗೆ ಬಗೆಯ ಆಕಾರ, ಆಟಕ್ಕಾಗಿ ಹುಡುಗರು ಕಟ್ಟುವ ಕಟ್ಟೆ, ಕನಸಿನಲ್ಲಿ ಕಾಣುವ ಹಣ, ನೀರಮೇಲಣ ಗುಳ್ಳೆ, ಗಾಳಿಯಲ್ಲಿಟ್ಟ ದೀಪ, ಹರಿಯುವ ನೀರಿನಂತೆ ಕಾಣುವ ಬಿಸಿಲ್ಗುದುರೆ, ನೀರಿನ ಮೇಲಿನ ಅಕ್ಷರ, ಹುಲ್ಲಿನ ಕೊನೆಯಲ್ಲಿರುವ ನೀರಿನ ತುಂತುರು—ಇವುಗಳಂತೆ ಐಶ್ವರ್ಯವು ಕ್ಷಣಿಕವಾದದ್ದು.

ಟಿ ॥ ಸುರಚಾಪ-ಕಾಮನ ಬಿಲ್ಲು; ಆಯತ-ವಿಸ್ತಾರವಾದ, ಸೊಡರ್-ದೀಪ, ಮರೀಚಿಕಾ-ನೀರ್ಗುದುರೆ, ಜಲಾವರ್ತ-ನೀರಿನ ಸುಳಿ, ತೋರುವ-ಕಾಣುವ, ಐಸಿರಿ-ಐಶ್ವರ್ಯ.

ಮಳೆಯಲ್ಲಿಕ್ಕಿದ ಜೇನು ಶೂದ್ರ ಕಲಿತಿರ್ಪ ವಿದ್ಯೆಯುಚ್ಛಿಷ್ಟಮಾ |
ಗಲು ಮೃಷ್ಟಾನ್ನವು ಸರ್ಪ ಕಾಯ್ವ ಧನಮುಂ ಲುಬ್ಧಾರ್ಜಿತೈಶ್ವರ್ಯಮುಂ ||
ಹೊಲೆಪಾಡಿಂದಲೆ ಕೂಡಲಿಕ್ಕಿ ಪೆರರ್ಗಂ ತಾನಾಗದೇ ಪೋಗುವೊಲ್ |
ಗಳಿಸೇನುಣ್ಣದೆ ಪೋಪುದೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ || ೯೧ ||

ಭಾ || ಮಳೆಯಲ್ಲಿಟ್ಟ ಜೇನೂ, ಶೂದ್ರನು ಕಲಿತ ವಿದ್ಯೆಯೂ, ಎಂಜಲಾದ ಮೃಷ್ಟಾನ್ನವೂ, ಸರ್ಪವು ಕಾದಿರುವ ಹಣವೂ, ಜಿಪುಣನು ಸಂಪಾದಿಸಿದ ಐಶ್ವರ್ಯವೂ, ಎಷ್ಟು ಕಷ್ಟಪಟ್ಟು ಕೂಡಿಸಿದ್ದರೂ ಇತರರಿಗೆ ಉಪಯೋಗವಿಲ್ಲದೆ ಹೋಗುವುದು. ಆದಕಾರಣ ಅನುಭವಿಸದೆ ಹೋಗುವ ದ್ರವ್ಯವನ್ನು ಗಳಿಸಿದುದರಿಂದ ಏನು ಪ್ರಯೋಜನ?

ಟಿ || ಉಚ್ಛಿಷ್ಟ-ಎಂಜಲು, ಹೊಲೆಪಾಡಿಂದ-ಬಹಳ ಕಷ್ಟಪಟ್ಟು, ಪೆರರ್ಗಂ-ಇತರರಿಗೂ, ಗಳಿಸೇನು-ಕೂಡಿಟ್ಟು ಪ್ರಯೋಜನವೇನು? ಉಣ್ಣದೆ-ಅನುಭವಿಸದೆ.

[28]ಮಹಿಯೊಳ್ ಭೂಸುರವೇಷದಿಂದಕಲಿಯಲ್ ಕರ್ಣಂ ಧನುರ್ವೇದಮಂ|
ರಹಿಗೆಟ್ಟಂ ಬಲು ನೊಂದ[29] ನಿಲ್ವಲ ಮಹಾ ವಾತಾಪಿಯೊಳ್ ಶುಕ್ರನುಂ ||
[30]ಅಹಿರಾಜಾತ್ಮಜೆ ಮಂತ್ರ ತಂತ್ರವರಿದಾಣ್ಮಂ ಪೋಗೆ ತಾ ತಂದಳೇ |
ಬಹು ವಿದ್ವಾಂಸನು ಭ್ರಾಂತನೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ || ೯೨ ||

ಭಾ || ಕರ್ಣನು ಬ್ರಾಹ್ಮಣ ವೇಷವನ್ನು ಹಾಕಿಕೊಂಡು ಪರಶುರಾಮನಲ್ಲಿ ಧನುರ್ವಿದ್ಯೆಯನ್ನು ಕಲಿತರೂ ಕೇಡನ್ನು ಹೊಂದಿದನು. ಶುಕ್ರನು ತನ್ನ ಶಿಷ್ಯರಾದ ಇಲ್ವಲ, ವಾತಾಪಿಯೆಂಬ ರಾಕ್ಷಸರಿಗೆ ಮಂತ್ರೋಪದೇಶ ಮಾಡಿ ವ್ಯಥೆಪಟ್ಟನು. ಕರ್ಕೋಟಕನ ಮಗಳಾದ ಜರತ್ಕಾರುವು ಮಂತ್ರತಂತ್ರಗಳನ್ನು ಕಲಿತಿದ್ದರೂ ತನ್ನನ್ನು ಬಿಟ್ಟುಹೋದ ಗಂಡನನ್ನು ಹಿಂದಕ್ಕೆ ಕರೆತರಲಾರದೆ ಹೋದಳು. ಆದಕಾರಣ ದೊಡ್ಡ ವಿದ್ವಾಂಸನೂ ದಿಕ್ಕು ತೋರದಂತಾಗುವನು.

ಟಿ || ಭೂಸುರ-ಬ್ರಾಹ್ಮಣ, ರಹಿ-ರೀತಿ, ಅಹಿರಾಜಾತ್ಮಜೆ-ಕರ್ಕೋಟಕನ ಮಗಳಾದ ಜರತ್ಕಾರು; ಆಣ್ಮಂ-ಗಂಡ.

14ರಿಂದ30-ಈ ಸಂಖ್ಯೆಗಳು ಮುಂದೆ ಕೊಟ್ಟಿರುವ ಆಯಾ ಕಥೆಗಳನ್ನು ಸೂಚಿಸುವುವು

ಸುಚರಿತ್ರರ್ ಸಲೆ ಕೀರ್ತಿಗೋಸುಗ ಮಹಾ ಕಷ್ಟಂಗಳಂ ತಾಳಿ ಸೂ ॥
ರಿ ಚಯಕ್ಕಾದರದಿಂದ ಮಾನಗಳನಿತ್ತಾ ಚಂದ್ರ ತಾರಾರ್ಕವಾ ॥
ದಚಲ ಖ್ಯಾತಿಯ ತಾಳ್ದರೀಗಲಿಳೆಯೊಳ್ ತಾವೀಯರೈ ಪೋಗಲಾ ।
ವಚನಕ್ಕೇನು ದರಿದ್ರವೈ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ॥ ೯೩ ॥

ಭಾ ॥ ಪೂರ್ವಕಾಲದಲ್ಲಿ ಸಚ್ಚರಿತ್ರರು ಕೀರ್ತಿಯನ್ನು ಪಡೆಯುವುದಕ್ಕಾಗಿ ಅನೇಕ ಕಷ್ಟಗಳನ್ನನುಭವಿಸಿ ಪಂಡಿತರಿಗೆ ಆದರದಿಂದ ಬಹುಮಾನಗಳನ್ನು ಕೊಟ್ಟು ಸೂರ್ಯ, ಚಂದ್ರ, ನಕ್ಷತ್ರಗಳಿರುವವರೆಗೂ ನಿಲ್ಲತಕ್ಕ ಶಾಶ್ವತವಾದ ಕೀರ್ತಿಯನ್ನು ಪಡೆದರು. ಈಗಲಾದರೋ ಹಾಗೆ ಕೊಡುವವರು ಯಾರೂ ಇಲ್ಲ; ಅದು ಹೋಗಲಿ, ಒಳ್ಳೆಯ ಬಾಯಿ ಮಾತನ್ನು ಕೂಡ ಆಡತಕ್ಕವರಿಲ್ಲ.

ಟಿ ॥ ಸುಚರಿತ್ರರು-ಒಳ್ಳೆಯ ನಡತೆಯುಳ್ಳವರು, ತಾಳಿ-ಹೊಂದಿ, ಸೂರಿ ಚಯ-ಪಂಡಿತರ ಸಮೂಹ, ತಾರ-ನಕ್ಷತ್ರ ಅಚಲ-ಶಾಶ್ವತ.

ಪಶುಗಳ್ ಕ್ರೂರ ಮೃಗಂಗಳಂಡಜಗಳುಂ ಸರ್ಪಂಗಳುಂ ಕಣ್ಗೆ ಕಾ ।
ಣಿಸದತ್ಯುಗ್ರ ಗ್ರಹಂಗಳುಂ ಪಟು ಭಟರ್ ವಿದ್ವಜ್ಜನಂ ಮಂತ್ರಿಗಳ್ ॥
ಋಷಿಗಳ್ ಶಾಂತರು ಯೋಗಿಗಳ್ ಪ್ರಜೆಗಳುಂ ತಾವೆಲ್ಲರುಂ ತಮ್ಮ ಯಾ ।
ಶಿಶುವಂ ಲಾಲಿಸದಿರ್ಪರೇ ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ॥ ೯೪ ॥

ಭಾ ॥ ಪಶುಗಳೂ, ಕ್ರೂರ ಮೃಗಗಳೂ, ಪಕ್ಷಿಗಳೂ, ಹಾವುಗಳೂ, ಕಣ್ಣಿಗೆ ಕಾಣಿಸದ ಬಹು ಕ್ರೂರವಾದ ಪಿಶಾಚಗಳೂ, ಬಲಿಷ್ಠರಾದ ಯೋಧರೂ, ವಿದ್ವಾಂಸರೂ, ಮಂತ್ರಿಗಳೂ, ಋಷಿಗಳೂ, ಶಾಂತರೂ, ಯೋಗಿಗಳೂ, ಪ್ರಜೆಗಳೂ ತಂತಮ್ಮ ಮಕ್ಕಳನ್ನು ಪ್ರೀತಿಸದೆಯಿರುವರೆ?

ಟಿ ॥ ಅಂಡಜ-ಪಕ್ಷಿ, ಪಟು-ಬಲಿಷ್ಠರಾದ, ಭಟ-ಸೈನಿಕ.

ಕುರುಡಂ ಕನ್ನಡಿಯಂ ಕವೀಂದ್ರರ ಮಹಾದುರ್ಮಾರ್ಗಿಗಳ್ ತ್ಯಾಗಿಯಂ।
ಬರಡಂ ಬಾಲರ ಮುದ್ದ ಬಂಜೆ ಒಡು ಚೋರಂ ಚಂದ್ರನಂ ಕಾವ್ಯದ ॥
ಚ್ಚರಿಯಂ ಗಾಂಪರು ಪಾಪಿಗಳ್ ಸುಜನರಂ ಮಾಣಿಕ್ಯಮಂ ಮರ್ಕಟಂ ।
ಜರೆಯಲ್ ಸಿಂಗವ ಕುನ್ನಿಯೇಂ ಹರಹರಾ ಶ್ರೀ ಚೆನ್ನ ಸೋಮೇಶ್ವರಾ॥೯೫॥

ಭಾ ॥ ಕುರುಡನು ಕನ್ನಡಿಯನ್ನೂ, ದುರ್ಮಾರ್ಗಿಯು ಕವಿಗಳನ್ನೂ, ಜಿಪುಣನು ದಾನಿಯನ್ನೂ, ಬಂಜೆಯು ಮಕ್ಕಳ ಮುದ್ದನ್ನೂ, ಕಳ್ಳನು ಚಂದ್ರನನ್ನೂ ಮೂಢನು ಕಾವ್ಯದ ರಸವನ್ನೂ, ಪಾಪಿಷ್ಠನು ಸಜ್ಜನರನ್ನೂ, ಕೋತಿಯು ರತ್ನವನ್ನೂ, ನಾಯಿಯು ಸಿಂಹವನ್ನೂ ತಿರಸ್ಕರಿಸಿದರೆ ಆ ಪದಾರ್ಥಗಳಿಗೆ ಕೊರತೆಯೇನು ?

ಟಿ ॥ ಬರಡಂ-(ವ್ಯರ್ಥನು)-ಜಿಪುಣನು, ಅಚ್ಚರಿ-ಚಮತ್ಕಾರ, ಗಾಂಪ-ಮೂಢ, ಸಿಂಗ-ಸಿಂಹ, ಕುನ್ನಿ-ನಾಯಿ.

ಕೊಲುತಿರ್ಪಯ್ಯಗಳೋದು ಬೇನೆಯಳಿವಾ ತೀಕ್ಷ್ಣೌಷಧಂ ಪಾಡುಬಿ ॥
ದ್ದುಳುವಾರಂಬದ ಧಾನ್ಯ ಶತ್ರು ಜಯ ಪುತ್ರೋತ್ಪತ್ತಿ ಕೈಗಿಕ್ಕುವಾ ॥
ಬಳೆ ರಾಜಾಶ್ರಯಮಿಕ್ಕುವಾಪದ ಧನಂ ಬೇಹಾರಮಿಂತೆಲ್ಲಮುಂ ।
ಪಲ ಕಷ್ಟಂ ಕಡೆಗೊಳ್ಳಿತೈ ಹರಹರಾ ಶ್ರೀ ಚೆನ್ನ ಸೋಮೇಶ್ವರಾ ॥೯೬॥

ಭಾ ॥ ಹೊಡೆದು ಬಡಿದು ಉಪಾಧ್ಯಾಯರು ಹೇಳಿಕೊಡುವ ಓದು, ರೋಗವನ್ನು ನಿರ್ಮೂಲಮಾಡುವ ತೀಕ್ಷ್ಣವಾದ ಔಷಧ, ಕಷ್ಟಪಟ್ಟು ಉತ್ತು ಬಿತ್ತಿ ಬೆಳೆಯುವ ಧಾನ್ಯ, ಶತ್ರುಗಳ ಮೇಲೆ ಯುದ್ಧಮಾಡಿ ಗೆಲ್ಲುವಿಕೆ, ಮಕ್ಕಳನ್ನು ಹೆರುವುದು, ಕೈಗೆ ಬಳೆಯನ್ನು ತೊಟ್ಟುಕೊಳ್ಳುವುದು, ದೊರೆಯ ಆಶ್ರಯ ಸಂಪಾದಿಸುವುದು, ಕಷ್ಟಕಾಲಕ್ಕೆಂದು ಹಣ ಕೂಡಿಡುವುದು, ವ್ಯಾಪಾರ—ಇವೆಲ್ಲವೂ ಮೊದಲು ಬಹಳ ಕಷ್ಟವಾಗಿ ಕಡೆಗೆ ಸುಖವನ್ನು ಕೊಡುವುವು.

ಟಿ ॥ ಅಯ್ಯಗಳು-ಉಪಾಧ್ಯಾಯರು, ಬೇನೆ-ರೋಗ, ತೀಕ್ಷ್ಣೌಷಧ-ದಾರುಣವಾದ ಔಷಧ, ಪಾಡುಬಿದ್ದು-ಕಷ್ಟಪಟ್ಟು, ಬೇಹಾರ-ವ್ಯಾಪಾರ.

ಜ್ಞಾನ ಪ್ರಶಂಸೆ

ಪೊಡೆಯೊಳ್ ತುಂಬಿರೆ ಪಂಕ ಮೇಲೆ ತೊಳೆಯಲ್ ತಾಂ ಶುದ್ಧನೇನಪ್ಪನೇ
ಕಡು ಪಾಪಂ ಬಲು ಮಿಾಯಲಾತ ಶುಚಿಯೇ ಕಾಕಾಳಿಯೇಂ ಮಿಾಯದೇ ||
ಗುಡಪಾನಂಗಳೊಳದ್ದೆ ಬೇವಿನ ಫಲಂ ಸ್ವಾದಪ್ಪುದೇ ಲೋಕದೊಳ್ |
ಮಡಿಯೇ ನಿರ್ಮಲ ಚಿತ್ತವೈ ಹರಹರಾ ಶ್ರೀ ಚೆನ್ನ ಸೋಮೇಶ್ವರಾ || ೯೭ ||

ಭಾ || ಹೊಟ್ಟೆಯಲ್ಲಿ ಕಲ್ಮಷವನ್ನು ತುಂಬಿಕೊಂಡು ಮೇಲೆ ತೊಳೆದ ಮಾತ್ರಕ್ಕೆ ಪರಿಶುದ್ಧನಾಗುವನೆ? ಬಹಳ ಪಾಪಗಳನ್ನು ಮಾಡಿದವನು ಅನೇಕ ತೀರ್ಥಸ್ನಾನಗಳನ್ನು ಮಾಡಿದರೆ ಶುದ್ಧನಾಗುವನೆ? ಕಾಗೆಗಳ ಗುಂಪು ಸ್ನಾನ ಮಾಡುವುದಿಲ್ಲವೆ? ಬೇವಿನ ಹಣ್ಣನ್ನು ಬೆಲ್ಲದ ಪಾನಕದಲ್ಲಿ ಅದ್ದಿಟ್ಟರೆ ಅದರ ಕಹಿಯು ಹೋಗಿ ಸಿಹಿಯಾಗುವುದೆ? ಆದುದರಿಂದ ಮನಸ್ಸನ್ನು ಶುದ್ಧವಾಗಿಟ್ಟಿರುವುದೇ ಮಡಿ.

ಟಿ || ಪೊಡೆ-ಹೊಟ್ಟೆ, ಪಂಕ-(ಕೆಸರು)-ಕಲ್ಮಷ, ಕಡು ಪಾಪಂ-ಬಹಳ ಪಾಪ ಮಾಡಿದವನು, ಕಾಕಾಳಿ - ಕಾಗೆಗಳ ಗುಂಪು, ಗುಡ ಪಾನ - ಬೆಲ್ಲದ ಪಾನಕ, ಸ್ವಾದು-(ರುಚಿ) – ಸಿಹಿ.

ರಚನಂಗೆಯ್ಯದೆ ಧರ್ಮ ಕೀರ್ತಿಯೆರಡಂ ಸದ್ಧರ್ಮಮಂ ಪಾಪದಾ |
ನಿಚಯಕ್ಕಿಕ್ಕದೆ ತತ್ತ್ವ ಕೇಳಿ ಜಗವೆಲ್ಲಂ ಬೊಮ್ಮಮೆಂದೆನ್ನದೇ ||
ಉಚಿತಾಲೋಚನೆಯಿಂದ ತನ್ನ ನಿಜವಂ ತಾಂ ಕಾಣದೇ ವಾದಿಪಾ |
ವಚನಬ್ರಹ್ಮದೆ ಮುಕ್ತಿಯೇ ಹರಹರಾ ಶ್ರೀ ಚೆನ್ನ ಸೋಮೇಶ್ವರಾ || ೯೮ ||

ಭಾ || ಧರ್ಮವನ್ನೂ, ಕೀರ್ತಿಯನ್ನೂ ಸಂಪಾದಿಸದೆ, ತಾನು ಮಾಡಿದ ಪುಣ್ಯವನ್ನು ಪಾಪಗಳಿಗಾಗಿ ವಿನಿಯೋಗಿಸದೆ, ತತ್ತ್ವಗಳನ್ನು ಕೇಳಿ ಲೋಕವೆಲ್ಲವೂ ಬ್ರಹ್ಮವೇ ಎಂದು ತಿಳಿದುಕೊಳ್ಳದೆ, ಚೆನ್ನಾಗಿ ತನ್ನಲ್ಲಿ ತಾನೇ ಆಲೋಚಿಸಿ ತನ್ನ ಸ್ವರೂಪವನ್ನು ತಿಳಿದುಕೊಳ್ಳದೆ ಸುಮ್ಮನೆ ಮಾತಿನಿಂದ ಮಾತ್ರ ತಾನು ಬ್ರಹ್ಮನೆಂದು ಹೇಳಿಕೊಳ್ಳುವ ವಚನಬ್ರಹ್ಮದಿಂದ ಮೋಕ್ಷವು ಎಂದಿಗೂ ದೊರೆಯುವುದಿಲ್ಲ.

ಟಿ || ರಚನಂಗೆಯ್ಯದೆ-ಸಂಪಾದಿಸದೆ, ಬೊಮ್ಮ-ಬ್ರಹ್ಮ.

ಸಚರ ಸ್ಥಾವರಕೆಲ್ಲ ಸರ್ವ ಸುಖ ದುಃಖಂಗಳ್ ಸಮಾನಂಗಳೆಂ ।
ದಚಲಾನಂದದಿ ತನ್ನನನ್ಯರೆಣಿಸಲ್ ಸುಜ್ಞಾನಿಗಳ್ ನೀರಿನೊಳ್ ॥
ಶುಚಿಯೊಳ್ ಪಾದವನಿಟ್ಟು ತೋರ್ಪ ತೆರದೊಳ್ ತಾನಾಗದೇ ವಾದಿಪಾ ।
ವಚನ ಬ್ರಹ್ಮದೆ ಮುಕ್ತಿಯೇ ಹರಹರಾ ಶ್ರೀ ಚೆನ್ನ ಸೋಮೇಶ್ವರಾ ॥ ೯೯ ॥

ಭಾ ॥ ಚರಾಚರ ವಸ್ತುಗಳೆಲ್ಲಕ್ಕೂ ಸುಖ ದುಃಖಗಳು ಸಮಾನವಾಗಿರುವುವು ಎಂದು ಜ್ಞಾನಿಗಳು ತಮ್ಮನ್ನೂ, ಇತರರನ್ನೂ ಸಮಾನವಾಗಿ(ಭೇದವಿಲ್ಲದೆ) ತಿಳಿದು ಪರಿಪೂರ್ಣಾನಂದದಿಂದ ನೀರಿನಲ್ಲಾದರೂ, ಬೆಂಕಿಯಲ್ಲಾದರೂ ಕಾಲನ್ನಿಟ್ಟು ಅದರಿಂದುಂಟಾಗುವ ಸುಖವೂ, ದುಃಖವೂ ಸಮಾನವೆಂದು ತೋರ್ಪಡಿಸುವಂತೆ ತಾನು ಇರದೆ ಮಾತಿನಲ್ಲಿ ಮಾತ್ರ ತಾನು ಬ್ರಹ್ಮನೆಂದು ವಾದಿಸುವವನಿಗೆ ಮೋಕ್ಷವೆಲ್ಲಿಯದು ?

ಟಿ ॥ ಸಚರ-ಚಲಿಸುವುದು, ಸ್ಥಾವರ-ಚಲಿಸದಿರುವುದು, ತನ್ನನು ಅನ್ಯರ ಎಣಿಸಲ್, ಶುಚಿ-ಬೆಂಕಿ, ವಾದಿಸು-ಹೇಳಿಕೊಳ್ಳು.

ಶುಚಿ ತಾನಾಗದೆ ಸರ್ವಶಾಸ್ತ್ರನಿಪುಣಂ ತಾನಾಗದೇ ಕಾಮಮಂ ।
ಪಚನಂಗೆಯ್ಯದೆ ಕೋಪಮಂ ಬಿಡದೆ ಲೋಭಚ್ಛೇದಮಂ ಮಾಡದೇ ॥
ರುಚಿ ಮೋಹಕ್ಕೊಳಗಾಗದಂತು ಮದ ಮಾತ್ಸರ್ಯಂಗಳಂ ನೀಗದೇ ।
ವಚನ ಬ್ರಹ್ಮದೆ ಮುಕ್ತಿಯೇ ಹರಹರಾ ಶ್ರೀ ಚೆನ್ನ ಸೋಮೇಶ್ವರಾ ॥ ೧೦೦ ॥

ಭಾ ॥ ಪರಿಶುದ್ಧನೂ, ಸರ್ವ ಶಾಸ್ತ್ರಜ್ಞನೂ ಆಗದೆಯೂ, ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳೆಂಬ ಅರಿಷಡ್ವರ್ಗಗಳನ್ನು ಗೆಲ್ಲದೆಯೂ ಬರಿಯ ವಚನ ಬ್ರಹ್ಮದಿಂದ ಮುಕ್ತಿ ದೊರೆಯಲಾರದು.

ಟಿ ॥ ಪಚನಂಗೆಯ್ಯದೆ-(ಜೀರ್ಣ ಮಾಡದೆ)-ಬಿಡದೆ, ಲೋಭ- ಆಶೆ, ಛೇದಮಂ ಮಾಡದೆ-ಕತ್ತರಿಸಿ ಹಾಕದೆ, ರುಚಿ ಮೋಹ-ಆಸೆಯುಂಟಾದ ಮಮತೆ, ಅಂತು-ಹಾಗೆ, ನೀಗು-ಹೋಗಲಾಡಿಸು.

ಪ್ರಚುರಂ ಪತ್ತೊಳಗಾಗೆ ರಂಧ್ರವನೆ ಕೈಗೊಂಡೆಂಟ ನೀಗೇಳ ಬಿ |
ಟ್ಟುಚಿತಂ ತಾನೆನಿಪಾರ ಕಟ್ಟುತಯಿದಕ್ಕೀಡಾಗದೇ ನಾಲ್ವರಂ ||
ರಚನಂಗೆಯ್ಯದೆ ಮೂರ ನಂಬದೆರಡಂ ಬಿಟ್ಟೊಂದರೊಳ್ ನಿಲ್ಲದಾ |
ವಚನ ಬ್ರಹ್ಮದೆ ಮುಕ್ತಿಯೇ ಹರಹರಾ ಶ್ರೀ ಚೆನ್ನ ಸೋಮೇಶ್ವರಾ ||೧೦೧||

ಭಾ || ದಶೇಂದ್ರಿಯಗಳನ್ನೂ, ನವರಂಧ್ರಗಳನ್ನೂ ಸಂಪೂರ್ಣ ಸ್ವಾಧೀನ ಮಾಡಿಕೊಂಡು, ಅಷ್ಟಮದಗಳನ್ನೂ ಸಪ್ತವ್ಯಸನಗಳನ್ನೂ ಬಿಟ್ಟು, ಅರಿ ಷಡ್ವರ್ಗಗಳನ್ನು ಜಯಿಸಿ, ಕಾಮನ ಪಂಚಬಾಣಗಳಿಗೆ ಗುರಿಯಾಗದೆ, ನಾಲ್ಕು ಪುರುಷಾರ್ಥಗಳನ್ನು ಅನುಭವಿಸದೆ, ಈಷಣತ್ರಯವನ್ನು ನಂಬದೆ, ಸುಖದುಃಖಗಳೆರಡನ್ನೂ ಬಿಟ್ಟು, ಬ್ರಹ್ಮವೊಂದರಲ್ಲಿ ನಿಂತರಲ್ಲದೆ ಬರಿಯ ವಚನಬ್ರಹ್ಮದಲ್ಲಿ ಮುಕ್ತಿಯಾಗುವುದಿಲ್ಲ.

ಟಿ || ಪ್ರಚುರಂ–ಚೆನ್ನಾಗಿ, ಪತ್ತು–ಐದು ಕರ್ಮೇಂದ್ರಿಯಗಳೂ, ಐದು ಜ್ಞಾನೇಂದ್ರಿಯಗಳೂ, ರಂಧ್ರ – ನವರಂಧ್ರಗಳು, ಕೈಗೊಂಡು–ಅಧೀನಮಾಡಿಕೊಂಡು, ಎಂಟ–ಅಷ್ಟಮದಗಳನ್ನು, ನೀಗಿ - ಬಿಟ್ಟು, ಏಳ-ಸಪ್ತ ವ್ಯಸನಗಳನ್ನು, ಆರ – ಅರಿಷಡ್ವರ್ಗಗಳನ್ನು, ಅಯಿದಕೆ – ಕಾಮನ ಪಂಚಬಾಣಗಳಿಗೆ, ನಾಲ್ವರಂ – ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳನ್ನು, ಮೂರ–ಈಷಣತ್ರಯವನ್ನು, ಎರಡಂ–ಸುಖದುಃಖಗಳೆರಡನ್ನು, ಒಂದರೊಳ್–ಬ್ರಹ್ಮದಲ್ಲಿ.

ಮತಿಯುಂ ಬುದ್ಧಿಯ ಜಾಣ್ಮೆಯುಂ ಗಮಕಮುಂ ಗಾಂಭೀರ್ಯಮುಂ ನೀತಿಯಾ|
ಯತಮುಂ ನಿಶ್ಚಲಚಿತ್ತಮುಂ ನೃಪವರಾಸ್ಥಾನೋಚಿತಾರ್ಥಂಗಳಂ ||
ಅತಿ ಮಾಧುರ್ಯ ಸುಭಾಷಿತಂಗಳ ಮಹಾ ಸತ್ಕೀರ್ತಿಯುಂ ಬಾಳ್ಕೆಯುಂ |
ಶತಕಾರ್ಥಂ ಕೊಡದಿರ್ಪುದೇ ಹರಹರಾ ಶ್ರೀ ಚೆನ್ನ ಸೋಮೇಶ್ವರಾ ||೧೦೨||

ಭಾ || ಈ ಶತಕದ ಅರ್ಥವನ್ನು ಚೆನ್ನಾಗಿ ವಿಚಾರಮಾಡಿನೋಡಿದರೆ ವಿವೇಕವೂ, ಬುದ್ಧಿಯೂ, ಜಾಣ್ಮೆಯೂ, ಓದುವ ಒಳ್ಳೆಯ ಶೈಲಿಯೂ, ಗಾಂಭೀರ್ಯವೂ, ನೀತಿಯೂ, ದೃಢಮನಸ್ಸೂ, ರಾಜಾಸ್ಥಾನಕ್ಕೆ ಯೋಗ್ಯವಾದ ಪಾಂಡಿತ್ಯವೂ, ಬಹಳ ಇಂಪಾದ ವಾಕ್ಪಟುತ್ವವೂ, ಒಳ್ಳೆಯ ಕೀರ್ತಿಯೂ, ಜೀವನವೂ ದೊರೆಯದೆ ಹೋಗದು.

ಟಿ || ಗಮಕ–ಓದುವ ಸೊಬಗು, ನೀತಿಯಾಯತ–ವಿಸ್ತಾರವಾದ ನೀತಿ, ನೃಪವರಾಸ್ಥಾನೋಚಿತಾರ್ಥ – ರಾಜಶ್ರೇಷ್ಠರ ಸಭೆಗೆ ಯೋಗ್ಯವಾದ ವಿಷಯಗಳ ಜ್ಞಾನ, ಸುಭಾಷಿತ–ವಾಕ್ಪಟುತ್ವ, ಬಾಳ್ಕೆ - ಜೀವನ.

(ಸ್ರಗ್ಧರಾ ವೃತ್ತ)

ಸ್ವಾಮೀ ನನ್ನಿಂದ ನೀನಿಂತೊರೆಯಿಸದೆ ಕೃಪಾದೃಷ್ಟಿಯಿಂ ಬೀರಿ ಲೋಕ |
ಪ್ರೇಮಂದಾಳ್ದಿಂತು ನೀತಿ ಪ್ರಕಟನೆ ಪಡೆ ನಾಲ್ಸಾಸಿರಂ ನಾಲ್ಕು ನೂರುಂ ||
ಈ ಮಾಯಾ ಪೂರ್ಣ ಕಲ್ಯಬ್ದದೆ ಗತಿಸೆ ವಿಕಾರ್ಯಬ್ದದಲ್ಲೀಶ್ವರಾ ನಿ |
ನ್ನಾಮಹಾತ್ಮ್ಯಂಘ್ರಿಗಿತ್ತೆಂ ಪುಲಿಗಿರಿನಗರೀ ಶಾಸನಾಂಕಾ ಮಹೇಶಾ ||

ಭಾ || ಪುಲಿಗಿರಿ ನಗರೀಶನಾದ ಸೋಮೇಶ್ವರನೇ! ನನ್ನಲ್ಲಿ ಕೃಪೆಮಾಡಿ ಲೋಕೋಪಕಾರಾರ್ಥವಾಗಿ ನನ್ನಿಂದ ಹೀಗೆ ಈ ನೀತಿ ವಚನಗಳನ್ನು ಹೇಳಿಸಿದೆ. ಕಲಿಯುಗದಲ್ಲಿ ನಾಲ್ಕು ಸಾವಿರದ ನಾನ್ನೂರು ವರ್ಷಗಳು ಕಳೆದಮೇಲೆ ಬಂದ ವಿಕಾರಿನಾಮ ಸಂವತ್ಸರದಲ್ಲಿ ಈ ಶತಕವನ್ನು ಮಹತ್ತಾದ ನಿನ್ನ ಪಾದಗಳಿಗೆ ಅರ್ಪಿಸಿದ್ದೇನೆ.

ಟಿ || ಇಂತು, ಒರೆಯಿಸದೆ–ಹೇಳಿಸಿದೆ, ಬೀರಿ-ಹರಡಿ, ಈ ಮಾಯಾ ಪೂರ್ಣ ಕಲ್ಯಬ್ದದೆ–ಮೋಸದಿಂದ ತುಂಬಿದ ಈ ಕಲಿಯುಗದಲ್ಲಿ, ಗತಿಸೆ–ಕಳೆದು ಹೋಗಲು, ಅಬ್ದ–ಸಂವತ್ಸರ.

ಸೋಮೇಶ್ವರ ಶತಕದಲ್ಲಿಯ

ಪೂರ್ವ ಕಥೆಗಳು

---

೧. ಕಾಮ ದಹನದ ಕಥೆ

ಅನೇಕ ಯುಗಗಳ ಹಿಂದೆ ಶಿವನು ಹೇಮಕೂಟ ಪರ್ವತದಲ್ಲಿ ತಪಸ್ಸು ಮಾಡುತ್ತಿದ್ದನು. ಆಗ ಗೌರಿಯು ಹಿಮವಂತನ ಮಗಳಾಗಿ ಹುಟ್ಟಿ ಪಾರ್ವತಿ ಯೆಂಬ ಹೆಸರನ್ನು ಪಡೆದು ತಾನು ಈಶ್ವರನನ್ನೇ ಮದುವೆಯಾಗಬೇಕೆಂದು ತಪಸ್ಸು ಮಾಡತೊಡಗಿದಳು. ಆ ಕಾಲದಲ್ಲಿ ತಾರಕಾಸುರನೆಂಬ ರಾಕ್ಷಸನು ಲೋಕಗಳನ್ನೆಲ್ಲ ಕಾಡುತ್ತ ದೇವತೆಗಳಿಗೆ ಬಹಳ ತೊಂದರೆ ಕೊಡುತ್ತಿದ್ದನು. ಇವನಿಗೆ ಪರಮೇಶ್ವರನ ಮಗನಿಂದಲ್ಲದೆ ಮತ್ತಾರಿಂದಲೂ ಸಾವು ಬಾರದೆಂಬ ವರವಿದ್ದಿತು. ಈ ಕಾರಣದಿಂದ ದೇವತೆಗಳೆಲ್ಲ ಪಾರ್ವತೀ ಪರಮೇಶ್ವರರು ಎಂದಿಗೆ ಒಂದು ಕಡೆ ಸೇರುವರೋ ಎಂದು ಹಂಬಲಿಸುತ್ತ, ಪಾರ್ವತಿಯ ಮರೆಹೊಕ್ಕು, ಹೇಗಾದರೂ ಮಾಡಿ ಈಶ್ವರನನ್ನು ಒಲಿಸಿ ತಮ್ಮ ಕಷ್ಟಗಳನ್ನು ಕೊನೆಗಾಣಿಸುವಂತೆ ಆಕೆಯನ್ನು ಹಲವು ಬಗೆಯಾಗಿ ಬೇಡಿಕೊಂಡರು. ಇದಕ್ಕೆ ಪಾರ್ವತಿಯು ಒಡಂಬಟ್ಟು ಶಿವನು ತಪಸ್ಸು ಮಾಡುತ್ತಿದ್ದ ಸ್ಥಳಕ್ಕೆ ಬಂದು ಎಡೆಬಿಡದೆ ಆತನ ಸೇವೆಯನ್ನು ಮಾಡುತ್ತಿದ್ದಳು. ಆದರೆ ಶಿವನ ಮನಸ್ಸು ಪ್ರಪಂಚದ ಕಡೆಗೆ ತಿರುಗದಿರಲು, ಇದಕ್ಕಾಗಿ ತಕ್ಕ ಉಪಾಯವನ್ನು ನೀವು ಮಾಡಿದ ಹೊರತು ನಿಮ್ಮ ಕೆಲಸವು ಕೈಗೂಡದೆಂದು ಪಾರ್ವತಿಯು ದೇವತೆಗಳಿಗೆ ತಿಳಿಸಿದಳು.

ಆಗ ಇಂದ್ರಾದಿ ದೇವತೆಗಳು ಸಭೆ ಸೇರಿ ಚರ್ಚೆಮಾಡಿ ಕೊನೆಗೆ ಬ್ರಹ್ಮನ ಮಾತಿನಂತೆ ಈ ಕೆಲಸಕ್ಕೆ ಕಾಮನಲ್ಲದೆ ಮತ್ತೆ ಯಾರೂ ತಕ್ಕವರಲ್ಲವೆಂದು ನಿಶ್ಚಯಿಸಿದರು. ಕಾಮನು ಈ ಕೆಲಸಕ್ಕೆ ಮೊದಲು ಒಪ್ಪಿಕೊಳ್ಳದೆ ಕೊನೆಗೆ ದೇವತೆಗಳ ನಿರ್ಬಂಧದಿಂದ ಒಪ್ಪಿದನು. ತರುವಾಯ ತನ್ನ ಸೇನಾಪತಿ ಗಳಾದ ವಸಂತ, ಚಂದ್ರ ಮೊದಲಾದವರನ್ನು ಸಂಗಡ ಕರೆದುಕೊಂಡು

ಮಡದಿಯಾದ ರತಿದೇವಿಯೊಡನೆ ಗಿಳಿಯನ್ನೇರಿ ಕಬ್ಬಿನ ಬಿಲ್ಲನ್ನೂ, ಹೂವಿನ ಬಾಣಗಳನ್ನೂ ಹಿಡಿದುಕೊಂಡು ಹೊರಟು ಶಿವನು ತಪಸ್ಸು ಮಾಡುತ್ತಿದ್ದ ಹೇಮಕೂಟಕ್ಕೆ ಬಂದನು. ಎಷ್ಟು ಸಾಹಸ ಮಾಡಿದರೂ ಶಿವನು ಕದಲದೆ ಹೋದುದರಿಂದ ಕಾಮನು ತನ್ನ ಐದು ಬಾಣಗಳನ್ನೂ ಒಂದೇ ಬಾರಿ ಆತನ ಮೇಲೆ ಎಸೆದನು. ಆಗ ಶಿವನ ಮನಸ್ಸು ಸ್ವಲ್ಪ ಕದಲಿ ಆತನು ಕೋಪದಿಂದ ಕಣ್ಬಿಡಲು, ಎದುರಿಗಿದ್ದ ಕಾಮನು ಶಿವನ ಹಣೆಗಣ್ಣಿಂದ ಹೊರಟ ಉರಿಯಿಂದ ಕೂಡಲೆ ಸುಟ್ಟು ಬೂದಿಯಾದನು.

ಇದನ್ನು ನೋಡಿ ರತಿದೇವಿಯು ತನ್ನ ಗಂಡನ ಸಾವಿಗಾಗಿ ಬಹಳ ಅಳುತ್ತಿರುವಲ್ಲಿ ಪಾರ್ವತಿಯು ಆಕೆಗೆ ಸಮಾಧಾನ ಹೇಳತೊಡಗಿದಳು. ಈ ಸಮಯದಲ್ಲಿ ಶಿವನ ದೃಷ್ಟಿಯು ಅಕಸ್ಮಾತ್ತಾಗಿ ಪಾರ್ವತಿಯ ಮೇಲೆ ಬಿದ್ದು ಒಡನೆಯೇ ಆತನ ಸಿಟ್ಟು ಅಡಗಿತು. ಪಾರ್ವತಿಯು ರತಿಯ ಕಷ್ಟವನ್ನು ಹೋಗಲಾಡಿಸಬೇಕೆಂದು ಶಿವನನ್ನು ಕೇಳಿಕೊಳ್ಳಲು, ರತಿಯ ಮಟ್ಟಿಗೆ ಕಾಮನು ಸಶರೀರನಾಗಿಯೂ, ಜಗತ್ತಿಗೆಲ್ಲ ಅಶರೀರ (ಅನಂಗ) ನಾಗಿಯೂ ಇರುವಂತೆ ಅನುಗ್ರಹಿಸಿದನು. ತರುವಾಯ ಶಿವನು ಪಾರ್ವತಿಯ ಭಕ್ತಿಗೆ ಮೆಚ್ಚಿ ಆಕೆಯನ್ನು ಮದುವೆಯಾದನು. ಶಿವನ ತೇಜಸ್ಸಿನಿಂದ ಹುಟ್ಟಿದ ಷಣ್ಮುಖನು (ಕುಮಾರಸ್ವಾಮಿಯು) ದೇವತೆಗಳ ಪ್ರಾರ್ಥನೆಯಿಂದ ದೇವ ಸೇನಾಪತಿಯಾಗಿ ತಾರಕಾಸುರನೊಡನೆ ಯುದ್ಧಮಾಡಿ ಅವನನ್ನು ಕೊಂದು ಜಗತ್ತಿಗೆಲ್ಲ ಕ್ಷೇಮವನ್ನುಂಟುಮಾಡಿದನು.

---

೨. ಹರಿಶ್ಚಂದ್ರನ ಕಥೆ

I

ತ್ರೇತಾಯುಗದಲ್ಲಿ ಒಂದಾನೊಂದು ದಿನ ದೇವೇಂದ್ರನ ಸಭೆಯಲ್ಲಿ ಸತ್ಯವಂತರ ವಿಷಯವಾಗಿ ಚರ್ಚೆ ನಡೆಯಿತು. ಆಗ ತ್ರಿಲೋಕ ಸಂಚಾರಿಯಾದ ನಾರದನು ಭೂಲೋಕದ ಹರಿಶ್ಚಂದ್ರನು ಬಹಳ ಸತ್ಯವಂತನೆಂದು ಕೊಂಡಾಡಿದನು. ಇದಕ್ಕೆ ವಸಿಷ್ಠಮುನಿಯು ಒಪ್ಪಿಗೆಯನ್ನಿತ್ತು ಹರಿಶ್ಚಂದ್ರನನ್ನು ತಾನೂ ಹೊಗಳಿದನು. ಇದು ವಿಶ್ವಾಮಿತ್ರಮುನಿಗೆ ಸರಿಬೀಳದೆ

ತಾನು ಹರಿಶ್ಚಂದ್ರನನ್ನು ಸತ್ಯಭ್ರಷ್ಟನನ್ನಾಗಿ ಮಾಡುವೆನೆಂದೂ, ಇಲ್ಲದಿದ್ದರೆ ತನ್ನ ತಪಸ್ಸಿನಲ್ಲಿ ಅರ್ಧವನ್ನು ಆತನಿಗೆ ಕೊಡುವೆನೆಂದೂ ಪ್ರತಿಜ್ಞೆಮಾಡಿದನು.

ಆ ಕಾಲಕ್ಕೆ ಸರಿಯಾಗಿ ಹರಿಶ್ಚಂದ್ರನು ಕಾಡಿಗೆ ಬೇಟೆಯಾಡಲು ಬಂದನು. ವಿಶ್ವಾಮಿತ್ರನು ತನ್ನ ಮಾಯಾಶಕ್ತಿಯಿಂದ ಒಂದು ಕಾಡು ಹಂದಿಯನ್ನು ನಿರ್ಮಿಸಿ ಅದು ರಾಜನೆದುರಿಗೆ ಬರುವಂತೆ ಏರ್ಪಡಿಸಿದನು. ರಾಜನು ಅದನ್ನು ಅಟ್ಟಿಕೊಂಡು ಹೋಗಲು ಅದು ವಿಶ್ವಾಮಿತ್ರನ ಆಶ್ರಮವನ್ನು ಹೊಕ್ಕಿತು. ಅಲ್ಲಿ "ಆರ್ಯರೇ! ರಕ್ಷಿಸಿರಿ, ಅನಾಥೆಯರಾದ ನಮ್ಮನ್ನು ಅಗ್ನಿಯಲ್ಲಿ ಕೆಡಹುವನು" ಎಂದು ಗೋಳಿಡುವ ಸ್ತ್ರೀಯರ ರೋದನವು ಕೇಳಬಂದಿತು. ಇದನ್ನು ಕೇಳಿ ರಾಜನು ಅತ್ತಕಡೆಗೆ ಬೇಗನೆ ನಡೆದುಬರಲು, ಅಲ್ಲಿಯೊಂದುಕಡೆ ಹೋಮಕುಂಡವೂ, ಅದರ ಬಳಿಯಲ್ಲಿ ಭಯಗೊಂಡ ಮೂವರು ಸುಂದರ ಸ್ತ್ರೀಯರೊಡನೆ ಒಬ್ಬ ಮುನಿಯೂ ಕಾಣಬಂದರು. ಇವನು ಮುನಿವೇಷದ ಕ್ರೂರ ಪಾಷಂಡನೆಂದೆಣಿಸಿ ರಾಜನು ಆ ಮುನಿವೇಷಧಾರಿಯನ್ನು ಕೋಪದಿಂದ ಗದರಿಸಿದನು.

ವಿಶ್ವಾಮಿತ್ರನು ಬಹಳ ಸಿಟ್ಟಾಗಿ, "ದುರಾತ್ಮ, ನಾನು ಮಾಡುತ್ತಿದ್ದ ಹೋಮಕ್ಕೆ ನೀನು ವಿಘ್ನಕಾರಿಯಾದೆ! ನಿಲ್ಲು, ಈಗಲೇ ಶಾಪವನ್ನು ಕೊಡುವೆನು" ಎನ್ನಲು, ಹರಿಶ್ಚಂದ್ರನು ಭಯದಿಂದ ನಡುಗುತ್ತ ತಿಳಿಯದೆ ಮಾಡಿದ ಅಕಾರ್ಯಕ್ಕೆ ಕ್ಷಮಿಸಬೇಕೆಂದೂ, ಸ್ತ್ರೀಜನದ ಮೊರೆಯನ್ನು ಕೇಳಿ ಅಂಥಹವರನ್ನು ಸಲಹತಕ್ಕದ್ದು ಸ್ವಧರ್ಮವೆಂದೆಣಿಸಿ ಹಾಗೆ ನಡೆದದ್ದಲ್ಲದೆ ಬೇರೆಯಲ್ಲವೆಂದೂ ಹೇಳಿಕೊಂಡನು. ಇದಕ್ಕೆ ವಿಶ್ವಾಮಿತ್ರನು ಕೋಪದಿಂದ "ಎಲೋ ಕ್ಷತ್ರಿಯಾಧಮನೆ! ನಿನ್ನ ಧರ್ಮವು ಏನೇನು ಹೇಳು" ಎನ್ನಲು ಹರಿಶ್ಚಂದ್ರನು ಭಯಭಕ್ತಿಗಳೊಡನೆ, "ದಾನ, ಯುದ್ಧ, ರಕ್ಷಣೆ—ಈ ಮೂರೂ ರಾಜಧರ್ಮಗಳೆಂದು ಶಾಸ್ತ್ರವರಿತವರು ಹೇಳುವರು" ಎಂದನು. ಇದನ್ನು ಕೇಳಿ ವಿಶ್ವಾಮಿತ್ರನು, "ಹಾಗಾದರೆ ನಮ್ಮ ವಿದ್ಯಾತಪಸ್ಸುಗಳಿಗೆ ತಕ್ಕಂತೆ ಏನನ್ನು ದಾನಮಾಡುವೆ?" ಎಂದು ಕೇಳಲು, ರಾಜನು ಬಹಳ ಸಂತೋಷಪಟ್ಟು, "ಪೂಜ್ಯರೇ! ತಮ್ಮ ಯೋಗ್ಯತೆಗೆ ತಕ್ಕ ದಾನ ಕೊಡಲು ನಾನು ಶಕ್ತನಲ್ಲ; ಆದರೂ ನಾನು ಆಳುತ್ತಿರುವ ಭೂಭಾಗವೆಲ್ಲವನ್ನೂ ತಮ್ಮ ಪಾದದಲ್ಲಿ ಕಾಣಿಕೆಯಾಗಿ ಅರ್ಪಿಸುವೆನು, ಅದನ್ನು ತಾವು ಅಂಗೀಕರಿಸಬೇಕು"

ಎಂದು ಕೇಳಿಕೊಂಡನು. ಅದಕ್ಕೆ ಋಷಿಯು, “ಒಳ್ಳೆಯದು, ಆದರೆ ದಕ್ಷಿಣೆ ಯಿಲ್ಲದೆ ಕೊಟ್ಟ ದಾನದಿಂದ ಏನು ಫಲ?” ಎಂದು ಆಕ್ಷೇಪಿಸಿ, “ಈಗಲೇ ನನ್ನ ರಾಜ್ಯವನ್ನು ಬಿಟ್ಟು ಹೊರಟು ದಕ್ಷಿಣಾದ್ರವ್ಯವನ್ನು ಒಂದು ತಿಂಗ ಳೊಳಗಾಗಿ ತಂದು ಒಪ್ಪಿಸು; ಅದುವರೆಗೂ ನನ್ನ ಶಿಷ್ಯ ನಕ್ಷತ್ರಕನನ್ನು ಸಂಗಡ ಕರೆದುಕೊಂಡು ಹೋಗಿ ಉಪಚಾರ ಮಾಡುತ್ತಿರು” ಎಂದು ಕಟ್ಟು ಮಾಡಿದನು.

II

ಹರಿಶ್ಚಂದ್ರನು ರಾಜ್ಯವನ್ನು ಬಿಟ್ಟು ತನ್ನ ಹೆಂಡತಿ ಚಂದ್ರಮತಿಯನ್ನೂ, ಮಗ ಲೋಹಿತಾಸ್ಯನನ್ನೂ ಕರೆದುಕೊಂಡು ಹೊರಟು ಕಾಡು ದಾರಿಗಳಲ್ಲಿ ಬಹಳ ಶ್ರಮಪಟ್ಟಿದ್ದಲ್ಲದೆ ನಕ್ಷತ್ರಕನು ಕೊಟ್ಟ ಹಲವು ತೊಂದರೆಗಳನ್ನೂ ಸಹಿಸಿಕೊಂಡು ಕೊನೆಗೆ ಕಾಶಿಯನ್ನು ಸೇರಿದನು. ಭೂಮಿಗೆ ಸೇರದೆ ಸ್ವರ್ಗಕ್ಕೆ ಸೇರಿದ್ದೆಂದು ಹೆಸರು ಪಡೆದಿರುವ ಈ ಕಾಶೀ ಕ್ಷೇತ್ರದಲ್ಲಿ ಹೇಗಾದರೂ ದಕ್ಷಿಣಾದ್ರವ್ಯವನ್ನು ಸಂಪಾದಿಸಬೇಕೆಂದು ನಿಶ್ಚಯಿಸಿ, ಕ್ಷತ್ರಿಯರಿಗೆ ಭಿಕ್ಷೆ ಬೇಡುವುದು ಧರ್ಮವಲ್ಲದ್ದರಿಂದಲೂ ಅವರು ಆಪತ್ಕಾಲದಲ್ಲಿ ವೈಶ್ಯವೃತ್ತಿ ಯನ್ನು ಕೈಕೊಳ್ಳಬಹುದಾದ್ದರಿಂದಲೂ ಹರಿಶ್ಚಂದ್ರನು ತನ್ನ ಹೆಂಡತಿಯನ್ನೂ, ಮಗನನ್ನೂ ಕಾಲಕೌಶಿಕನೆಂಬ ಬ್ರಾಹ್ಮಣನಿಗೆ ಮಾರಿದನು. ಇದರಿಂದ ಬಂದ ಹಣವು ತನಗೆ ಬೇಕಾದ ದಕ್ಷಿಣಾದ್ರವ್ಯದಲ್ಲಿ ಅರ್ಧಭಾಗ ಮಾತ್ರ ವಾದುದರಿಂದ ಮಿಕ್ಕ ಅರ್ಧ ಭಾಗವನ್ನು ಆರ್ಜಿಸುವುದಕ್ಕಾಗಿ ತನ್ನನ್ನು ಅದೇ ಪಟ್ಟಣದಲ್ಲಿದ್ದ ವೀರಬಾಹುವೆಂಬ ಚಂಡಾಲನಿಗೆ ಮಾರಿಕೊಂಡನು. ಹೀಗೆ ಬಂದ ಹಣವನ್ನು ವಿಶ್ವಾಮಿತ್ರನಿಗೆ ಕಳುಹಿ ಹರಿಶ್ಚಂದ್ರನು ತನ್ನ ಋಣವನ್ನು ತೀರಿಸಿದನು. ವೀರಬಾಹುವು ಹರಿಶ್ಚಂದ್ರನನ್ನು ಸ್ಮಶಾನದಲ್ಲಿ ಕಾವಲುಗಾರ ನಾಗಿರುವಂತೆ ನಿಯಮಿಸಿದನು. ಕಾಲಕೌಶಿಕನು ಚಂದ್ರಮತಿಯ ಪತಿವ್ರತಾ ಧರ್ಮಕ್ಕೆ ಕುಂದು ಬಾರದಂತೆ ಆಕೆಯಿಂದಲೂ, ಆಕೆಯ ಮಗನಿಂದಲೂ ತಕ್ಕ ಕೆಲಸಗಳನ್ನು ಮಾಡಿಸಿಕೊಳ್ಳುತ್ತಿದ್ದನು.

ಹೀಗಿರುವಲ್ಲಿ, ಒಂದಾನೊಂದು ದಿನ ಲೋಹಿತಾಸ್ಯನು ಇತರ ವಟು ಗಳೊಡನೆ ಸಮಿತ್ತುಗಳನ್ನು ತರಲು ಅಡವಿಗೆ ಹೋಗಿ ಅಲ್ಲಿ ಒಂದು ಹಾವು ಕಚ್ಚಿದುದರಿಂದ ಕೂಡಲೆ ಸತ್ತುಹೋದನು. ಈ ಸುದ್ದಿಯು ಚಂದ್ರಮತಿಗೆ

ತಿಳಿದೊಡನೆಯೇ ಆಕೆಯು ಬಹಳ ದುಃಖದಿಂದ ಅಳುತ್ತ ಮಗನ ಹೆಣವು ಬಿದ್ದಿದ್ದ ಸ್ಥಳಕ್ಕೆ ಓಡಿಬಂದಳು. ಹೆಣವನ್ನು ಸ್ಮಶಾನಕ್ಕೆ ಹೊತ್ತುಕೊಂಡು ಹೋಗಲು ಯಾರೂ ದೊರೆಯದಿದ್ದುದರಿಂದ ಆಕೆಯೇ ಹೊತ್ತುಕೊಂಡು ಹೋಗಬೇಕಾಯಿತು. ಸ್ಮಶಾನದಲ್ಲಿ ಹೆಣವನ್ನು ಒಂದು ಕಡೆ ಇಟ್ಟು ಅದನ್ನು ಸುಡುವುದಕ್ಕಾಗಿ ಅಲ್ಲಲ್ಲಿ ಕಟ್ಟಿಗೆಯನ್ನು ಆರಿಸುತ್ತ ಅಳುತ್ತಿರುವ ಆಕೆಯನ್ನು ಕಾವಲುಗಾರನಾದ ಹರಿಶ್ಚಂದ್ರನು ಕಂಡು ಗುರುತು ಹಿಡಿಯಲಾರದೆ ಸ್ಮಶಾನದ ಕಾಣಿಕೆಯನ್ನು ಕೊಡೆಂದು ಕೇಳಿದನು. ಅಷ್ಟರಲ್ಲಿ ಒಬ್ಬರೊಬ್ಬರ ಗುರುತನ್ನು ಹಿಡಿದು ಇಬ್ಬರೂ ಬಹಳ ದುಃಖಪಟ್ಟರು. ಕೊನೆಗೂ ಹರಿಶ್ಚಂದ್ರನು ಕಾಣಿಕೆ ಯಿಲ್ಲದೆ ಹೆಣವನ್ನು ಸುಡಲಾಗದೆಂದು ಹೇಳಿ ಚಂದ್ರಮತಿಯನ್ನು ಹಾಗೆಯೇ ಕಳುಹಿಸಿಬಿಟ್ಟನು.

III

ಚಂದ್ರಮತಿಯು ಕಗ್ಗತ್ತಲೆಯಲ್ಲಿ ಹಿಂದಿರುಗಿ ಬರುತ್ತಿರುವಾಗ ದಾರಿ ಯಲ್ಲಿ ಕಳ್ಳರು ಒಬ್ಬ ಹುಡುಗನ ಮೈಮೇಲಿದ್ದ ಒಡವೆಗಳನ್ನು ಸುಲಿದುಕೊಂಡು ಅವನನ್ನು ಕೊಲ್ಲಬೇಕೆಂದು ಯತ್ನಿಸುತ್ತಿರಲಾಗಿ ಆ ಹುಡುಗನು “ಯಾರೂ ನನ್ನನ್ನು ಬಿಡಿಸಿಕೊಳ್ಳುವವರಿಲ್ಲವೆ?” ಎಂದು ಗಟ್ಟಿಯಾಗಿ ಅಳುತ್ತಿದ್ದನು. ಈ ದನಿಯನ್ನು ಕೇಳಿ ಚಂದ್ರಮತಿಯು ಆ ಸ್ಥಳಕ್ಕೆ ಬಂದು ಕಳ್ಳರನ್ನು ಬೆದರಿಸಲು ಅವರು ಒಡವೆಗಳನ್ನು ತೆಗೆದುಕೊಂಡು ಹುಡುಗನನ್ನು ಅಲ್ಲಿಯೇ ಬಿಟ್ಟು ಓಡಿಹೋದರು. ಆಗ ಚಂದ್ರಮತಿಯು ಅಳುತ್ತಿದ್ದ ಹುಡುಗನ ಮೇಲೆ ಕರುಣೆಗೊಂಡು ಅವನನ್ನು ಸಮಾಧಾನ ಮಾಡಿ ತನ್ನ ಮಗನ ಸಾವಿಗಾಗಿ ಬಾರಿ ಬಾರಿಗೂ ಬಿಕ್ಕಿ ಬಿಕ್ಕಿ ಅಳುತ್ತಿದ್ದಳು.

ಈ ಸಮಯದಲ್ಲಿ ಅರಸು ಮಗನಾದ ಆ ಹುಡುಗನನ್ನು ರಾಜಭಟರು ಹುಡುಕುತ್ತ ಬಂದು ಅವನನ್ನೂ, ಅವನ ಬಳಿಯಲ್ಲಿದ್ದ ಚಂದ್ರಮತಿಯನ್ನೂ ಕಂಡು ಹುಡುಗನ ಒಡವೆಗಳನ್ನು ಚಂದ್ರಮತಿಯೇ ಕದ್ದಿರಬೇಕೆಂದು ನಿಶ್ಚಯಿಸಿದರು. ತಾನು ಅಪರಾಧಿಯಲ್ಲವೆಂದು ಎಷ್ಟು ಪರಿಯಿಂದ ಹೇಳಿ ಕೊಂಡರೂ ಕೇಳದೆ ರಾಜಭಟರು ಆಕೆಯನ್ನು ನ್ಯಾಯಾಧೀಶನ ಬಳಿಗೆ ಹಿಡಿದುಕೊಂಡು ಹೋಗಲು, ಆತನು ಆಕೆಯ ಸ್ವಭಾವವನ್ನು ತಿಳಿಯದೆ ಆಕೆಯೇ ಕಳ್ಳತನ ಮಾಡಿದವಳೆಂದು ಗೊತ್ತುಮಾಡಿ ಆಕೆಯ ತಲೆಯನ್ನು

ಕಡಿದುಹಾಕುವಂತೆ ಆಜ್ಞಾಪಿಸಿದನು. ಕೂಡಲೆ ರಾಜಭಟರು ಆಕೆಯನ್ನು ವೀರಬಾಹುವಿನ ವಶಕ್ಕೆ ಒಪ್ಪಿಸಲು, ಅವನು ಆಕೆಯ ತಲೆಯನ್ನು ಕಡಿದು ಹಾಕೆಂದು ತನ್ನ ಆಳಾದ ಹರಿಶ್ಚಂದ್ರನಿಗೆ ಅಪ್ಪಣೆ ಮಾಡಿದನು.

ಹೀಗೆ ಮರಳಿ ಸ್ಮಶಾನಕ್ಕೆ ಬಂದ ಚಂದ್ರಮತಿಯನ್ನು ನೋಡಿ ಹರಿಶ್ಚಂದ್ರನು ಮೇಲೆ ಮೇಲೆ ಬರುತ್ತಿರುವ ಸಂಕಟಗಳಿಗಾಗಿ ಸ್ವಲ್ಪ ಹೊತ್ತು ವ್ಯಸನಪಟ್ಟನು. ತರುವಾಯ ಧೈರ್ಯವನ್ನು ತಂದುಕೊಂಡು ಎಂತಹ ಕಷ್ಟ ದಲ್ಲಾದರೂ ತನ್ನ ದಣಿಯು ಅಪ್ಪಣೆ ಮಾಡಿದ ಕೆಲಸವನ್ನು ಮಾಡಿಯೇ ತೀರಬೇಕೆಂಬ ನಿಶ್ಚಯದಿಂದ ಕತ್ತಿಯನ್ನೆತ್ತಿದರೂ ಅದನ್ನು ಹೆಂಡತಿಯ ಕುತ್ತಿಗೆಯಮೇಲೆ ಹಾಕುವುದಕ್ಕಾಗದೆ ಚಿಂತೆಯಿಂದ ಮರದಂತೆ ನಿಂತು ಕೊಂಡನು. ಇದನ್ನು ನೋಡಿ ಚಂದ್ರಮತಿಯು ಗಂಡನನ್ನು ಎಚ್ಚರಿಸಿ ತನ್ನ ಕರ್ತವ್ಯವನ್ನು ಮಾಡುವಂತೆ ಆತನಿಗೆ ಧೈರ್ಯ ಹೇಳಿದಳು. ಆಗ ಹರಿಶ್ಚಂದ್ರನು ಕರ್ತವ್ಯದಲ್ಲಿಯೇ ದೃಷ್ಟಿಯಿಟ್ಟು ತನ್ನ ಹೆಂಡತಿಯ ತಲೆಯನ್ನು ಕಡಿದುಹಾಕುವುದಕ್ಕೆ ಕತ್ತಿಯನ್ನು ಎತ್ತಲು ಧರ್ಮಪುರುಷನು ಪ್ರತ್ಯಕ್ಷನಾಗಿ ಬಂದು ಅವನ ಕೈಹಿಡಿದು ನಿಲ್ಲಿಸಿದನು.

ಕೂಡಲೆ ಸಕಲ ದೇವತೆಗಳೂ, ವಸಿಷ್ಠ ವಿಶ್ವಾಮಿತ್ರ ನಾರದಾದಿ ಋಷಿ ಗಳೂ ಆ ಸ್ಥಳಕ್ಕೆ ಬಂದು ಹರಿಶ್ಚಂದ್ರನ ಸತ್ಯವ್ರತಕ್ಕೆ ಮೆಚ್ಚಿ, "ನಿನ್ನ ಕೀರ್ತಿಯು ಮೂರು ಲೋಕಗಳಲ್ಲಿಯೂ ಶಾಶ್ವತವಾಗಿರಲಿ" ಎಂದು ಹರಸಿ ದ್ದಲ್ಲದೆ ಸತ್ತುಹೋಗಿದ್ದ ಲೋಹಿತಾಸ್ಯನನ್ನು ಬದುಕಿಸಿಕೊಟ್ಟರು. ವಿಶ್ವಾ ಮಿತ್ರನು ತಾನು ಸೋತುಹೋದೆನೆಂದು ಒಪ್ಪಿಕೊಂಡು, ತಾನು ಅಷ್ಟು ಕಷ್ಟಗಳನ್ನು ಕೊಟ್ಟರೂ ಸಹಿಸಿಕೊಂಡು ಸತ್ಯವನ್ನು ಕಾಪಾಡಿಕೊಂಡದ್ದಕ್ಕಾಗಿ ತನ್ನ ತಪಸ್ಸಿನಲ್ಲಿ ಅರ್ಧವನ್ನು ಹರಿಶ್ಚಂದ್ರನಿಗೆ ಧಾರೆಯೆರೆದು ಕೊಟ್ಟು ಆತನ ರಾಜ್ಯವನ್ನೂ ಹಿಂದಕ್ಕೆ ಕೊಟ್ಟನು. ವಸಿಷ್ಠನು ಇಂದ್ರ ಸಭೆಯಲ್ಲಿ ತಾನಾಡಿದ ಮಾತು ಗೆದ್ದದ್ದಕ್ಕಾಗಿ ಬಹಳ ಸಂತೋಷಪಟ್ಟು, "ಎಲ್ಲಾ ದೇವತೆಗಳ ಅನು ಗ್ರಹಕ್ಕೆ ಪಾತ್ರನಾಗಿರು" ಎಂದು ಹರಿಶ್ಚಂದ್ರನಿಗೆ ವರವಿತ್ತನು. ತರುವಾಯ ಎಲ್ಲರೂ ಹರಿಶ್ಚಂದ್ರನಿಗೆ ಪಟ್ಟಾಭಿಷೇಕ ಮಾಡಿ ಆಶೀರ್ವದಿಸಿ ಹೊರಟು ಹೋದರು.

೩. ಬ್ರಹ್ಮನ ಶಿರಸ್ಸು ಹೋದ ಕಥೆ

ಸತ್ಯಲೋಕದಲ್ಲಿ ಚತುರ್ಮುಖ ಬ್ರಹ್ಮನು ಇಂದ್ರಾದಿ ದೇವತೆಗಳು, ನಾರದಾದಿ ಋಷಿಗಳು—ಇವರೊಡನೆ ಓಲಗದಲ್ಲಿದ್ದ ಒಂದಾನೊಂದು ಸಮಯದಲ್ಲಿ ಅಲ್ಲಿದ್ದ ಋಷಿಗಳು ಬ್ರಹ್ಮನನ್ನು ಕುರಿತು "ಎಲೈ ಸೃಷ್ಟಿಕರ್ತನೆ! ಜಗತ್ತಿನಲ್ಲಿ ಎಲ್ಲರಿಗಿಂತ ಶ್ರೇಷ್ಠನು ಯಾರೆಂಬುದನ್ನು ತಿಳಿಸು; ಆತನನ್ನು ನಾವೆಲ್ಲರೂ ಭಕ್ತಿಯಿಂದ ಆರಾಧಿಸುವೆವು" ಎಂದು ಕೇಳಿದರು. ಅದಕ್ಕೆ ಬ್ರಹ್ಮನು "ಮುನಿಗಳಿರಾ! ಈ ಜಗತ್ತಿಗೆ ನಾನು ಕರ್ತನಾದುದರಿಂದ ನಾನೇ ಮಿಗಿಲಾದವನು, ನನಗಿಂತಲೂ ಹೆಚ್ಚಿನವರು ಯಾರಿರುವರು?" ಎಂದನು. ಅದಕ್ಕೆ ವಿಷ್ಣುವು "ಅಯ್ಯಾ ಬ್ರಹ್ಮನೆ! ನೀನು ಜಗತ್ತನ್ನು ಸೃಷ್ಟಿಮಾಡುವವನು, ನಾನು ಕಾಪಾಡುವವನು, ಮಹೇಶ್ವರನು ಸಂಹಾರ ಮಾಡುವವನು; ಆದುದರಿಂದ ಮಹೇಶ್ವರನು ನಮ್ಮೆಲ್ಲರಿಗಿಂತ ದೊಡ್ಡವನು" ಎಂದು ಹೇಳಿದನು. ಅದಕ್ಕೆ ಬ್ರಹ್ಮನು ಕೋಪಗೊಂಡು ಈಶ್ವರನನ್ನು ಹಲವು ಬಗೆಯಿಂದ ಹಳಿದು "ಶಿವನಿಗೆ ಐದು ಮುಖಗಳಿರುವುದರಿಂದ ಅವನನ್ನು ದೊಡ್ಡವನೆನ್ನುವಿರೊ? ಇಗೋ ನೋಡಿರಿ! ನನಗೂ ಐದು ಮುಖಗಳಿರುವುವು" ಎಂದು ಹೇಳಿ, ತನಗೆ ಮತ್ತೊಂದು ಮುಖವನ್ನು ನಿರ್ಮಿಸಿಕೊಂಡು, ಈ ಐದನೆಯ ಮುಖದಿಂದ ಶಿವನನ್ನು ಮತ್ತಷ್ಟು ದೂಷಿಸಿದನು. ಆ ಸಮಯಕ್ಕೆ ಸರಿಯಾಗಿ ಶಿವನು ಅಲ್ಲಿಗೆ ಬರಲು, ಇಂದ್ರಾದಿ ದೇವತೆಗಳೆಲ್ಲರೂ ಆತನನ್ನು ಗೌರವಿಸಿದರು. ಆದರೆ ಬ್ರಹ್ಮನು ಮಾತ್ರ ಶಿವನನ್ನು ಹೀಯಾಳಿಸಿದನು. ಇದನ್ನು ನೋಡಿ ಆ ರುದ್ರನು ತನ್ನ ಎಡಗೈ ಬೆರಳ ಉಗುರಿನಿಂದ ಬ್ರಹ್ಮನ ಐದನೆಯ ತಲೆಯನ್ನು ಚಿವುಟಿ ತೆಗೆದನು. ಅದರಿಂದ ದೊಡ್ಡ ರಕ್ತ ಪ್ರವಾಹವು ಹೊರಡಲು, ಶಿವನು ತನ್ನ ಹಣೆಗಣ್ಣಿನಿಂದ ಹೊರಟ ಜ್ವಾಲೆಯಿಂದ ಅದು ಬತ್ತಿಹೋಗುವಂತೆ ಮಾಡಿದನು. ಅಂದಿನಿಂದ ಬ್ರಹ್ಮನಿಗೆ ಅಹಂಕಾರವು ಕುಗ್ಗಿತು.

ಶಿವನು ಚಿವುಟಿ ತೆಗೆದ ಬ್ರಹ್ಮನ ತಲೆಯು ಶಿವನ ಕೈಯಲ್ಲಿಯೇ ಹತ್ತಿಕೊಂಡದ್ದರಿಂದ ಅದಕ್ಕಾಗಿ ಶಿವನು ಭಿಕ್ಷಾಟನೆ ಮಾಡಬೇಕಾಯಿತು.

೪. ಬಲಿಚಕ್ರವರ್ತಿಯ ಕಥೆ

ಕೃತ ಯುಗದಲ್ಲಿ ಪ್ರಹ್ಲಾದನ ಮೊಮ್ಮಗನಾದ ಬಲಿಯು ತನ್ನ ಸತ್ಯ ಧರ್ಮ ಪರಾಕ್ರಮಗಳಿಂದ ಮೂರು ಲೋಕಗಳನ್ನೂ ಜಯಿಸಿ ಅಸಮಾ ನಾಗಿ ನರ್ಮದಾ ನದಿಯ ತೀರದಲ್ಲಿ ಅಶ್ವಮೇಧ ಯಾಗವನ್ನು ಮಾಡಲಾರಂ ಸಿದನು. ಆ ಯಜ್ಞಕ್ಕೆ ಶುಕ್ರಾಚಾರ್ಯರೇ ಮೊದಲಾದ ಬ್ರಾಹ್ಮಣರ ಋತ್ವಿಜರಾಗಿದ್ದರು. ಅಲ್ಲಿಗೆ ಶ್ರೀ ವಿಷ್ಣುವು ಬ್ರಹ್ಮಚಾರಿಯ ರೂಪಿನಿಂ ವಾಮನಾವತಾರವನ್ನು ತಾಳಿ ಬರಲು, ಬಲಿಯು ಆತನನ್ನು ತಕ್ಕ ರೀತಿಯಲ್ಲಿ ಸತ್ಕರಿಸಿ, ಬಂದ ಕಾರ್ಯವೇನೆಂದು ಕೇಳಿದನು. ಅದಕ್ಕೆ ವಾಮನನು “ ಎಲೈ ಬಲಿಚಕ್ರವರ್ತಿಯೆ ! ನೀನು ಮಹಾ ಧರ್ಮಿಷ್ಠನು. ಬಹಳ ಉದಾರಿ ಆದುದರಿಂದ ನನ್ನ ಹೆಜ್ಜೆಯಲ್ಲಿ ಮೂರು ಹೆಜ್ಜೆಯಷ್ಟು ಸ್ಥಳವನ್ನು ದಾ ಕೇಳುವೆನು” ಎನ್ನಲು, ಬಲಿಯು ಸಂತೋಷದಿಂದ ಕೊಡುವೆನೆಂದು ಒಪ್ಪಿ ಕೊಂಡನು. ಇದನ್ನು ಅಲ್ಲಿದ್ದ ದೈತ್ಯ ಪುರೋಹಿತನಾದ ಶುಕ್ರಾಚಾರ್ಯನ ತಿಳಿದು “ ಅಯ್ಯಾ ಬಲಿಚಕ್ರವರ್ತಿಯೆ ! ಈತನು ವಿಷ್ಣುವಿನ ಅವತಾರವು ದೇವೇಂದ್ರನಲ್ಲಿ ಪಕ್ಷಪಾತವನ್ನು ವಹಿಸಿ ಈ ದಾನದ ನೆವದಿಂದ ಮೂರು ಲೋಕದ ಆಧಿಪತ್ಯವನ್ನೂ ನಿನ್ನಿಂದ ಕಿತ್ತುಕೊಂಡು ಆತನಿಗೆ ಕೊಡ ಬೇಕೆಂದಿರುವನು ; ನೀನಾಗಿ ನಿನ್ನ ಅಧಿಕಾರವನ್ನು ಹೋಗಲಾಡಿಸಿಕೊಂಡು ಇತರರ ಅಧೀನಕ್ಕೊಳಗಾಗುವುದು ಸರಿಯಲ್ಲ ; ಆದುದರಿಂದ ಆತನು ಕೇಳಿ ದಾನವನ್ನು ಕೊಡಬೇಡ” ಎಂದು ಹಲವು ಬಗೆಯಾಗಿ ಬೋಧಿಸಿದನು ಆದರೂ ಬಲಿಯು ಅದಕ್ಕೆ ಒಡಂಬಡದೆ ಕೊಟ್ಟ ಮಾತಿಗೆ ತಪ್ಪೆನೆಂದು ನುಡಿದನು.

ತರುವಾಯ ಬಲಿಯು ವಿಧಿಪೂರ್ವಕವಾಗಿ ವಾಮನನಿಗೆ ದಾನವನ್ನು ಕೊಡಲು ಉದ್ಯುಕ್ತನಾಗಿರುವಲ್ಲಿ, ಶುಕ್ರಾಚಾರ್ಯನು ತನ್ನ ಶಿಷ್ಯನಿಗೆ ಅನ್ಯಾಯವಾಗಿ ಕೇಡುಬರುವುದಲ್ಲಾ ಎಂದು ವ್ಯಥೆಪಟ್ಟು, ತನ್ನ ದೇಹವನ್ನು ತಪಶ್ಶಕ್ತಿಯಿಂದ ಕಿರಿದು ಮಾಡಿಕೊಂಡು ಧಾರೆಯ ನೀರೆರೆಯುವ ಗಿಂಡಿಯ ನಾಳದಲ್ಲಿ, ನೀರು ಹೊರಗೆ ಬಾರದಂತೆ, ಸೇರಿಕೊಂಡನು. ಎಷ್ಟು ಪ್ರಯತ್ನ ಮಾಡಿದರೂ ನೀರು ಬೀಳದೆಹೋದುದನ್ನು ಕಂಡು ವಾಮನನು ಗುಟ್ಟನ್ನರಿತ “ ನಾಳದಲ್ಲಿ ಏನೋ ಸಿಕ್ಕಿಕೊಂಡಿರಬೇಕು, ದರ್ಭೆಯಿಂದ ಚುಚ್ಚಿದರೆ ನೀರು

ಸರಿಯಾಗಿ ಬೀಳುವುದು" ಎಂದು ಹೇಳಲು ಬಲಿಯು ಹಾಗೆಯೇ ಮಾಡಿದನು. ದರ್ಭೆಯು ಶುಕ್ರಾಚಾರ್ಯನ ಕಣ್ಣನ್ನು ಚುಚ್ಚಿದುದರಿಂದ ಆತನ ಒಂದು ಕಣ್ಣು ಕುರುಡಾಯಿತು.

ಧಾರೆಯ ನೀರು ಬಿದ್ದಕೂಡಲೆ ವಾಮನನು ಅಪರಿಮಿತವಾಗಿ ಬೆಳೆದು ಒಂದು ಪಾದದಿಂದ ಭೂಮಿಯೆಲ್ಲವನ್ನೂ, ಮತ್ತೊಂದರಿಂದ ಆಕಾಶವೆಲ್ಲವನ್ನೂ ಅಳೆದುಕೊಂಡು ಮೂರನೆಯ ಅಡಿಗೆ ಸ್ಥಳವನ್ನು ತೋರಿಸು ಎಂದು ಬಲಿಯನ್ನು ಕೇಳಿದನು. ಧರ್ಮಾತ್ಮನಾದ ಬಲಿಯು, "ಅಯ್ಯಾ ಮಹಾವಿಷ್ಣುವೆ! ನನ್ನ ಶರೀರವೊಂದು ಉಳಿದಿರುವುದರಿಂದ ನಿನ್ನ ಪಾದವನ್ನು ನನ್ನ ತಲೆಯ ಮೇಲಿಡು" ಎಂದು ಹೇಳಲು, ವಾಮನನು ಅದೇ ಮೇರೆಗೆ ಇಟ್ಟು ಬಲಿಯನ್ನು ಸುತಲ ಲೋಕಕ್ಕೆ ಇಳಿಯುವಂತೆ ಮೆಟ್ಟಿ, ಅವನು ಅಲ್ಲಿಯೇ ಇರಬೇಕೆಂದು ಕಟ್ಟುಮಾಡಿ, ದೇವೇಂದ್ರನಿಗೆ ತ್ರಿಲೋಕಾಧಿಪತ್ಯವನ್ನಿತ್ತನು. ಬಲಿಚಕ್ರವರ್ತಿಗೆ ಮುಂದಣ ಮನ್ವಂತರದಲ್ಲಿ ಇಂದ್ರಪಟ್ಟವು ದೊರೆಯುವುದೆಂದು ವಿಷ್ಣುವು ಹೇಳಿದುದಲ್ಲದೆ ತಾನು ಯಾವಾಗಲೂ ಆತನ ಮನೆಯ ಬಾಗಿಲಲ್ಲೇ ಕಾವಲಿರುವೆನೆಂದು ವರ ಕೊಟ್ಟನು.

---

೫. ನಳಚಕ್ರವರ್ತಿಯ ಕಥೆ

I

ಹಿಂದೆ ನಿಷಧ ದೇಶದಲ್ಲಿ ನಳನೆಂಬ ದೊರೆಯು ಬಹಳ ಧರ್ಮದಿಂದ ರಾಜ್ಯಭಾರ ಮಾಡುತ್ತಿದ್ದನು. ಅದೇ ಕಾಲದಲ್ಲಿ ವಿದರ್ಭ ದೇಶವನ್ನು ಭೀಮನೆಂಬ ಅರಸನು ಆಳುತ್ತಿದ್ದನು. ಆತನಿಗೆ ಬಹಳ ಚೆಲುವೆಯೂ, ಗುಣವಂತೆಯೂ, ಚತುರೆಯೂ ಆದ ದಮಯಂತಿಯೆಂಬ ಒಬ್ಬ ಮಗಳಿದ್ದಳು. ನಳನೂ, ದಮಯಂತಿಯೂ ಒಬ್ಬರೊಬ್ಬರ ಸುಗುಣಗಳನ್ನೂ, ಸೌಂದರ್ಯವನ್ನೂ ಕೇಳಿ ತಿಳಿದು ಪರಸ್ಪರ ಪ್ರೀತಿಯಿಂದ ಮದುವೆಯಾಗಿ ಕೆಲವು ಕಾಲದ ಮೇಲೆ ಇಬ್ಬರು ಮಕ್ಕಳನ್ನು ಪಡೆದು ಕುಂದಿಲ್ಲದ ಸುಖ ಸಂತೋಷಗಳನ್ನು ಅನುಭವಿಸುತ್ತಿದ್ದರು.

ಹೀಗಿರುವಲ್ಲಿ, ನಳನ ದಾಯಾದಿಯಾದ ಪುಷ್ಕರನು ನಳನನ್ನು ಪಗಡೆಯ ಜೂಜಾಟಕ್ಕೆ ಕರೆಯಲು, ನಳನು ಕಲಿಯ ಪ್ರೇರಣೆಯಿಂದ ಬುದ್ಧಿ ಕೆಟ್ಟು

ಜೂಜಾಟಕ್ಕೆ ಒಪ್ಪಿದನು. ಪುಷ್ಕರನು ಕಲಿಯ ಸಹಾಯದಿಂದ ನಳನ ರಾಜ್ಯವನ್ನೆಲ್ಲ ಕ್ರಮವಾಗಿ ಗೆದ್ದು ಕೊನೆಗೆ ನಳನನ್ನೂ,ದಮಯಂತಿಯನ್ನೂ ಉಟ್ಟ ಬಟ್ಟೆಯಲ್ಲಿ ದೇಶದಿಂದ ಹೊರಡಿಸಿಬಿಟ್ಟನು. ಇದಕ್ಕೆ ಮೊದಲೇ ಜೂಜಾಟದ ಪರಿಣಾಮವನ್ನು ಅರಿತಿದ್ದ ಚತುರೆಯಾದ ದಮಯಂತಿಯು ತನ್ನ ಮಕ್ಕಳಿಬ್ಬರನ್ನೂ ತನ್ನ ತವರುಮನೆಗೆ ಕಳುಹಿಸಿಬಿಟ್ಟಿದ್ದಳು.

ಈ ರೀತಿಯಿಂದ ಎಲ್ಲ ರಾಜ್ಯಕ್ಕೆ ದೊರೆಯಾದ ಪುಷ್ಕರನು ನಳ ದಮಯಂತಿಯರಿಗೆ ತನ್ನ ದೇಶದ ಜನರು ಯಾವ ಸಹಾಯವನ್ನೂ ಮಾಡಕೂಡದೆಂದು ಕಟ್ಟಪ್ಪಣೆಯನ್ನು ಮಾಡಲು, ದಂಪತಿಗಳಿಬ್ಬರೂ ಅಡವಿಯಲ್ಲಿ ಅಲೆದಾಡುತ್ತ ಅನೇಕ ಕಷ್ಟಗಳನ್ನನುಭವಿಸಿದರು. ಒಂದು ದಿನ ನಳನು ಕೆಲವು ಹಕ್ಕಿಗಳನ್ನು ಹಿಡಿಯುವುದಕ್ಕಾಗಿ ತಾನು ಹೊದೆದಿದ್ದ ವಸ್ತ್ರವನ್ನು ಬೀಸಲು ಆ ಹಕ್ಕಿಗಳು ಆ ಬಟ್ಟೆಯನ್ನು ಹೊತ್ತುಕೊಂಡು ಹಾರಿಹೋದುವು. ಹೀಗೆ ಬೆತ್ತಲೆಯಾಗಲು ಇಬ್ಬರೂ ದಮಯಂತಿಯುಟ್ಟಿದ್ದ ಸೀರೆಯನ್ನೇ ಸುತ್ತಿಕೊಂಡು ಅಡವಿಯಲ್ಲಿ ಕಲ್ಲು ಮುಳ್ಳುಗಳ ಮೇಲೆ ನಡೆದುಹೋದರು. ಕೋಮಲಾಂಗಿಯಾದ ದಮಯಂತಿಯು ಪಡುವ ಕಷ್ಟಗಳನ್ನು ನೋಡಲಾರದೆ ನಳನು ವ್ಯಥೆಪಡುತ್ತ ಸಂಜೆಯಾಗುತ್ತಲೆ ಒಂದು ಹಾಳು ಮಂಟಪವನ್ನು ಸೇರಿ ಅಲ್ಲಿ ಆಕೆಯೊಡನೆ ಕುಳಿತುಕೊಂಡನು. ಬಹಳ ಬಳಲಿದ್ದ ದಮಯಂತಿಯು ಕೂಡಲೆ ಮಲಗಿ ಮೈಮರೆತು ನಿದ್ದೆಹೋದಳು. ಬಗೆ ಬಗೆಯ ಯೋಚನೆಗಳಿಂದ ಪೀಡಿತನಾಗಿದ್ದ ನಳನಿಗೆ ನಿದ್ದೆ ಬಾರದಿರಲು ದಮಯಂತಿಯು ಆಕೆಯ ತವರುಮನೆಯನ್ನು ಸೇರುವುದಕ್ಕೆ ತಕ್ಕ ಉಪಾಯವು ಯಾವುದೆಂದು ಆತನು ಆಲೋಚಿಸುತ್ತಿದ್ದನು. ಎಂದೂ ಯಾವ ವಿಧವಾದ ಕಷ್ಟವನ್ನೂ ಅರಿಯದ ದಮಯಂತಿಯು ಸಹಿಸಲಶಕ್ಯವಾದ ಇಂತಹ ತೊಂದರೆಗಳನ್ನು ಅನುಭವಿಸುತ್ತಿದ್ದರೂ, ಗಂಡನ ಬಳಿಯಲ್ಲಿರುವೆನಲ್ಲಾ ಎಂಬ ಸಂತೋಷದಿಂದ ಆ ಕಷ್ಟಗಳನ್ನು ಲಕ್ಷ್ಯಮಾಡದೆ ಇರುತ್ತಿದ್ದಳು. ದಮಯಂತಿಯನ್ನು ತನ್ನಿಂದ ಅಗಲಿಸುವ ಉಪಾಯವನ್ನು ಕಾಣದೆ ತೊಂದರೆಪಡುತ್ತಿದ್ದ ನಳನು "ಈಗ ಈಕೆಯು ಗಾಢ ನಿದ್ರೆಯಲ್ಲಿರುವಳು, ನಾನು ಈಕೆಯನ್ನಗಲಿ ಹೋಗುವುದಕ್ಕೆ ಇದೇ ಸಮಯ, ಎಚ್ಚೆತ್ತ ಬಳಿಕ ಈಕೆಯು ಹೇಗಾದರೂ ತನ್ನ ತವರುಮನೆಗೆ ಹೋಗಿ ಸೇರುವಳು" ಎಂದು ಯೋಚಿಸಿ, ತನಗೆ ಉಟ್ಟು

ಕೊಳ್ಳುವುದಕ್ಕೆ ಬಟ್ಟೆಯಿಲ್ಲದುದರಿಂದ ಆಕೆಯ ಸೀರೆಯಲ್ಲಿ ಅರ್ಧವನ್ನು ಹರಿದು ಉಟ್ಟುಕೊಂಡು ಆಕೆಯನ್ನು ಅಗಲಿ ಹೋಗಲಾರದೆ ಕಳವಳಪಡುತ್ತ ಕೊನೆಗೆ ಗಟ್ಟಿ ಮನಸ್ಸುಮಾಡಿ ಹೊರಟುಹೋದನು.

ಬೆಳಗಾಗುತ್ತಲೇ ದಮಯಂತಿಯು ಎಚ್ಚತ್ತು ಪಕ್ಕದಲ್ಲಿ ಗಂಡನನ್ನು ಕಾಣದೆ ಗಾಬರಿಪಟ್ಟು, ಸುತ್ತಮುತ್ತಲೂ ಎಷ್ಟು ಹೊತ್ತು ಹುಡುಕಿದರೂ ಆತನು ದೊರೆಯದೇ ಹೋದುದರಿಂದ, ಕಾಡುಮೃಗಗಳಿಗೂ ದಯೆ ಹುಟ್ಟುವ ಹಾಗೆ ಮೊರೆಯಿಡುತ್ತ ಅಡವಿಯಲ್ಲಿ ಹುಚ್ಚಳಂತೆ ತಿರುಗುತ್ತಿರಲು ಎಲ್ಲಿಗೋ ಪ್ರಯಾಣ ಮಾಡುತ್ತಿದ್ದ ವರ್ತಕರ ಗುಂಪೊಂದು ಅಲ್ಲಿಗೆ ಬಂದಿತು. ಆ ವರ್ತಕರಿಗೆ ದಮಯಂತಿಯು ತನ್ನ ವೃತ್ತಾಂತವನ್ನೆಲ್ಲ ಹೇಳಿಕೊಳ್ಳಲು ಅವರು ಕನಿಕರದಿಂದ ಆಕೆಯನ್ನು ತಮ್ಮೊಡನೆ ಕರೆದುಕೊಂಡು ಹೋಗಿ ಚೇದಿರಾಜನ ಮನೆಗೆ ಬಿಟ್ಟರು. ಅಲ್ಲಿ ಕೆಲವು ದಿನ ಇದ್ದು ದಮಯಂತಿಯು ಕೊನೆಗೆ ತನ್ನ ತವರುಮನೆಯನ್ನು ಸೇರಿದಳು. ಭೀಮಭೂಪಾಲಕನೂ, ಆತನ ರಾಣಿಯೂ ತಮ್ಮ ಮುದ್ದುಮಗಳಿಗೆ ಒದಗಿದ ಕಷ್ಟಗಳಿಗಾಗಿ ಬಹಳ ವ್ಯಥೆ ಪಟ್ಟು, ದಮಯಂತಿಯ ಸಲಹೆಯ ಮೇರೆಗೆ ನಳನನ್ನು ಹುಡುಕುವುದಕ್ಕಾಗಿ ಚಾರರನ್ನು ನಾನಾ ದೇಶಗಳಿಗೆ ಕಳುಹಿಸಿದರು.

II

ಇತ್ತ, ನಳನು ದಮಯಂತಿಯನ್ನಗಲಿ ಅಡವಿಯಲ್ಲಿ ಹೋಗುತ್ತಿರಲು, ಒಂದು ಕಡೆ ಕಾಡು ಕಿಚ್ಚಿನಲ್ಲಿ ಸಿಕ್ಕಿ ಸಂಕಟಪಡುತ್ತಿದ್ದವರು ಯಾರೋ ತನ್ನನ್ನು ಹೆಸರು ಹಿಡಿದು ಕೂಗುವುದನ್ನು ಕೇಳಿ ಅತ್ತಕಡೆಗೆ ಹೋದನು. ಹತ್ತಿರಕ್ಕೆ ಹೋಗಿ ನೋಡುವಲ್ಲಿ ಒಂದು ಹಾವು ಮನುಷ್ಯನ ದನಿಯಿಂದ "ಅಯ್ಯಾ ನಳಮಹಾರಾಯನೆ! ನಾನು ಕರ್ಕೋಟಕನು, ಶಾಪವಶದಿಂದ ಈ ರೀತಿಯಾಗಿ ಇಲ್ಲಿ ಬಳಲುತ್ತಿರುವೆನು, ನಿನ್ನಿಂದ ನನ್ನ ಶಾಪವು ಕಳೆದು ಹೋಗುವುದೆಂದು ಹೇಳಿರುವರು; ಆದುದರಿಂದ ದಯಮಾಡಿ ನನ್ನನ್ನು ಎತ್ತಿಕೊಂಡು ಹೋಗಿ ಕಿಚ್ಚಿನಿಂದ ಹೊರಗೆ ಹಾಕಿ ಪುಣ್ಯ ಕಟ್ಟಿಕೊ" ಎಂದು ಹೇಳಿತು. ಇದನ್ನು ಕೇಳಿ ನಳನು ಕನಿಕರದಿಂದ ಆ ಹಾವನ್ನು ಎತ್ತಿಕೊಂಡು ಬಂದು ಕಿಚ್ಚಿನಿಂದ ಹೊರಗೆ ಇಡಲು ಅದು ನಳನನ್ನು ಕಚ್ಚಿತು. ಕೂಡಲೆ ನಳನ ಸುಂದರಾಕಾರವು ವಿಕಾರವಾಗಿ ಬಣ್ಣವು ಕಪ್ಪಾಯಿತು. ಇದನ್ನು

ನೋಡಿ ನಳನು "ಅಯ್ಯಾ ಕರ್ಕೋಟಕನೆ! ಉಪಕಾರ ಮಾಡಿದವರಿಗೆ ಹೀಗೆ ಅಪಕಾರ ಮಾಡಬಹುದೆ?" ಎಂದು ಕೇಳಲು, ಕರ್ಕೋಟಕನು "ಎಲೈ ನಳನೆ! ಇದನ್ನು ಅಪಕಾರವೆಂದೆಣಿಸಬೇಡ. ಈಗ ನಿನ್ನ ಗುರುತು ಯಾರಿಗೂ ತಿಳಿಯದಂತಾಗಿರುವುದು. ನನ್ನ ವಿಷವು ನಿನ್ನಲ್ಲಿ ಸೇರಿರುವ ಕಲಿಯನ್ನು ಬಾಧಿಸುವುದಲ್ಲದೆ ನಿನ್ನನ್ನು ಬಾಧಿಸದು. ನೀನು ಅಯೋಧ್ಯಾಧಿಪತಿಯಾದ ಋತುಪರ್ಣ ಮಹಾರಾಜನ ಬಳಿಗೆ ಹೋಗು; ಆತನಿಗೆ ಪಗಡೆಯಾಟದ ಮರ್ಮವು ಚೆನ್ನಾಗಿ ತಿಳಿದಿರುವುದು; ನಿನಗೆ ಅಶ್ವ ಹೃದಯವು ತಿಳಿದಿರುವು ದರಿಂದ ನಿನ್ನ ಈ ವಿದ್ಯೆಯನ್ನು ಆತನಿಗೆ ಕಲಿಸಿ ಆತನಿಂದ ಪಗಡೆಯಾಟದ ಮರ್ಮವನ್ನು ಕಲಿತುಕೊ. ನೀನು ಮರಳಿ ನಿನ್ನ ರಾಜ್ಯವನ್ನೂ, ಹೆಂಡತಿ ಮಕ್ಕಳನ್ನೂ ಪಡೆಯುವೆ. ಮೊದಲಿನ ರೂಪವು ಬೇಕೆಂದಾಗ ನನ್ನನ್ನು ಸ್ಮರಿಸಿದರೆ ನಿನ್ನ ವಸ್ತ್ರವನ್ನು ಹೊತ್ತುಕೊಂಡು ಹೋಗಿರುವ ಪಕ್ಷಿಗಳು ಅವನ್ನು ತಂದು ನಿನಗೊಪ್ಪಿಸುವುವು. ಆ ವಸ್ತ್ರವನ್ನು ನೀನು ಧರಿಸಿದ ಕೂಡಲೆ ನಿನ್ನ ಮೊದಲಿನ ರೂಪವನ್ನು ಹೊಂದುವೆ. ನಿನಗೆ ಜಯವಾಗಲಿ" ಎಂದು ಹೇಳಿ ಕರ್ಕೋಟಕನು ಹೊರಟು ಹೋದನು. ತರುವಾಯ ನಳನು ಅಯೋಧ್ಯೆಗೆ ಹೋಗಿ ಋತುಪರ್ಣನ ಬಳಿಯಲ್ಲಿ ಬಾಹುಕನೆಂಬ ಹೆಸರಿನಿಂದ ಅವನ ಅಶ್ವ ಶಾಲಾಧ್ಯಕ್ಷನಾಗಿ ನಿಂತನು.

III

ಹೀಗಿರುವಲ್ಲಿ, ದಮಯಂತಿಯು ಕಳುಹಿಸಿದ್ದ ಚಾರರಲ್ಲೊಬ್ಬನು ಅಯೋಧ್ಯೆಗೆ ಹೋಗಿ ಹಿಂದಿರುಗಿ ಬಂದು ಋತುಪರ್ಣನ ಅರಮನೆಯಲ್ಲಿದ್ದ ಬಾಹುಕನ ವಿಷಯವಾಗಿ ದಮಯಂತಿಯೊಡನೆ ಮಾತನಾಡುತ್ತಿರುವಾಗ, ಆ ಬಾಹುಕನು ನಳನಿರಬಹುದೇ ಎಂಬ ಸಂಶಯವು ದಮಯಂತಿಯ ಮನಸ್ಸಿನಲ್ಲಿ ಹುಟ್ಟಿತು. ಕೂಡಲೇ ಆಕೆಯು ತಾಯಿಯ ಬಳಿಗೆ ಹೋಗಿ ಒಂದು ಯುಕ್ತಿಯನ್ನು ಆಲೋಚಿಸಿ, ಒಬ್ಬ ಬ್ರಾಹ್ಮಣನನ್ನು ಕರೆಯಿಸಿ "ಸ್ವಾಮಿ, ನೀವು ಅಯೋಧ್ಯೆಗೆ ಹೋಗಿ ಋತುಪರ್ಣನನ್ನು ಕಂಡು ದಮಯಂತಿಯು ಮರಳಿ ಮದುವೆಮಾಡಿಕೊಳ್ಳುವಳೆಂದೂ, ಸ್ವಯಂವರವು ನಾಳೆಯೇ ನಡೆಯುವುದೆಂದೂ, ತಾವೂ ಸ್ವಯಂವರಕ್ಕೆ ದಯಮಾಡಿಸಬೇಕೆಂದೂ, ಭೀಮ ಭೂಪಾಲಕನು ಆಹ್ವಾನವನ್ನು ಕಳುಹಿಸಿರುವನೆಂದೂ ಆತನೊಡನೆ ಹೇಳಿ

ಹೊರಟು ಬನ್ನಿರಿ" ಎಂದು ಹೇಳಿ ಬ್ರಾಹ್ಮಣನನ್ನು ಪ್ರಯಾಣ ಮಾಡಿಸಿದಳು. ಆ ಬ್ರಾಹ್ಮಣನು ಬೇಗನೆ ಅಯೋಧ್ಯೆಯನ್ನು ಸೇರಿ ಈ ವೃತ್ತಾಂತವನ್ನು ತಿಳಿಸಲು ಋತುಪರ್ಣನು ಬಾಹುಕನ ಸಲಹೆಯ ಮೇರೆಗೆ ವಿದರ್ಭನಗರಿಯನ್ನು ಕುರಿತು ಹೊರಟನು. ಕುದುರೆಗಳು ವಾಯುವೇಗದಿಂದ ಹೋಗುತ್ತಿರಲು ಋತುಪರ್ಣನು ಬಾಹುಕನ ಅತ್ಯದ್ಭುತವಾದ ಅಶ್ವವಿದ್ಯಾಸಾಮರ್ಥ್ಯವನ್ನು ಕಂಡು ಆತನಿಂದ ಆ ವಿದ್ಯೆಯನ್ನು ಕಲಿತು ತನಗೆ ತಿಳಿದಿದ್ದ ಪಗಡೆಯಾಟದ ಮರ್ಮವನ್ನು ನಳನಿಗೆ ಉಪದೇಶ ಮಾಡಿದನು.

ಬ್ರಾಹ್ಮಣನು ಗೊತ್ತು ಹೇಳಿದ್ದ ಕಾಲಕ್ಕೆ ಸರಿಯಾಗಿ ಋತುಪರ್ಣನು ವಿದರ್ಭ ನಗರಿಯನ್ನು ಸೇರಿ ಇತರ ರಾಜರು ಯಾರೂ ಬಾರದಿದ್ದುದನ್ನು ಕಂಡು ಬೆರಗಾಗಿ ತನಗೆ ಸುಖಾಗಮನವನ್ನು ಬಯಸಲು ಬಂದ ಭೀಮ ಭೂಪಾಲನೊಡನೆ ಉಚಿತೋಕ್ತಿಗಳನ್ನಾಡಿ ತಾನು ಬಂದ ಕಾರ್ಯವನು ಮರೆಮಾಚಿದನು. ದಮಯಂತಿಯು ತನ್ನ ಮಕ್ಕಳಿಬ್ಬರನ್ನೂ ತನ್ನ ಸಖಿಯ ಸಂಗಡ ಋತುಪರ್ಣನ ಬಿಡಾರಕ್ಕೆ ಕಳುಹಿಸಿ, ಬಾಹುಕನು ತನ್ನ ಮಕ್ಕಳ ಮೇಲೆ ತೋರಿಸಿದ ಪ್ರೇಮದಿಂದಲೂ, ಆತನ ದಿವ್ಯವಾದ ಅಡಿಗೆಯಿಂದಲೂ, ಆತನಿಗೆ ತಿಳಿದಿದ್ದ ಅತ್ಯಾಶ್ಚರ್ಯಕರವಾದ ಕುದುರೆಗಳ ಮರ್ಮದಿಂದಲೂ ಆತನೇ ನಳನಿರಬೇಕೆಂದು ಗೊತ್ತುಮಾಡಿದಳು. ಆದರೆ ಸುಂದರಾಂಗನೂ, ಆಜಾನುಬಾಹುವೂ ಆಗಿದ್ದ ನಳನಿಗೂ ಕುರೂಪಿಯಾಗಿಯೂ ಕುಬ್ಜನಾಗಿಯೂ ಇದ್ದ ಬಾಹುಕನಿಗೂ ಅಭೇದವನ್ನು ಕಲ್ಪಿಸಲಾರದೆ ವ್ಯಥೆಪಡುತ್ತಿದ್ದಳು.

ನಳನು ತನ್ನ ವೇಷವನ್ನು ಬಿಟ್ಟುಬಿಡುವ ಕಾಲವು ಬಂದಿತೆಂದು ತಿಳಿದು ಕರ್ಕೋಟಕನನ್ನು ಸ್ಮರಿಸಲು, ಹಿಂದೆ ಆತನ ವಸ್ತ್ರವನ್ನು ಹೊತ್ತುಕೊಂಡು ಹೋಗಿದ್ದ ಪಕ್ಷಿಗಳು ಆ ವಸ್ತ್ರವನ್ನು ಹಿಂದಕ್ಕೆ ತಂದುಕೊಟ್ಟವು. ನಳನು ಆ ವಸ್ತ್ರವನ್ನು ಧರಿಸಿದ ಕೂಡಲೆ ಅವನ ಮೊದಲಿನ ಸುಂದರಾಕಾರವು ಮರಳಿ ಬಂದಿತು. ಈ ಆಶ್ಚರ್ಯವನ್ನು ಕಂಡು ಋತುಪರ್ಣನೂ, ಭೀಮಭೂಪಾಲಕನೂ, ಇತರರೂ ಪರಮಾನಂದ ಹೊಂದಿದರು. ಕೂಡಲೇ ನಳನು ನಿಷಧ ದೇಶಕ್ಕೆ ಹೋಗಿ ಪುಷ್ಕರನೊಡನೆ ಪಗಡೆಯ ಜೂಜಾಡಿ ತಾನು ಕಲಿತಿದ್ದ ಅಕ್ಷ ವಿದ್ಯಾಬಲದಿಂದ ಅವನನ್ನು ಗೆದ್ದು ತನ್ನ ರಾಜ್ಯವನ್ನು ಮರಳಿ ಸಂಪಾದಿಸಿ ಬಹು ಕಾಲ ರಾಜ್ಯಭಾರ ಮಾಡುತ್ತ ಹೆಂಡತಿ ಮಕ್ಕಳೊಡನೆ ಸುಖದಿಂದಿದ್ದನು.

೬. ಗರುಡನು ಅಮೃತವನ್ನು ತಂದ ಕಥೆ

ಕಶ್ಯಪಋಷಿಗೆ ಕದ್ರು, ವಿನತೆ ಎಂಬಿಬ್ಬರು ಮಡದಿಯರಿದ್ದರು. ಕದ್ರುವಿಗೆ ಸರ್ಪಗಳೂ, ವಿನತೆಗೆ ಅರುಣನೂ, ಗರುಡನೂ ಮಕ್ಕಳಾಗಿ ಹುಟ್ಟಿದರು. ಒಂದಾನೊಂದು ದಿನ ಕದ್ರುವೂ, ವಿನತೆಯೂ ವಿನೋದಕ್ಕಾಗಿ ಸಮುದ್ರ ತೀರಕ್ಕೆ ಹೋಗಿ ದೂರದಲ್ಲಿ ದೇವೇಂದ್ರನ ಉಚ್ಚೈಶ್ರವಸ್ಸೆಂಬ ಕುದುರೆಯನ್ನು ಕಂಡರು. ಆ ಕುದುರೆಯ ಮೈ ಬಣ್ಣದ ವಿಷಯವಾಗಿ ಅವರಿಬ್ಬರಿಗೂ ವಾದ ನಡೆಯಿತು. ವಿನತೆಯು ಅದರ ಬಣ್ಣವು ಬರೀ ಬಿಳಿಯದೆಂದೂ, ಕದ್ರುವು ಬಿಳುಪು ಮಾತ್ರವಲ್ಲದೆ ಇತರ ಬಣ್ಣವೂ ಸೇರಿರುವುದೆಂದೂ ವಾದಿಸಿದರು.

ಹೀಗೆ ಅವರಿಬ್ಬರೂ ತಂತಮ್ಮ ಮಾತೇ ಸರಿಯೆಂದು ಹಟ ಹಿಡಿದು ಕೊನೆಗೆ ಯಾರ ಮಾತು ಸುಳ್ಳಾಗುವುದೋ ಅವರು ಮತ್ತೊಬ್ಬರಿಗೆ ದಾಸಿಯಾಗಿರಬೇಕೆಂದು ಕಟ್ಟು ಮಾಡಿಕೊಂಡರು. ಆ ಕುದುರೆಯ ಬಣ್ಣವು ಬಿಳುಪೆಂದು ನಂಬಿದ್ದ ವಿನತೆಯು ಧೈರ್ಯದಿಂದಿದ್ದಳು. ಆದರೆ ಕದ್ರುವು ಅದರ ಬಣ್ಣವು ಬಿಳುಪೆಂದು ತಿಳಿದಿದ್ದರೂ ತನ್ನ ಮಾತು ಸುಳ್ಳಾದರೆ ವಿನತೆಗೆ ದಾಸಿಯಾಗಿರಬೇಕಾಗುವುದೆಂದು ಅಂಜಿ, ಹೇಗಾದರೂ ಅವಳನ್ನು ಮೋಸಗೊಳಿಸಬೇಕೆಂಬ ದುರಾಲೋಚನೆಯನ್ನು ಮಾಡತೊಡಗಿದಳು.

ಆಗ ಕದ್ರುವು ತನ್ನ ಮಕ್ಕಳಲ್ಲಿ ಕೃಷ್ಣ ಸರ್ಪಗಳನ್ನು ಕರೆದು ನಡೆದ ಸಂಗತಿಯನ್ನು ತಿಳಿಸಿ, ಆ ಕುದುರೆಯ ಬಾಲಕ್ಕೆ ತಾವು ಜೋತುಬಿದ್ದು ಬಾಲವು ಕಪ್ಪಾಗಿ ಕಾಣುವಂತೆ ಮಾಡಿ ತನ್ನ ಮಾತನ್ನು ಗೆಲ್ಲಿಸಬೇಕೆಂದು ಹೇಳಿದಳು. ಈ ಅನ್ಯಾಯಕ್ಕೆ ಕೆಲವು ಸರ್ಪಗಳು ಒಪ್ಪದೇ ಹೋದುದರಿಂದ ಕದ್ರುವು ಅವಕ್ಕೆ ಶಾಪವನ್ನು ಕೊಟ್ಟಳು ; ಮಿಕ್ಕ ಸರ್ಪಗಳು ಹೆದರಿ ಆಕೆಯ ಹೇಳಿಕೆಯ ಮೇರೆಗೆ ಮಾಡಿದುವು. ತರುವಾಯ ಕದ್ರುವು ತನ್ನ ಮಾತು ಗೆಲ್ಲುವುದೆಂಬ ಧೈರ್ಯದಿಂದ ವಿನತೆಯನ್ನು ಕರೆದುಕೊಂಡು ಕುದುರೆಯನ್ನು ನೋಡುವುದಕ್ಕಾಗಿ ಸಮುದ್ರದ ದಡಕ್ಕೆ ಮತ್ತೆ ಹೋದಳು. ಆಗ ಅಲ್ಲಿದ್ದ ಕುದುರೆಯ ಬಾಲವು ಕಪ್ಪಾಗಿ ಕಾಣಬಂದುದರಿಂದ, ಕದ್ರುವು ಮಾಡಿದ ಮೋಸವನ್ನರಿಯದ ವಿನತೆಯು ಕದ್ರುವಿನ ದಾಸಿಯಾಗಿರಲು ಒಪ್ಪಿಕೊಳ್ಳಬೇಕಾಗಿ ಬಂದಿತು.

ಹೀಗೆ ಕೆಲವು ಕಾಲ ಕಳೆದಮೇಲೆ ಗರುಡನು ತನ್ನ ತಾಯಿಯ ದುಃಸ್ಥಿತಿಯನ್ನು ಕಂಡು ಕಳವಳಗೊಂಡು, ಏನಾದರೂ ಮಾಡಿ ಆಕೆಯ ಬಿಡುಗಡೆಯನ್ನು ಸಾಧಿಸಬೇಕೆಂದು ಆಲೋಚಿಸಿ ತನ್ನ ಮಲತಾಯಿಯ ಬಳಿಗೆ ಹೋಗಿ ಕೇಳಿಕೊಂಡನು. ಸ್ವರ್ಗದಲ್ಲಿರುವ ಅಮೃತವನ್ನು ತನಗೆ ತಂದೊಪ್ಪಿಸಿದರೆ ವಿನತೆಯನ್ನು ಬಿಡುಗಡೆ ಮಾಡುವೆನೆಂದು ಆಕೆ ಹೇಳಲು, ಗರುಡನು ಇಂತಹ ಅಸಾಧ್ಯವಾದ ಕೆಲಸವನ್ನಾದರೂ ಮಾಡುವೆನೆಂದು ನಿಶ್ಚಯಿಸಿ ಕೂಡಲೆ ಇಂದ್ರಲೋಕಕ್ಕೆ ಪ್ರಯಾಣವಾದನು. ಅಲ್ಲಿಗೆ ಸೇರಿ ಇಂದ್ರನೊಡನೆ ಕಾದಿ ತನ್ನ ಶಕ್ತಿ ಸಾಹಸಗಳನ್ನೆಲ್ಲ ವೆಚ್ಚಮಾಡಿ ಅವನನ್ನು ಸೋಲಿಸಿ ಅವನ ಸ್ವಾಧೀನದಲ್ಲಿದ್ದ ಅಮೃತವನ್ನು ತಂದು ಕದ್ರುವಿಗೆ ಕೊಟ್ಟು ತನ್ನತಾಯಿಯನ್ನು ದಾಸ್ಯದಿಂದ ಬಿಡುಗಡೆ ಮಾಡಿದನು.

---

೭. ರಾಮಾಯಣ ಕಥೆ

ತ್ರೇತಾಯುಗದಲ್ಲಿ ಸೂರ್ಯವಂಶದ ಅರಸಾದ ದಶರಥ ಚಕ್ರವರ್ತಿಯು ಅಯೋಧ್ಯೆಯಲ್ಲಿ ಆಳುತ್ತಿದ್ದನು. ಆತನ ಹಿರಿಯ ಹೆಂಡತಿಯ ಮಗನಾದ ಶ್ರೀರಾಮನು ತನ್ನ ತಂದೆಯು ತನ್ನ ಮಲತಾಯಿಗೆ ಕೊಟ್ಟಿದ್ದ ಮಾತನ್ನು ನಡೆಯಿಸುವುದಕ್ಕಾಗಿ ಕಾಡಿಗೆ ಹೋಗಲು ಸಿದ್ಧನಾದನು. ಆಗ ಆತನ ಹೆಂಡತಿಯಾದ ಸೀತಾದೇವಿಯೂ, ತಮ್ಮನಾದ ಲಕ್ಷ್ಮಣನೂ ರಾಮನೊಡನೆ ಹೊರಟರು. ಇವರು ಮೂವರೂ ಕಾಡಿಗೆ ಹೋಗಿ ಪಂಚವಟಿಯೆಂಬ ಸ್ಥಳದಲ್ಲಿ ವಾಸಮಾಡಿಕೊಂಡಿದ್ದರು. ಅಲ್ಲಿಗೆ ಲಂಕೆಯ ಅರಸಾಗಿದ್ದ ರಾವಣನ ತಂಗಿಯಾದ ಶೂರ್ಪಣಖೆಯು ಅಕಸ್ಮಾತ್ತಾಗಿ ಬಂದು ರಾಮಲಕ್ಷ್ಮಣರನ್ನು ಕಂಡು ಮೋಹಿಸಿದಳು. ಕೂಡಲೆ ಅವಳು ಚೆಲುವೆಯಾದ ಮನುಷ್ಯ ಸ್ತ್ರೀಯ ವೇಷವನ್ನು ಮಾಯೆಯಿಂದ ಧರಿಸಿ ರಾಮಲಕ್ಷ್ಮಣರ ಬಳಿಗೆ ಹೋಗಿ ಅವರಲ್ಲೊಬ್ಬರು ತನ್ನನ್ನು ಮದುವೆ ಮಾಡಿಕೊಳ್ಳಬೇಕೆಂದು ಕೇಳಿಕೊಂಡಳು. ಅವರು ಒಪ್ಪದೆ ಅವಳಿಗೆ ಅವಮಾನ ಮಾಡಿ ಕಳುಹಿಸಲು, ಅವಳು ತನ್ನ ಅಣ್ಣನಾದ ರಾವಣನ ಬಳಿಗೆ ಹೋಗಿ ದೂರು ಹೇಳಿ, ಸೀತೆಯ ಸೌಂದರ್ಯವನ್ನು ವರ್ಣಿಸಿದಳು.

ರಾವಣನು ಅಂತಹ ಚೆಲುವೆಯಾದ ಸೀತೆಯನ್ನು ಹೇಗಾದರೂ ಮಾಡಿ ಎತ್ತಿಕೊಂಡು ಬರಬೇಕೆಂದು ಆಲೋಚಿಸಿ ತನ್ನ ಸೋದರಮಾವನಾದ ಮಾರೀಚನನ್ನು ಕರೆದು "ಎಲೈ ಮಾರೀಚನೆ! ನೀನು ಚಿನ್ನದ ಮೈ ಹೊಳಪುಳ್ಳ ಜಿಂಕೆಯ ರೂಪವನ್ನು ಧರಿಸಿಕೊಂಡು ಹೋಗಿ ಸೀತೆಯ ಎದುರಿಗೆ ಸುಳಿದಾಡುತ್ತಿರು ; ಆಕೆಯು ನಿನ್ನನ್ನು ಹಿಡಿದುಕೊಂಡು ಬರುವಂತೆ ರಾಮನಿಗೆ ಹೇಳುವಳು; ಆತನು ನಿನ್ನನ್ನಟ್ಟಿಕೊಂಡು ಬರುವನು; ನೀನು ದೂರ ದೂರಕ್ಕೆ ಹೋಗುತ್ತ ಕೊನೆಗೆ ಅವನ ಬಾಣದ ಪೆಟ್ಟಿಗೆ ಸಿಕ್ಕಿದರೆ 'ಹಾ ಸೀತೇ! ಹಾ ಲಕ್ಷ್ಮಣಾ !' ಎಂದು ರಾಮನ ದನಿಯಂತೆ ಕೂಗಿಕೋ" ಎಂದು ಹೇಳಿ ಅವನನ್ನು ಒಡಂಬಡಿಸಿದನು. ಮಾರೀಚನು ಅದೇ ಮೇರೆಗೆ ಮಾಡಲು ಎಲ್ಲವೂ ರಾವಣನು ಹೇಳಿದ್ದಂತೆಯೇ ನಡೆಯಿತು. ಸೀತೆಯು ಮಾರೀಚನ ಮಾಯದ ದನಿಯನ್ನು ಕೇಳಿ ರಾಮನ ದನಿಯೆಂದು ಭ್ರಮಿಸಿ ತನಗೆ ಕಾವಲಾಗಿದ್ದ ಲಕ್ಷ್ಮಣನನ್ನು ರಾಮನ ಸಹಾಯಕ್ಕೆ ಹೋಗುವಂತೆ ಬಲಾತ್ಕಾರದಿಂದ ಕಳುಹಿಸಿದಳು. ಆಗ ರಾವಣನು ಸಂನ್ಯಾಸಿಯ ವೇಷವನ್ನು ಹಾಕಿಕೊಂಡು ಬಂದು ಒಂಟಿಯಾಗಿದ್ದ ಸೀತೆಯನ್ನು ಎತ್ತಿಕೊಂಡು ಹೋಗಿ ಲಂಕೆಯಲ್ಲಿ ಅಶೋಕವನವೆಂಬ ತನ್ನ ತೋಟದಲ್ಲಿಟ್ಟನು.

ಇತ್ತ ರಾಮಲಕ್ಷ್ಮಣರು ಸೀತೆಯಿದ್ದಲ್ಲಿಗೆ ಬಂದು ಆಕೆಯನ್ನು ಕಾಣದೆ ಕಾಡೆಲ್ಲವನ್ನೂ ಹುಡುಕಿ ಕಡೆಗೆ ಋಷ್ಯಮೂಕ ಪರ್ವತಕ್ಕೆ ಬಂದು ಅಲ್ಲಿ ಆಗ ವಾಸಮಾಡಿಕೊಂಡಿದ್ದ ಕಿಷ್ಕಿಂಧಾಧಿಪತಿಯಾದ ಸುಗ್ರೀವನೊಡನೆ ಸ್ನೇಹವನ್ನು ಬೆಳೆಯಿಸಿದರು. ಸುಗ್ರೀವನನ್ನು ಅವನ ಅಣ್ಣನಾದ ವಾಲಿಯು ಕಿಷ್ಕಿಂಧೆಯಿಂದ ಓಡಿಸಿ ಅಲ್ಲಿ ತಾನೇ ಆಳುತ್ತ ಸುಗ್ರೀವನ ಹೆಂಡತಿಯನ್ನು ತನ್ನ ಹೆಂಡತಿಯನ್ನಾಗಿ ಮಾಡಿಕೊಂಡಿದ್ದನು. ಅಣ್ಣನು ತನ್ನನ್ನು ಕೊಲ್ಲುವನೆಂಬ ಭಯದಿಂದಿದ್ದ ಸುಗ್ರೀವನು ರಾಮನೊಡನೆ ಸಂಧಿ ಮಾಡಿಕೊಂಡನು.

ರಾಮನು ವಾಲಿಯನ್ನು ಕೊಂದು ಸುಗ್ರೀವನಿಗೆ ಕಪಿರಾಜ್ಯದ ಪಟ್ಟವನ್ನು ಕಟ್ಟುವೆನೆಂದೂ, ಸುಗ್ರೀವನು ಸೀತಾದೇವಿಯನ್ನು ಹುಡುಕಿ ಕೊಡುವೆನೆಂದೂ ಒಬ್ಬರಿಗೊಬ್ಬರು ವಾಗ್ದಾನಮಾಡಿದರು. ತರುವಾಯ ಸುಗ್ರೀವನು ತನ್ನ ಬಂಟನಾದ ಹನುಮಂತನ ಮೂಲಕ ಸೀತಾದೇವಿಯಿದ್ದ ಸ್ಥಳವನ್ನು ಕಂಡುಹಿಡಿದು ಅಲ್ಲಿಗೆ ರಾಮಲಕ್ಷ್ಮಣರೊಡನೆ ದಂಡೆತ್ತಿಹೋಗಲು ಸಿದ್ಧ

ನಾದನು. ಸುಗ್ರೀವ ಹನುಮಂತ ಮೊದಲಾದ ಬಲಶಾಲಿಗಳೊಡನೆ ಕೂಡಿದ ದೊಡ್ಡ ಕಪಿಸೈನ್ಯದ ಸಹಾಯದಿಂದ ರಾಮನು ಸಮುದ್ರಕ್ಕೆ ಸೇತುವೆಯನ್ನು ಕಟ್ಟಿ ಲಂಕೆಗೆ ಹೋಗಿ ರಾವಣನೊಡನೆ ಯುದ್ಧಮಾಡಿ ಅವನನ್ನು ಕೊಂದನು.

ತರುವಾಯ ರಾಮನು ತಾನಿದ್ದ ಸ್ಥಳಕ್ಕೆ ಸೀತಾದೇವಿಯನ್ನು ಕರೆತರಿಸಿ ಆಕೆಯು ತನ್ನನ್ನು ಅಷ್ಟು ದಿನ ರಾವಣನ ಅಧೀನದಲ್ಲಿದ್ದುದರಿಂದ ಆಕೆಯನ್ನು ಪರಿಗ್ರಹಿಸಲು ಸಂಶಯಪಟ್ಟನು. ಸೀತೆಯು ಇದನ್ನು ತಿಳಿದು ತನ್ನಲ್ಲಿ ಯಾವ ದೋಷವೂ ಇಲ್ಲವೆಂದು ತೋರಿಸುವುದಕ್ಕಾಗಿ ಅಗ್ನಿಪ್ರವೇಶ ಮಾಡಿದಳು. ಆಗ ಆಕೆಯು ಮುಡಿದಿದ್ದ ಹೂವು ಕೂಡ ಬಾಡದಂತೆ ಯಜ್ಞೇಶ್ವರನು ಆಕೆಯನ್ನು ರಾಮನಿಗೆ ಒಪ್ಪಿಸಿ ಆಕೆಯು ಪರಿಶುದ್ಧಳೆಂದು ತಿಳಿಸಿದನು. ಇದನ್ನು ನೋಡಿ ದೇವತೆಗಳು ಹೂಮಳೆಗರೆದರು. ರಾಮನು ಸೀತೆಯನ್ನು ಪರಿಗ್ರಹಿಸಿ ಅಯೋಧ್ಯೆಗೆ ಬಂದು ಪಟ್ಟಾಭಿಷಿಕ್ತನಾಗಿ ಅನೇಕ ವರುಷ ರಾಜ್ಯಭಾರ ಮಾಡಿದನು.

---

೮. ತ್ರಿಪುರಾಸುರ ಸಂಹಾರದ ಕಥೆ

ತಾರಕಾಸುರನೆಂಬ ರಾಕ್ಷಸನಿಗೆ ತಾರಕಾಕ್ಷ, ಕಮಲಾಕ್ಷ, ವಿದ್ಯುನ್ಮಾಲಿ ಎಂಬ ಮೂವರು ಮಕ್ಕಳಿದ್ದರು. ತಾರಕಾಸುರನು ಬಹಳ ಪ್ರಬಲನಾಗಿ ಜಗತ್ತಿಗೆ ತೊಂದರೆ ಕೊಡುತ್ತಿದ್ದುದರಿಂದ ಅವನನ್ನು ದೇವತೆಗಳ ಸಹಾಯದಿಂದ ಶಿವನ ಮಗನಾದ ಕುಮಾರಸ್ವಾಮಿಯು ಕೊಂದನು. ಇದರಿಂದ ತಾರಕಾಸುರನ ಮಕ್ಕಳು ರೋಷಗೊಂಡು ತಮ್ಮ ಶತ್ರುಗಳಾದ ದೇವತೆಗಳನ್ನು ಜಯಿಸಬೇಕೆಂದು ಬ್ರಹ್ಮನನ್ನು ಕುರಿತು ಕಠಿನವಾದ ತಪಸ್ಸನ್ನು ಮಾಡಿದರು. ಬ್ರಹ್ಮನು ಪ್ರತ್ಯಕ್ಷನಾಗಿ ವರವನ್ನು ಬೇಡಿರೆಂದು ಹೇಳಲು, ಆ ರಾಕ್ಷಸರು "ಅಯ್ಯಾ ಬ್ರಹ್ಮನೆ! ನಮ್ಮ ಇಚ್ಛೆಯಂತೆ ಸಂಚರಿಸುವ ಮೂರು ಪಟ್ಟಣಗಳು ನಿರ್ಮಾಣವಾಗಬೇಕು; ನಾವು ಒಬ್ಬೊಬ್ಬರು ಒಂದೊಂದು ಪಟ್ಟಣದಲ್ಲಿ ಆಳುತ್ತಿರಬೇಕು; ಈ ಪಟ್ಟಣಗಳನ್ನು ನಾಶಪಡಿಸಲು ಯಾರಿಗೂ ಸಾಧ್ಯವಾಗದಿರಬೇಕು" — ಈ ವರವನ್ನು ದಯಪಾಲಿಸಬೇಕೆಂದು ಕೇಳಿಕೊಳ್ಳಲು, ಬ್ರಹ್ಮನು "ಅಯ್ಯಾ! ಅಂತಹ ವರವನ್ನು ನಿಮಗೆ ಕೊಡುವೆನು; ಆದರೆ

ಈ ಮೂರು ಪಟ್ಟಣಗಳೂ ಒಂದೇ ಕಡೆ ಸೇರಿರುವಾಗ ಅವನ್ನು ಒಂದೇ ಬಾಣದಿಂದ ಯಾವನು ಹೊಡೆಯುವನೋ ಅಂಥವನಿಂದಲ್ಲದೆ ಇತರರಿಂದ ನಿಮಗೆ ಮರಣವುಂಟಾಗದಿರಲಿ" ಎಂದು ವರವಿತ್ತನು.

ತರುವಾಯ ಈ ಮೂವರೂ ದಾನವರ ಶಿಲ್ಪಿಯಾದ ಮಯನನ್ನು ಕರೆಯಿಸಿ ತಮಗೆ ಬೇರೆ ಬೇರೆ ಮೂರು ಪಟ್ಟಣಗಳನ್ನು ಕಟ್ಟಲಪ್ಪಣೆ ಮಾಡಿದರು. ಮಯನು ಒಡನೆಯೇ ಸ್ವರ್ಗಲೋಕದಲ್ಲಿ ಚಿನ್ನದಪಟ್ಟಣವನ್ನೂ, ಅಂತರಿಕ್ಷದಲ್ಲಿ ಬೆಳ್ಳಿಯ ಪಟ್ಟಣವನ್ನೂ, ಭೂಲೋಕದಲ್ಲಿ ಕಬ್ಬಿಣದ ಪಟ್ಟಣವನ್ನೂ ಯಾರಿಂದಲೂ ಜಯಿಸಲು ಸಾಧ್ಯವಾಗದಂತೆ ಕಟ್ಟಿದನು. ಚಿನ್ನದ ಪಟ್ಟಣದಲ್ಲಿ ತಾರಕಾಕ್ಷನೂ, ಬೆಳ್ಳಿಯ ಪಟ್ಟಣದಲ್ಲಿ ಕಮಲಾಕ್ಷನೂ, ಕಬ್ಬಿಣದ ಪಟ್ಟಣದಲ್ಲಿ ವಿದ್ಯುನ್ಮಾಲಿಯೂ ನಿಂತು ತಮ್ಮ ಪರಾಕ್ರಮದಿಂದ ಮೂರು ಲೋಕಗಳನ್ನೂ ತಮ್ಮ ಅಧೀನದಲ್ಲಿಟ್ಟುಕೊಂಡು ಎಲ್ಲರಿಗೂ ತೊಂದರೆ ಕೊಡುತ್ತ ಬಂದರು. ಕೊನೆಗೆ ಇವರು ಇಂದ್ರನನ್ನು ಸ್ವರ್ಗಲೋಕದಿಂದ ಅಟ್ಟಬಿಡಲು ಆತನು ತನ್ನ ಪ್ರಜೆಗಳಾದ ದೇವತೆಗಳನ್ನು ಕಟ್ಟಿಕೊಂಡು ಬ್ರಹ್ಮನ ಬಳಿಗೂ, ತರುವಾಯ ವಿಷ್ಣುವಿನ ಬಳಿಗೂ ಹೋಗಿ ಮೊರೆಯಿಟ್ಟನು. ಕೂಡಲೆ ಎಲ್ಲರೂ ಆಲೋಚನೆ ಮಾಡಿ ಆ ರಾಕ್ಷಸರನ್ನು ನಾಶಮಾಡಲು ಶಿವನಲ್ಲದೆ ಮತ್ತೆ ಯಾರೂ ಸಮರ್ಥರಿಲ್ಲವೆಂದು ನಿಶ್ಚಯಿಸಿ ಆತನ ಬಳಿಗೆ ಹೋಗಿ ತಮ್ಮ ಸಮಾಚಾರವನ್ನು ತಿಳಿಸಿದರು. ಇದನ್ನು ಕೇಳಿ ಈಶ್ವರನು ಅವರ ಕಾರ್ಯವನ್ನು ಮಾಡುವೆನೆಂದು ಒಪ್ಪಿಕೊಂಡನು.

ಅನೇಕ ವರುಷಗಳು ಕಳೆದಮೇಲೆ ಆ ರಾಕ್ಷಸರ ಮೂರು ಪಟ್ಟಣಗಳೂ ಒಂದೇ ಎಡೆಯಲ್ಲಿ ಸೇರುವ ಸಮಯವು ಒದಗಿತು. ಆಗ ಪರಮೇಶ್ವರನು ಭೂಮಿಯನ್ನು ರಥವನ್ನಾಗಿಯೂ, ಸೂರ್ಯ ಚಂದ್ರರನ್ನು ಅದರ ಗಾಲಿಗಳನ್ನಾಗಿಯೂ, ನಾಲ್ಕು ವೇದಗಳನ್ನು ಅದಕ್ಕೆ ಕುದುರೆಗಳನ್ನಾಗಿಯೂ ಮಾಡಿಕೊಂಡು, ಆಕಾಶವೆಂಬ ಕವಚವನ್ನು ತೊಟ್ಟು, ಮೇರು ಪರ್ವತವನ್ನು ಧನುಸ್ಸನ್ನಾಗಿಯೂ, ಆದಿಶೇಷನನ್ನು ಅದಕ್ಕೆ ಕಟ್ಟುವ ಹೆದೆಯನ್ನಾಗಿಯೂ, ವಿಷ್ಣುವನ್ನು ಬಾಣವನ್ನಾಗಿಯೂ, ಸಮುದ್ರವನ್ನು ಬತ್ತಳಿಕೆಯನ್ನಾಗಿಯೂ, ಬ್ರಹ್ಮನನ್ನು ಸಾರಥಿಯನ್ನಾಗಿಯೂ ಏರ್ಪಡಿಸಿಕೊಂಡು ಹೊರಟು ತ್ರಿಪುರಾ

ಸುರರೊಡನೆ ಕಾದಿ ಬಾಣವಾಗಿದ್ದ ವಿಷ್ಣುವನ್ನು ಆ ಮೂರು ಪಟ್ಟಣಗಳ ಮೇಲೆಯೂ ಒಟ್ಟಿಗೆ ಬಿಟ್ಟು ಅವನ್ನೂ, ಆ ಮೂವರು ರಾಕ್ಷಸರನ್ನೂ ನಾಶ ಮಾಡಿ ಇಂದ್ರಾದಿ ದೇವತೆಗಳಿಗೆ ಸೌಖ್ಯವನ್ನುಂಟುಮಾಡಿದನು.

---

೯. ಶ್ರೀಕೃಷ್ಣನ ಕಥೆ

I

ದ್ವಾಪರ ಯುಗದ ಕೊನೆಯಲ್ಲಿ ಉಗ್ರಸೇನನೆಂಬ ದೊರೆಯು ಮಥುರಾ ಪಟ್ಟಣದಲ್ಲಿ ಧರ್ಮದಿಂದ ರಾಜ್ಯಭಾರ ಮಾಡುತ್ತ ತನ್ನ ಪ್ರಜೆಗಳ ಪ್ರೀತಿಗೆ ಪಾತ್ರನಾಗಿದ್ದನು. ಆದರೆ ಇವನ ಹಿರಿಯ ಮಗನಾದ ಕಂಸಾಸುರನು ಚಿಕ್ಕಂದಿನಿಂದಲೂ ಬಹಳ ಕ್ರೂರಸ್ವಭಾವದವನಾಗಿದ್ದನು. ಈತನ ತಂಗಿಯಾದ ದೇವಕೀದೇವಿಗೆ ಯದುವಂಶದಲ್ಲಿ ಹುಟ್ಟಿದ ವಸುದೇವನೊಡನೆ ಮದುವೆಯಾಯಿತು. ಮದುವೆಯ ಮೆರವಣಿಗೆಯ ದಿನ ಉತ್ಸವ ಸಮಯದಲ್ಲಿ, "ಅಯ್ಯಾ ಕಂಸಾಸುರನೆ! ಈ ದೇವಕೀದೇವಿಯ ಎಂಟನೆಯ ಗರ್ಭದಲ್ಲಿ ಹುಟ್ಟುವವನಿಂದ ನಿನಗೆ ಸಾವು ಒದಗುವುದು" ಎಂದು ಆಕಾಶವಾಣಿಯಾಯಿತು.

ಈ ಮಾತನ್ನು ಕೇಳಿದೊಡನೆಯೇ ಕಂಸನು ಬಹಳ ಸಿಟ್ಟಾಗಿ ಒರೆಯಿಂದ ಕತ್ತಿಯನ್ನು ಹಿರಿದು ತಂಗಿಯನ್ನು ಕೊಲ್ಲಹೋದನು. ಇದನ್ನು ಕಂಡು ವಸುದೇವನು "ಅಯ್ಯಾ ಭಾವನೆ! ನಿನಗೆ ನಿನ್ನ ತಂಗಿಯ ಮಗನಿಂದಲ್ಲದೆ ತಂಗಿಯಿಂದ ಭಯವಿಲ್ಲವಷ್ಟೆ! ಈಕೆಯಲ್ಲಿ ಹುಟ್ಟಿದ ಮಕ್ಕಳನ್ನೆಲ್ಲ ನಿನಗೆ ಒಪ್ಪಿಸುವೆನು; ಅವನ್ನು ನಿನ್ನ ಮನಬಂದಂತೆ ಮಾಡಬಹುದು" ಎಂದು ಹೇಳಿ ಕಂಸನನ್ನು ಸಮಾಧಾನ ಪಡಿಸಿದನು. ಅನಂತರ ಕಂಸನು ವಸುದೇವ ದೇವಕಿಯರನ್ನು ಸೆರೆಮನೆಯಲ್ಲಿಟ್ಟು ಅವರ ಮಕ್ಕಳನ್ನೆಲ್ಲ ಹುಟ್ಟಿದೊಡನೆಯೇ ತಂದು ತನಗೊಪ್ಪಿಸಬೇಕೆಂದು ಕಟ್ಟಪ್ಪಣೆ ಮಾಡಿದನು.

ಇಷ್ಟೇ ಅಲ್ಲದೆ, ಕಂಸನು ಪ್ರಜೆಗಳನ್ನೂ ಬಹಳವಾಗಿ ಪೀಡಿಸುತ್ತ ಬಂದನು. ಇದನ್ನು ನೋಡಿ ದಯಾ ಸ್ವಭಾವದವನಾದ ಉಗ್ರಸೇನನು ಕಂಸನನ್ನು ಕರೆಯಿಸಿ ಆತನಿಗೆ ಬುದ್ಧಿವಾದವನ್ನು ಹೇಳಲು, ಕಂಸನು

ತಂದೆಯ ಮಾತನ್ನು ಧಿಕ್ಕರಿಸಿ ಆತನನ್ನು ಸೆರೆಯಲ್ಲಿಟ್ಟು ತಾನೇ ರಾಜ್ಯವಾಳ ಲಾರಂಭಿಸಿದನು.

ವಸುದೇವನು ಕಂಸನ ಅಪ್ಪಣೆಯ ಮೇರೆಗೆ ದೇವಕಿಯ ಬಸಿರಲ್ಲಿ ಹುಟ್ಟಿದ ಮಕ್ಕಳನ್ನೆಲ್ಲ ಕಂಸನಿಗೆ ತಂದೊಪ್ಪಿಸುತ್ತಿರಲು, ಅವನು ಆ ಮಕ್ಕಳನ್ನು ಬಂಡೆಯಮೇಲೆ ಬಡಿದು ಕೊಂದುಹಾಕುತ್ತಿದ್ದನು. ಹೀಗಿರುವಲ್ಲಿ ದೇವಕಿಯ ಏಳನೆಯ ಗರ್ಭದಲ್ಲಿದ್ದ ಶಿಶುವನ್ನು ಭಗವಂತನ ಯೋಗ ಮಾಯೆಯು ತೆಗೆದುಕೊಂಡು ಹೋಗಿ ಗೋಕುಲದಲ್ಲಿದ್ದ ರೋಹಿಣಿಯ ಬಸಿರಲ್ಲಿ ಸೇರಿಸಿತು. ಈ ಶಿಶುವೇ ಬಲರಾಮನು. ದೇವಕಿಗೆ ಗರ್ಭಸ್ರಾವ ವಾಯಿತೆಂದು ಮಥುರೆಯಲ್ಲಿ ಸುದ್ದಿ ಹುಟ್ಟಿತು. ಈಕೆಯು ಎಂಟನೆಯ ಬಾರಿ ಬಸಿರಾಗಲು ಕಂಸನ ಕಟ್ಟಪ್ಪಣೆಯ ಮೇರೆಗೆ ಕಾವಲುಗಾರರು ಬಹು ಜೋಕೆ ಯಿಂದ ಕಾದುಕೊಂಡಿದ್ದರು.

ಒಂದು ದಿನ ಮಧ್ಯರಾತ್ರಿಯಲ್ಲಿ ದೇವಕಿಯು ಮಹಾ ವಿಷ್ಣುವಿನ ಅವ ತಾರವಾದ ಶ್ರೀ ಕೃಷ್ಣನನ್ನು ಹೆತ್ತಳು. ಆಗ ಮಹಾ ವಿಷ್ಣುವು ಶಂಖ ಚಕ್ರ ಗದಾ ಪದ್ಮಗಳನ್ನು ಧರಿಸಿದ ತನ್ನ ನಿಜರೂಪವನ್ನು ವಸುದೇವ ದೇವಕಿಯರಿಗೆ ತೋರಿಸಿ ಶಿಶುರೂಪದಿಂದಿದ್ದ ತನ್ನನ್ನು ಕೂಡಲೆ ಗೋಕುಲಕ್ಕೆ ಕರೆದುಕೊಂಡು ಹೋಗಿ ಅಲ್ಲಿ ನಂದಗೋಪನ ಮಡದಿಯಾದ ಯಶೋದೆಯ ಬಳಿಯಲ್ಲಿ ಇರಿಸಬೇಕೆಂದೂ, ಯಶೋದೆಯು ಆಗಲೆ ಹೆತ್ತಿದ್ದ ಹೆಣ್ಣು ಮಗುವನ್ನು ತಂದು ದೇವಕಿಯ ಬಳಿಯಲ್ಲಿರಿಸಬೇಕೆಂದೂ ವಸುದೇವನಿಗೆ ತಿಳಿಸಲು ಆತನು ಹಾಗೆಯೇ ಮಾಡಿದನು.

ಇತ್ತ, ಮಗು ಹುಟ್ಟಿತೆಂದು ಕಂಸನಿಗೆ ತಿಳಿದಕೂಡಲೆ ಅವನು ಬಂದು ಮಗುವನ್ನೆತ್ತಿಕೊಂಡು ಹೋಗಿ ಎಂದಿನಂತೆ ಕೊಲ್ಲುವುದಕ್ಕಾಗಿ ಮೇಲಕ್ಕೆತ್ತಲು ಅದು ಹಾಗೆಯೇ ನೆಗೆದು ದುರ್ಗಿಯ ರೂಪವನ್ನು ಧರಿಸಿ, "ಎಲೈ ದುರ್ಮಾರ್ಗಿ ಯಾದ ಕಂಸನೆ! ನಿನ್ನನ್ನು ಕೊಲ್ಲುವವನು ಗೋಕುಲದಲ್ಲಿ ಬೆಳೆಯುತ್ತಿರು ವನು" ಎಂದು ಹೇಳಿತು. ಅಂದಿನಿಂದ ಕಂಸನಿಗೆ ಮನಸ್ಸಿನಲ್ಲಿ ಭಯವು ಹೆಚ್ಚಿತು. ವಸುದೇವನ ಎಂಟನೆಯ ಮಗುವು ಗೋಕುಲದಲ್ಲಿ ಕೃಷ್ಣನೆಂಬ ಹೆಸರಿನಿಂದ ಬೆಳೆಯುತ್ತಿದ್ದಿತು. ಕಂಸನು ತನ್ನನ್ನು ಕೊಲ್ಲುವಷ್ಟು ಸಾಮರ್ಥ್ಯ ವುಳ್ಳವನು ಗೋಕುಲದಲ್ಲಿ ಯಾರಿರಬಹುದೆಂದು ತಿಳಿದುಕೊಳ್ಳುವುದ

ಕ್ಕಾಗಿಯೂ, ಸಾಧ್ಯವಾದರೆ ಅವನನ್ನು ಕೊಲ್ಲುವುದಕ್ಕಾಗಿಯೂ ಪೂತನೆ ಮೊದಲಾದ ತನ್ನ ಕಡೆಯವರನ್ನು ಅಲ್ಲಿಗೆ ಕಳುಹಿಸಿದನು. ಕೃಷ್ಣನು ಚಿಕ್ಕಂದಿನಲ್ಲಿಯೇ ಅವರೆಲ್ಲರನ್ನೂ ಕೊಂದುಹಾಕಿದನು. ಇದನ್ನು ನೋಡಿ ಕಂಸನು ಕೃಷ್ಣನೇ ತನ್ನ ಹಗೆಯೆಂದು ತಿಳಿದು ಅವನನ್ನು ಕೊಲ್ಲುವ ಪ್ರಯತ್ನಗಳನ್ನು ಮಾಡುತ್ತಿದ್ದನು.

ಹೀಗೆ ಕೆಲವು ಕಾಲ ನಡೆಯಲು, ಒಂದು ದಿನ ಕಂಸನು ಜಟ್ಟಿಯ ಕಾಳಗದ ಉತ್ಸವವನ್ನು ಏರ್ಪಡಿಸಿ ರಂಗಮಂಟಪದಲ್ಲಿ ತನ್ನ ಪರಿವಾರದೊಡನೆ ಬಹಳ ಠೀವಿಯಿಂದ ಕುಳಿತಿದ್ದನು. ಅಲ್ಲಿಗೆ ಕೃಷ್ಣನೂ, ಬಲರಾಮನೂ ಬಂದರು. ಸಾವಿರ ಆನೆಗಳ ಬಲವುಳ್ಳ ಚಾಣೂರನೆಂಬ ಬಹಳ ಶಕ್ತನಾದ ಜಟ್ಟಿಯನ್ನು ಕಂಸನು ಕೃಷ್ಣನಮೇಲೆ ಕಾಳಗಕ್ಕೆ ಬಿಡಲು ಕೃಷ್ಣನು ಅವನೊಡನೆ ಕಾದಿ ಅವನನ್ನು ನೆಲಕ್ಕೆ ಕೆಡವಿ ಕೊಂದುಹಾಕಿದನು. ಬಲರಾಮನು ಮುಷ್ಟಿಕಾಸುರನೆಂಬ ದೈತ್ಯನೊಡನೆ ಹೋರಾಡಿ ಅವನನ್ನು ಕೊಂದನು. ಇದನ್ನೆಲ್ಲ ನೋಡಿ ಸಹಿಸಲಾರದೆ ಕಂಸನು ಇವರನ್ನು ದೇಶದಿಂದ ಹೊರಗೆ ಅಟ್ಟಿಬಿಡಬೇಕೆಂದೂ, ಇವರ ತಂದೆಗಳನ್ನು ಸಂಹರಿಸಬೇಕೆಂದೂ ಬಹಳ ಕಠಿನವಾದ ಆಜ್ಞೆಯನ್ನಿತ್ತನು. ಇನ್ನು ತಡಮಾಡಿದರೆ ತನ್ನ ಹಿರಿಯರಿಗೆ ಬಹಳ ಕೇಡುಕಾಗುವುದೆಂದು ತಿಳಿದು ಕೃಷ್ಣನು ಕಂಸನ ಬಳಿಗೆ ಹೋಗಿ ಅವನನ್ನು ಪೀಠದಿಂದೆಳೆದು ಕೆಳಕ್ಕೆ ಕೆಡವಿ, ಎಲ್ಲರೂ ನೋಡುತ್ತಿರುವಂತೆಯೇ ಅವನನ್ನು ಕೊಂದುಹಾಕಿದನು. ತರುವಾಯ ದೇಶಕ್ಕೆಲ್ಲ ಶಾಂತಿಯೂ, ಸೌಖ್ಯವೂ ಉಂಟಾದವು.

II

ಕೃಷ್ಣನು ಕಂಸನನ್ನು ಕೊಂದಮೇಲೆ ವಿಧವೆಯರಾದ ಅವನ ಹೆಂಡಂದಿರಿಬ್ಬರೂ ತಮ್ಮ ತಂದೆಯಾದ ಜರಾಸಂಧನ ಮನೆಗೆ ಹೋಗಿ ನಿಂತು ಗಂಡನು ಸತ್ತುದ್ದಕ್ಕಾಗಿ ಗೋಳಾಡುತ್ತಿದ್ದರು. ಇದನ್ನು ನೋಡಿ ಜರಾಸಂಧನು ಬಹಳ ಕೋಪಗೊಂಡು, ಭೂಮಿಯಮೇಲೆ ಯದುವಂಶದ ಹೆಸರೇ ಇಲ್ಲದಂತೆ ಮಾಡುವೆನೆಂದು ಪ್ರತಿಜ್ಞೆ ಮಾಡಿ ಬಹಳ ದೊಡ್ಡ ಸೇನೆಯೊಡನೆ ಕೃಷ್ಣನ ರಾಜಧಾನಿಯಾದ ಮಧುರಾಪಟ್ಟಣವನ್ನು ಮುತ್ತಿದನು. ಕೃಷ್ಣನೂ ಆತನ ಅಣ್ಣನಾದ ಬಲರಾಮನೂ ಜರಾಸಂಧನನ್ನು ಸೋಲಿಸಿ ಓಡಿಸಿಬಿಟ್ಟರು.

ಜರಾಸಂಧನು ಮತ್ತೆ ಮತ್ತೆ ಹದಿನೇಳು ಬಾರಿ ಮಧುರೆಯನ್ನು ಮುತ್ತಿ ಸೋತುಹೋದನು ; ಹದಿನೆಂಟನೆಯ ಬಾರಿ ಬಹಳ ಸಾಹಸಿಯಾದ ಕಾಲಯವನನೆಂಬ ರಾಕ್ಷಸನ ಸಹಾಯದೊಡನೆ ಮಧುರೆಯನ್ನು ಮರಳಿ ಮುತ್ತಿದನು.

ಆಗ ಕೃಷ್ಣನು ಸಾಹಸಿಗಳಾದ ಇಬ್ಬರನ್ನೂ ಗೆಲ್ಲುವುದು ಸುಲಭವಲ್ಲವೆಂದು ಅಣ್ಣನಿಗೆ ಹೇಳಿ ಸಮುದ್ರದ ಮಧ್ಯದಲ್ಲಿ ತಮಗಾಗಿ ಒಂದು ಪಟ್ಟಣವನ್ನು ಸೃಷ್ಟಿಮಾಡೆಂದು ದೇವತೆಗಳ ಶಿಲ್ಪಿಯಾದ ವಿಶ್ವಕರ್ಮನಿಗೆ ಆಜ್ಞೆ ಮಾಡಿದನು. ಕೂಡಲೆ ಆತನು ಸಮುದ್ರ ಮಧ್ಯದಲ್ಲಿ ದ್ವಾರಕೆಯೆಂಬ ಬಹಳ ಸುಂದರವಾದ ಪಟ್ಟಣವೊಂದನ್ನು ಕಟ್ಟಲು, ಕೃಷ್ಣನು ಯಾದವರೆಲ್ಲರನ್ನೂ ಅಲ್ಲಿಗೆ ಕಳುಹಿಸಿ ಅವರನ್ನು ಕಾಪಾಡಿಕೊಂಡಿರುವಂತೆ ತನ್ನ ಅಣ್ಣನಾದ ಬಲರಾಮನನ್ನು ಒಪ್ಪಿಸಿ ತಾನು ಮಧುರೆಯ ಹೆಬ್ಬಾಗಿಲಿನಿಂದ ನಿರಾಯುಧನಾಗಿ ಹೊರಗೆ ಹೊರಟನು. ಹೀಗೆ ಬರಿಗೈಯಲ್ಲಿ ಊರಿನಿಂದ ಹೊರಗೆ ಹೋಗುತ್ತಿರುವ ಕೃಷ್ಣನನ್ನು ಕಾಲಯವನನು ಬೆನ್ನಟ್ಟಿಕೊಂಡು ಹೋಗಲು ಕೃಷ್ಣನು ಅವನನ್ನು ಮುಚುಕುಂದನೆಂಬ ಮುನಿಯಿಂದ ಕೊಲ್ಲಿಸಿ ಮುಚುಕುಂದನಿಗೆ ವರವನ್ನಿತ್ತು ದ್ವಾರಕೆಗೆ ಹೋಗಿ ಅಲ್ಲಿ ಸುಖದಿಂದಿದ್ದನು.

III

ಆ ಸಮಯದಲ್ಲಿ ವಿದರ್ಭ ದೇಶದ ದೊರೆಯಾದ ಭೀಷ್ಮಕನು ಕುಂಡಿನಪುರದಲ್ಲಿ ಆಳುತ್ತಿದ್ದನು. ಆತನಿಗೆ ಬಹಳ ಸುಂದರಿಯಾಗಿಯೂ ಸಕಲಗುಣಲಕ್ಷಣ ಸಂಪನ್ನೆಯಾಗಿಯೂ ಇದ್ದ ರುಕ್ಮಿಣಿಯೆಂಬ ಮಗಳಿದ್ದಳು. ಆಕೆಯು ಕೃಷ್ಣನ ಯೋಗ್ಯತೆಯನ್ನೂ, ರೂಪ ಲಾವಣ್ಯಾದಿಗಳನ್ನೂ ಕೇಳಿದವಳಾಗಿ ಆತನನ್ನು ಮದುವೆಯಾಗುವೆನೇ ಹೊರತು ಮತ್ತೆ ಯಾರನ್ನೂ ವರಿಸುವುದಿಲ್ಲವೆಂದು ನಿಶ್ಚಯಿಸಿಕೊಂಡಳು. ಇದೇ ಮೇರೆಗೆ ಕೃಷ್ಣನೂ ರುಕ್ಮಿಣಿಯ ಸೌಜನ್ಯವನ್ನೂ, ಸೌಂದರ್ಯವನ್ನೂ ಚಾರರ ಮೂಲಕ ತಿಳಿದು ಆಕೆಯನ್ನು ಮದುವೆಮಾಡಿಕೊಳ್ಳಲು ಬಯಸಿದನು. ಇದನ್ನರಿತ ಭೀಷ್ಮಕನೂ, ಹತ್ತಿರದ ಇತರ ಬಂಧುಗಳೂ ಈ ಸಂಬಂಧವನ್ನು ಬೆಳೆಯಿಸಬೇಕೆಂಬ ಆಸೆಯಿಂದಿದ್ದರು. ಆದರೆ ರುಕ್ಮಿಣಿಯ ಅಣ್ಣನಾದ ರುಕ್ಮಿಗೆ ಈ ಸಂಬಂಧವು ಒಪ್ಪಿಗೆಯಾಗಲಿಲ್ಲ.

ಚೇದಿರಾಜನಾದ ಶಿಶುಪಾಲನಿಗೆ ಆಕೆಯನ್ನು ಕೊಟ್ಟು ಮದುವೆ ಮಾಡ ಬೇಕೆಂಬ ಅಭಿಪ್ರಾಯವಿದ್ದುದರಿಂದ ಆತನು ತನ್ನ ತಂದೆಯನ್ನು ನಿರ್ಬಂಧ ಪಡಿಸಿ ರುಕ್ಮಿಣಿಯನ್ನು ಶಿಶುಪಾಲನಿಗೆ ಕೊಡುವಂತೆ ಒಡಂಬಡಿಸಿದನು. ತರುವಾಯ ಮದುವೆಗೆ ಎಲ್ಲವನ್ನೂ ಸಜ್ಜುಗೊಳಿಸಿ ರುಕ್ಮಿಯು ಶಿಶುಪಾಲ ನನ್ನೂ, ಹಲವು ಮಂದಿ ಇತರ ರಾಜರನ್ನೂ ಕುಂಡಿನಪುರಕ್ಕೆ ಕರೆಯಿಸಿದನು.

ರುಕ್ಮಿಣಿಯು ಈ ಸಂದರ್ಭವನ್ನರಿತು ಮನನೊಂದವಳಾಗಿ ತನ್ನ ಬಯಕೆಯು ಕೈಗೂಡುವ ಉಪಾಯವನ್ನು ಆಲೋಚಿಸಿ, ಆಪ್ತನಾದ ಒಬ್ಬ ಬ್ರಾಹ್ಮಣನನ್ನು ಕರೆಯಿಸಿ ಕೃಷ್ಣನಿಗೆ ಒಂದು ಓಲೆಯನ್ನು ಬರೆದು ಆ ಬ್ರಾಹ್ಮಣ ನೊಡನೆ ಕಳುಹಿಸಿದಳು. ಈ ಓಲೆಯು ಸೇರಿದ ಕೂಡಲೆ ಕೃಷ್ಣನು ರುಕ್ಮಿಣಿಯ ಅಭಿಪ್ರಾಯದಂತೆ ಆಕೆಯನ್ನು ಉಪಾಯಾಂತರದಿಂದ ಕರೆದು ಮದುವೆ ಯಾಗಬೇಕೆಂದು ನಿಶ್ಚಯಿಸಿದನು.

ಇತ್ತ, ಕುಂಡಿನಪುರದಲ್ಲಿ ಮದುವೆಯ ಸಮಾರಂಭವು ಬಹಳ ವಿಭವ ದಿಂದ ನಡೆಯಿತು. ಸುಮುಹೂರ್ತದಲ್ಲಿ ವರನಾದ ಶಿಶುಪಾಲನನ್ನು ತಕ್ಕ ಮರ್ಯಾದೆಗಳಿಂದ ವಿಶೇಷ ಸಂಭ್ರಮದೊಡನೆ ಇದಿರ್ಗೊಂಡು ಬಂದರು. ತರುವಾಯ ವಧೂವರರಿಗೆ ಮಂಗಳಸ್ನಾನವನ್ನು ಮಾಡಿಸಿ ರುಕ್ಮಿಣಿಯನ್ನು ಗೌರೀಪೂಜೆಗಾಗಿ ಸಕಲ ಪೂಜಾ ಸಾಮಗ್ರಿಯೊಡನೆ ಊರ ಹೊರಗಣ ಉದ್ಯಾನದಲ್ಲಿದ್ದ ಗೌರೀದೇವಿಯ ಆಲಯಕ್ಕೆ ಬಹಳ ವಿಭವದಿಂದ ಕರೆತಂದರು. ರುಕ್ಮಿಣಿಯು ಗೌರೀಪೂಜೆಯನ್ನು ಮಾಡಿ ತನ್ನ ಮನೋವಲ್ಲಭನಾದ ಶ್ರೀಕೃಷ್ಣನು ಯಾವಾಗ ಬರುವನೋ ಎಂದು ಎದುರು ನೋಡುತ್ತಿದ್ದಳು.

ಕೃಷ್ಣನೂ, ಬಲರಾಮನೂ ರಥದಲ್ಲಿ ಕುಳಿತು ದ್ವಾರಕೆಯಿಂದ ಹೊರಟು ರುಕ್ಮಿಣಿಯು ದೇವಾಲಯಕ್ಕೆ ಬಂದ ಹೊತ್ತಿಗೆ ಸರಿಯಾಗಿ ಕುಂಡಿನಪುರದ ಉದ್ಯಾನವನ್ನು ಸೇರಿದರು. ಗೌರೀಪೂಜೆಯಾದಮೇಲೆ ರುಕ್ಮಿಣಿಯು ದೇವ ಸ್ಥಾನದಿಂದ ಹೊರಗೆ ಬರಲು, ಕೃಷ್ಣನು ಆಕೆಯನ್ನು ತನ್ನ ರಥದಲ್ಲಿ ಕುಳ್ಳಿರಿಸಿ ಕೊಂಡು ವೇಗವಾಗಿ ರಥವನ್ನು ನಡೆಯಿಸಿದನು. ಈ ಸಮಾಚಾರವು ರುಕ್ಮಿ ಮೊದಲಾದವರಿಗೆ ತಿಳಿಯಲು ಅವರು ಕೃಷ್ಣನ ಮೇಲೆ ಯುದ್ಧಕ್ಕೆ ಬಂದರು. ಅವರೆಲ್ಲರನ್ನೂ ಸೋಲಿಸಿ ಕೃಷ್ಣನು ರುಕ್ಮಿಣಿಯೊಡನೆ ದ್ವಾರಕೆ ಯನ್ನು ಸಂಭ್ರಮದಿಂದ ಸೇರಿದನು.

IV

ಹೀಗೆ ಕೃಷ್ಣನು ದ್ವಾರಕೆಯಲ್ಲಿ ಸುಖದಿಂದಿರುವಾಗ ಅಲ್ಲಿದ್ದ ಸತ್ರಾಜಿತ ನೆಂಬ ಯಾದವನೊಬ್ಬನು ಸೂರ್ಯನನ್ನು ಕುರಿತು ತಪಸ್ಸುಮಾಡಿ ಆತನಿಂದ ಪಡೆದ ಸ್ಯಮಂತಕವೆಂಬ ರತ್ನವನ್ನು ಒಂದು ದಿನ ತನ್ನ ಕೊರಳಲ್ಲಿ ಹಾಕಿ ಕೊಂಡು ಪಟ್ಟಣದಲ್ಲಿ ಬರುತ್ತಿದ್ದನು. ಪುರಜನರು ಆ ರತ್ನವನ್ನು ನೋಡಿ ಅದರ ಕಾಂತಿಗೆ ಬೆರಗಾಗಿ ಈ ವಿಷಯುವನ್ನು ಕೃಷ್ಣನಿಗೆ ತಿಳಿಸಲು, ಆತನು ಅದನ್ನು ಯದುನೃಪಾಲನಿಗೆ ಕೊಡೆಂದು ಸತ್ರಾಜಿತನನ್ನು ಕೇಳಿದನು. ಸತ್ರಾಜಿತನು ಅದಕ್ಕೆ ಒಪ್ಪದೆ ರತ್ನವನ್ನು ಬಹು ಜಾಗರೂಕತೆಯಿಂದ ಕಾಪಾಡಿ ಕೊಂಡಿದ್ದನು. ಹೀಗಿರಲು, ಒಂದಾನೊಂದು ದಿನ ಸತ್ರಾಜಿತನ ತಮ್ಮನಾದ ಪ್ರಸೇನನು ಆ ರತ್ನವನ್ನು ಕೊರಳಲ್ಲಿ ಹಾಕಿಕೊಂಡು ಬೇಟೆಯಾಡಲು ಅಡವಿಗೆ ಹೋದನು. ಅಲ್ಲಿ ಒಂದು ಸಿಂಹವು ಆತನನ್ನು ಕೊಂದಿತು. ಆ ಸಿಂಹವನ್ನು ಜಾಂಬವಂತನೆಂಬ ಒಂದು ದೊಡ್ಡ ಕರಡಿಯು ಕೊಂದು ಸ್ಯಮಂತಕ ರತ್ನ ವನ್ನು ತನ್ನ ಗವಿಗೆ ತೆಗೆದುಕೊಂಡು ಹೋಗಿ ಅಲ್ಲಿ ತನ್ನ ಮಗುವಿನ ತೊಟ್ಟಿಲಿಗೆ ಆಟಕ್ಕಾಗಿ ಕಟ್ಟಿತು.

ಇತ್ತ, ಬೇಟೆಗೆ ಹೋದ ಪ್ರಸೇನನು ಎಷ್ಟು ದಿನಗಳಾದರೂ ಹಿಂದಕ್ಕೆ ಬಾರದೆ ಹೋದುದರಿಂದ ಸತ್ರಾಜಿತನು ಕೃಷ್ಣನಮೇಲೆ ಸಂಶಯಪಟ್ಟು ರತ್ನ ಕ್ಕಾಗಿ ಆತನೇ ತನ್ನ ತಮ್ಮನನ್ನು ಕೊಂದಿರಬೇಕೆಂದು ಊಹಿಸಿದನು. ಕೃಷ್ಣನು ತನ್ನ ಮೇಲೆ ಬಂದ ಅಪವಾದವನ್ನು ಕೇಳಿ ಮನನೊಂದು ಆ ರತ್ನವನ್ನು ಹುಡುಕುವುದಕ್ಕಾಗಿ ಕುದುರೆಯನ್ನೇರಿ ಪರಿವಾರದೊಡನೆ ಹೊರಟು ಸತ್ರಾ ಜಿತನು ಬೇಟೆಗಾಗಿ ಹೋದ ಅಡವಿಯನ್ನು ಸೇರಿ ಅಲ್ಲಿ ಹೆಜ್ಜೆಯ ಗುರುತು ಗಳಿಂದ ಪ್ರಸೇನನನ್ನು ಒಂದು ಸಿಂಹವೂ, ಆ ಸಿಂಹವನ್ನು ಒಂದು ಕರಡಿಯೂ ಕೊಂದಿರಬೇಕೆಂಬುದನ್ನು ತಿಳಿದು ಕರಡಿಯ ಹೆಜ್ಜೆಯನ್ನು ಹಿಡಿದು ನಡೆಯಲು, ಒಂದು ಬೆಟ್ಟದ ಗವಿಯುವರೆಗೂ ಹೋಗಬೇಕಾಯಿತು. ಕೃಷ್ಣನು ಸೇನೆಯನ್ನು ಹೊರಗೆ ಬಿಟ್ಟು ತಾನೊಬ್ಬನೇ ಆ ಗವಿಯನ್ನು ಹೊಕ್ಕು ನೋಡಲಾಗಿ ಕತ್ತ ಲೆಯ ಗವಿಯಲ್ಲಿ ಹೊಳೆಯುತ್ತಿದ್ದ ಸ್ಯಮಂತಕಮಣಿಯನ್ನೂ, ತೊಟ್ಟಿಲನ್ನು ತೂಗುತ್ತಿದ್ದ ಒಬ್ಬ ಚೆಲುವೆಯಾದ ಯುವತಿಯನ್ನೂ ಕಂಡನು. ಆ ಬಾಲೆಯು ತೊಟ್ಟಿಲನ್ನು ತೂಗುತ್ತ ಜೋಗುಳವನ್ನು ಹೀಗೆ ಹಾಡುತ್ತಿದ್ದಳು :—

ಶ್ಲೋ॥ ಸಿಂಹಃ ಪ್ರಸೇನಮವಧೀತ್ಸಿಂಹೋ ಜಾಂಬವತಾ ಹತಃ ।
ಸುಕುಮಾರಕ ಮಾ ರೋದೀ ಸ್ತವಹ್ಯೇಷಸ್ಯಮಂತಕಃ ॥

[ಅರ್ಥ—ಸಿಂಹವು ಪ್ರಸೇನನನ್ನು ಕೊಂದಿತು; ಆ ಸಿಂಹವು ಜಾಂಬವಂತನಿಂದ ಕೊಲ್ಲಲ್ಪಟ್ಟಿತು. ಎಲೆ ಮುದ್ದು ಮಗುವೇ! ಅಳಬೇಡ, ಈ ಸ್ಯಮಂತಕ ಮಣಿಯು ನಿನ್ನದೇ ಆಗಿದೆ.]

ಇದನ್ನು ಕೇಳಿ ಕೃಷ್ಣನು ಸಂತೋಷಪಟ್ಟನು. ಬಾಲೆಯು ಕೃಷ್ಣನ ಸೌಂದರ್ಯಕ್ಕೆ ಮೆಚ್ಚಿ ಆತನನ್ನು ಮೋಹಿಸಿದಳು. ಕೃಷ್ಣನು ತಾನು ಬಂದ ಕೆಲಸವನ್ನು ಆಕೆಯೊಡನೆ ಹೇಳಲು ಆಕೆಯು "ನಿಮ್ಮನ್ನು ಕಂಡರೆ ನಮ್ಮ ತಂದೆಯು ಸಿಟ್ಟಾಗಿ ಕೇಡನ್ನು ಮಾಡುವನು. ಆದುದರಿಂದ ಈ ರತ್ನವನ್ನು ಗುಪ್ತವಾಗಿ ತೆಗೆದುಕೊಂಡು ಹೋಗಿರಿ" ಎಂದು ಹೇಳಿದಳು. ಇದಕ್ಕೆ ಕೃಷ್ಣನು ಒಡಂಬಡದೆ ತಾನು ಬಂದಿರುವುದನ್ನು ಪ್ರಕಟಮಾಡುವುದಕ್ಕಾಗಿ ಶಂಖಧ್ವನಿ ಮಾಡಿದನು. ಅದನ್ನು ಕೇಳಿ ಜಾಂಬವಂತನು ಬಹಳ ಕೋಪ ಗೊಂಡು ಬಂದು ಕೃಷ್ಣನ ಮೇಲೆ ಬಿದ್ದನು. ಇವರಿಬ್ಬರಿಗೂ ಇಪ್ಪತ್ತೊಂದು ದಿನ ಬಾಹು ಯುದ್ಧವು ನಡೆಯಿತು. ಎಷ್ಟಾದರೂ ಕೃಷ್ಣನು ಸೋಲದೆ ಹೋದುದರಿಂದ ಈತನು ಶ್ರೀ ಮಹಾವಿಷ್ಣುವೇ ಎಂದು ಅರಿತು ಜಾಂಬ ವಂತನು ಆತನ ಕ್ಷಮೆಯನ್ನು ಬೇಡಿ ಸ್ತೋತ್ರಮಾಡಿ ಆತನಿಗೆ ಆ ರತ್ನವನ್ನು ಕೊಟ್ಟದ್ದಲ್ಲದೆ ತನ್ನ ಮಗಳಾದ ಜಾಂಬವತಿಯನ್ನೂ ಕೊಟ್ಟು ಮದುವೆಮಾಡಿ ಕಳುಹಿಸಿದನು.

ತರುವಾಯ ಕೃಷ್ಣನು ದ್ವಾರಕೆಗೆ ಬಂದು ಅರಮನೆಯಲ್ಲಿ ಸಭೆ ನೆರೆಯಿಸಿ ಸ್ಯಮಂತಕ ಮಣಿಯ ವೃತ್ತಾಂತವೆಲ್ಲವನ್ನೂ ತಿಳಿಸಿ ಆ ಮಣಿಯನ್ನು ಸತ್ರಾಜಿತನಿಗೆ ಕೊಟ್ಟು ತನ್ನ ಮೇಲೆ ಬಂದಿದ್ದ ಮಿಥ್ಯಾಪವಾದವನ್ನು ಕಳೆದು ಕೊಂಡನು. ಸತ್ರಾಜಿತನು ತಾನು ಅನ್ಯಾಯವಾಗಿ ಕೃಷ್ಣನನ್ನು ದೂಷಣೆ ಮಾಡಿದ ದೋಷದ ಪರಿಹಾರಕ್ಕಾಗಿ ತನ್ನ ಮಗಳಾದ ಸತ್ಯಭಾಮೆಯನ್ನು ಕೃಷ್ಣನಿಗೆ ಮದುವೆ ಮಾಡಿ ಕೊಟ್ಟನು.

V

ಕಾಲಕ್ರಮದಲ್ಲಿ ಕೃಷ್ಣನ ಕುಲದವರಾದ ಯಾದವರು ಹೆಚ್ಚಿ ಕೆಟ್ಟ ಹಾದಿಯಲ್ಲಿ ನಡೆಯುತ್ತ ಭೂಮಿಗೆ ಭಾರವಾಗುತ್ತ ಬಂದರು. ಇದನ್ನು

ಕಂಡು ಕೃಷ್ಣನು ಅವರವರಲ್ಲಿಯೇ ಕಲಹಗಳು ಹುಟ್ಟಿ ಒಬ್ಬರಿಂದೊಬ್ಬರು ನಾಶವಾಗುವ ಆಲೋಚನೆಯನ್ನು ಮಾಡಿದನು. ಈ ಸಮಯದಲ್ಲಿ ವಿಶ್ವಾಮಿತ್ರ, ಕಣ್ವ, ದುರ್ವಾಸ ಮೊದಲಾದ ಮುನಿಗಳು ದ್ವಾರಕೆಗೆ ಸಮೀಪದಲ್ಲಿದ್ದ ಒಂದು ದಿವ್ಯಕ್ಷೇತ್ರದಲ್ಲಿ ತಪಸ್ಸುಮಾಡುತ್ತಿದ್ದರು. ಶ್ರೀಕೃಷ್ಣನ ಮಾಯೆಗೆ ಸಿಕ್ಕಿದ ಯಾದವರು ಜಾಂಬವತಿಯ ಮಗನಾದ ಸಾಂಬನಿಗೆ ಹೆಣ್ಣಿನ ವೇಷವನ್ನು ಹಾಕಿ ಆ ದಿವ್ಯಕ್ಷೇತ್ರದಲ್ಲಿದ್ದ ಮುನಿಗಳ ಬಳಿಗೆ ಕರೆದುಕೊಂಡು ಹೋಗಿ, "ಎಲೈ ಮಹರ್ಷಿಗಳಿರಾ! ಈಕೆ ದಿನ ತುಂಬಿದ ಬಸುರಿ; ಎಂತಹ ಮಗುವನ್ನು ಹಡೆಯುವಳೆಂಬುದನ್ನು ತಮ್ಮಿಂದ ತಿಳಿದುಕೊಳ್ಳುವುದಕ್ಕಾಗಿ ಬಂದಿರುವಳು; ತಾವು ಕೃಪೆಯಿಟ್ಟು ಆ ವಿಷಯವನ್ನು ತಿಳಿಸಬೇಕು" ಎಂದು ಕೇಳಿದರು. ಸರ್ವಜ್ಞರಾದ ಆ ಋಷಿಗಳು ಇದನ್ನು ಕೇಳಿ ಕೋಪಗೊಂಡು, "ಎಲೈ ದುರ್ಮಾರ್ಗಿಗಳಾದ ಯಾದವರೇ! ನಮ್ಮನ್ನು ಪರೀಕ್ಷಿಸುವುದಕ್ಕಾಗಿ ನೀವು ಈ ಕೆಲಸವನ್ನು ಮಾಡಿರುವಿರಿ; ಈ ಸ್ತ್ರೀ ರೂಪಿಯು ನಿಮ್ಮ ಕುಲವನ್ನೆಲ್ಲ ನಾಶಮಾಡುವ ಒನಕೆಯನ್ನು ಹೆರುವಳು" ಎಂದು ಹೇಳಿದರು.

ಇದನ್ನು ಕೇಳಿ ಯಾದವರು ಚಿಂತೆಯಲ್ಲಿ ಮುಳುಗಿರಲು, ಸಾಂಬನಿಂದ ಒಂದು ಕಬ್ಬಿಣದ ಒನಕೆಯು ಉತ್ಪತ್ತಿಯಾಯಿತು. ಇದನ್ನು ನೋಡುತ್ತಲೆ ಎಲ್ಲರೂ ಬಹಳ ಭಯಪಟ್ಟು ದ್ವಾರಕೆಗೆ ಹೋದರು; ಆದರೆ ಈ ಸಂಗತಿಯನ್ನು ಕೃಷ್ಣನಿಗೆ ತಿಳಿಸದೆ ಮುಚ್ಚಿಟ್ಟು ಆ ಒನಕೆಯನ್ನು ಪುಡಿಪುಡಿ ಮಾಡಿ ಸಮುದ್ರದಲ್ಲಿ ಹಾಕಿದರು. ಆ ಪುಡಿಯಲ್ಲಿ ಉಳಿದಿದ್ದ ಒನಕೆಯ ಚೂರೊಂದನ್ನು ಒಂದು ಮೀನು ನುಂಗಿತು. ಆ ಮೀನನ್ನು ಅಕಸ್ಮಾತ್ತಾಗಿ ಜರನೆಂಬ ಒಬ್ಬ ಬೇಡರವನು ಇತರ ಮೀನುಗಳೊಡನೆ ಹಿಡಿದು ಅದರೊಳಗೆ ಸಿಕ್ಕಿದ ಕಬ್ಬಿಣದ ಚೂರನ್ನು ತನ್ನ ಬಾಣದ ತುದಿಗೆ ಸೇರಿಸಿದನು. ಸಮುದ್ರದಲ್ಲಿ ಚೆಲ್ಲಿದ ಪುಡಿಯು ತೆರೆಗಳ ಹೊಡೆತದಿಂದ ಬಂದು ದಡವನ್ನು ಸೇರಿತು. ಆ ಸ್ಥಳದಲ್ಲಿ ಜೊಂಡು ಹುಲ್ಲು ಬೆಳೆಯಿತು.

ಒಂದು ದಿನ ದ್ವಾರಕಾಪಟ್ಟಣದಲ್ಲಿ ಭೂಕಂಪ ಉಲ್ಕಾಪಾತ ಮೊದಲಾದ ಉತ್ಪಾತಗಳು ಕಾಣಬಂದುವು. ಇದನ್ನು ನೋಡಿ ಯಾದವರೆಲ್ಲರೂ ಬಹಳ ಭಯಪಟ್ಟು ಮುನಿಗಳ ಶಾಪವೇ ಇದಕ್ಕೆ ಕಾರಣವೆಂದು ನಂಬಿದರು. ಎಲ್ಲವನ್ನೂ ತಿಳಿದಿದ್ದ ಶ್ರೀಕೃಷ್ಣನು ಯಾದವರನ್ನು ಕುರಿತು "ಅಯ್ಯಾ!

ನಮ್ಮ ಕುಲಕ್ಕೆ ಒದಗಿರುವ ಋಷಿ ಶಾಪವು ಸುಲಭವಾಗಿ ಪರಿಹಾರವಾಗದು ; ಆದುದರಿಂದ ನಾವು ಇಲ್ಲಿ ಇನ್ನು ನಿಲ್ಲದೆ ಸರಸ್ವತೀ ನದಿಯ ದಡದಲ್ಲಿರುವ ಪ್ರಭಾಸ ಕ್ಷೇತ್ರಕ್ಕೆ ಹೋಗಿ ದೇವಬ್ರಾಹ್ಮಣ ಪೂಜೆಯನ್ನೂ, ಗೋದಾನ ಮೊದಲಾದ ದಾನಗಳನ್ನೂ ಮಾಡಿ ಶ್ರೇಯಸ್ಸನ್ನು ಸಂಪಾದಿಸೋಣ" ಎಂದು ಹೇಳಲು ಅದಕ್ಕೆ ಯಾದವರೆಲ್ಲರೂ ಒಪ್ಪಿ ಹಾಗೆಯೇ ಮಾಡಿದರು.

ಆದರೂ ಋಷಿಗಳ ಶಾಪದ ಫಲವನ್ನು ಅನುಭವಿಸಿಯೇ ತೀರಬೇಕಲ್ಲವೆ? ಯಾದವರು ಬರಬರುತ ಹೆಚ್ಚು ಹೆಚ್ಚು ದುರ್ಮಾರ್ಗಿಗಳಾಗಿ ಪರಿಣಮಿಸಿ ಒಂದು ದಿನ ಹೆಚ್ಚಾಗಿ ಮದ್ಯಪಾನ ಮಾಡಿ ಪ್ರಜ್ಞೆಯಿಲ್ಲದೆ ಒಬ್ಬರೊಡ ನೊಬ್ಬರು ಆಯುಧಗಳಿಂದ ಹೊಡೆದಾಡಲಾರಂಭಿಸಿದರು. ಆಯುಧಗಳು ಮುರಿದುಹೋಗಲು ಸಮುದ್ರದ ದಡದಲ್ಲಿ ಬೆಳೆದಿದ್ದ ಜೊಂಡು ಹುಲ್ಲನ್ನು ಕಿತ್ತುಕೊಂಡು ಅದರಿಂದ ಹೊಡೆದಾಡಿ ಎಲ್ಲರೂ ಮಡಿದರು.

ಬಳಿಕ ಬಲರಾಮನು ಇದನ್ನು ನೋಡಿ ಸಹಿಸಲಾರದೆ ಯೋಗಾರೂಢ ನಾಗಿ ಸರ್ಪ ಶರೀರವನ್ನು ಪಡೆದು ಸಮುದ್ರವನ್ನು ಹೊಕ್ಕನು. ಇದನ್ನು ಕಂಡ ಶ್ರೀಕೃಷ್ಣನು ತಾನೂ ಸಮಾಧಿ ಸ್ಥಿತಿಯನ್ನು ಹೊಂದಿ ಒಂದು ಅರಳಿಯ ಮರದ ಕೆಳಗೆ ಕಾಲಮೇಲೆ ಕಾಲು ಹಾಕಿಕೊಂಡು ಮಲಗಿದ್ದನು. ಆ ಸಮಯಕ್ಕೆ ಸರಿಯಾಗಿ ಜರನೆಂಬ ಬೇಡನು ದೂರದಲ್ಲಿ ಶ್ರೀಕೃಷ್ಣನ ಪಾದವನ್ನು ಕಂಡು ಅದನ್ನು ಒಂದು ಮೃಗದ ಅಂಗವೆಂದು ಬಗೆದು ಮೀನಿನ ಹೊಟ್ಟೆಯಲ್ಲಿ ಸಿಕ್ಕಿದ ಕಬ್ಬಿಣದ ತುದಿಯುಳ್ಳ ತನ್ನ ಬಾಣವನ್ನು ಆ ಪಾದಕ್ಕೆ ಗುರಿಯಿಟ್ಟು ಹೊಡೆದನು. ಬಳಿಕ ಹತ್ತಿರಕ್ಕೆ ಬಂದು ನೋಡುವಲ್ಲಿ ಶ್ರೀಕೃಷ್ಣನೆಂದು ತಿಳಿದುಬರಲು ಅವನು ಬಹಳ ಪಶ್ಚಾತ್ತಾಪಪಟ್ಟು ಬೇಡಿಕೊಂಡನು. ಶ್ರೀಕೃಷ್ಣನು ಆ ಬೇಡರವನನ್ನು ಮನ್ನಿಸಿ ಅವನಿಗೆ ಸ್ವರ್ಗವನ್ನಿತ್ತು ತಾನೂ ತನ್ನಿಚ್ಛೆಯಿಂದ ದೇಹವನ್ನು ಬಿಟ್ಟು ವೈಕುಂಠವನ್ನು ಸೇರಿದನು.

ಆ ಸಮಯದಲ್ಲಿ ಅಲ್ಲಿಗೆ ಬಂದಿದ್ದ ಅರ್ಜುನನು ದ್ವಾರಕೆಯಲ್ಲಿ ಉಳಿದಿದ್ದ ವರನ್ನು ಕುರಿತು "ದ್ವಾರಕೆಯು ಸಮುದ್ರದಲ್ಲಿ ಮುಳುಗಿಹೋಗುವುದು ; ಆದುದರಿಂದ ನೀವೆಲ್ಲರೂ ಇಂದ್ರಪ್ರಸ್ಥಕ್ಕೆ ತೆರಳಿರಿ" ಎಂದು ಹೇಳಿ ಎಲ್ಲರೊಡನೆ ತಾನೂ ಹೊರಡಲು ದ್ವಾರಕೆಯು ಸಮುದ್ರದಲ್ಲಿ ಮುಳುಗಿಹೋಯಿತು.

---

೧೦. ಷಟ್ಪುರೇಶ ಮಥನ

ದ್ವಾಪರಯುಗದಲ್ಲಿ ಧರ್ಮರಾಯನು ಇಂದ್ರಪ್ರಸ್ಥ ಪುರದಲ್ಲಿ ರಾಜಸೂಯ ಯಾಗವನ್ನು ಆರಂಭಿಸಿದನು. ಆಗ ಆತನ ತಮ್ಮನಾದ ಅರ್ಜುನನು ದಿಗ್ವಿಜಯಕ್ಕಾಗಿ ಸೈನ್ಯದೊಡನೆ ಹೊರಟು ಅಲ್ಲಲ್ಲಿಯ ರಾಜರಿಂದ ಕಪ್ಪಕಾಣಿಕೆಗಳನ್ನು ಕೈಕೊಳ್ಳುತ್ತ ಸಮುದ್ರ ತೀರಕ್ಕೆ ಬಂದನು. ಆ ಕಾಲಕ್ಕೆ ಸರಿಯಾಗಿ ಶ್ರೀಕೃಷ್ಣನೂ ತನ್ನ ಪರಿವಾರದೊಡನೆ ಅಲ್ಲಿಗೆ ಬಂದು ತನ್ನ ಮೈದುನನಾದ ಅರ್ಜುನನೊಡನೆ ಕ್ಷೇಮಸಮಾಚಾರದ ಮಾತುಗಳನ್ನಾಡಿ ಜಲಕ್ರೀಡೆಗಾಗಿ ಸಮುದ್ರದಲ್ಲಿಳಿದನು.

ಆ ಸಮಯದಲ್ಲಿ ಷಟ್ಪುರಾಧಿಪತಿಯಾದ ನಿಕುಂಭನೆಂಬ ರಾಕ್ಷಸನು ಸಮುದ್ರ ಮಾರ್ಗದಲ್ಲಿ ಯಾರಿಗೂ ಕಾಣಿಸಿಕೊಳ್ಳದಂತೆ ಅಲ್ಲಿಗೆ ಬಂದು ಜಲಕ್ರೀಡೆಯಾಡುತ್ತಿದ್ದ ಅನೇಕ ಕನ್ಯೆಯರ ಮಧ್ಯದಲ್ಲಿದ್ದ ಭಾನುಮತಿಯೆಂಬ ಯಾದವ ಕನ್ಯೆಯನ್ನು ಎತ್ತಿಕೊಂಡು ಆಕಾಶಕ್ಕೆ ನೆಗೆದನು. ಇದನ್ನು ನೋಡಿ ಅರ್ಜುನನು ಕೋಪಗೊಂಡು ತನ್ನ ಗಾಂಡೀವ ಧನುಸ್ಸಿನಿಂದ ಆ ದೈತ್ಯನ ಮೇಲೆ ಅಂಬುಗಳನ್ನೆಸೆದನು. ಆ ಅಂಬುಗಳು ದೈತ್ಯನ ಸುತ್ತಲೂ ಪಂಜರದಂತೆ ಹೆಣೆದುಕೊಂಡವು. ದೈತ್ಯನು ಇದಕ್ಕೆ ಹೆದರದೆ ಸ್ತ್ರೀರತ್ನಕ್ಕಿಂತಲೂ ವೀರರತ್ನವು ಶ್ರೇಷ್ಠವಾದುದೆಂದೆಣಿಸಿ ಕೆಳಗಿಳಿದುಬಂದು ಭಾನುಮತಿಯನ್ನು ಬಿಟ್ಟು ಅರ್ಜುನನನ್ನು ಕೊಂಕುಳಲ್ಲೆತ್ತಿಕೊಂಡು ಅಂತರಿಕ್ಷಕ್ಕೆ ಹಾರಿದನು.

ಆಗ ಶ್ರೀಕೃಷ್ಣನು ವಿಜಯನೆಂಬ ಹೆಸರು ಪಡೆದ ಅತಿ ಸಾಹಸಿಯಾದ ಅರ್ಜುನನನ್ನು ಆ ದೈತ್ಯನು ಇಷ್ಟು ಸುಲಭವಾಗಿ ಎತ್ತಿಕೊಂಡು ಹೋದುದನ್ನು ಕಂಡು ರಾಕ್ಷಸನ ಕಡೆಗೆ ತಿರುಗಿ ಅರ್ಜುನನನ್ನು ಬಿಟ್ಟುಬಿಡೆಂದು ಗದರಿಸಿ ಹೇಳಿದನು. ಆ ಮಾಯಾವಿಯಾದ ರಾಕ್ಷಸನು ತನ್ನ ಮಾಯಾಶಕ್ತಿಯಿಂದ ಅನೇಕ ಕೋಟಿ ಸಂಖ್ಯೆಯ ತನ್ನ ಶರೀರಗಳನ್ನು ತೋರಿಸಿ ಶ್ರೀಕೃಷ್ಣನನ್ನು ಭ್ರಾಂತಿಗೊಳಿಸಲು ಯತ್ನಿಸಿದನು. ಆದರೆ ಸರ್ವಜ್ಞನಾದ ಶ್ರೀಕೃಷ್ಣನನ್ನು ಹೀಗೆ ಮರುಳುಮಾಡಲು ಸಾಧ್ಯವೆ! ಕೂಡಲೆ ಶ್ರೀಕೃಷ್ಣನು ಆ ರಾಕ್ಷಸನ ನಿಜಶರೀರವನ್ನು ತನ್ನ ಬಾಣದಿಂದ ಹೊಡೆಯಲು ದೈತ್ಯನು ಬೆದರಿ ಅರ್ಜುನನನ್ನು ಬಿಟ್ಟುಬಿಟ್ಟು ತನ್ನ ಪಟ್ಟಣಕ್ಕೆ ಹೋಗಿ ಕೃಷ್ಣಾರ್ಜುನರೊಡನೆ ಯುದ್ಧಮಾಡಲು ಸನ್ನದ್ಧನಾದನು.

ಇತ್ತ ಕಡೆ ಕೃಷ್ಣಾರ್ಜುನರೂ ಆ ದೈತ್ಯನನ್ನು ಬೆನ್ನಟ್ಟಿಕೊಂಡು ಹೋಗಿ ಅವನ ಪಟ್ಟಣಕ್ಕೆ ಮುತ್ತಿಗೆ ಹಾಕಿ ಎದುರುಬಿದ್ದ ದೈತ್ಯ ಸೈನ್ಯವನ್ನೆಲ್ಲ ಸಂಹರಿಸಿದರು. ಕೊನೆಗೆ ನಿಕುಂಭನು ಯುದ್ಧಕ್ಕೆ ಬರಲು ಅವನನ್ನು ಶ್ರೀಕೃಷ್ಣನು ತನ್ನ ಚಕ್ರಾಯುಧದಿಂದ ಕೊಂದನು.

---

೧೧. ಶೂದ್ರಕನ ಕಥೆ

ಪೂರ್ಣಕುಂಭನೆಂಬ ರಾಜನ ಮಗನಾದ ಶೂದ್ರಕನಿಗೆ ಕಾಲಜ್ಞಾನಿಯೊಬ್ಬನು "ನಿನ್ನ ತಲೆಯು ಕಂಚವಾಳದ ಮರಕ್ಕೆ ಕಟ್ಟಲಾದೀತು" ಎಂದು ಹೇಳಿ ಹೋದನು. ಶೂದ್ರಕನು ಆ ಮಾತಿಗೆ ಲಕ್ಷ್ಯಕೊಡದೆ ಒಂದು ದಿನ ಒಬ್ಬ ಆಚಾರ್ಯನು ಶಿಷ್ಯರಿಗೆ ಶಾಸ್ತ್ರಪಾಠ ಹೇಳುತ್ತಿರುವುದನ್ನು ಕಂಡು ತನಗೂ ಬೋಧಿಸೆಂದು ಹಾಸ್ಯದಿಂದ ಆತನನ್ನು ಕೇಳಿದನು. "ನಿನಗೆ ಗಂಗೆಯಲ್ಲಿ ತೇಲಿಬರುವ ಒಂದು ಹೆಣವು ಬೋಧಿಸುವುದು" ಎಂದು ಆಚಾರ್ಯನು ಉತ್ತರ ಕೊಡಲು ಶೂದ್ರಕನು ಕಾಶಿಗೆ ಹೋಗಿ ಗಂಗೆಯ ಬಳಿ ಕಾದಿದ್ದನು. ಆಚಾರ್ಯನು ಹೇಳಿದ್ದಂತೆಯೇ ಇವನ ಬಳಿಗೆ ಒಂದು ಹೆಣವು ತೇಲಿಕೊಂಡು ಬಂದು "ನಿನ್ನ ತಲೆಯು ಕಂಚವಾಳದ ಮರಕ್ಕೆ ಕಟ್ಟಲಾದೀತು" ಎನ್ನಲು ಶೂದ್ರಕನು ಆಶ್ಚರ್ಯಪಟ್ಟು ಕಾಶಿಯಲ್ಲಿ ನಿಂತು, ಅಲ್ಲಿಯೇ ಸತ್ತು ಮುಕ್ತಿಯನ್ನು ಪಡೆಯಬೇಕೆಂದು ನಿಶ್ಚಯಿಸಿ ತನ್ನ ಮೊಣಕಾಲ ಚಿಪ್ಪನ್ನು ಕಳಚಿಕೊಂಡು ಹೆಳವನಾದನು.

ಹೀಗಿರುವಾಗ, ವಿಧಿಯು ಮನುಷ್ಯ ವೇಷದಿಂದ ಅವನಿದ್ದಲ್ಲಿಗೆ ಒಂದು ತುಂಟ ಕುದುರೆಯೊಡನೆ ಬಂದು ಅದನ್ನು ಹತ್ತಿ ಸವಾರಿ ಮಾಡಲಾಗದೆ ತೊಂದರೆ ಪಡುತ್ತಿದ್ದನು. ಇದನ್ನು ನೋಡಿ ವೀರನಾದ ಶೂದ್ರಕನು ತಾನು ಆ ಕುದುರೆಯನ್ನೇರಿ ಅದರ ಸೊಕ್ಕನ್ನು ಮುರಿಯುವೆನೆಂದು ಹೇಳಿ ಅದರ ಮೇಲಕ್ಕೆ ಹತ್ತಿಸಿಕೊಂಡನು. ಕೂಡಲೆ ಆ ಕುದುರೆಯು ಅವನನ್ನು ಬಹು ದೂರ ಹೊತ್ತುಕೊಂಡು ಹೋಗಿ ಕಂಚವಾಳದ ಮರದ ಕೆಳಗೆ ಕೆಡವಿತು.

ಆ ಸಮಯಕ್ಕೆ ಸರಿಯಾಗಿ ಕೆಲವರು ಕಳ್ಳರು ತಾವು ಅರಮನೆಯಲ್ಲಿ ಕದ್ದ ಬೆಲೆಯುಳ್ಳ ಮುತ್ತು ಮಾಣಿಕಗಳನ್ನು ಹೊತ್ತುಕೊಂಡು ಹೋಗುತ್ತ

ಕೆಲವನ್ನು ಶೂದ್ರಕನ ಬಳಿಯಲ್ಲಿ ಚೆಲ್ಲಿ ಹೋದರು. ರಾಜಭಟರು ಕಳ್ಳರ ಹೆಜ್ಜೆ ಹಿಡಿದು ಬರುತ್ತ ಶೂದ್ರಕನನ್ನೂ, ಅವನ ಬಳಿಯಲ್ಲಿದ್ದ ಮುತ್ತು ಮಾಣಿಕಗಳನ್ನೂ ಕಂಡು ಅವನೇ ಕಳ್ಳನೆಂದು ನಿರ್ಧರಿಸಿ ದೊರೆಗೆ ತಿಳಿಸಿದರು. ದೊರೆಯು ಅವನಿದ್ದಲ್ಲಿಗೆ ಬಂದು ಅವನನ್ನು ಕುರಿತು "ಎಲೈ ಹೆಳವನಾದ ನೀನು ಈ ಕಳ್ಳತನವನ್ನು ಮಾಡಿದುದು ಹೇಗೆ?" ಎಂದು ಕೇಳಲು ಶೂದ್ರಕನು "ನನ್ನ ತಲೆಯನ್ನು ಕಂಚವಾಳದ ಮರಕ್ಕೆ ಕಟ್ಟಬೇಕೆಂದು ವಿಧಿಯೇ ನನ್ನನ್ನು ಇಲ್ಲಿಗೆ ತಂದಿತು" ಎಂದು ಹೇಳಿದನು. ದೊರೆಯು ಇವನ ತಲೆಯಮೇಲೆ ಒಂದು ಮಯಣದ ಬೊಂಬೆಯನ್ನಿಡಿಸಿ ಅದರ ತಲೆಯನ್ನು ಹೊಯ್ಯುವಂತೆ ಕಟುಕನಿಗೆ ಹೇಳಲು ಅವನು ಶೂದ್ರಕನ ತಲೆಯನ್ನೇ ಬೊಂಬೆಯ ತಲೆ ಯೆಂದು ಭ್ರಮಿಸಿ ಹೊಡೆದನು. ಇದನ್ನು ನೋಡಿ ವಿಧಿಯನ್ನು ಮೀರಲು ಯಾರಿಂದಲೂ ಸಾಧ್ಯವಲ್ಲವೆಂದು ಅಲ್ಲಿದ್ದವರೆಲ್ಲರೂ ಆಶ್ಚರ್ಯಪಟ್ಟರು.

---

೧೨. ಕಾಶೀರಾಜನ ಮಗಳಾದ ಅಂಬೆಯ ಕಥೆ

ಕುರು ವಂಶದವನಾದ ಶಂತನ ಚಕ್ರವರ್ತಿಯು ಹಸ್ತಿನಾಪುರದಲ್ಲಿ ರಾಜ್ಯಭಾರ ಮಾಡುತ್ತಿದ್ದನು. ಆತನಿಗೆ ರಾಣಿಯಾದ ಗಂಗಾದೇವಿಯಲ್ಲಿ ದೇವವ್ರತನೆಂಬ ಮಗನು ಹುಟ್ಟಿದನು. ಗಂಗಾದೇವಿಯು ಕಾಲಗತಿಯನ್ನೈದಿದ ತರುವಾಯ ಶಂತನು ಸತ್ಯವತಿಯೆಂಬ ಅಂಬಿಗರರಸನ ಮಗಳನ್ನು ಮೋಹಿಸಿ ಆಕೆಯನ್ನು ಮದುವೆಮಾಡಿಕೊಳ್ಳಲಿಚ್ಛೈಸಿದನು. ಆಕೆಯ ತಂದೆಯು ಸತ್ಯವತಿಯ ಹೊಟ್ಟೆಯಲ್ಲಿ ಹುಟ್ಟಿದ ಮಗನಿಗೇ ರಾಜ್ಯವನ್ನು ಕೊಡುವುದಾಗಿ ಶಂತನು ಒಪ್ಪಿದಲ್ಲಿ ಆಕೆಯನ್ನು ಮದುವೆಮಾಡಿ ಕೊಡುವೆನೆಂದು ಹೇಳಿದನು. ಹಿರಿಯ ಮಗನಿರುವಾಗ ಇದಕ್ಕೆ ಒಪ್ಪುವುದು ಹೇಗೆಂದು ಶಂತನು ಕೊರಗುತ್ತ ದಿನದಿನಕ್ಕೆ ಕೃಶವಾಗುತ್ತಿರುವುದನ್ನು ಕಂಡು ದೇವವ್ರತನು ತಾನು ರಾಜ್ಯಭಾರವನ್ನು ವಹಿಸುವುದಿಲ್ಲವೆಂದೂ, ಮದುವೆಯಾಗದೆ ಬ್ರಹ್ಮಚಾರಿಯಾಗಿಯೇ ಇರುವೆನೆಂದೂ ಸತ್ಯವತಿಯ ತಂದೆಯ ಎದುರಿಗೆ ಪ್ರತಿಜ್ಞೆ ಮಾಡಿ ಸತ್ಯವತಿಯನ್ನು ಶಂತನುವಿಗೆ ಮದುವೆಮಾಡಿಸಿದನು. ಈ ಭಯಂಕರ(ಭೀಷ್ಮ)ವಾದ ಪ್ರತಿಜ್ಞೆ ಮಾಡಿದುದರಿಂದ ದೇವವ್ರತನಿಗೆ ಭೀಷ್ಮನೆಂದು ಹೆಸರಾಯಿತು.

ಶಂತನುವಿಗೆ ಸತ್ಯವತಿಯ ಹೊಟ್ಟೆಯಲ್ಲಿ ಚಿತ್ರಾಂಗದ, ವಿಚಿತ್ರವೀರ್ಯರೆಂಬ ಇಬ್ಬರು ಮಕ್ಕಳು ಹುಟ್ಟಿದರು. ಶಂತನು ಕಾಲವಾದಮೇಲೆ ಚಿತ್ರಾಂಗದನು ಒಬ್ಬ ಗಂಧರ್ವನೊಡನೆ ಕಾದಿ ಮಡಿದನು. ಬಳಿಕ ಭೀಷ್ಮನು ವಿಚಿತ್ರವೀರ್ಯನಿಗೆ ಮದುವೆಮಾಡಬೇಕೆಂದಾಲೋಚಿಸಿ ಕಾಶೀರಾಜನ ಪುತ್ರಿಯರಾದ ಅಂಬೆ, ಅಂಬಿಕೆ, ಅಂಬಾಲಿಕೆ ಎಂಬ ಕನ್ಯೆಯರಿಗೆ ಸ್ವಯಂವರವು ನಡೆಯುವುದೆಂದು ತಿಳಿದು ಅಲ್ಲಿಗೆ ಹೋಗಿ ತನ್ನ ಪರಾಕ್ರಮದಿಂದ ಆ ಮೂವರು ಕನ್ಯೆಯರನ್ನೂ ಹಸ್ತಿನಾಪುರಕ್ಕೆ ಕರೆತಂದನು. ಇವರಲ್ಲಿ ಅಂಬೆಯು ಇದಕ್ಕೆ ಮೊದಲೇ ಸಾಲ್ವರಾಜನನ್ನು ಮನಸ್ಸಿನಲ್ಲಿ ವರಿಸಿದ್ದಳೆಂದು ತಿಳಿಯಬಂದುದರಿಂದ ಸಾಲ್ವನ ಬಳಿಗೇ ಹೋಗೆಂದು ಭೀಷ್ಮನು ಆಕೆಗೆ ಹೇಳಿದನು. ಆದರೆ ಆಕೆಯು ಭೀಷ್ಮನನ್ನೇ ಮದುವೆಯಾಗಬೇಕೆಂದು ಹಟ ಹಿಡಿದಳು. ಇದಕ್ಕೆ ಭೀಷ್ಮನು ಒಪ್ಪದೆಹೋಗಲು ಆಕೆಯು ಸಾಲ್ವರಾಜನ ಬಳಿಗೆ ಹೋಗಿ ತನ್ನನ್ನು ಮದುವೆಮಾಡಿಕೊಳ್ಳೆಂದು ಕೇಳಿದಳು. ಭೀಷ್ಮನು ಗೆದ್ದು ತೆಗೆದುಕೊಂಡು ಹೋದವಳನ್ನು ತಾನು ಪರಿಗ್ರಹಿಸೆನೆಂದು ಆತನು ನುಡಿದುದರಿಂದ ಆಕೆಯು ಮರಳಿ ಭೀಷ್ಮನಲ್ಲಿಗೆ ಬಂದಳು.

ಹೀಗೆ ಕೆಲವು ಬಾರಿ ಒಂದೆಡೆಯಿಂದ ಮತ್ತೊಂದೆಡೆಗೆ ಅಲೆದರೂ ಸಾಲ್ವ ಭೀಷ್ಮರಲ್ಲಿ ಒಬ್ಬರೂ ಆಕೆಯನ್ನು ಮದುವೆಯಾಗಲು ಒಪ್ಪಲಿಲ್ಲ. ಕೊನೆಗೆ ಆಕೆಯು ಈ ಅನರ್ಥಕ್ಕೆ ಕಾರಣನಾದ ಭೀಷ್ಮನೇ ತನ್ನನ್ನು ಮದುವೆಯಾಗುವಂತೆ ಅನುಗ್ರಹಿಸಬೇಕೆಂದು ಆತನ ಗುರುವಾದ ಪರಶುರಾಮನನ್ನು ಬೇಡಿಕೊಂಡಳು. ಪರಶುರಾಮನು ಭೀಷ್ಮನನ್ನು ಕರೆಯಿಸಿ ಅಂಬೆಯನ್ನು ಮದುವೆಮಾಡಿಕೊಳ್ಳೆಂದು ಹೇಳಲು ಆತನು ಗುರುವಿನ ಆಜ್ಞೆಯನ್ನು ಮೀರಬಾರದಾದರೂ ತಾನು ಆಮರಣವೂ ಬ್ರಹ್ಮಚರ್ಯ ವ್ರತದಲ್ಲಿರುವೆನೆಂದು ಹಿಂದೆಯೇ ಪ್ರತಿಜ್ಞೆ ಮಾಡಿರುವುದರಿಂದ ಮದುವೆಯು ತನಗೆ ಸಲ್ಲದೆಂದು ಉತ್ತರಕೊಟ್ಟನು. ಇದನ್ನು ಕೇಳಿ ಪರಶುರಾಮನು "ಹಾಗಾದರೆ ನನ್ನೊಡನೆ ಯುದ್ಧಮಾಡು ; ನೀನು ಸೋತರೆ ಅಂಬೆಯನ್ನು ಮದುವೆಮಾಡಿಕೊಳ್ಳಬೇಕು" ಎಂದು ಕಟ್ಟುಮಾಡಿದನು. ಇಬ್ಬರಿಗೂ ಇಪ್ಪತ್ತೊಂದು ದಿನ ಯುದ್ಧ ನಡೆದರೂ ಭೀಷ್ಮನು ಸೋಲದೆ ಪರಶುರಾಮನೇ ಸೋಲುವ ಹೊತ್ತು

ಬಂದಿತು. ಹೀಗೆ ಪರಶುರಾಮನು ಅಂಬೆಯ ಸಲುವಾಗಿ ಯುದ್ಧದಲ್ಲಿ ಸೋತು ದೈನ್ಯವನ್ನು ವಹಿಸಬೇಕಾಯಿತು.

ಇದನ್ನು ಕಂಡು ಅಂಬೆಯು ಮುಂದಿನ ಜನ್ಮದಲ್ಲಿ ಭೀಷ್ಮನನ್ನು ಸಂಹರಿಸುವೆನೆಂದು ಸಂಕಲ್ಪಿಸಿ ಅಗ್ನಿಪ್ರವೇಶ ಮಾಡಿ ಬೇರೆ ಜನ್ಮವೆತ್ತಿ ಪಾಂಚಾಲರಾಜನಾದ ದ್ರುಪದನಿಗೆ ಮಗುವಾಗಿ ಹುಟ್ಟಿದಳು. ಆ ಮಗುವಿಗೆ ಶಿಖಂಡಿಯೆಂಬ ಹೆಸರಿಟ್ಟರು. ಈ ಶಿಖಂಡಿಯು ದ್ರೋಣಾಚಾರ್ಯರಲ್ಲಿ ಧನುರ್ವಿದ್ಯಾಭ್ಯಾಸಮಾಡಿ ಕುರುಕ್ಷೇತ್ರದಲ್ಲಿ ನಡೆದ ಮಹಾಭಾರತ ಯುದ್ಧದಲ್ಲಿ ಯೋಧನಾಗಿ ಬಂದು ಘೋರವಾಗಿ ಯುದ್ಧಮಾಡುತ್ತಿದ್ದ ಭೀಷ್ಮನ ಎದುರಿನಲ್ಲಿ ಯುದ್ಧಮಾಡುತ್ತ ನಿಂತನು. ಶಿಖಂಡಿಯನ್ನು ನೋಡಿದೊಡನೆಯೇ ಭೀಷ್ಮನು ತಾನು ಮೊದಲೇ ಪ್ರತಿಜ್ಞೆ ಮಾಡಿದ್ದಂತೆ ಶಸ್ತ್ರತ್ಯಾಗ ಮಾಡಿದನು.

---

೧೩. ದ್ರೋಣಾಚಾರ್ಯನ ಕಥೆ

ಭಾರದ್ವಾಜ ಋಷಿಯ ಮಗನಾದ ದ್ರೋಣಾಚಾರ್ಯನು ತನ್ನ ಚಿಕ್ಕಪ್ಪನಾದ ಅಗ್ನಿವೇಶ್ಯ ಋಷಿಯಿಂದ ಸಕಲ ವಿದ್ಯೆಗಳನ್ನೂ ಕಲಿತು ಶಸ್ತ್ರವಿದ್ಯೆಯಲ್ಲಿ ನಿಪುಣನಾದನು. ಇದೇ ಋಷಿಯ ಬಳಿಯಲ್ಲಿ ಪಾಂಚಾಲರಾಜನ ಮಗನಾದ ದ್ರುಪದನೂ ಇದೇಕಾಲದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದುದರಿಂದ ದ್ರುಪದನಿಗೂ, ದ್ರೋಣಾಚಾರ್ಯನಿಗೂ ಬಹಳ ಸ್ನೇಹವಾಯಿತು. ತಾನು ಅರಸಾದ ಮೇಲೆ ದ್ರೋಣಾಚಾರ್ಯನಿಗೆ ತನ್ನ ರಾಜ್ಯದಲ್ಲಿ ಅರ್ಧವನ್ನು ಕೊಡುವೆನೆಂದು ದ್ರುಪದನು ವಾಗ್ದಾನ ಮಾಡಿದನು. ಕಾಲಕ್ರಮದಲ್ಲಿ ದ್ರುಪದನು ದೊರೆಯಾದನು. ದ್ರೋಣಾಚಾರ್ಯನು ಅಡವಿಯಲ್ಲಿ ತಪಸ್ಸು ಮಾಡಿಕೊಂಡಿದ್ದನು. ಈತನಿಗೆ ಅಶ್ವತ್ಥಾಮನೆಂಬ ಮಗನು ಹುಟ್ಟಿ ಬಾಲಕನಾಗಿರುವಾಗ ತನ್ನ ಜೊತೆಗಾರರು ಆಕಳ ಹಾಲು ಕುಡಿಯುವುದನ್ನು ಕಂಡು ತನಗೂ ಹಾಲನ್ನು ಕೊಡೆಂದು ತಾಯಿಯನ್ನು ಪೀಡಿಸಿದನು. ಬಡತನದಿಂದ ಮಗುವಿಗೆ ಹಾಲನ್ನು ತಂದುಕೊಡಲು ಗತಿಯಿಲ್ಲದೆ ಆಕೆಯು ಬಹಳ ನೊಂದುಕೊಂಡು ಗಂಡನಿಗೆ ದ್ರುಪದನು ಮಾಡಿದ್ದ ವಾಗ್ದಾನವನ್ನು ಜ್ಞಾಪಿಸಿ ಆತನಿಂದ ಒಂದು ಆಕಳನ್ನಾದರೂ ಪಡೆಯಬಾರದೆ ಎಂದು ದೈನ್ಯದಿಂದ ಕೇಳಿಕೊಂಡಳು.

ಇದನ್ನು ಕೇಳಿ ದ್ರೋಣಾಚಾರ್ಯನು ಮನಸ್ಸು ಕರಗಿದವನಾಗಿ ತನ್ನ ಹೆಂಡತಿ ಮಕ್ಕಳನ್ನು ಕರೆದುಕೊಂಡು ದ್ರುಪದನಬಳಿಗೆ ಹೋಗಿ ಬಾಲ್ಯಸ್ನೇಹಿತ ನೆಂಬ ಸಲಿಗೆಯಿಂದ 'ಎಲೈ ಮಿತ್ರನೆ' ಎಂದು ಕರೆದಮಾತ್ರಕ್ಕೆ ದ್ರುಪದನು ಬಹಳ ಸಿಟ್ಟಾಗಿ ಬಡ ಹಾರುವನಿಗೂ, ಮಹಾರಾಜನಿಗೂ ಸ್ನೇಹವೆಂದರೇನು ಎಂದು ಮೊದಲಾಗಿ ಅಪಮಾನಕರವಾದ ಮಾತುಗಳನ್ನಾಡಿ ಆತನನ್ನು ಕಳುಹಿಸಿಬಿಟ್ಟನು. ಇದನ್ನು ಕಂಡು ದ್ರೋಣನು ಬಹಳ ಕೋಪಗೊಂಡು ಅಲ್ಲಿಂದ ಹೊರಟು ಹಸ್ತಿನಾಪುರಕ್ಕೆ ಬಂದು ಕೌರವ ಪಾಂಡವರಿಗೆ ಧನುರ್ವಿದ್ಯಾ ಗುರುವಾಗಿ ನಿಂತನು. ಆತನ ಬಳಿಗೆ ಶಸ್ತ್ರವಿದ್ಯಾಭ್ಯಾಸಕ್ಕಾಗಿ ಇತರ ದೇಶದ ರಾಜಪುತ್ರರೂ ಬಂದು ಸೇರಿದರು. ಶಿಷ್ಯರಲ್ಲೆಲ್ಲ ಅರ್ಜುನನು ಕೈಚಳಕದಲ್ಲಿ ಮಿಗಿಲಾದ ಚಮತ್ಕಾರವನ್ನು ತೋರಿಸುತ್ತ ಬಂದುದರಿಂದ ದ್ರೋಣನು ಈತನಿಗೂ, ತನ್ನ ಮಗ ಅಶ್ವತ್ಥಾಮನಿಗೂ ಇತರ ಶಿಷ್ಯರೊಡನಲ್ಲದೆ ಬೇರೆಯಾಗಿಯೂ ಪಾಠವನ್ನು ಹೇಳಿಕೊಡುತ್ತಿದ್ದನು.

ಶಿಷ್ಯರಿಗೆ ವಿದ್ಯಾಭ್ಯಾಸವು ಮುಗಿಯುತ್ತ ಬರಲು ದ್ರೋಣನು ಎಲ್ಲರನ್ನೂ ಕುರಿತು ತನಗೆ ಬೇಕಾದ ಗುರುದಕ್ಷಿಣೆಯನ್ನು ಕೊಡಲು ಅವರಲ್ಲಿ ಸಮರ್ಥರು ಯಾರೆಂದು ಕೇಳಿ, ದ್ರುಪದನನ್ನು ಸೆರೆಹಿಡಿದು ತರುವುದೇ ತನಗೆ ಬೇಕಾದ ಗುರುದಕ್ಷಿಣೆಯೆಂದು ತಿಳಿಸಲು ಎಲ್ಲರೂ ಆಯುಧಪಾಣಿಗಳಾಗಿ ಹೊರಟು ಪಾಂಚಾಲನ ಪಟ್ಟಣವನ್ನು ಮುತ್ತಿದರು. ದ್ರುಪದನು ಎಲ್ಲರನ್ನೂ ಸೋಲಿಸಿ ಓಡಿಸಿಬಿಡಲು ಅರ್ಜುನನು ಅವನೊಡನೆ ಘೋರ ಯುದ್ಧ ಮಾಡಿ ಅವನನ್ನು ಸೆರೆಹಿಡಿದು ದ್ರೋಣಾಚಾರ್ಯನ ಬಳಿಗೆ ತಂದನು. ಆಗ ದ್ರೋಣಾಚಾರ್ಯನು ದ್ರುಪದನ ಮನಸ್ಸು ಚುಚ್ಚುವಂತೆ ಮಾತುಗಳನ್ನಾಡಿ ಅವನ ಅರ್ಧ ರಾಜ್ಯವನ್ನು ತನ್ನ ಸಾಮರ್ಥ್ಯದಿಂದ ತಾನೇ ಗೆದ್ದಿರುವೆನೆಂದೂ, ಮಿಕ್ಕ ಅರ್ಧ ರಾಜ್ಯಕ್ಕೆ ದ್ರುಪದನೇ ಒಡೆಯನಾಗಿರಬಹುದೆಂದೂ ಹೇಳಿ ಅವನನ್ನು ಬಿಟ್ಟುಬಿಟ್ಟನು.

ಅಂದು ಮೊದಲು ದ್ರುಪದನು ತನಗಾದ ಅಪಮಾನಕ್ಕಾಗಿ ಹಗಲಿರುಳು ಕೊರಗುತ್ತ ಕೊನೆಗೆ ರಾಜ್ಯವನ್ನು ಗೆದ್ದು ತಮ್ಮಂದಿರ ವಶ ಮಾಡಿ ಋಷ್ಯಾಶ್ರಮಗಳನ್ನು ಸುತ್ತುತ್ತ ತನಗೆ ದ್ರೋಣನನ್ನು ಕೊಲ್ಲುವಂತಹ ಮಗನೂ, ಅರ್ಜುನನನ್ನು ವರಿಸುವಂತಹ ಮಗಳೂ ಹುಟ್ಟುವಂತೆ ಅನುಗ್ರಹಿಸಬೇಕೆಂದು

ಋಷಿಗಳನ್ನು ಬೇಡಿಕೊಂಡನು. ಇದಕ್ಕಾಗಿ ಯಾಜೋಪಯಾಜನೆಂಬ ಋಷಿಯು ದ್ರುಪದನಿಂದ ಯಜ್ಞಮಾಡಿಸಲು ಅಗ್ನಿಕುಂಡದಿಂದ ಒಬ್ಬ ಕುಮಾರನೂ, ಒಬ್ಬ ಕನ್ಯೆಯೂ ಅವತರಿಸಿದರು. ಆ ಕುಮಾರನೇ ಧೃಷ್ಟದ್ಯುಮ್ನನು, ಕನ್ಯೆಯೇ ದ್ರೌಪದಿ (ಕೃಷ್ಣೆ) ಯು. ದ್ರುಪದನು ಧೃಷ್ಟದ್ಯುಮ್ನನನ್ನು ದ್ರೋಣಾಚಾರ್ಯನ ಬಳಿಯಲ್ಲಿಯೇ ವಿದ್ಯಾಭ್ಯಾಸಕ್ಕಾಗಿ ಇಡಲು ಅವನು ಗುರು ಶುಶ್ರೂಷೆಯನ್ನು ಮಾಡುತ್ತ ದ್ರೋಣನಿಂದ ಧನುರ್ವಿದ್ಯೆಯನ್ನು ಕಲಿತನು.

ಕೌರವ ಪಾಂಡವರ ಯುದ್ಧದಲ್ಲಿ ಕೌರವರ ಪಕ್ಷವಾಗಿ ಯುದ್ಧಮಾಡುತ್ತಿದ್ದ ದ್ರೋಣಾಚಾರ್ಯನು ಯಾರಿಗೂ ಸೋಲದಿರಲು ಪಾಂಡವರ ಪಕ್ಷವನ್ನು ವಹಿಸಿದ್ದ ಶ್ರೀಕೃಷ್ಣನು ಆತನನ್ನು ಉಪಾಯಾಂತರದಿಂದ ಸೋಲಿಸಬೇಕೆಂದು ಆಲೋಚಿಸಿ ಧರ್ಮರಾಯನು ಬಳಿಗೆ ಬಂದು "ಅಶ್ವತ್ಥಾಮಾ ಹತಃ ಕುಂಜರಃ" (ಎಂದರೆ ಅಶ್ವತ್ಥಾಮವೆಂಬ ಒಂದು ಆನೆಯು ಕೊಲ್ಲಲ್ಪಟ್ಟಿತು) ಎಂದು ಕೂಗಿ ಹೇಳುವಂತೆ ಆತನನ್ನು ಒಡಂಬಡಿಸಿ ಆ ಮಾತಿನ ಕೊನೆಯ "ಕುಂಜರಃ" ಎಂಬುದು ಯಾರಿಗೂ ಕೇಳದಂತೆ ಶಂಖನಾದವನ್ನು ಮಾಡಿದನು. ಯುದ್ಧ ಮಾಡುತ್ತಿದ್ದ ದ್ರೋಣಾಚಾರ್ಯನು "ಅಶ್ವತ್ಥಾಮ ಹತಃ" ಎಂಬ ಮಾತನ್ನಷ್ಟೇ ಕೇಳಿ ಚಿರಂಜೀವಿಯಾದ ತನ್ನ ಮಗನು ಸಾಯುವುದು ಅಸಂಭವವೆಂದು ತಿಳಿದಿದ್ದರೂ ಧರ್ಮರಾಯನ ಮಾತು ಸುಳ್ಳಾಗಿರಲಾರದೆಂದು ಆಲೋಚಿಸಿ ದೂರದಲ್ಲಿದ್ದ ಅಶ್ವತ್ಥಾಮನನ್ನು ನೋಡಿಬರುವುದಕ್ಕಾಗಿ ತನ್ನ ದೇಹವನ್ನು ತಾನು ಯುದ್ಧಮಾಡುತ್ತಿದ್ದ ಸ್ಥಳದಲ್ಲಿಯೇ ಬಿಟ್ಟುಹೋದನು. ಇದನ್ನು ಅರಿತವನಾದ ಶ್ರೀಕೃಷ್ಣನು ಧೃಷ್ಟದ್ಯುಮ್ನನನ್ನು ಕರೆದು ದ್ರೋಣನ ಶರೀರವನ್ನು ಕತ್ತರಿಸಿ ಹಾಕಿಬಿಡುವಂತೆ ಆಜ್ಞೆ ಮಾಡಲು ಅವನು ಹಾಗೆಯೇ ಮಾಡಿದನು. ಹೀಗೆ ದ್ರೋಣಾಚಾರ್ಯನಿಗೆ ತನ್ನ ಶಿಷ್ಯನಿಂದಲೇ ಮರಣವು ಒದಗಿತು.

೧೪. ಪಾಂಡವ ಕೌರವರ ಕಥೆ

I

ಪೂರ್ವಕಾಲದಲ್ಲಿ ಶಂತನು ಚಕ್ರವರ್ತಿಯ ಮೊಮ್ಮಗನಾದ ಪಾಂಡು ರಾಜನು ಹಸ್ತಿನಾಪುರದಲ್ಲಿ ರಾಜ್ಯಭಾರ ಮಾಡುತ್ತಿದ್ದನು. ಆತನು ಒಂದು ದಿನ ಬೇಟೆಗಾಗಿ ಅಡವಿಗೆ ಹೋಗಿ ಒಂದು ಹೆಂಣು ಜಿಂಕೆಯನ್ನು ಕೊಂದನು. ಅದರೊಡನಿದ್ದ ಗಂಡು ಜಿಂಕೆಯೂ, ಈ ಹೆಂಣು ಜಿಂಕೆಯೂ ಒಬ್ಬ ಋಷಿಯೂ, ಅತನ ಸತ್ನಿಯೂ ಧರಿಸಿದ್ದ ರೂಪ ಗಳಾಗಿದ್ದವು. ಋಷಿಯು ದೊರೆಯ ಅಕಾರ್ಯಕ್ಕಾಗಿ ಆತನಿಗೆ ಶಾಪ ವಿತ್ತನು. ಈ ಶಾಪದಿಂದ ಪಾಂಡುವು ಬಹಳ ಖಿನ್ನನಾಗಿ ತನ್ನ ರಾಜ್ಯಕ್ಕೆ ಹಿಂದಿರುಗಿಹೋಗದೆ ಅಡವಿಯಲ್ಲಿಯೇ ನಿಂತುಬಿಟ್ಟನು. ಇದ ರಿಂದ ರಾಜ್ಯಕ್ಕೆ ಅರಸನಿಲ್ಲದಂತಾಗಲು ಆ ವಂಶದಲ್ಲಿ ದೊಡ್ಡವನಾದ ಭೀಷ್ಮಾಚಾರ್ಯನು ಪಾಂಡುವಿನ ಅಣ್ಣನಾದ ಧೃತರಾಷ್ಟ್ರನನ್ನು ಹುಟ್ಟುಕುರುಡನಾಗಿದ್ದರೂ ದೊರೆಯಾಗಿ ನಿಯಮಿಸಿ ತಾನೇ ರಾಜ್ಯ ಭಾರ ಮಾಡುತ್ತಿದ್ದನು.

ಹೀಗೆ ಕೆಲವು ಕಾಲ ಕಳೆಯಲು ಪಾಂಡುವಿಗೆ ಧರ್ಮರಾಯ, ಭೀಮ, ಅರ್ಜುನ, ನಕುಲ, ಸಹದೇವರೆಂಬ ಐದು ಮಂದಿ ಮಕ್ಕಳೂ, ಧೃತರಾಷ್ಟ್ರನಿಗೆ ದುರ್ಯೋಧನ, ದುಶ್ಶಾಸನ ಮೊದಲಾದ ನೂರು ಮಂದಿ ಮಕ್ಕಳೂ ಹುಟ್ಟಿದರು. ಪಾಂಡುರಾಜನು ಕಾಲಧರ್ಮವನ್ನೈದಿದ ಮೇಲೆ ಭೀಷ್ಮಾಚಾರ್ಯನು ಪಾಂಡವರನ್ನೆಲ್ಲ ರಾಜಧಾನಿಯಾದ ಹಸ್ತಿನಾ ಪುರಕ್ಕೆ ಕರೆತರಿಸಿ ಅವರಿಗೂ ಧೃತರಾಷ್ಟ್ರನ ಮಕ್ಕಳಿಗೂ ವಿದ್ಯಾಭ್ಯಾಸಕ್ಕೆ ಏರ್ಪಾಡು ಮಾಡಿದನು.

ವಿದ್ಯೆಯಲ್ಲಿಯೂ, ಪರಾಕ್ರಮದಲ್ಲಿಯೂ ಪಾಂಡವರು ಕೌರವರನ್ನು ಮೀರಲು ದುರ್ಯೋಧನಾದಿಗಳಿಗೆ ಪಾಂಡವರ ಮೇಲಿನ ದಾಯಾದಮತ್ಸ ರವು ದಿನ ದಿನಕ್ಕೆ ಹೆಚ್ಚುತ್ತ ಬಂದಿತು. ದುರ್ಯೋಧನನು ಪ್ರಬಲರಾದ ಪಾಂಡವರನ್ನು ಹೇಗಾದರೂ ಕೊಲ್ಲಿಸಬೇಕೆಂದು ವಾರಣಾವತವೆಂಬ ಪಟ್ಟಣದಲ್ಲಿ ಪುರೋಚನನೆಂಬ ಶಿಲ್ಪಿಯಿಂದ ಒಂದು ದೊಡ್ಡ ಅರಗಿನ

ಮನೆಯನ್ನು ಕಟ್ಟಿಸಿದನು. ಅದು ಅರಗು ಮೊದಲಾದ ಭಗ್ಗನೆ ಉರಿಯುವ ವಸ್ತುಗಳಿಂದ ಕಟ್ಟಿದುದೆಂದು ಯಾರಿಗೂ ತಿಳಿಯದಂತಿದ್ದಿತು. ಆ ಮನೆಯಲ್ಲಿ ಪಾಂಡವರು ವಾಸವಾಗಿರುವಂತೆ ಮಾಡಿ ಕೌರವನು ಪುರೋಚನನನ್ನೇ ಅದಕ್ಕೆ ಕಾವಲಾಗಿಟ್ಟು ಯಾರಿಗೂ ತಿಳಿಯದಂತೆ ತಕ್ಕ ಸಮಯದಲ್ಲಿ ಮನೆಗೆ ಬೆಂಕಿಯನ್ನು ಹೊತ್ತಿಸುವಂತೆ ನೇಮಿಸಿದ್ದನು.

ದೂರದೃಷ್ಟಿಯುಳ್ಳವನೂ, ಯೋಗ್ಯನೂ, ವಾಪೆಯಲ್ಲಿ (ಸಂಬಂಧದಲ್ಲಿ) ಕೌರವ ಪಾಂಡವರ ಚಿಕ್ಕಪ್ಪನೂ ಆದ ವಿದುರನು ಈ ಗುಟ್ಟನ್ನು ಮೊದಲೇ ಅರಿತು ಪಾಂಡವರನ್ನು ಈ ಮೋಸದಿಂದ ಪಾರುಮಾಡಬೇಕೆಂದು ಆಲೋಚಿಸಿ ಗುಟ್ಟಾಗಿ ಆ ಅರಗಿನ ಮನೆಯಲ್ಲಿರುವವರೆಲ್ಲರೂ ಹೊರಗೆ ಹೋಗಲು ಅನುಕೂಲ ಮಾಡಿಸಿ ಈ ಮರ್ಮವನ್ನು ಪಾಂಡವರಿಗೆ ಉಪಾಯಾಂತರದಿಂದ ತಿಳಿಸಿದನು.

ಪಾಂಡವರು ಆ ಅರಗಿನ ಮನೆಯಲ್ಲಿದ್ದುಕೊಂಡು ಒಂದು ದಿನ ಪುರೋಚನನು ನಿದ್ದೆಹೋಗುತ್ತಿರುವ ವೇಳೆಯಲ್ಲಿ ಆ ಮನೆಗೆ ತಾವೇ ಬೆಂಕಿಯನ್ನು ಹೊತ್ತಿಸಿ ತಮ್ಮ ತಾಯಿಯಾದ ಕುಂತೀದೇವಿಯೊಡನೆ ಆ ಮನೆಯನ್ನು ಬಿಟ್ಟು ಸುರಂಗದ ಮಾರ್ಗವಾಗಿ ಹೊರಗೆ ಹೊರಟು ಅಡವಿಯನ್ನು ಸೇರಿ ಕೆಲವು ದಿನ ಅಲ್ಲಿಯೇ ಕಾಲವನ್ನು ಕಳೆದರು. ತರುವಾಯ ಅಲ್ಲಿಂದ ಹೊರಟು ಏಕಚಕ್ರಪುರಕ್ಕೆ ಹೋಗಿ ಅಲ್ಲಿ ಭಿಕ್ಷಾಟನದಿಂದ ಜೀವನವನ್ನು ಮಾಡುತ್ತಿದ್ದರು. ಪಾಂಡವರೆಲ್ಲರೂ ತಂದ ಭಿಕ್ಷಾನ್ನವನ್ನು ಕುಂತೀದೇವಿಯು ಎರಡು ಸಮಭಾಗವಾಗಿ ಮಾಡಿ ಒಂದನ್ನು ಭೀಮನಿಗೆ ಕೊಟ್ಟು ಉಳಿದದ್ದನ್ನು ಮಿಕ್ಕವರೆಲ್ಲರಿಗೂ ಹಂಚುತ್ತಿದ್ದಳು.

ಹೀಗಿರುವಾಗ ಆ ಪಟ್ಟಣದ ಸಮೀಪದಲ್ಲಿ ಬಕಾಸುರನೆಂಬ ರಾಕ್ಷಸನು ವಾಸವಾಗಿದ್ದು ಆ ಪಟ್ಟಣದ ಜನರನ್ನು ಬಹಳವಾಗಿ ಪೀಡಿಸುತ್ತಿದ್ದನು. ಅವನ ಕಾಟವನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಪ್ರತಿದಿನವೂ ಒಬ್ಬೊಬ್ಬರ ಮನೆಯಿಂದ ಆ ರಾಕ್ಷಸನಿಗೆ ಸಾಕಾಗುವಷ್ಟು ಆಹಾರವನ್ನು ಯಾರಾದರೂ ಒಬ್ಬರೊಡನೆ ಕಳುಹಿಸಬೇಕಾಗಿದ್ದಿತು. ಒಂದು ದಿನ ಪಾಂಡವರು ಇಳಿದುಕೊಂಡಿದ್ದ ಮನೆಯ ಸರದಿಯು ಬರಲು ಆ ಮನೆಯ

ಒಡತಿಯು ತನ್ನ ಒಬ್ಬನೇ ಮಗನನ್ನು ರಾಕ್ಷಸನಿಗೆ ಬಲಿ ಕೊಡಬೇಕಾಗಿ ಬಂದಿತಲ್ಲಾ ಎಂದು ಅಳುತ್ತಿರುವಲ್ಲಿ ಭೀಮಸೇನನು ಆಕೆಗೆ ಧೈರ್ಯ ಹೇಳಿ ಆಕೆಯ ಮಗನಿಗೆ ಬದಲಾಗಿ ರಾಕ್ಷಸನಿಗೆ ಕೂಳನ್ನು ತಾನೇ ತೆಗೆದುಕೊಂಡು ಹೋಗುವೆನೆಂದು ಹೇಳಿದನು. ಅದೇ ವೇಳೆಗೆ ಒಂದು ಬಂಡಿಯಲ್ಲಿ ಆಹಾರ ಪದಾರ್ಥಗಳನ್ನು ತುಂಬಿಕೊಂಡು ಅವನ್ನು ಬೇಗ ಬೇಗನೆ ತಿನ್ನುತ್ತ ಬಂಡಿಯನ್ನು ಹೊಡೆಯುತ್ತ ರಾಕ್ಷಸನಿದ್ದೆಡೆಗೆ ಹೋದನು. ಇದನ್ನು ನೋಡಿ ರಾಕ್ಷಸನು ಬಹಳ ಕೋಪಗೊಂಡು ಗರ್ಜಿಸುತ್ತ ಬಂದು ಭೀಮನಮೇಲೆ ಬಿದ್ದನು. ಭೀಮನು ಇದನ್ನು ಲಕ್ಷ್ಯಮಾಡದೆ ರಾಕ್ಷಸನೊಂದಿಗೆ ಕಾದಿ ಅವನನ್ನು ಕೊಂದುಹಾಕಿದನು.

ತರುವಾಯ ಪಾಂಡವರು ದ್ರುಪದರಾಯನ ಮಗಳ ಸ್ವಯಂವರದ ಸುದ್ದಿಯನ್ನು ಕೇಳಿ ಪಾಂಚಾಲ ನಗರಕ್ಕೆ ಹೋದರು. ಸ್ವಯಂವರದಲ್ಲಿ ಅರ್ಜುನನು ಪಣವನ್ನು ಗೆದ್ದು ದ್ರೌಪದಿಯನ್ನು ಪಡೆದು ತನ್ನ ತಾಯಿಯಿದ್ದಲ್ಲಿಗೆ ಹೋಗಿ, ಒಂದು ಫಲವನ್ನು ತಂದಿರುವೆನೆಂದು ಹೇಳಲು ಆಕೆಯು ನಿಶ್ಚಯಾಂಶವನ್ನು ತಿಳಿಯದೆ ಐದು ಮಂದಿಯೂ ಅದನ್ನು ಹಂಚಿಕೊಳ್ಳಿರೆಂದು ಹೇಳಿದಳು. ಈ ಕಾರಣದಿಂದ ದ್ರೌಪದಿಯು ಐದು ಮಂದಿ ಅಣ್ಣತಮ್ಮಂದಿರಿಗೂ ಹೆಂಡತಿಯಾಗಬೇಕಾಯಿತು.

ಪಾಂಡವರು ಅರಗಿನ ಮನೆಯಲ್ಲಿ ಸಾಯದೆ ಸ್ವಯಂವರದಲ್ಲಿ ದ್ರುಪದರಾಯನ ಮಗಳನ್ನು ಪಡೆದುದನ್ನು ದುರ್ಯೋಧನಾದಿಗಳು ತಿಳಿದು ಬಹಳ ಸಂಕಟಪಟ್ಟರು. ಪಾಂಡವರಿಗೂ, ಕೌರವರಿಗೂ ಈ ರೀತಿಯಾದ ದ್ವೇಷಾಸೂಯೆಗಳಿರುವುದು ಸರಿಯಲ್ಲವೆಂದು ಆಲೋಚಿಸಿ ಭೀಷ್ಮನು ಪಾಂಡವರನ್ನು ಹಸ್ತಿನಾಪುರಕ್ಕೆ ಕರೆತರಿಸಿ ರಾಜ್ಯವನ್ನೆಲ್ಲ ಎರಡು ಸಮಭಾಗಗಳಾಗಿ ವಿಂಗಡಿಸಿ ಒಂದು ಭಾಗವನ್ನು ಕೌರವರಿಗೂ, ಮತ್ತೊಂದು ಭಾಗವನ್ನು ಪಾಂಡವರಿಗೂ ಹಂಚಿಕೊಟ್ಟನು. ಕೌರವರು ಹಸ್ತಿನಾಪುರವನ್ನೂ, ಪಾಂಡವರು ಇಂದ್ರಪ್ರಸ್ಥವನ್ನೂ ರಾಜಧಾನಿಯಾಗಿ ಮಾಡಿಕೊಂಡು ಸುಖದಿಂದ ರಾಜ್ಯಭಾರ ಮಾಡುತ್ತಿದ್ದರು.

II

ಹೀಗಿರುವಾಗ ಪಾಂಡವರಲ್ಲಿ ಹಿರಿಯವನಾದ ಯುಧಿಷ್ಠಿರನು ಶ್ರೀಕೃಷ್ಣನ ಸಹಾಯವನ್ನು ಪಡೆದು ಬಹಳ ವೈಭವದಿಂದ ರಾಜಸೂಯ ಯಾಗವನ್ನು ಮಾಡಿದನು. ಈ ಯಾಗಕ್ಕೆ ಹಸ್ತಿನಾಪುರದಿಂದ ಧೃತ ರಾಷ್ಟ್ರನೂ, ಆತನ ಮಕ್ಕಳಾದ ದುರ್ಯೋಧನ ದುಶ್ಶಾಸನಾದಿಗಳೂ, ದುರ್ಯೋಧನನ ಆಪ್ತರಾದ ಕರ್ಣ ಶಕುನಿ ಮೊದಲಾದವರೂ ಬಂದು ಆ ರಾಜಸಭೆಯ ವೈಭವವನ್ನು ನೋಡಿ ಬೆರಗಾದರು. ಧೃತರಾಷ್ಟ್ರನ ಹಿರಿಯಮಗನಾದ ದುರ್ಯೋಧನನು ಧರ್ಮರಾಯನ ಸಾಮ್ರಾಜ್ಯ ಪದವಿಯನ್ನೂ ವೈಭವವನ್ನೂ ನೋಡಿ ಸಹಿಸಲಾರದೆ ಪಾಂಡವರ ಏಳಿಗೆ ಯನ್ನು ಮುರಿಯುವ ಆಲೋಚನೆಯನ್ನು ತನ್ನ ಸೋದರಮಾವನಾದ ಶಕುನಿಯೊಡನೆ ಮಾಡಿದನು. ಬಹಳ ಪರಾಕ್ರಮಿಗಳಾದ ಭೀಮಾ ರ್ಜುನರನ್ನು ಯುದ್ಧದಲ್ಲಿ ಸೋಲಿಸುವುದು ಸಾಧ್ಯವಲ್ಲವೆಂದರಿತು ಅವ ರನ್ನು ಮೋಸದಿಂದ ಗೆಲ್ಲಬೇಕೆಂದಾಲೋಚಿಸಿ ದುರ್ಯೋಧನನು ಪಾಂಡವರನ್ನೂ, ಅವರ ಹೆಂಡತಿಯಾದ ದ್ರೌಪದಿಯನ್ನೂ ಬಹಳ ಮರ್ಯಾದೆಯಿಂದ ಹಸ್ತಿನಾಪುರಕ್ಕೆ ಕರೆಯಿಸಿ ಒಂದು ಸಭೆಯನ್ನು ಏರ್ಪಡಿಸಿ ಧರ್ಮರಾಯನು ತನ್ನೊಡನೆ ಪಗಡೆಯ ಜೂಜಾಟವನ್ನಾಡಲು ಸಮ್ಮತಿಸುವಂತೆ ಮಾಡಿದನು.

ಧರ್ಮರಾಯನು ಕಲಿ ಮಹಿಮೆಯಿಂದ ಪಗಡೆಯಾಟದಲ್ಲಿ ತನ್ನ ಬೊಕ್ಕಸ ಭಂಡಾರಗಳನ್ನೂ, ರಾಜ್ಯ ಮೊದಲಾಗಿ ಸರ್ವಸ್ವವನ್ನೂ ಸೋತು ತನ್ನ ತಮ್ಮಂದಿರನ್ನೂ, ಹೆಂಡತಿಯಾದ ದ್ರೌಪದಿಯನ್ನೂ ಒಡ್ಡಿ ಅವರನ್ನೂ ಸೋತುಹೋದನು. ಆಗ ದುರ್ಯೋಧನನು ತನ್ನ ಪಾಲಿಗೆ ಬಂದ ದ್ರೌಪದಿಯನ್ನು ಸಭೆಗೆ ಕರೆಯಿಸಿ ಆಕೆಯ ಮಾನಭಂಗ ವನ್ನು ಮಾಡುವಂತೆ ದುಶ್ಶಾಸನನಿಗೆ ಅಪ್ಪಣೆಮಾಡಲು ಅವನು ಸಭೆ ಯಲ್ಲಿ ಆಕೆಯ ಸೀರೆಯನ್ನು ಸೆಳೆಯಲಾರಂಭಿಸಿದನು. ಅಂತಹ ಮಾನ ಭಂಗವನ್ನು ಸಹಿಸಲಾರದೆ ದೀನಳಾದ ದ್ರೌಪದಿಯು ಸಭೆಯಲ್ಲಿದ್ದ ಭೀಷ್ಮ ಮೊದಲಾದ ವೃದ್ಧರಲ್ಲಿ ಎಷ್ಟು ಮೊರೆಯಿಟ್ಟರೂ ಅವರು ಯಾವ ಸಹಾಯವನ್ನೂ ಮಾಡಲಾರದೆ ಹೋಗಲು ಭಗವಂತನಾದ ಶ್ರೀಕೃಷ್ಣ

ನನ್ನು ಬಹಳ ಭಕ್ತಿಯಿಂದ ಧ್ಯಾನ ಮಾಡಿದಳು. ಭಕ್ತ ಪರಾಧೀನನಾದ ಭಗವಂತನು ಆಕೆಯ ಮೊರೆಯನ್ನು ಕೇಳಿ ಆಕೆಯುಟ್ಟಿದ್ದ ಸೀರೆಯು ಅಕ್ಷಯವಾಗುವಂತೆ ಅನುಗ್ರಹಿಸಿದನು.

ಕೊನೆಗೆ ಪಾಂಡವರು ದ್ರೌಪದಿಯೊಡನೆ ಕೂಡಲೆ ಹೊರಟು ಹನ್ನೆರಡು ವರುಷ ಅರಣ್ಯವಾಸವನ್ನೂ, ಒಂದು ವರುಷ ಅಜ್ಞಾತವಾಸವನ್ನೂ ಅನುಭವಿಸಬೇಕೆಂದೂ, ಅಜ್ಞಾತವಾಸ ಕಾಲದಲ್ಲಿ ಕೌರವರು ಅವರನ್ನು ಕಂಡುಹಿಡಿದರೆ ಮರಳಿ ಹನ್ನೆರಡು ವರುಷ ವನವಾಸವನ್ನೂ, ಒಂದು ವರುಷ ಅಜ್ಞಾತವಾಸವನ್ನೂ ಮಾಡಬೇಕೆಂದೂ, ಕಂಡುಹಿಡಿಯದಂತಾದರೆ ಪಾಂಡವರ ರಾಜ್ಯವನ್ನು ದುರ್ಯೋಧನನು ಅವರಿಗೆ ಹಿಂದಿರುಗಿ ಕೊಡಬೇಕೆಂದೂ ತೀರ್ಪಾಯಿತು.

III

ಪಾಂಡವರು ದ್ರೌಪದಿಯೊಡನೆ ದ್ವೈತವನದಲ್ಲಿ ವಾಸಮಾಡುತ್ತಿದ್ದಾಗ ಧೃತರಾಷ್ಟ್ರನ ಅಳಿಯನೂ, ಸಿಂಧೂ ದೇಶಾಧಿಪತಿಯೂ ಆದ ಜಯದ್ರಥನು ತನ್ನ ಪರಿವಾರದೊಡನೆ ಅಲ್ಲಿಗೆ ಬಂದನು. ಆ ಸಮಯದಲ್ಲಿ ಪಾಂಡವರು ಬೇಟೆಗಾಗಿ ಹೋಗಿದ್ದರು. ಆಶ್ರಮದಲ್ಲಿ ಒಂಟಿಯಾಗಿದ್ದ ದ್ರೌಪದಿಯನ್ನು ಜಯದ್ರಥನು ನೋಡಿ ಮೋಹಿಸಿ ತನ್ನನ್ನು ವರಿಸೆಂದು ಹಲವು ಬಗೆಯಾಗಿ ಕೇಳಿಕೊಳ್ಳಲು ಆಕೆಯು ಬಹಳ ಸಿಟ್ಟಾಗಿ ಅವನನ್ನು ತಿರಸ್ಕರಿಸಿದಳು. ಆದರೂ ಅವನು ಆಕೆಯನ್ನು ಬಲಾತ್ಕಾರದಿಂದ ತನ್ನ ರಥದಲ್ಲಿ ಕುಳ್ಳಿರಿಸಿಕೊಂಡು ತ್ವರೆಯಿಂದ ಓಡಿಹೋದನು. ಬೇಟೆಯಿಂದ ಹಿಂದಿರುಗಿ ಬಂದ ಭೀಮಾರ್ಜುನರು ಈ ವೃತ್ತಾಂತವನ್ನರಿತು ಕೂಡಲೆ ಜಯದ್ರಥನನ್ನು ಬೆನ್ನಟ್ಟಿಕೊಂಡು ಹೋಗಿ ಅವನನ್ನು ತಡೆದು ದ್ರೌಪದಿಯನ್ನು ಬಿಡಿಸಿಕೊಂಡು ಜಯದ್ರಥನನ್ನು ಹೆಡಮುರಿಗೆ ಕಟ್ಟಿ ಧರ್ಮರಾಯನ ಬಳಿಗೆ ತಂದರು. ಆತನು ಅವನನ್ನು ಕರುಣೆಯಿಂದ ಬಿಡುಗಡೆ ಮಾಡಲು ಸೈಂಧವನು ಅವಮಾನಿತನಾಗಿ ತನ್ನ ದೇಶಕ್ಕೆ ಹಿಂದಿರುಗಿದನು.

IV

ಹನ್ನೆರಡು ವರುಷಗಳ ವನವಾಸವು ಮುಗಿದಮೇಲೆ ಪಾಂಡವರು ದ್ರೌಪದಿಯೊಡನೆ ಅಜ್ಞಾತವಾಸಕ್ಕಾಗಿ ವೇಷಗಳನ್ನು ಹಾಕಿಕೊಂಡು ಮತ್ಸ್ಯದೇಶಾಧಿಪತಿಯಾದ ವಿರಾಟನ ಆಸ್ಥಾನಕ್ಕೆ ಬಂದರು. ಧರ್ಮರಾಯನು ಯತಿವೇಷದಿಂದ ಕಂಕಭಟ್ಟನೆಂಬ ಹೆಸರಿನಿಂದಲೂ, ಭೀಮಸೇನನು ಅಡಿಗೆಯವನಾಗಿ ವಲಲನೆಂಬ ಹೆಸರಿನಿಂದಲೂ, ಅರ್ಜುನನು ಸ್ತ್ರೀವೇಷದಿಂದ ಬೃಹನ್ನಳೆಯೆಂಬ ಹೆಸರಿನಿಂದಲೂ, ದ್ರೌಪದಿಯು ಸೈರಂಧ್ರಿಯ ವೇಷದಿಂದ ಮಾಲಿನಿಯೆಂಬ ಹೆಸರಿನಿಂದಲೂ ವಿರಾಟನ ಅರಮನೆಯಲ್ಲಿ ನಿಂತರು.

ಹೀಗಿರುವಲ್ಲಿ ವಿರಾಟನ ರಾಣಿಯ ತಮ್ಮನಾದ ಕೀಚಕನೆಂಬುವನು ಸೈರಂಧ್ರಿಯಾಗಿದ್ದ ದ್ರೌಪದಿಯನ್ನು ನೋಡಿ ಮೋಹಿಸಿ ಹೇಗಾದರೂ ಆಕೆಯನ್ನು ತನ್ನ ವಶಮಾಡಿಕೊಳ್ಳಬೇಕೆಂದು ಪ್ರಯತ್ನಿಸಿ ತನಗೆ ಸಹಾಯ ಮಾಡುವಂತೆ ತನ್ನ ಅಕ್ಕನನ್ನು ಒಪ್ಪಿಸಿದನು. ಇದನ್ನು ತಿಳಿದ ದ್ರೌಪದಿಯು ಭೀಮಸೇನನಿಗೆ ಈ ಸಮಾಚಾರವನ್ನು ಗುಟ್ಟಾಗಿ ತಿಳಿಸಲು ಆತನು ಕೀಚಕನನ್ನು ಕೊಲ್ಲುವ ಉಪಾಯವನ್ನಾಲೋಚಿಸಿ ಅವನನ್ನು ಅರ್ಧರಾತ್ರಿಯ ಸಮಯದಲ್ಲಿ ನಾಟ್ಯಶಾಲೆಗೆ ಬರುವಂತೆ ಹೇಳೆಂದು ದ್ರೌಪದಿಗೆ ಹೇಳಿದನು. ಕೀಚಕನು ಮೋಹಾವೇಶದಿಂದ ಮೈಮರೆತು ದ್ರೌಪದಿಯನ್ನು ಸೇರುವ ಕುತೂಹಲದಿಂದ ನಾಟ್ಯಶಾಲೆಗೆ ಬರುವಷ್ಟರೊಳಗೆ ಆ ಸ್ಥಳದಲ್ಲಿ ಭೀಮಸೇನನು ಸ್ತ್ರೀವೇಷದಿಂದ ಸಿದ್ಧನಾಗಿದ್ದು ಕೀಚಕನನ್ನು ಮಲ್ಲಯುದ್ಧದಲ್ಲಿ ಕೊಂದನು.

ಪಾಂಡವರ ಅಜ್ಞಾತವಾಸವು ಮುಗಿಯುತ್ತ ಬರುವ ವೇಳೆಗೆ ಅವರು ವಿರಾಟ ನಗರದಲ್ಲಿರುವರೆಂಬ ಸುದ್ದಿಯನ್ನು ಕೇಳಿ ಕೌರವ ಸೈನಿಕರು ಅಲ್ಲಿಗೆ ಬಂದು ಊರ ಹೊರಗೆ ಮೇಯುತ್ತಿದ್ದ ರಾಜನ ಗೋವುಗಳನ್ನು ಅಟ್ಟಿಕೊಂಡು ಹೋದರು. ಇವನ್ನು ಬಿಡಿಸಿಕೊಂಡು ಬರುವುದಕ್ಕಾಗಿ ದಕ್ಷಿಣ ದಿಕ್ಕಿಗೆ ವಿರಾಟನು ಭೀಮಾದಿಗಳೊಡನೆ ಹೊರಟಮೇಲೆ ಉತ್ತರ ಗೋಗ್ರಹಣವಾಯಿತೆಂದು ತಿಳಿಯಲು ವಿರಾಟನ ಮಗನಾದ ಉತ್ತರನು ತಾನು ಗೆದ್ದುಕೊಂಡು ಬಂದೇನೆಂದೂ, ಆದರೆ ತಕ್ಕ ಸಾರಥಿ ಯಾರೂ

ಇಲ್ಲವೆಂದೂ ರಾಣೀವಾಸದವರ ಮುಂದೆ ಪೌರುಷವನ್ನು ಹೇಳಿಕೊಂಡನು. ಆಗ ಅಲ್ಲಿ ಸ್ತ್ರೀವೇಷದಿಂದಿದ್ದ ಅರ್ಜುನನು ತಾನು ಸಾರಥಿಯಾಗುವೆನೆಂದು ಹೇಳಿ ಉತ್ತರನನ್ನೊಪ್ಪಿಸಿ ಅವನೊಡನೆ ಹೊರಟು ಕೌರವ ಸೇನೆಯನ್ನು ನೋಡಿ ಗಾಬರಿಪಟ್ಟು ಓಡಿಹೋಗಲು ಯತ್ನಿಸಿದ ಉತ್ತರನಿಗೆ ಧೈರ್ಯ ಹೇಳಿ ಕೌರವರೊಡನೆ ಯುದ್ಧಮಾಡಿ ಜಯವನ್ನು ಹೊಂದಿದನು.

ಈ ಸಮಯದಲ್ಲಿ ವಿರಾಟನು ಅರಮನೆಯಲ್ಲಿ ಕಂಕಭಟ್ಟನೊಡನೆ ಪಗಡೆಯಾಡುತ್ತಿದ್ದನು. ಆಗ ಉತ್ತರನು ಗೋವುಗಳನ್ನು ಬಿಡಿಸಿಕೊಂಡು ಬಂದನೆಂಬ ಜಯವಾರ್ತೆಯು ತಿಳಿಯಲು ದೊರೆಯು ಕಂಕಭಟ್ಟನ ಮುಂದೆ ತನ್ನ ಮಗನ ಪೌರುಷವನ್ನು ಹೊಗಳಿದನು. ಅದಕ್ಕೆ ಕಂಕಭಟ್ಟನು ಆ ಜಯಕ್ಕೆ ಬೃಹನ್ನಳೆಯು ಕಾರಣವೆಂದು ಹೇಳಲು ಇದನ್ನು ಸಹಿಸಲಾರದೆ ದೊರೆಯು ಪಗಡೆಯ ದಾಳವನ್ನು ಕಂಕಭಟ್ಟನ ಹಣೆಗೆ ಎಸೆದು ಆತನಿಗೆ ಗಾಯ ಮಾಡಿದನು. ಸೈರಂಧ್ರಿಯಾಗಿದ್ದ ದ್ರೌಪದಿಯು ಇದನ್ನು ನೋಡಿ ಧರ್ಮರಾಯನ ಗಾಯದ ನೆತ್ತರು ಭೂಮಿಗೆ ಬಿದ್ದರೆ ಬಹಳ ಹಾನಿಯುಂಟಾಗುವುದೆಂಬುದನ್ನು ಅರಿತವಳಾದುದರಿಂದ ಕೂಡಲೆ ಬಂದು ರಕ್ತವು ಕೆಳಗೆ ಬೀಳದಂತೆ ತನ್ನ ಸೆರಗಿನಿಂದ ತಡೆದಳು. ಕೊನೆಗೆ ವಿರಾಟನು ತನ್ನ ಅರಮನೆಯಲ್ಲಿ ಪಾಂಡವರು ದ್ರೌಪದಿಯೊಡನೆ ವೇಷಾಂತರಗಳಿಂದ ಇರುವರೆಂದು ತಿಳಿದು ತನ್ನ ಅಪರಾಧವನ್ನು ಕ್ಷಮಿಸಬೇಕೆಂದು ಬೇಡಿಕೊಂಡು ಪಾಂಡವರನ್ನೂ, ದ್ರೌಪದಿಯನ್ನೂ ಬಹಳ ಮರ್ಯಾದೆಯಿಂದ ಸತ್ಕರಿಸುತ್ತಿದ್ದನು.

V

ಧರ್ಮಿಷ್ಠರಾದ ಪಾಂಡವರು ಕಷ್ಟಗಳೆಲ್ಲವನ್ನೂ ಸಹಿಸಿ ಹಿಂದೆ ಗೊತ್ತಾಗಿದ್ದಂತೆ ರಾಜ್ಯಭಾರವನ್ನು ವಹಿಸುವುದಕ್ಕೆ ಅರ್ಹರಾಗಿರುವುದನ್ನು ದ್ವಾರಕೆಯಲ್ಲಿದ್ದ ಶ್ರೀಕೃಷ್ಣನೂ, ಪಾಂಚಾಲ ರಾಜನಾದ ದ್ರುಪದನೂ ತಿಳಿದು ಕೌರವರಿಗೂ, ಪಾಂಡವರಿಗೂ ಸಂಧಿಮಾಡಿ ಪಾಂಡವರಿಗೆ ಸಲ್ಲತಕ್ಕ ರಾಜ್ಯದ ಭಾಗವನ್ನು ಅವರಿಗೆ ಕೊಡಿಸಬೇಕೆಂದು

ಆಲೋಚಿಸಿದರು. ಇದಕ್ಕಾಗಿ ದ್ರುಪದನು ತನ್ನ ಪುರೋಹಿತನನ್ನು ಧೃತರಾಷ್ಟ್ರನ ಬಳಿಗೆ ಕಳುಹಿಸಿದನು: ಶ್ರೀಕೃಷ್ಣನು ತಾನೇ ಹಸ್ತಿನಾಪುರಕ್ಕೆ ಬಂದನು. ಇದಕ್ಕೆ ಮೊದಲೇ ಧೃತರಾಷ್ಟ್ರ, ಭೀಷ್ಮ, ದ್ರೋಣ, ಕೃಪ, ವಿದುರ, ಸಂಜಯ—ಇವರೆಲ್ಲರೂ ದುರ್ಯೋಧನನಿಗೆ ಬುದ್ಧಿವಾದವನ್ನು ಹೇಳಿ ಅರ್ಧ ರಾಜ್ಯವನ್ನು ಪಾಂಡವರಿಗೆ ಕೊಡುವಂತೆ ಎಷ್ಟು ಬೋಧಿಸಿದರೂ ದುರ್ಮಾರ್ಗನಾದ ದುರ್ಯೋಧನನು ಕರ್ಣ, ಶಕುನಿ, ದುಶ್ಶಾಸನರಿಂದ ಪ್ರೇರಿತನಾಗಿ ದೊಡ್ಡವರ ಮಾತನ್ನು ತಿರಸ್ಕರಿಸಿ ಪಾಂಡವರಿಗೆ ಎಳ್ಳಷ್ಟು ರಾಜ್ಯವನ್ನೂ ಕೊಡೆನೆಂದೂ ಹಟ ಹಿಡಿದನು; ಸಂಧಿಮಾಡಲು ಬಂದ ಶ್ರೀಕೃಷ್ಣನನ್ನು ಲೆಕ್ಕಿಸದೆ ಆತನನ್ನು ಕಟ್ಟಿಹಾಕಿಸುವ ಪ್ರಯತ್ನ ಮಾಡಿದನು. ಇದನ್ನು ನೋಡಿ ಶ್ರೀಕೃಷ್ಣನು ವಿಶ್ವರೂಪವನ್ನು ತೋರಿಸಿ ಅಲ್ಲಿಂದ ಹೊರಟು ಪಾಂಡವರ ಬಳಿಗೆ ಬಂದು ಅವರು ಯುದ್ಧ ಸನ್ನದ್ಧರಾಗಬೇಕೆಂದೂ ತಾನು ಅವರಿಗೆ ಯಾವಾಗಲೂ ಸಹಾಯಕನಾಗಿರುವೆನೆಂದೂ ತಿಳಿಸಿದನು.

ಅನಂತರ ಕುರುಕ್ಷೇತ್ರದಲ್ಲಿ ಯುದ್ಧವು ಪ್ರಾರಂಭವಾಯಿತು. ಮೊದಲು ಭೀಷ್ಮಾಚಾರ್ಯನು ಯುದ್ಧಮಾಡಿ ಶಸ್ತ್ರತ್ಯಾಗ ಮಾಡಿದ ಬಳಿಕ ದುರ್ಯೋಧನನು ದ್ರೋಣಾಚಾರ್ಯನಿಗೆ ಸೇನಾಧಿಪತ್ಯವನ್ನು ಕೊಟ್ಟನು. ದ್ರೋಣಾಚಾರ್ಯನೂ ಸಿಂಧು ದೇಶಾಧಿಪತಿಯಾದ ಜಯದ್ರಥನೂ, ಇನ್ನೂ ಹಲವು ಮಂದಿ ಮಹಾರಥರೂ ಪದ್ಮವ್ಯೂಹವನ್ನು ಕಟ್ಟಿ ಯುದ್ಧಕ್ಕೆ ನಿಂತರು. ಇವರೊಡನೆ ಯುದ್ಧಮಾಡಲು ಅರ್ಜುನನ ಮಗನಾದ ಅಭಿಮನ್ಯುವು ಅನುವಾಗಿ ಪರಾಕ್ರಮದಿಂದ ಪದ್ಮವ್ಯೂಹದೊಳಗೆ ನುಗ್ಗಿ ತಾನೊಬ್ಬನೇ ಅಲ್ಲಿದ್ದವರೊಡನೆ ಬಹಳ ಶೌರ್ಯದಿಂದ ಕಾದಿ ಹಲವರನ್ನು ಕೊಲ್ಲಲು ದ್ರೋಣಾದಿಗಳಿಗೆ ಇವನನ್ನು ಜಯಿಸುವುದು ಅಸಾಧ್ಯವೆಂದು ತೋರಿತು. ಅಭಿಮನ್ಯುವು ಬಾಗಿಲಲ್ಲಿ ಅಡ್ಡವಾಗಿ ನಿಂತಿದ್ದ ಸೈಂಧವನನ್ನು ಗೆಲ್ಲುವುದಕ್ಕಾಗಿ ಹಿಂದಿರುಗಿ ಯುದ್ಧಮಾಡುತ್ತಿರಲು ಕರ್ಣ ಮೊದಲಾದ ವೀರರೆಲ್ಲರೂ ಬಾಣಪ್ರಯೋಗ ಮಾಡಿ ಅವನನ್ನು ಕೊಂದರು.

ಅಭಿಮನ್ಯುವು ಈ ರೀತಿಯಾಗಿ ಮೃತ್ಯುವಿಗೆ ತುತ್ತಾದುದನ್ನು ಪಾಂಡವರು ಕೇಳಿ ಬಹಳ ದುಃಖಪಟ್ಟರು. ಅರ್ಜುನನು ಬಹಳ ಸಂಕಟಪಡುತ್ತ ತನ್ನ ಮಗನ ಮೋಸದ ಕೊಲೆಗೆ ಸೈಂಧವನೇ ಕಾರಣ ನೆಂದು ನಿಶ್ಚಯಿಸಿ ಆ ದಿನ ಸೂರ್ಯಾಸ್ತವಾಗುವುದರೊಳಗಾಗಿ ಆ ಸೈಂಧವನನ್ನು ಸಂಹರಿಸುವೆನೆಂದೂ, ಹಾಗಾಗದಿದ್ದರೆ ತಾನು ಅಗ್ನಿ ಪ್ರವೇಶ ಮಾಡುವೆನೆಂದೂ ಪ್ರತಿಜ್ಞೆ ಮಾಡಿದನು. ಇದನ್ನು ತಿಳಿದು ಶತ್ರುಗಳು ಸೈಂಧವನನ್ನು ಬಚ್ಚಿಟ್ಟರು. ಸೂರ್ಯಾಸ್ತಮಯವಾಗುತ್ತ ಬಂದರೂ ತನ್ನ ಹಗೆಯು ಕಾಣದೆ ಹೋದುದರಿಂದ ಅರ್ಜುನನು ತನ್ನ ಪ್ರತಿಜ್ಞೆಯ ಮೇರೆಗೆ ಅಗ್ನಿಪ್ರವೇಶ ಮಾಡಲು ಸಿದ್ಧನಾದನು.

ಹೀಗಿರುವಲ್ಲಿ, ಸರ್ವಜ್ಞನಾದ ಶ್ರೀಕೃಷ್ಣನು ಅರ್ಜುನನಿಗೆ ಸಮಾಧಾನ ಹೇಳಿ ಸೂರ್ಯಬಿಂಬಕ್ಕೆ ತನ್ನ ಚಕ್ರವನ್ನು ಮರೆಮಾಡಲು ಯುದ್ಧರಂಗದಲ್ಲೆಲ್ಲ ಕತ್ತಲೆ ಕವಿದುಕೊಂಡಿತು. ಆಗ ಶತ್ರುಗಳು ಬಹಳ ಸಂತೋಷಪಟ್ಟು ಅರ್ಜುನನು ಅಗ್ನಿಪ್ರವೇಶ ಮಾಡಿರಬೇಕೆಂದು ಊಹಿಸಿ ಸೈಂಧವನನ್ನು ಹೊರಗೆ ಬಿಟ್ಟರು. ಕೂಡಲೆ ಕೃಷ್ಣನು ಅರ್ಜುನನಿಗೆ ಈ ವಿಷಯವನ್ನು ತಿಳಿಸಿ ಸೈಂಧವನ ತಲೆಯು ಕತ್ತರಿಸಿ ನೆಲದಮೇಲೆ ಬಿದ್ದರೆ ಅದನ್ನು ನೆಲಕ್ಕೆ ಕೆಡವಿದವನ ತಲೆಯು ಬಿರಿದುಹೋಗುವಂತೆ ಸೈಂಧವನು ಈಶ್ವರನಿಂದ ವರವನ್ನು ಪಡೆದಿರುವನೆಂದೂ, ಆದುದರಿಂದ ಅರ್ಜುನನು ಬಾಣವನ್ನು ಸೈಂಧವನ ಕಂಠಕ್ಕೆ ಸರಿಯಾಗಿ ಗುರಿಯಿಟ್ಟು ಆ ತಲೆಯು ಜಪ ಮಾಡುತ್ತಿದ್ದ ಸೈಂಧವನ ತಂದೆಯಾದ ವೃದ್ಧಕ್ಷತ್ರನ ತೊಡೆಯಮೇಲೆ ಬೀಳುವಂತೆ ಬಿಡಬೇಕೆಂದೂ ಹೇಳಿದನು. ಅರ್ಜುನನು ಹಾಗೆಯೇ ಮಾಡಲು ಆ ರುಂಡವು ವೃದ್ಧಕ್ಷತ್ರನ ತೊಡೆಯ ಮೇಲೆ ಬಿದ್ದಿತು. ಆತನು ಮೇಲಕ್ಕೆದ್ದಾಗ ಅದು ನೆಲದಮೇಲೆ ಬಿದ್ದುದರಿಂದ ಆ ವೃದ್ಧಕ್ಷತ್ರನ ತಲೆಯು ಬಿರಿದುಹೋಯಿತು. ಆಗ ಶ್ರೀಕೃಷ್ಣನು ತನ್ನ ಚಕ್ರವನ್ನು ತೆಗೆಯಲು ಸೂರ್ಯಬಿಂಬವು ಕಾಣಿಸಿತು. ಪಾಂಡವರ ಸೈನ್ಯದಲ್ಲಿ ಜಯಧ್ವನಿಯಾಯಿತು.

ತರುವಾಯ ದ್ರೋಣ, ಕರ್ಣ, ಶಲ್ಯ ಮೊದಲಾದ ಕೌರವ ಸೇನಾಪತಿಗಳೂ ದುರ್ಯೋಧನನೂ ಘೋರ ಯುದ್ಧಮಾಡಿ ಮಡಿದರು.

ಅನಂತರ ಶ್ರೀಕೃಷ್ಣನ ಏರ್ಪಾಡಿನ ಮೇರೆಗೆ ಧರ್ಮರಾಯನು ಕುರು ರಾಜ್ಯದಲ್ಲಿ ಪಟ್ಟಾಭಿಷಿಕ್ತನಾಗಿ ತಮ್ಮಂದಿರೊಡನೆ ಸುಖವಾಗಿ ರಾಜ್ಯ ಭಾರ ಮಾಡಿದನು.

---

೧೫. ವಾಲಿ ಸುಗ್ರೀವರ ಕಥೆ

ಬಹಳ ಪುರಾತನ ಕಾಲದಲ್ಲಿ ವಾಲಿಯೆಂಬ ಪರಾಕ್ರಮಶಾಲಿಯಾದ ವಾನರನು ಕಿಷ್ಕಿಂಧಾ ಪಟ್ಟಣದಲ್ಲಿ ರಾಜ್ಯಭಾರ ಮಾಡುತ್ತಿದ್ದನು. ಆ ಸಮಯದಲ್ಲಿ ದುಂದುಭಿಯೆಂಬ ರಾಕ್ಷಸನ ಮಗನಾದ ಮಾಯಾವಿಯು ಇವನ ಪರಾಕ್ರಮವನ್ನು ಕೇಳಿ ಇವನನ್ನು ಗೆಲ್ಲಬೇಕೆಂದು ಆಟೋಪ ದಿಂದ ಕಿಷ್ಕಿಂಧೆಗೆ ಬಂದು ಯುದ್ಧಕ್ಕೆ ಕರೆದನು. ಕೂಡಲೆ ವಾಲಿಯು ಸಿಟ್ಟಿನಿಂದ ಅವನನ್ನು ಎದುರಿಸಿ ಹೋರಾಟಕ್ಕೆ ನಿಲ್ಲಲು ರಾಕ್ಷಸನು ಅಂಜಿ ಓಡಿಹೋದನು. ವಾಲಿಯು ಅವನನ್ನು ಬೆನ್ನಟ್ಟಿಕೊಂಡು ಹೋಗಲು ರಾಕ್ಷಸನು ಒಂದು ಬೆಟ್ಟದ ಗವಿಯೊಳಗೆ ಹೊಕ್ಕು ಅದರ ಬಾಯಿಗೆ ಒಂದು ದೊಡ್ಡ ಕಲ್ಲುಗುಂಡನ್ನು ಮುಚ್ಚಿ ಒಳಕ್ಕೆ ಹೊರಟುಹೋದನು. ವಾಲಿಯು ಆ ಗುಂಡನ್ನು ಒದೆದು ನೂಕಿ ಕಗ್ಗತ್ತಲೆಯಿಂದ ಕೂಡಿದ್ದ ಆ ಗವಿಯನ್ನು ಹೊಕ್ಕು ತನ್ನೊಡನೆ ಬಂದಿದ್ದ ಸುಗ್ರೀವನಿಗೆ ತಾನು ಹಿಂದಿರುಗಿ ಬರುವವರೆಗೂ ಆ ಗವಿಯ ಬಳಿಯಲ್ಲಿಯೇ ಕಾದಿರುವಂತೆ ಅಪ್ಪಣೆ ಮಾಡಿ ಒಳಗೆ ಹೋದನು. ಬಲು ದೂರ ಆ ಕಗ್ಗತ್ತಲೆಯಲ್ಲಿ ನಡೆದು ವಾಲಿಯು ಕಡೆಗೆ ಮಾಯಾವಿಯನ್ನು ಸಂಧಿಸಲು, ಇಬ್ಬರಿಗೂ ಬಹುಕಾಲ ಬಹಳ ಘೋರವಾದ ಯುದ್ಧವು ನಡೆದು ವಾಲಿಯು ಮಾಯಾ ವಿಯನ್ನು ಕೊಂದನು. ಗವಿಯ ಹೊರಗೆ ನಿಂತಿದ್ದ ಸುಗ್ರೀವನಿಗೆ ರಾಕ್ಷಸನ ಅಬ್ಬರವು ಕೇಳಿಬರುತ್ತಿದ್ದಿತೇ ವಿನಾ ವಾಲಿಯ ದನಿಯು ಕೇಳ ಬರುತ್ತಿರಲಿಲ್ಲ. ಗವಿಯ ಬಾಯಿಂದ ನೊರೆಗೂಡಿದ ರಕ್ತಪ್ರವಾಹವು ಬಂದಿತು. ಒಂದು ವರುಷ ಕಾಲ ಕಳೆದರೂ ವಾಲಿಯು ಹಿಂದಕ್ಕೆ ಬಾರದೆಹೋದುದರಿಂದ ಅಣ್ಣನು ಸತ್ತುಹೋಗಿರಬೇಕೆಂದು ತಿಳಿದು ಸುಗ್ರೀವನು ಗವಿಯ ಬಾಯಿಗೆ ಒಂದು ದೊಡ್ಡ ಬಂಡೆಯನ್ನೆಳೆದು

ಕಿಷ್ಕಿಂಧೆಗೆ ಹೋಗಿ ಅಲ್ಲಿ ಪ್ರಧಾನರಿಗೆ ನಡೆದ ಸಂಗತಿಯನ್ನು ತಿಳಿಸಿದನು. ಅವರು ಸುಗ್ರೀವನಿಗೆ ಪಟ್ಟವನ್ನು ಕಟ್ಟಿ ವಾಲಿಗೆ ಉತ್ತರಕ್ರಿಯೆಗಳನ್ನು ಮಾಡಿಸಿದರು.

ಇತ್ತ ವಾಲಿಯು ರಾಕ್ಷಸನನ್ನು ಕೊಂದು ಹಿಂದಕ್ಕೆ ಬಂದು ಗವಿಯ ದ್ವಾರವು ಮುಚ್ಚಿರುವುದನ್ನು ಕಂಡು ಬಹಳ ಸಿಟ್ಟಾಗಿ ಬಂಡೆಯನ್ನೊದೆದು ಉರುಳಿಸಿ ಹೊರಗೆ ಬಂದನು. ಅಲ್ಲಿ ಸುಗ್ರೀವನು ಕಾಣದುದರಿಂದ ಆತನು ಕೂಡಲೆ ಕಿಷ್ಕಿಂಧೆಗೆ ಹೋಗಿ ಅವನಿಗೆ ಪಟ್ಟಾಭಿಷೇಕವಾಗಿದ್ದುದನ್ನು ಕಂಡು ರೋಷದಿಂದ ಮೈಮರೆತವನಾಗಿ ಅವನನ್ನು ಅಲ್ಲಿಂದ ಓಡಿಸಿಬಿಟ್ಟನು. ಸುಗ್ರೀವನು ಅಲ್ಲಿಂದ ಹೊರಟು ಋಷ್ಯಮೂಕ ಪರ್ವತವನ್ನು ಸೇರಿದನು.

ಆ ಬಳಿಕ ಕೆಲವು ಕಾಲ ಕಳೆದ ಮೇಲೆ ದುಂದುಭಿಯು ಬಹಳ ಕೊಬ್ಬಿದ ಕೋಣನ ರೂಪವನ್ನು ತಾಳಿ ತನ್ನೊಡನೆ ಹೋರಾಡಲು ಸಮರ್ಥರಾರೆಂದು ಹುಡುಕುತ್ತ ಕಡೆಗೆ ಕಿಷ್ಕಿಂಧೆಗೆ ಬಂದು ಆರ್ಭಟಿಸಿ ವಾಲಿಯನ್ನು ಯುದ್ಧಕ್ಕೆ ಕರೆದನು. ವಾಲಿಯು ರೋಷದಿಂದ ಬಂದು ರಾಕ್ಷಸನೊಡನೆ ಕಾದಿ ಅವನನ್ನು ಕೊಂಬುಗಳಿಂದ ಹಿಡಿದು ಎತ್ತಿ ನೆಲಕ್ಕಪ್ಪಳಿಸಿ ಕೊಂದು ನೆತ್ತರು ಪ್ರವಾಹವಾಗಿ ಸೋರುತ್ತಿರುವ ಆ ದೇಹವನ್ನೆತ್ತಿ ಬೀಸಿ ಎಸೆಯಲು ಅದು ಋಷ್ಯಮೂಕ ಪರ್ವತದ ಮೇಲೆ ಬಿದ್ದಿತು. ಅಲ್ಲಿ ತಪಸ್ಸು ಮಾಡುತ್ತಿದ್ದ ಮತಂಗ ಋಷಿಯ ಆಶ್ರಮದಲ್ಲೆಲ್ಲ ಈ ನೆತ್ತರಿನ ಹನಿಗಳು ಚೆಲ್ಲಿ ಅಶುಚಿಯಾದುದನ್ನು ಆ ಋಷಿಯು ಕಂಡು ಸಿಟ್ಟಾಗಿ ಈ ಕೆಲಸವನ್ನು ಮಾಡಿದವನು ವಾಲಿಯೆಂದು ತನ್ನ ದಿವ್ಯ ದೃಷ್ಟಿಯಿಂದರಿತು ಅವನು ಆ ಪರ್ವತದ ಬಳಿಗೆ ಬಾರದಂತೆ ಶಾಪವನ್ನಿತ್ತನು. ಈ ಕಾರಣದಿಂದ ಸುಗ್ರೀವನು ತನ್ನ ಅಣ್ಣನ ತೊಂದರೆಯಿಲ್ಲದಂತೆ ಆ ಬೆಟ್ಟದಲ್ಲಿ ಸುಖವಾಗಿದ್ದನು. ಅಲ್ಲಿಗೆ ಶ್ರೀರಾಮನು ಸೀತೆಯನ್ನು ಹುಡುಕುತ್ತ ಬಂದು ಸುಗ್ರೀವನನ್ನು ಕಂಡು ಸೀತೆಯನ್ನು ಹುಡುಕಿ ತರಲು ಸಹಾಯ ಮಾಡುವೆನೆಂಬ ವಾಗ್ದಾನವನ್ನು ಅವನಿಂದ ಪಡೆದು ಪ್ರತ್ಯುಪಕಾರವಾಗಿ ವಾಲಿಯನ್ನು ಕೊಂದು ಸುಗ್ರೀವನಿಗೆ ಕಿಷ್ಕಿಂಧಾ ಪಟ್ಟಣದಲ್ಲಿ ರಾಜ್ಯಾಭಿಷೇಕ ಮಾಡಿದನು.

೧೬. ಚಂದ್ರನಿಗೆ ಬೃಹಸ್ಪತಿಯಿಂದುಂಟಾದ ಶಾಪ

ದೇವತೆಗಳಿಗೆ ಗುರುವಾದ ಬೃಹಸ್ಪತಿಗೆ ತಾರೆಯೆಂಬ ಚೆಲುವೆಯಾದ ಪತ್ನಿಯಿದ್ದಳು. ಆಕೆಯು ಒಂದಾನೊಂದು ಕಾಲದಲ್ಲಿ ಚಂದ್ರನನ್ನು ನೋಡಿ ಅವನ ಸೌಂದರ್ಯಕ್ಕೆ ಬೆರಗಾಗಿ ಮೋಹಿಸಿ ಅವನಲ್ಲಿಗೆ ಬಂದು ಸೇರಿದಳು. ಕೆಲಕಾಲ ಇವರಿಬ್ಬರೂ ಪರಸ್ಪರ ಪ್ರೇಮಾತಿಶಯದಿಂದಿದ್ದರು. ಗುರುವು ತನ್ನ ಹೆಂಡತಿಯನ್ನು ಹಿಂದಕ್ಕೆ ಕಳುಹಿಸಿಕೊಡೆಂದು ಚಂದ್ರನನ್ನು ಹಲವುಬಾರಿ ಕೇಳಿದರೂ ಸಾರ್ಥಕವಾಗಲಿಲ್ಲ. ಆಗ ಆತನು ಚಂದ್ರನನ್ನು ಕುರಿತು, "ಈ ಅಕೃತ್ಯವನ್ನು ಮಾಡಿದುದಕ್ಕಾಗಿ ನಿನಗೆ ಕ್ಷಯರೋಗ ಬಂದು ನೀನು ದಿನೇ ದಿನೇ ನಶಿಸಿಹೋಗು" ಎಂದು ಶಾಪ ಕೊಟ್ಟನು. ಇಷ್ಟರಲ್ಲಿ ತಾರೆಯು ಗರ್ಭವತಿಯಾಗಿ ಬುಧನೆಂಬ ಮಗನನ್ನು ಹಡೆದಿದ್ದಳು.

ಗುರುವು ತನ್ನ ವೃತ್ತಾಂತವನ್ನು ಬ್ರಹ್ಮಾದಿ ದೇವತೆಗಳಿಗೆ ತಿಳಿಸಲು ಅವರು ದೇವತೆಗಳ ಸಭೆ ಸೇರಿಸಿ ಅಲ್ಲಿಗೆ ಚಂದ್ರ ತಾರೆಯರನ್ನು ಕರೆಯಿಸಿ ವಿಚಾರಮಾಡಿ ತಾರೆಯನ್ನು ಗುರುವಿಗೆ ಕೊಡಿಸಿದರು. ಆತನು ಆಕೆಗೆ ತಕ್ಕ ಪ್ರಾಯಶ್ಚಿತ್ತವನ್ನು ವಿಧಿಸಿ ಆಕೆಯನ್ನು ಹಿಂದಕ್ಕೆ ತೆಗೆದುಕೊಂಡನು. ತರುವಾಯ ಚಂದ್ರನಿಗೆ ಗುರುವಿನ ಶಾಪವು ಪೂರಾ ತಟ್ಟದಂತೆ ದೇವತೆಗಳು ಸಹಾಯಮಾಡಿ ಕೃಷ್ಣಪಕ್ಷದಲ್ಲಿ ಕ್ಷಯವೂ, ಶುಕ್ಲಪಕ್ಷದಲ್ಲಿ ವೃದ್ಧಿಯೂ ಉಂಟಾಗುವಂತೆ ಅನುಗ್ರಹಿಸಿದರು.

---

೧೭. ಅಹಲ್ಯೆಯ ಕಥೆ

ಪೂರ್ವಕಾಲದಲ್ಲಿ ಗೌತಮನೆಂಬ ಮಹರ್ಷಿಗೆ ಅಹಲ್ಯೆಯೆಂಬ ಹೆಂಡತಿಯಿದ್ದಳು. ಆಕೆಯ ಸೌಂದರ್ಯಾತಿಶಯವನ್ನು ನೋಡಿ ಮೋಹಿಸಿ ದೇವೇಂದ್ರನು ಆಕೆಯನ್ನು ಹೇಗಾದರೂ ತನ್ನ ವಶಮಾಡಿಕೊಳ್ಳಬೇಕೆಂಬ ದುರಾಲೋಚನೆ ಮಾಡಿದನು. ಆದರೆ ಮಹಾ ಪತಿವ್ರತೆಯಾದ ಅಹಲ್ಯೆಯನ್ನು ವಶಮಾಡಿಕೊಳ್ಳಲು ಸಾಧ್ಯವಾಗದ್ದೆ ಇಂದ್ರನು

ಬಹುಕಾಲ ಸಮಯವನ್ನು ನಿರೀಕ್ಷಿಸಬೇಕಾಯಿತು. ಗೌತಮನು ಪ್ರತಿ ದಿನವೂ ಕೋಳಿ ಕೂಗುತ್ತಲೇ ಎದ್ದು ಸ್ನಾನಕ್ಕಾಗಿ ನದಿಗೆ ಹೋಗುವ ವಾಡಿಕೆಯಿದ್ದಿತು. ಇದನ್ನರಿತಿದ್ದ ಇಂದ್ರನು ಒಂದು ದಿನ ಅರ್ಧ ರಾತ್ರಿಯ ಸಮಯದಲ್ಲಿ ಗೌತಮನ ಪರ್ಣಶಾಲೆಯ ಬಳಿಗೆ ಬಂದು ಕೋಳಿಯಂತೆ ಕೂಗಲು ಗೌತಮನು ಬೆಳಗಾಯಿತೆಂದು ಕೂಡಲೆ ಎದ್ದು ನದಿಗೆ ಹೋದನು. ಈ ಸಮಯವನ್ನು ಕಾದುಕೊಂಡಿದ್ದ ಇಂದ್ರನು ಗೌತಮನ ವೇಷದಿಂದ ಅಹಲ್ಯೆಯ ಬಳಿಗೆ ಬಂದು ಆಕೆಯನ್ನು ಮೋಸ ಗೊಳಿಸಿದನು.

ಇತ್ತ ಗೌತಮನು ನದಿಯಲ್ಲಿ ಸ್ನಾನಮಾಡಿ ಎಷ್ಟು ಹೊತ್ತಾದರೂ ಅರುಣೋದಯವಾಗದಿರಲು ನಕ್ಷತ್ರಗಳ ಗತಿಯನ್ನು ನೋಡಿ ಇದು ಅಕಾಲವೆಂದು ತಿಳಿದು ತನ್ನ ಪರ್ಣಶಾಲೆಗೆ ಹಿಂದಿರುಗಿ ಬಂದನು. ಅಲ್ಲಿ ಇಂದ್ರನನ್ನು ಕಂಡು ಈ ಮೋಸವೆಲ್ಲವೂ ಅವನದೇ ಎಂದು ತಿಳಿದು ಅವನಿಗೆ ಕಠಿನವಾದ ಶಾಪವನ್ನಿತ್ತುದಲ್ಲದೆ ಅಹಲ್ಯೆಗೂ ಶಿಲೆಯಾಗೆಂದು ಶಾಪವಿತ್ತು ತಾನು ಬೇರೆ ಕಡೆಗೆ ತಪಸ್ಸಿಗಾಗಿ ಹೊರಟುಹೋದನು. ಹೀಗೆ ಅನೇಕ ಕಾಲ ನಡೆದನಂತರ ಶ್ರೀರಾಮನು ವಿಶ್ವಾಮಿತ್ರನೊಡನೆ ಮಿಥಿಲೆಗೆ ಬರುತ್ತಿದ್ದಾಗ ದಾರಿಯಲ್ಲಿ ಕಲ್ಲಾಗಿ ಬಿದ್ದಿದ್ದ ಅಹಲ್ಯೆಯು ಶ್ರೀರಾಮನ ಪಾದಧೂಳಿಯಿಂದ ಶಾಪಹೋದವಳಾಗಿ ಮರಳಿ ತನ್ನ ಪತಿಯನ್ನು ಸೇರಿದಳು.

---

೧೮. ಮತ್ಸ್ಯಾವತಾರದ ಕಥೆ

ಸೃಷ್ಟಿಕರ್ತನಾದ ಬ್ರಹ್ಮನಿಗೆ ರಾತ್ರಿಯಾಗಲು ಪ್ರಳಯವುಂಟಾಗಿ ಮೂರು ಲೋಕಗಳೂ ಸಮುದ್ರದಲ್ಲಿ ಮುಳುಗಿಹೋದುವು. ಬ್ರಹ್ಮನಿಗೆ ನಿದ್ರೆಯು ಮುಗಿದು ಎಚ್ಚರವಾಗುವ ಸಮಯದಲ್ಲಿ ಆತನ ಮುಖಗಳಿಂದ ಹೊರಟುಬರುತ್ತಿದ್ದ ವೇದಗಳನ್ನು ಸೋಮಕನೆಂಬ ರಾಕ್ಷಸನು ಕದ್ದುಕೊಂಡು ಹೋಗಿ ಸಮುದ್ರದಲ್ಲಿ ಹಾಕಿದನು. ಈ ವೇದಗಳನ್ನು ಉದ್ಧಾರ ಮಾಡುವುದಕ್ಕಾಗಿ ಶ್ರೀ ವಿಷ್ಣುವು ಮತ್ಸ್ಯಾವತಾರವನ್ನೆತ್ತಿದನು.

ಆ ಕಾಲದಲ್ಲಿ ವಿಷ್ಣುಭಕ್ತನೂ, ರಾಜರ್ಷಿಯೂ ಆದ ಸತ್ಯವ್ರತನೆಂಬ ದ್ರವಿಡ ದೇಶಾಧಿಪತಿಯು ನೀರಿನಲ್ಲಿ ನಿಂತುಕೊಂಡು ತಪಸ್ಸು ಮಾಡುತ್ತಿದ್ದನು. ಆಗ ಆತನು ಜಲತರ್ಪಣವನ್ನು ಕೊಡುವುದಕ್ಕಾಗಿ ನದಿಯಿಂದ ಬೊಗಸೆಯಲ್ಲಿ ನೀರನ್ನು ಎತ್ತಲು ಒಂದು ಸಣ್ಣ ಮೀನು ಆ ನೀರಿನಲ್ಲಿ ಬಂದಿತು. ರಾಜರ್ಷಿಯು ಇದನ್ನು ನೋಡಿ ಆ ಮೀನನ್ನು ಮರಳಿ ನದಿಯಲ್ಲಿ ಬಿಟ್ಟುಬಿಟ್ಟನು. ಆಗ ಆ ಮೀನು ಆತನನ್ನು ಕುರಿತು "ಅಯ್ಯಾ ರಾಜರ್ಷಿಯೆ! ಸ್ವಜಾತಿಯಾದ ಮೀನುಗಳು ಒಂದನ್ನೊಂದು ತಿನ್ನುವುವಾದುದರಿಂದ ನನಗೂ ಅದೇ ಗತಿ ಬಂದೀತಲ್ಲಾ ಎಂಬ ಭಯದಿಂದ ನಿನ್ನಲ್ಲಿಗೆ ಬಂದರೆ ನೀನು ನನ್ನನ್ನು ಕಾಪಾಡದೆ ಮರಳಿ ನೀರಲ್ಲಿಯೇ ಬಿಡುವುದು ನ್ಯಾಯವೆ?" ಎಂದು ನುಡಿಯಿತು. ಆ ಮಾತನ್ನು ಕೇಳಿ ಸತ್ಯವ್ರತನು ಆ ಮೀನಿನ ಮಹತ್ತ್ವವನ್ನು ತಿಳಿಯದೆ ಅದನ್ನೆತ್ತಿ ನೀರು ತುಂಬಿದ ಒಂದು ಗಡಿಗೆಯಲ್ಲಿ ಬಿಟ್ಟು ಆ ಗಡಿಗೆಯನ್ನು ತನ್ನ ಆಶ್ರಮಕ್ಕೆ ತಂದನು. ಕೂಡಲೆ ಆ ಮೀನು ಬೆಳೆಯಲಾರಂಭಿಸಿ ಬೆಳಗಾಗುವವರೆಗೆ ಗುಡಿಗೆಯ ತುಂಬ ತುಂಬಿಕೊಂಡಿತು. ತರುವಾಯ ಅದನ್ನು ಅಲ್ಲಿಂದೆತ್ತಿ ಇನ್ನೂ ದೊಡ್ಡ ಪಾತ್ರೆಯಲ್ಲಿ ಬಿಡಲು ಮೀನು ಆ ಪಾತ್ರೆಯನ್ನೂ ತುಂಬಿತು. ಕ್ರಮ ಕ್ರಮವಾಗಿ ಅದನ್ನು ಕೊಳ, ಕೆರೆ, ಹೊಳೆ—ಇವುಗಳಲ್ಲಿ ಬಿಡಲಾಗಿ ಅವುಗಳನ್ನೂ ತುಂಬುವಂತೆ ಬೆಳೆಯಲು ಸತ್ಯವ್ರತನು ಕೊನೆಗೆ ಅದನ್ನು ಸಮುದ್ರದಲ್ಲಿ ಬಿಟ್ಟನು.

ಇಂತಹ ಸೋಜಿಗದ ಮೀನನ್ನು ಕಂಡು ಸತ್ಯವ್ರತನು ಇದು ಶ್ರೀ ಮಹಾ ವಿಷ್ಣುವಿನ ಅವತಾರವೇ ಆಗಿರಬೇಕೆಂದು ತಿಳಿದು ಮತ್ಸ್ಯ ಮೂರ್ತಿಯನ್ನು ಸ್ತೋತ್ರ ಮಾಡಿದನು. ಆಗ ವಿಷ್ಣುವು ಪ್ರತ್ಯಕ್ಷನಾಗಿ ಸತ್ಯವ್ರತನನ್ನು ಕುರಿತು "ಎಲೈ ಭಕ್ತನೆ! ಇಂದಿಗೆ ಏಳನೆಯ ದಿನದಲ್ಲಿ ಸಮುದ್ರವು ಉಕ್ಕಿ ಭೂಲೋಕ ಮೊದಲಾದ ಮೂರು ಲೋಕಗಳನ್ನೂ ಮುಳುಗಿಸುವುದು; ಆಗ ನಾನು ಒಂದು ದೊಡ್ಡ ಹಡಗನ್ನು ನಿನ್ನ ಬಳಿಗೆ ಕಳುಹಿಸುವೆನು; ನೀನು ಸಮಸ್ತವಾದ ಔಷಧಿಗಳನ್ನೂ, ನಾನಾ ವಿಧವಾದ ಬೀಜಗಳನ್ನೂ ತೆಗೆದುಕೊಂಡು ಸಕಲ ಪ್ರಾಣಿಗಳಿಂದಲೂ ಕೂಡಿ ಸಪ್ತ ಋಷಿಗಳೊಡನೆ ಆ ನಾವೆಯನ್ನೇರಿ ಸಂಚರಿಸುವವನಾಗು; ಅದರ

ಸಮೀಪಕ್ಕೆ ಬರುವ ನನ್ನನ್ನು ಮಹಾ ಸರ್ಪದಿಂದ ಆ ನಾವೆಗೆ ಕಟ್ಟಿ ಬಿಡು; ಆ ನಾವೆಯನ್ನು ನಾನು ಆ ಮಹಾ ಸಮುದ್ರದಲ್ಲಿ ಎಳೆದುಕೊಂಡು ಹೋಗುತ್ತ ಬ್ರಹ್ಮನ ರಾತ್ರಿಯು ಮುಗಿಯುವವರೆಗೂ ವಿಹರಿಸುತ್ತಿರುವೆನು; ಆಗ ನಿನ್ನೊಡನೆ ನಾನು ಮಾಡುವ ಪ್ರಶ್ನೋತ್ತರ ರೂಪವಾದ ಸಂವಾದದಲ್ಲಿ ನಿನಗೆ ಪ್ರಸನ್ನನಾಗಿ ಜ್ಞಾನೋಪದೇಶವನ್ನು ಮಾಡುವೆನು" ಎಂದು ಹೇಳಿ ಅಂತರ್ಧಾನನಾದನು.

ಅನಂತರ ಸತ್ಯವ್ರತನು ಭಗವಂತನು ಹೇಳಿದ ಕಾಲವನ್ನು ನಿರೀಕ್ಷಿಸುತ್ತ ದರ್ಭೆಯನ್ನು ಹಾಸಿಕೊಂಡು ವಿಷ್ಣುವಿನ ಪಾದಧ್ಯಾನ ಮಾಡುತ್ತ ಕುಳಿತಿದ್ದನು. ಕಾಲಕ್ರಮದಲ್ಲಿ ಪ್ರಳಯವುಂಟಾಗಿ ಸಮುದ್ರವು ಉಕ್ಕಿ ಭೂಮಂಡಲವನ್ನು ಮುಳುಗಿಸಲು ಸತ್ಯವ್ರತನು ವಿಷ್ಣುವಿನ ಅಪ್ಪಣೆಯಾಗಿದ್ದಂತೆ ಔಷಧಿ ಮೊದಲಾದುವನ್ನು ತೆಗೆದುಕೊಂಡವನಾಗಿ ತನ್ನ ಸಮೀಪಕ್ಕೆ ಬಂದ ಹಡಗನ್ನು ಸಪ್ತ ಋಷಿಗಳೊಡನೆ ಹತ್ತಿದನು. ಸ್ವಲ್ಪ ಕಾಲವಾದ ಮೇಲೆ ಒಂದು ಕೊಂಬನ್ನು ಧರಿಸಿ ಸುವರ್ಣಮಯವಾದ ಮತ್ಸ್ಯಾಕೃತಿಯುಳ್ಳ ಭಗವಂತನು ಆ ಸಮುದ್ರದಲ್ಲಿ ಕಾಣಿಸಿಕೊಳ್ಳಲು, ಸತ್ಯವ್ರತನು ತನ್ನ ನಾವೆಯನ್ನು ಮಹಾ ಸರ್ಪದಿಂದ ಆ ಮೀನಿನ ಕೋಡಿಗೆ ಕಟ್ಟಿ ಭಗವಂತನನ್ನು ಸ್ತೋತ್ರ ಮಾಡಿದನು. ಶ್ರೀ ಮಹಾ ವಿಷ್ಣುವು ಸತ್ಯವ್ರತನಿಗೆ ಜ್ಞಾನೋಪದೇಶ ಮಾಡಿ ಹಿಂದೆ ವೇದಗಳನ್ನು ಕದ್ದುಕೊಂಡು ಹೋಗಿದ್ದ ಸೋಮಕಾಸುರನನ್ನು ಸಂಹರಿಸಿ ವೇದಗಳನ್ನು ಸಾಧಿಸಿ ಉದ್ಧಾರ ಮಾಡಿದನು.

---

೧೯. ವರಾಹಾವತಾರದ ಕಥೆ

ವೈಕುಂಠದಲ್ಲಿ ಶ್ರೀಮನ್ನಾರಾಯಣನು ಯೋಗನಿದ್ರೆಯಲ್ಲಿದ್ದಾಗ ಸನಕ, ಸನಂದನ, ಸನತ್ಕುಮಾರ, ಸನತ್ಸುಜಾತರೆಂಬ ದೇವಋಷಿಗಳು ಭಗವಂತನ ದರುಶನಕ್ಕಾಗಿ ಬಂದರು. ಅಲ್ಲಿ ದ್ವಾರಪಾಲಕರಾಗಿದ್ದ ಜಯ ವಿಜಯರು ಅವರನ್ನು ಒಳಕ್ಕೆ ಬಿಡದೆ ತಡೆಯಲು ಆ ಋಷಿಗಳು ಕೋಪಗೊಂಡು ಅವರನ್ನು ಕುರಿತು "ಎಲೈ! ಅಹಂಕಾರಿಗಳಾದ ನಿಮಗೆ

ವೈಕುಂಠದ ವಾಸವು ತಪ್ಪಿ ಅಧೋಲೋಕವು ಪ್ರಾಪ್ತಿಯಾಗಿ ಕಾಮ ಕ್ರೋಧ ಲೋಭಗಳೆಂಬ ಶತ್ರುಗಳಿಂದ ಬಾಧೆಯುಂಟಾಗಲಿ" ಎಂದು ಶಾಪವನ್ನು ಕೊಟ್ಟರು. ಇದನ್ನು ಕೇಳಿ ಜಯ ವಿಜಯರು ಬಹಳ ವ್ಯಥೆ ಪಡುತ್ತಿರುವಲ್ಲಿ ಭಗವಂತನು ಪ್ರತ್ಯಕ್ಷನಾಗಿ ಸನಕಾದಿಗಳನ್ನನುಗ್ರಹಿಸಿ ಜಯ ವಿಜಯರನ್ನು ಕುರಿತು "ಋಷಿ ಶಾಪವು ವ್ಯರ್ಥವಾಗದು ; ಆದುದ ರಿಂದ ನೀವು ರಾಕ್ಷಸರಾಗಿ ಹುಟ್ಟಿ ಮೂರು ಜನ್ಮಗಳು ಕಳೆದ ಬಳಿಕ ಮರಳಿ ವೈಕುಂಠವನ್ನು ಸೇರುವಿರಿ" ಎಂದು ಸಮಾಧಾನ ಹೇಳಿ ಕಳುಹಿಸಿದನು.

ಕಾಲಕ್ರಮದಲ್ಲಿ ಜಯ ವಿಜಯರಿಬ್ಬರೂ ಕಶ್ಯಪ ಋಷಿಯ ಹೆಂಡತಿ ಯಾದ ದಿತಿಯ ಬಸಿರಲ್ಲಿ ಹಿರಣ್ಯಾಕ್ಷ, ಹಿರಣ್ಯಕಶಿಪುಗಳೆಂಬ ಅವಳಿ ಮಕ್ಕಳಾಗಿ ಮೊದಲು ಹುಟ್ಟಿದರು. ಇವರು ಬೆಳೆದು ಬಹಳ ಶಕ್ತರಾಗಿ ಲೋಕಗಳನ್ನೆಲ್ಲ ಬಾಧಿಸುತ್ತ ಸ್ವರ್ಗಲೋಕವನ್ನೂ ಆಕ್ರಮಿಸಿಕೊಂಡರು. ಹಿರಣ್ಯಾಕ್ಷನು ಭೂಲೋಕದಲ್ಲಿ ತಪಸ್ಸು ಮಾಡುತ್ತಿದ್ದ ಋಷಿಗಳನ್ನು ಪೀಡಿಸುತ್ತ ಯಜ್ಞಾದಿಗಳು ನಡೆಯದಂತೆ ತಡೆಮಾಡಿದುದಲ್ಲದೆ ಭೂಮಿ ಯನ್ನು ಚಾಪೆಯಂತೆ ಸುತ್ತಿ ರಸಾತಲ ಲೋಕಕ್ಕೆ ಹೊತ್ತುಕೊಂಡು ಹೋದನು. ಈ ಸುದ್ದಿಯನ್ನು ತಿಳಿದ ಬ್ರಹ್ಮಾದಿ ದೇವತೆಗಳು ವಿಷ್ಣು ವಿನ ಬಳಿಗೆ ಹೋಗಿ ಮೊರೆಯಿಡಲು ಆತನು ವರಹಾವತಾರವನ್ನು ತಾಳಿ ರಸಾತಲಕ್ಕೆ ಹೋಗಿ ಹಿರಣ್ಯಾಕ್ಷನನ್ನು ಕೊಂದು ಭೂಮಿಯನ್ನು ಉದ್ಧ ರಿಸಿ ಪ್ರಪಂಚಕ್ಕೆ ಆ ರಾಕ್ಷಸನ ಬಾಧೆಯನ್ನು ತಪ್ಪಿಸಿದನು.

---

೨೦. ಬಾಣಾಸುರನ ಕಥೆ

ಶೋಣಿತಪುರದಲ್ಲಿ ಪ್ರಹ್ಲಾದನ ಮೊಮ್ಮಗನೂ, ಬಲಿಚಕ್ರವರ್ತಿಯ ಹಿರಿಯ ಮಗನೂ ಆದ ಬಾಣಾಸುರನು ರಾಜ್ಯಭಾರ ಮಾಡುತ್ತಿದ್ದನು. ಅವನಿಗೆ ಸಾವಿರ ತೋಳುಗಳಿದ್ದುವು. ಅವನು ಒಂದಾನೊಂದು ಕಾಲದಲ್ಲಿ ತಾಂಡವಮೂರ್ತಿಯಾದ ಪರಮೇಶ್ವರನ ಎದುರಿಗೆ ವಾದ್ಯಗಳನ್ನು ಬಾರಿಸಿ ಆತನನ್ನು ಮೆಚ್ಚಿಸಿ ಆತನು ತನ್ನ ಪಟ್ಟಣಕ್ಕೆ ಯಾವಾಗಲೂ

ಕಾವಲಿರುವಂತೆಯೂ, ತಾನು ಮೂರು ಲೋಕಗಳಲ್ಲಿಯೂ ಅಜೇಯ ನಾಗಿರುವಂತೆಯೂ ವರವನ್ನು ಪಡೆದನು. ಈ ವರದಿಂದ ಬಾಣಾ ಸುರನ ಎದುರಿಗೆ ನಿಲ್ಲುವವನು ಎಲ್ಲಿಯೂ ಯಾರೂ ಇಲ್ಲದೆ ಹೋಗಲು ಅವನು ಈಶ್ವರನ ಬಳಿಗೆ ಬಂದು ನಮಸ್ಕರಿಸಿ "ಸ್ವಾಮಿ! ಮೂರುಲೋಕ ಗಳಲ್ಲಿಯೂ ನನ್ನೊಡನೆ ಯುದ್ಧಮಾಡುವವರು ಯಾರೂ ಇಲ್ಲದುದರಿಂದ ನನ್ನ ಸಾವಿರ ತೋಳುಗಳು ನನಗೆ ಬರಿಯ ಭಾರವಾಗಿವೆ" ಎಂದು ಹೆಮ್ಮೆಯಿಂದ ಹೇಳಿಕೊಂಡನು. ಅದನ್ನು ಕೇಳಿ ಈಶ್ವರನು ಬಹಳ ಸಿಟ್ಟಾಗಿ "ಎಲೈ ಮೂಢನೆ! ನಿನ್ನ ರಥದ ಧ್ವಜವು ಯಾವಾಗ ಮುರಿದು ಹೋಗುವುದೋ ಆಗ ನಿನಗೆ ತಕ್ಕ ಪರಾಕ್ರಮವುಳ್ಳವನೊಡನೆ ಯುದ್ಧವು ಒದಗಿ ನಿನ್ನ ಸೊಕ್ಕು ಮುರಿಯುವುದು" ಎಂದು ಹೇಳಿ ಕಳುಹಿಸಿಬಿಟ್ಟನು.

ಬಾಣನಿಗೆ ಉಷೆಯೆಂಬ ಬಹಳ ಚೆಲುವೆಯಾದ ಮಗಳಿದ್ದಳು. ಆಕೆಗೆ ಯೌವನವು ಹಬ್ಬಿದ್ದರೂ ಬಾಣನು ಇನ್ನೂ ಮದುವೆ ಮಾಡಿರ ಲಿಲ್ಲ. ಒಂದಾನೊಂದು ದಿನ ರಾತ್ರಿ ಉಷೆಗೆ ಒಂದು ಕನಸು ಬಿದ್ದಿತು. ಆ ಕನಸಿನಲ್ಲಿ ಶ್ಯಾಮಲ ವರ್ಣವುಳ್ಳ ಸುಂದರನಾದ ಪುರುಷನೊಬ್ಬನು ತನ್ನೊಡನೆ ಸರಸವಾಡುತ್ತಿದ್ದಂತೆ ಆಕೆಯು ಕಂಡಳು. ಎಚ್ಚರವಾದ ಮೇಲೆ ಉಷೆಯು ಎಂದಿನಂತಿರದೆ ಚಿಂತೆಯಿಂದ ಕೂಡಿದವಳಾಗಿದ್ದುದನ್ನು ಅವಳ ಸಖಿಯಾದ ಚಿತ್ರಲೇಖೆಯು ಕಂಡು ಉಷೆಯ ಮನಸ್ಸನ್ನು ಅಪ ಹರಿಸಿದವನು ಯಾರಿರಬಹುದೆಂದು ತಿಳಿಯುವುದಕ್ಕಾಗಿ ಆಕಾಲದಲ್ಲಿ ಪ್ರಸಿ ದ್ಧರಾಗಿದ್ದ ರಾಜಪುತ್ರರ ಭಾವಚಿತ್ರಗಳನ್ನು ಉಷೆಗೆ ಬರೆದು ತೋರಿಸಿ ದಳು. ಅವುಗಳಲ್ಲಿ ಶ್ರೀಕೃಷ್ಣನ ಮೊಮ್ಮಗನಾದ ಅನಿರುದ್ಧನ ಭಾವ ಚಿತ್ರವನ್ನು ನೋಡಿ ಉಷೆಯು ಲಜ್ಜೆಯನ್ನು ತೋರ್ಪಡಿಸಲು ಚಿತ್ರ ಲೇಖೆಯು ಉಷೆಯ ಪ್ರಾಣಕಾಂತನು ಅನಿರುದ್ಧನೆಂದರಿತು ತನ್ನ ಯೋಗ ಶಕ್ತಿಯಿಂದ ದ್ವಾರಕೆಯನ್ನು ಸೇರಿ ಅರಮನೆಯಲ್ಲಿ ನಿದ್ರಿಸುತ್ತಿದ್ದ ಅನಿರುದ್ಧನನ್ನು ಅಲುಗದಂತೆ ಅಲ್ಲಿಂದ ಎತ್ತಿಕೊಂಡು ಬಂದು ಉಷೆಯ ಅಂತಃಪುರವನ್ನು ಸೇರಿಸಿದಳು. ಅನಿರುದ್ಧನು ಎಚ್ಚೆತ್ತು ಉಷೆಯ ರೂಪ ಲಾವಣ್ಯಾದಿಗಳನ್ನು ಕಂಡು ಮೋಹಿತನಾಗಲು ಆಕೆಯು ಪರಮಾನಂದ ಭರಿತಳಾಗಿ ಅನಿರುದ್ಧನನ್ನು ಗಾಂಧರ್ವ ವಿಧಿಯಿಂದ ವರಿಸಿದಳು. ಅನಿ

ರುದ್ಧನು ಸುಖದಲ್ಲಿ ಮುಳುಗಿದವನಾಗಿ ಅಂತಃಪುರದಲ್ಲಿಯೇ ಗೋಪ್ಯವಾಗಿದ್ದುಬಿಟ್ಟನು. ಹೀಗೆ ಕೆಲವು ಕಾಲ ಕಳೆದ ನಂತರ ಈ ವೃತ್ತಾಂತವು ಬಾಣಾಸುರನಿಗೆ ತಿಳಿಯಲು ಅವನು ಬಹಳ ಕೋಪಗೊಂಡು ಅನಿರುದ್ಧನನ್ನು ಸೆರೆಯಲ್ಲಿಟ್ಟನು. ಇದರಿಂದ ಉಷೆಯು ಬಹಳ ವ್ಯಸನಪಟ್ಟವಳಾಗಿ ದಿನೇ ದಿನೇ ಕುಂದುತ್ತ ಬಂದಳು.

ಇತ್ತ ದ್ವಾರಕೆಯಲ್ಲಿ ಅನಿರುದ್ಧನು ಎಲ್ಲಿ ಹೋದನೆಂಬುದು ನಾಲ್ಕು ವರುಷಗಳಾದರೂ ತಿಳಿಯದೆ ಹೋದುದರಿಂದ ಯಾದವರು ದುಃಖಪಡುತ್ತಿರಲು ಅಲ್ಲಿಗೆ ನಾರದಮುನಿಯು ಬಂದು, ಅನಿರುದ್ಧನು ಬಾಣಾಸುರನ ಸೆರೆಯಲ್ಲಿರುವುದನ್ನೂ ಅದಕ್ಕೆ ಕಾರಣವನ್ನೂ ತಿಳಿಸಿದನು. ಒಡನೆಯೇ ಕೃಷ್ಣ, ಬಲರಾಮ ಮೊದಲಾದ ಯಾದವರು ಸೈನ್ಯಸಮೇತರಾಗಿ ಹೊರಟು ಶೋಣಿತಪುರವನ್ನು ಸೇರಿ ಬಾಣಾಸುರನೊಡನೆ ಘೋರವಾಗಿ ಯುದ್ಧ ಮಾಡುತ್ತಿರುವಾಗ ಅವನ ರಥಧ್ವಜವು ಮುರಿದುಬಿದ್ದಿತು. ಶ್ರೀಕೃಷ್ಣನು ಬಾಣನ ಭುಜಗಳನ್ನು ತನ್ನ ಚಕ್ರಾಯುಧದಿಂದ ಛೇದಿಸುತ್ತಿರಲು ಈಶ್ವರನು ತನ್ನ ಭಕ್ತನನ್ನು ಸಲಹಬೇಕೆಂದು ಶ್ರೀಕೃಷ್ಣನನ್ನು ಕೇಳಿಕೊಂಡನು. ಆಗ ಶ್ರೀಕೃಷ್ಣನು ತಾನು ಪ್ರಹ್ಲಾದನ ವಂಶಕ್ಕೆ ಹಾನಿ ಬಾರದಂತೆ ಹಿಂದೆ ವರವನ್ನು ಕೊಟ್ಟಿದ್ದುದರಿಂದಲೂ, ಬಾಣನು ತನ್ನ ಭಕ್ತನಾದ ಬಲಿಯ ಮಗನಾದುದರಿಂದಲೂ ಅದಕ್ಕೆ ಸಮ್ಮತಿಸಿ ಬಾಣಾಸುರನ ಸಾವಿರ ತೋಳುಗಳಲ್ಲಿ ನಾಲ್ಕನ್ನು ಮಾತ್ರ ಉಳಿಸಿ ಅವನಿಗೆ ಮುಪ್ಪೂ, ಸಾವೂ ಇಲ್ಲದಂತೆ ವರವನ್ನು ಕೊಟ್ಟನು. ಬಾಣನು ತನ್ನ ಮಗಳನ್ನೂ, ಅನಿರುದ್ಧನನ್ನೂ ರಥದಲ್ಲಿ ಕುಳ್ಳಿರಿಸಿಕೊಂಡು ಬಂದು ಶ್ರೀಕೃಷ್ಣನಿಗೆ ಒಪ್ಪಿಸಿದನು.

---

೨೧. ರಾಹುವಿನ ಶಿರಶ್ಛೇದನ

ಪೂರ್ವದಲ್ಲಿ ದೇವತೆಗಳೂ, ದಾನವರೂ ಅಮೃತವನ್ನು ಪಡೆಯುವುದಕ್ಕಾಗಿ ಸಮುದ್ರವನ್ನು ಕಡೆಯಲು ಧನ್ವಂತರಿಯು ಅಮೃತಕಲಶವನ್ನು ಹೊತ್ತುಕೊಂಡು ಸಮುದ್ರ ಮಧ್ಯದಿಂದ ಎದ್ದುಬಂದನು. ಇದನ್ನು

ನೋಡಿ ಎಲ್ಲರೂ ಬೆರಗಾಗಿ ನಿಂತಿರುವಲ್ಲಿ ಬಲಿಷ್ಠರಾದ ದಾನವರು ಆ ಕಲಶವನ್ನು ಕಸುಗೊಂಡು ಬಚ್ಚಿಟ್ಟರು. ಆಗ ಮಹಾ ವಿಷ್ಣುವು ಮೋಹಿನಿ ವೇಷದಿಂದ ಪ್ರತ್ಯಕ್ಷನಾಗಲು ದೇವ ದಾನವರೆಲ್ಲರೂ ಆ ಹೆಂಗಸಿನ ಬೆಡಗನ್ನೂ, ವಿಲಾಸವನ್ನೂ ನೋಡಿ ಮೋಹಿತರಾಗಿ ನಿಂತರು. ಆಗ ಮೋಹಿನಿಯು ಎಲ್ಲರಿಗೂ ಅಮೃತವನ್ನು ಬಡಿಸುವೆನೆಂದು ಸಮಾಧಾನ ಹೇಳಿ ದಾನವರು ಬಚ್ಚಿಟ್ಟಿದ್ದ ಅಮೃತ ಕಲಶವನ್ನು ಉಪಾಯದಿಂದ ಪಡೆದು ದೇವತೆಗಳೂ, ರಾಕ್ಷಸರೂ ಬೇರೆ ಬೇರೆ ಕುಳಿತುಕೊಳ್ಳುವಂತೆ ನಿಯಮಿಸಿ ದೇವತೆಗಳ ಸಾಲಿಗೆ ಬಡಿಸುವುದಕ್ಕೆ ಮೊದಲು ಮಾಡಿದಳು. ಆಗ ಸಿಂಹಿಕೆಯ ಮಗನಾದ ರಾಹುವು ಸೂರ್ಯ ಚಂದ್ರರ ಮಧ್ಯದಲ್ಲಿ ದೇವತೆಗಳ ವೇಷದಿಂದ ಕುಳಿತಿದ್ದು ಮೋಹಿನಿಯು ಬಡಿಸಿದ ಅಮೃತವನ್ನು ತಟ್ಟನೆ ಕುಡಿದನು. ಕೂಡಲೆ ಸೂರ್ಯ ಚಂದ್ರರು ಕಣ್ಸನ್ನೆಯಿಂದ ಅವನು ರಾಕ್ಷಸನೆಂದು ತಿಳಿಸಲು ಶ್ರೀ ವಿಷ್ಣುವು ಒಡನೆಯೇ ತನ್ನ ಚಕ್ರಾಯುಧದಿಂದ ರಾಹುವಿನ ತಲೆಯನ್ನು ಕತ್ತರಿಸಿ ಹಾಕಿದನು. ಆ ದೈತ್ಯನ ಮುಂಡವನ್ನು ಅಮೃತವು ಇನ್ನೂ ಹೊಕ್ಕಿರಲಿಲ್ಲವಾದುದರಿಂದ ಅದು ನಿರ್ಜೀವವಾಯಿತು; ರುಂಡವು ಮಾತ್ರ ಅಮರತ್ವವನ್ನು ಪಡೆಯಿತು. ಹೀಗೆ ಮುಪ್ಪು ಸಾವುಗಳಿಲ್ಲದ ಆ ತಲೆಯನ್ನು ಭಗವಂತನು ಸೂರ್ಯಾದಿ ಗ್ರಹ ಗಣದಲ್ಲಿ ಸೇರಿಸಿದನು. ರಾಹುವು ಈಗಲೂ ಪೂರ್ವ ವೈರದಿಂದ ಪರ್ವಕಾಲಗಳಲ್ಲಿ ಸೂರ್ಯ ಚಂದ್ರರನ್ನು ಬಾಧಿಸುತ್ತಿರುವನು.

---

೨೨. ಸುಂದರ ನಂಬಿಯ ಕಥೆ

ಕೈಲಾಸ ಪರ್ವತದಲ್ಲಿ ಪರಮೇಶ್ವರನ ಕಿಂಕರನಾಗಿದ್ದ ಸುಂದರನು ಒಂದಾನೊಂದು ದಿನ ಶಿವನ ಪೂಜೆಗಾಗಿ ಹೂವನ್ನು ತರಲು ಉದ್ಯಾನವನಕ್ಕೆ ಹೋದನು. ಅಲ್ಲಿಗೆ ಇದಕ್ಕೆ ಮುಂಚೆಯೇ ಅನಿಂದಿತೆ, ಕಮಲಿನಿ ಎಂಬ ಪಾರ್ವತೀದೇವಿಯ ಚೇಟಿಯರಿಬ್ಬರು ಬಂದು ಹೂವನ್ನು ಬಿಡಿಸುತ್ತಿದ್ದರು. ಈ ಯುವತಿಯರನ್ನು ನೋಡಿ ಸುಂದರನು ಮೋಹಗೊಂಡನು.

ಆ ಬಾಲೆಯರೂ ಸುಂದರನನ್ನು ನೋಡಿ ಮನಸೋತರು. ಆದರೆ ಮೂವರೂ ತಂತಮ್ಮ ಮನೋವಿಕಾರಗಳನ್ನು ಅಡಗಿಸಿಕೊಂಡು ಹೊರಟು ಹೋದರು. ಸಕಲ ಜೀವಿಗಳ ಮನಸ್ಸನ್ನೂ ಅರಿತ ಪರಮೇಶ್ವರನು ಇವರನ್ನು ಕುರಿತು "ನೀವು ಪರಸ್ಪರ ಮೋಹಕ್ಕೊಳಗಾಗಿರುವುದರಿಂದ ಭೂಲೋಕದಲ್ಲಿ ಹುಟ್ಟಿ ದಾಂಪತ್ಯವನ್ನು ವಹಿಸಿ ಸುಖವಾಗಿ ಬಾಳಿರಿ" ಎಂದು ಅಪ್ಪಣೆಯಿತ್ತನು. ಇದನ್ನು ಕೇಳಿ ಸುಂದರನು ಈಶ್ವರನ ಸೇವೆಯನ್ನು ಬಿಟ್ಟು ಹೋಗುವಂತಾಯಿತಲ್ಲಾ ಎಂದು ಬಹಳ ವ್ಯಥೆಪಟ್ಟು ಈಶ್ವರನ ಶರಣುಹೊಕ್ಕು ತನ್ನನ್ನು ಭೂಲೋಕದಲ್ಲಿಯೂ ಈಶ್ವರನ ಸೇವೆಯನ್ನು ಬಿಟ್ಟು ನಡೆಯದಂತೆ ಅನುಗ್ರಹಿಸಬೇಕೆಂದು ಕೇಳಿಕೊಳ್ಳಲು ಪರಮೇಶ್ವರನು ಹಾಗೆಯೇ ಆಗಲೆಂದು ವರವಿತ್ತನು.

ಕಾಲಕ್ರಮದಲ್ಲಿ ಸುಂದರನು ದಕ್ಷಿಣ ದೇಶದ ತಿರುನಾವಲೂರೆಂಬ ಪುಣ್ಯಕ್ಷೇತ್ರದಲ್ಲಿ ಪರಿಶುದ್ಧವಾದ ಶಿವದ್ವಿಜ ವಂಶದಲ್ಲಿ ಹುಟ್ಟಿ ನಂಬಿಯೆಂಬ ಹೆಸರನ್ನು ಪಡೆದು ಅಸಾಧಾರಣ ತೇಜಸ್ವಿಯಾದುದರಿಂದ ಆ ದೇಶದ ರಾಜನ ದೃಷ್ಟಿಗೆ ಬಿದ್ದನು. ಆ ರಾಜನಿಗೆ ಮಕ್ಕಳಿಲ್ಲದಿರಲು ಅತನು ನಂಬಿಯ ತಂದೆ ತಾಯಿಗಳನ್ನು ಬೇಡಿ ನಂಬಿಯನ್ನು ಪಡೆದು ಬ್ರಾಹ್ಮಣ ಕರ್ಮಕ್ಕೆ ಲೋಪ ಬಾರದ ಹಾಗೆ ಅವನನ್ನು ತನ್ನ ಮಗನಂತೆ ಸಲಹುತ್ತಿದ್ದನು. ನಂಬಿಗೆ ಯೌವನವು ಬರಲು ರಾಜನು ಸತ್ಕುಲದಲ್ಲಿ ಹುಟ್ಟಿದ ಸದಾಚಾರ ಸಂಪನ್ನನಾದ ಒಬ್ಬ ಬ್ರಾಹ್ಮಣನ ಮಗಳನ್ನು ಹುಡುಕಿಸಿ ಆಕೆಯನ್ನು ನಂಬಿಗೆ ಮದುವೆ ಮಾಡಬೇಕೆಂದು ನಿಶ್ಚಯಿಸಿ ಎಲ್ಲವನ್ನೂ ಸಿದ್ಧಗೊಳಿಸಿದನು.

ಇಷ್ಟರಲ್ಲಿ ಭಕ್ತಾಧೀನನಾದ ಶಿವನು ಇದನ್ನರಿತು ಸುಂದರನು ಸಂಸಾರದ ತೊಡಕಿನಲ್ಲಿ ಸೇರದಂತೆ ಮಾಡುವುದಕ್ಕಾಗಿ ತಾನು ಒಬ್ಬ ಮುದಿಬ್ರಾಹ್ಮಣನ ವೇಷವನ್ನು ಹಾಕಿಕೊಂಡು ಮದುವೆಯ ಚಪ್ಪರಕ್ಕೆ ತಡವರಿಸುತ್ತ ಬಂದು ಅಲ್ಲಿದ್ದ ಪದಾರ್ಥಗಳನ್ನೆಲ್ಲ ಎಡವಿ ಕೆಡವುತ್ತ ಅಶುಭ ಚಿಹ್ನೆಗಳನ್ನು ತೋರಿಸಲು ಅಲ್ಲಿದ್ದವರು ನೀನಾರೆಂದು ಕೇಳಿದರು. ಅದಕ್ಕೆ ಆ ಬ್ರಾಹ್ಮಣನು ಸುಂದರನನ್ನು ಕುರಿತು "ನೀನು ನನಗೆ ಸೇವಕನೆಂದು ನಿನ್ನ ತಾತನು ಬರೆದುಕೊಟ್ಟ ಪತ್ರವು ನನ್ನ ಬಳಿಯಲ್ಲಿರುವುದು.

ಆದುದರಿಂದ ನನ್ನ ಸೇವೆಯನ್ನು ಮಾಡಲು ಬಾ" ಎಂದು ಹೇಳಲು, ಎಲ್ಲರೂ ಇವನು ಹುಚ್ಚನೆಂದು ತಿಳಿದು ಅಲ್ಲಿಂದ ಹೊರಡಿಸಲು ಪ್ರಯತ್ನ ಮಾಡಿದರು. ಆದರೆ ಅದು ಸಾಧ್ಯವಾಗದೆ ಹೋದುದರಿಂದ ಪತ್ರವನ್ನು ತೋರಿಸೆಂದು ನಂಬಿ ಮೊದಲಾಗಿ ಎಲ್ಲರೂ ಆ ಮುದುಕನನ್ನು ಕೇಳಲು ಹಾಗೆಯೇ ಮಾಡುವೆನೆಂದು ಹೇಳಿ ಆತನು ಅವರೆಲ್ಲರನ್ನೂ ನಂಬಿಯು ಹುಟ್ಟಿದ ಊರಿಗೆ ಕರೆದುಕೊಂಡು ಹೋಗಿ ಅಲ್ಲಿಯ ಮುದುಕರ ಕೈಗೆ ಪತ್ರವನ್ನು ಕೊಡಲು ಎಲ್ಲರೂ ಅದನ್ನು ನೋಡಿ ನಿಜವೆಂದು ಹೇಳಿ ಆಶ್ಚರ್ಯಪಟ್ಟರು. ಆಗ ನಂಬಿಯು ಸೇವೆಗೆ ಒಪ್ಪಿಕೊಂಡು ನಿನ್ನ ಮನೆಯನ್ನು ತೋರಿಸೆಂದು ಮುದುಕನನ್ನು ಕೇಳಲು, ಆತನು ಅಲ್ಲಿದ್ದವರೆಲ್ಲರನ್ನೂ ಹಿಂದಿಟ್ಟುಕೊಂಡು ಹೊರಟು ಅಲ್ಲಿಯ ಶಿವಾಲಯದವರೆಗೆ ಹೋಗಿ ಒಳಹೊಕ್ಕು ಮಾಯವಾದನು. ಇದನ್ನು ಕಂಡು ನಂಬಿಯು ನಿಶ್ಚಯಾಂಶವನ್ನರಿತು ದೇವಾಲಯವನ್ನು ಹೊಕ್ಕು ಪರಮೇಶ್ವರನನ್ನು ಕೇವಲ ಭಕ್ತಿಯಿಂದ ಸ್ತುತಿಸಲು ಪರಶಿವನು ಧರ್ಮಸ್ವರೂಪವಾದ ವೃಷಭವನ್ನೇರಿ ನಂಬಿಗೆ ಪ್ರತ್ಯಕ್ಷನಾಗಿ ಆತನನ್ನು ಸಂತೋಷಗೊಳಿಸಿದನು. ತರುವಾಯ ನಂಬಿಯು ದಕ್ಷಿಣ ದೇಶದಲ್ಲಿರುವ ಅನೇಕ ಶಿವಕ್ಷೇತ್ರಗಳಿಗೆ ಹೋಗಿ ಕೈಂಕರ್ಯ ಮಾಡಿ ಶಿವನನ್ನು ಮೆಚ್ಚಿಸಿ ಅಶರೀರವಾಣಿಯು ನುಡಿದಂತೆ ತಿರುವಾಲೂರಿನಲ್ಲಿಯ ವಲ್ಮೀಕನಾಥನ ಸನ್ನಿಧಿಗೆ ಬಂದು ಸೇರಿದನು.

ಹಿಂದೆ ಕೈಲಾಸದಲ್ಲಿ ಪಾರ್ವತಿಯ ಪರಿಚಾರಿಕೆಯಾಗಿದ್ದು ಈಶ್ವರನ ಶಾಪದಿಂದ ಭೂಲೋಕಕ್ಕೆ ಬಂದ ಕಮಲಿನಿಯು ಪರವೆಯೆಂಬ ಹೆಸರಿನಿಂದ ತಿರುವಾಲೂರಿನಲ್ಲಿ ದೇವದಾಸಿಯರ ಕುಲದಲ್ಲಿ ಹುಟ್ಟಿದಳು. ನಂಬಿಯು ಆವೂರಿಗೆ ಬಂದಾಗ ಆಕೆಗೆ ಒಳ್ಳೆಯ ಯೌವನ; ಈಶ್ವರನಲ್ಲಿ ಅಸಾಧಾರಣವಾದ ಭಕ್ತಿ. ಒಂದು ದಿನ ಆಕೆಯೂ, ಸುಂದರಮೂರ್ತಿಯೂ ವಲ್ಮೀಕನಾಥನ ಸನ್ನಿಧಿಯಲ್ಲಿ ಒಬ್ಬರನ್ನೊಬ್ಬರು ಕಂಡು ಮೋಹಗೊಂಡರು. ಇದನ್ನರಿತು ಅಲ್ಲಿಯ ಶಿವಭಕ್ತರು ಶಿವನ ಪ್ರೇರಣೆಯಿಂದ ಅವರಿಬ್ಬರಿಗೂ ವಿಧ್ಯುಕ್ತವಾಗಿ ಮದುವೆ ಮಾಡಿದರು. ಸುಂದರನೂ, ಪರವೆಯೂ ಅನ್ಯೋನ್ಯ ಪ್ರೀತಿಯಿಂದ ಬಹುಕಾಲ ಅನೇಕ ಸೌಖ್ಯ

ಗಳನ್ನನುಭವಿಸುತ್ತಿದ್ದರೂ ಈಶ್ವರನನ್ನು ಮರೆಯದೆ ಸರ್ವದಾ ಅವನ ಧ್ಯಾನದಿಂದಲೂ, ದರ್ಶನದಿಂದಲೂ ತೃಪ್ತಿಹೊಂದುತ್ತಿದ್ದರು.

ಪಾರ್ವತಿಯ ಮತ್ತೊಬ್ಬ ಪರಿಚಾರಿಕೆಯಾಗಿದ್ದು ಸುಂದರನ ದೆಸೆಯಿಂದ ಈಶ್ವರನ ಶಾಪವನ್ನು ಪಡೆದಿದ್ದ ಅನಿಂದಿತೆಯು ನಾಯಿರು ಗ್ರಾಮದಲ್ಲಿ ಶೃಂಖಲೆಯೆಂಬ ಹೆಸರಿನಿಂದ ಹುಟ್ಟಿ ಕೇವಲ ಶಿವಭಕ್ತಳಾಗಿ ಮೆರೆಯುತ್ತಿದ್ದಳು. ಆಕೆಗೆ ತಂದೆ ತಾಯಿಗಳು ತಕ್ಕ ವರನನ್ನು ಹುಡುಕುವ ಆಲೋಚನೆಯಲ್ಲಿರಲು ಶೃಂಖಲೆಯು ತಾನು ಶಿವಭಕ್ತನನ್ನಲ್ಲದೆ ಮತ್ತಾರನ್ನೂ ವರಿಸೆನೆಂದು ಸಂಕಲ್ಪ ಮಾಡಿರುವುದಾಗಿ ಹೇಳಿ ತನ್ನನ್ನು ತಿರುವತ್ತಿಯೂರಲ್ಲಿರುವ ಶಿವಸನ್ನಿಧಿಗೆ ಕಳುಹಿಸಬೇಕೆಂದು ಪಟ್ಟು ಹಿಡಿದಳು. ಯತ್ನವಿಲ್ಲದೆ ಅವರು ಅದೇ ಮೇರೆಗೆ ಮಾಡಲು ಶೃಂಖಲೆಯು ತಿರುವತ್ತಿಯೂರಿನಲ್ಲಿ ಶಿವ ಸೇವೆಯನ್ನು ಮಾಡುತ್ತ ನಿಂತುಬಿಟ್ಟಳು.

ಹೀಗಿರುವಲ್ಲಿ ಸುಂದರನು ಅನೇಕ ಶಿವಕ್ಷೇತ್ರಗಳನ್ನು ದರುಶನ ಮಾಡಿಕೊಂಡು ಒಂದು ತಿರುವತ್ತಿಯೂರನ್ನು ಸೇರಿದನು; ಅಲ್ಲಿ ಒಂದು ದಿನ ಸ್ವಾಮಿಯ ಸನ್ನಿಧಿಯಲ್ಲಿ ಶೃಂಖಲೆಯನ್ನು ಕಂಡು ಮೋಹಪರವಶನಾಗಿ ಆಕೆಯನ್ನು ತನಗೆ ಕೊಡಿಸಬೇಕೆಂದು ಶಿವನನ್ನು ಬೇಡಿದನು. ಭಕ್ತಪರಾಧೀನನಾದ ಶಿವನು ಸುಂದರನ ಇಷ್ಟಾರ್ಥವನ್ನು ನಡೆಯಿಸುವೆನೆಂದು ಹೇಳಿ ಶೃಂಖಲೆಗೆ ಸ್ವಪ್ನದಲ್ಲಿ ಪ್ರತ್ಯಕ್ಷನಾಗಿ ಸುಂದರನನ್ನು ಮದುವೆಯಾಗುವಂತೆ ಪ್ರೇರಿಸಿದನು. ಆಕೆಯು ಸುಂದರನಿಗೆ ಮತ್ತೊಬ್ಬ ಹೆಂಡತಿಯಿರುವುದನ್ನರಿತು ಹೇಗೆ ಮಾಡಲೆಂದು ಸ್ವಾಮಿಯನ್ನು ಪ್ರಾರ್ಥಿಸಲು ತನ್ನನ್ನು ಅಗಲುವುದಿಲ್ಲವೆಂದು ಸುಂದರನಿಂದ ಪ್ರತಿಜ್ಞೆಯನ್ನು ಪಡೆಯುವಂತೆ ಶೃಂಖಲೆಯನ್ನು ಪ್ರೇರೇಪಿಸಿದನು. ಈ ಪ್ರತಿಜ್ಞೆಯನ್ನು ಮಾಡಿ ಸುಂದರನು ಶೃಂಖಲೆಯನ್ನು ಮದುವೆಯಾಗಿ ಸುಖದಿಂದಿದ್ದನು.

ಹೀಗೆ ಕೆಲವು ಕಾಲ ಕಳೆದಮೇಲೆ ವಲ್ಮೀಕನಾಥನ ವಸಂತೋತ್ಸವ ಸಮಯವು ಸಮೀಪಿಸಲು ತಿರುವಾಲೂರಿಗೆ ಹೋಗಿ ಸ್ವಾಮಿಯ ಸೇವೆಯನ್ನು ಮಾಡಬೇಕೆಂಬ ಕುತೂಹಲ ಹುಟ್ಟಿ ಸುಂದರನು ಶೃಂಖಲೆಗೆ ಕೊಟ್ಟಿದ್ದ ವಾಗ್ದಾನವನ್ನು ಮೀರಿ ತಿರುವತ್ತಿಯೂರನ್ನು ಬಿಟ್ಟು ಪ್ರಯಾಣ ಮಾಡಿದನು. ಶಪಥವನು ಮೀರಿದ ಕಾರಣ್ನ ಸುಂದರನ

ಕಣ್ಣುಗಳು ಕಾಣದೆ ಹೋದುವು. ಆದರೂ ಆತನು ವಲ್ಮೀಕನಾಥನನ್ನು ಸೇರಬೇಕೆಂಬ ಹಟದಿಂದ ಹಿಂದಿರುಗದೆ ಶಿವಸ್ತುತಿಗೈಯುತ್ತ ಇತರರ ಸಹಾಯದಿಂದ ಹೊರಟು ದಾರಿಯಲ್ಲಿದ್ದ ಶಿವಕ್ಷೇತ್ರಗಳಲ್ಲೆಲ್ಲ ಕೈಂಕರ್ಯ ಮಾಡುತ್ತ ಕೊನೆಗೆ ತಿರುವಾಲೂರನ್ನು ಸೇರಿ ಸ್ವಾಮಿಯನ್ನು ಅತಿಶಯ ಭಕ್ತಿಯಿಂದ ಮೊರೆಹೊಗಲು ಕಣ್ಣುಗಳು ಮರಳಿ ಬಂದುವು.

ಸುಂದರನು ಶೃಂಖಲೆಯನ್ನು ಮದುವೆಯಾದ ಸಮಾಚಾರವು ಪರವೆಗೆ ತಿಳಿಯಲು ಆಕೆಯು ಕೇವಲ ದುಃಖದಿಂದಲೂ, ಸಿಟ್ಟಿನಿಂದಲೂ ಕೂಡಿದವಳಾದಳು. ಇದನ್ನರಿತು ಸುಂದರನು ಆಕೆಯನ್ನು ಹೇಗಾದರೂ ಸಮಾಧಾನಪಡಿಸಿ ತನ್ನನ್ನು ಸೇರುವಂತೆ ಮಾಡಬೇಕೆಂದು ಚತುರರಾದ ಲೌಕಿಕರು ಕೆಲವರನ್ನು ಪರವೆಯ ಬಳಿಗೆ ಕಳುಹಿಸಿದನು. ಆದರೆ ಯಾವ ಉಪಾಯವೂ ಅನುಕೂಲಿಸದೆ ಹೋಯಿತು. ಇಷ್ಟೇ ಅಲ್ಲ; ಸುಂದರನು ತನ್ನ ಬಳಿಗೆ ಬಂದಲ್ಲಿ ತಾನು ಪ್ರಾಣವನ್ನು ಕಳೆದುಕೊಳ್ಳುವೆನೆಂದು ಪರವೆಯು ಪ್ರತಿಜ್ಞೆ ಮಾಡಿದಳು. ಇದನ್ನು ಕೇಳಿ ಸುಂದರನು ಬಹಳ ವ್ಯಸನದಿಂದ ಕೂಡಿ ಈಶ್ವರನನ್ನು ಕೇವಲ ಭಕ್ತಿಯಿಂದ ಧ್ಯಾನಮಾಡಿದನು. ಕೂಡಲೆ ಶಿವನು ಪ್ರತ್ಯಕ್ಷನಾಗಿ ಸುಂದರನ ಇಷ್ಟಾರ್ಥವನ್ನು ನೆರವೇರಿಸುವೆನೆಂದು ಹೇಳಿ ಪರವೆಯ ಮನೆಗೆ ದೂತನ ವೇಷದಿಂದ ಹೋಗಿ ಆಕೆಯ ಕೋಪವನ್ನು ಶಮನಮಾಡಲಾರದೆ ನಿಜರೂಪವನ್ನು ತೋರಿಸಲು ಆಕೆಯು ಭಕ್ತ್ಯತಿಶಯದಿಂದ ನೈಮರೆತು ಶಿವನನ್ನು ಸ್ತುತಿಸಿ ಶಿವನ ಪ್ರೀತಿಗೆ ಪಾತ್ರನಾದ ಸುಂದರನನ್ನು ಭಕ್ತಿ ವಿಶ್ವಾಸಗಳಿಂದ ಆದರಿಸಿದಳು. ತರುವಾಯ ದಂಪತಿಗಳಿಬ್ಬರೂ ಶಿವಧ್ಯಾನ ತತ್ಪರರಾಗಿ ಸುಖದಿಂದಿದ್ದರು. ಕಡೆಗೆ ಶಾಪಮುಕ್ತರಾದ ಮೂವರೂ ಕೈಲಾಸವನ್ನು ಸೇರಿ ಅವರವರ ಹಿಂದಣ ಕಾರ್ಯಗಳಲ್ಲಿ ನಿಂತರು.

---

೨೩. ಅದ್ಭುತವಾದ ನೇರಿಲ ಹಣ್ಣಿನ ಕಥೆ

ಪೂರ್ವದಲ್ಲಿ ಪಂಚಪಾಂಡವರು ದ್ರೌಪದಿಯೊಡನೆ ಕೆಲವು ಕಾಲ ಅಡವಿಯಲ್ಲಿ ವಾಸಮಾಡಿಕೊಂಡಿದ್ದರು. ಆಗ ಒಂದಾನೊಂದು ದಿನ

ಭೀಮಸೇನನು ಬೇಟೆಯಾಡುವುದಕ್ಕೆ ಹೋಗಿ ಹಿಂದಿರುಗಿ ಬರುವ ದಾರಿಯಲ್ಲಿ ಕಣ್ವಮುನಿಯ ಆಶ್ರಮವನ್ನು ಕಂಡನು. ಅದರಲ್ಲಿದ್ದ ಒಂದು ನೇರಿಲ ಮರದಲ್ಲಿ ಅದ್ಭುತವಾದ ಒಂದೇ ಒಂದು ಹಣ್ಣು ಬಿಟ್ಟಿದ್ದಿತು. ಭೀಮನು ಆ ಹಣ್ಣನ್ನು ಕೊಯ್ದು ತಂದು ಅಣ್ಣನಾದ ಧರ್ಮರಾಯನಿಗೆ ಒಪ್ಪಿಸಲು, ಆತನು ಈ ಆಶ್ಚರ್ಯಕರವಾದ ಹಣ್ಣನ್ನು ಎಲ್ಲರಿಗೂ ತೋರಿಸಿದನು. ಅದನ್ನು ನೋಡಿ ದಿವ್ಯಜ್ಞಾನಿಯಾದ ಸಹದೇವನು "ಅಣ್ಣಾ! ಈ ಹಣ್ಣು ಕಣ್ವಮುನಿಯ ಆಶ್ರಮದೊಳಗಿನದು; ವರುಷಕ್ಕೆ ಬಿಡುವ ಈ ಒಂದೇ ಹಣ್ಣನ್ನು ಆ ಋಷಿಯು ತಿಂದು ತಪಸ್ಸು ಮಾಡುತ್ತಿರುವನು; ಈಗ ಆತನು ಕಣ್ದೆರೆದು ನೋಡಿ ಹಣ್ಣನ್ನು ಕಾಣದಿದ್ದರೆ ಅದನ್ನು ಕೊಯ್ದವರಿಗೆ ಶಾಪವನ್ನು ಕೊಡುವನು; ಆದುದರಿಂದ ಈ ಹಣ್ಣನ್ನು ಮತ್ತೆ ಅದರ ತೊಟ್ಟಿಗೆ ಸೇರಿಸದಿದ್ದರೆ ನಮಗೆ ಕ್ಷೇಮವಾಗಲಾರದು" ಎಂದು ಎಚ್ಚರಿಸಿದನು. ಧರ್ಮರಾಯನು ಆ ಮಾತುಗಳಿಗೊಪ್ಪಿ ಎಲ್ಲರನ್ನೂ ಕರೆದುಕೊಂಡು ಹಣ್ಣನ್ನು ಸಂಗಡ ತೆಗೆದುಕೊಂಡು ಆ ಮರದ ಬಳಿಗೆ ಹೋಗಿ ಹಣ್ಣನ್ನು ಕೊಂಬೆಗೆ ಹತ್ತಿಸುವುದಕ್ಕೆ ಏನು ಮಾಡಬೇಕೆಂದು ಚಿಂತಿಸುತ್ತಿದ್ದನು.

ಆಗ ಪಾಂಡವರ ಪುರೋಹಿತನಾದ ಧೌಮ್ಯಮುನಿಯು ಬಂದು "ಅಯ್ಯಾ ಧರ್ಮರಾಯನೆ! ಇಂತಹ ಕಷ್ಟಗಳಲ್ಲಿ ನಿಮ್ಮನ್ನು ಕಾಪಾಡತಕ್ಕವನು ಶ್ರೀಕೃಷ್ಣನಲ್ಲದೆ ಮತ್ತಾರೂ ಇಲ್ಲ; ಆದುದರಿಂದ ಆತನನ್ನು ಧ್ಯಾನಿಸು" ಎಂದು ಹೇಳಲು ಧರ್ಮರಾಯನು ಹಾಗೆಯೇ ಮಾಡಿದನು. ಕೂಡಲೆ ಶ್ರೀಕೃಷ್ಣನು ಪ್ರತ್ಯಕ್ಷನಾಗಿ ನಡೆದ ಸಮಾಚಾರವನ್ನೆಲ್ಲ ತಿಳಿದು ಆ ಹಣ್ಣನ್ನು ನೆಲದಮೇಲೆ ತೊಟ್ಟಿನ ಕೆಳಗೆ ಸರಿಯಾಗಿಟ್ಟು ಧರ್ಮರಾಯ ಮೊದಲಾದವರನ್ನು ಕುರಿತು "ನಿಮ್ಮ ನಿಮ್ಮ ಮನಸ್ಸಿನ ನಿಶ್ಚಯವನ್ನು ಮರೆಮಾಚದೆ ಹೇಳಿರಿ; ಹಾಗೆ ಹೇಳಿದರೆ ಈ ಹಣ್ಣು ತಾನಾಗಿಯೇ ಮೇಲಕ್ಕೇರುವುದು" ಎಂದನು. ಪಾಂಡವರೈವರೂ ತಂತಮ್ಮ ಮನಸ್ಸಿನಲ್ಲಿದ್ದುದನ್ನು ಸರಿಯಾಗಿ ತಿಳುಹಿಸಲು ಆ ಹಣ್ಣು ಒಂದೊಂದು ಮೊಳದ ಮೇರೆಗೆ ಮೇಲಕ್ಕೇರಿತು. ದ್ರೌಪದಿಯೂ ತನ್ನ ಮನಸ್ಸಿನಲ್ಲಿದ್ದುದನ್ನು ಸರಿಯಾಗಿ ಹೇಳಿದಮೇಲೆ ಆ ಹಣ್ಣು ಕೊಂಬೆಗೆ

ಹತ್ತಿಕೊಂಡಿತು. ಇದನ್ನು ನೋಡಿ ಅಲ್ಲಿದ್ದವರೆಲ್ಲರೂ ಬಹಳ ಆಶ್ಚರ್ಯ ಪಟ್ಟರು.

ತಪಸ್ಸು ಮಾಡುತ್ತಿದ್ದ ಕಣ್ವರು ಕಣ್ದೆರೆದು ನಡೆದ ಸಮಾಚಾರ ವನ್ನೆಲ್ಲ ತಮ್ಮ ಜ್ಞಾನದೃಷ್ಟಿಯಿಂದ ತಿಳಿದು ಶ್ರೀ ಕೃಷ್ಣನೂ, ಪಾಂಡ ವರೂ ಇದ್ದ ಸ್ಥಳಕ್ಕೆ ಆ ಹಣ್ಣನ್ನು ತೆಗೆದುಕೊಂಡು ಬಂದು ಅದನ್ನು ಶ್ರೀಕೃಷ್ಣನಿಗೆ ಒಪ್ಪಿಸಿದರು. ಆ ಹಣ್ಣನ್ನು ಸ್ವಾಮಿಯು ಅಂಗೀಕರಿಸಿ ಅದನ್ನು ಕಣ್ವಮುನಿ ಮೊದಲಾಗಿ ಅಲ್ಲಿದ್ದವರೆಲ್ಲರಿಗೂ ಹಂಚುವಂತೆ ಧರ್ಮರಾಯನಿಗೆ ಅಪ್ಪಣೆ ಮಾಡಲು ಆತನು ಅದೇ ಮೇರೆಗೆ ಹಂಚಿದನು. ಎಲ್ಲರೂ ಹಣ್ಣನ್ನು ತಿಂದು ತೃಪ್ತರಾಗಿ ಶ್ರೀಕೃಷ್ಣನನ್ನು ಸ್ತುತಿಸುತ್ತ ತಂತಮ್ಮ ಸ್ಥಳಗಳಿಗೆ ತೆರಳಿದರು.

---

೨೪. ಶಿಬಿ ಚಕ್ರವರ್ತಿಯ ಕಥೆ

ಯಮುನಾನದಿಗೆ ಸಮೀಪದಲ್ಲಿರುವ ಒಂದಾನೊಂದು ಪುಣ್ಯಕ್ಷೇತ್ರ ದಲ್ಲಿ ಶಿಬಿ ಚಕ್ರವರ್ತಿಯು ಯಾಗ ಮಾಡುತ್ತಿದ್ದನು. ಆತನು ಸತ್ಯ ಸಂಧನೆಂದೂ, ಶರಣಾಗತರಕ್ಷಕನೆಂದೂ ಹೆಸರು ಪಡೆದಿದ್ದನು. ಆತ ನನ್ನು ಪರೀಕ್ಷಿಸುವುದಕ್ಕಾಗಿ ಇಂದ್ರನು ಗಿಡಗನ ರೂಪವನ್ನೂ, ಅಗ್ನಿಯು ಪಾರಿವಾಳದ ರೂಪವನ್ನೂ ಧರಿಸಿ ಅಲ್ಲಿಗೆ ಬಂದರು. ಗಿಡಗನು ಪಾರಿ ವಾಳವನ್ನು ತಿನ್ನುವುದಕ್ಕಾಗಿ ಅಟ್ಟಿಕೊಂಡು ಬರುತ್ತಿರಲು ಪಾರಿವಾಳವು ಭಯಪಟ್ಟು ತನ್ನ ಪ್ರಾಣವನ್ನು ಉಳಿಸಿಕೊಳ್ಳುವುದಕ್ಕಾಗಿ ಶಿಬಿ ಚಕ್ರ ವರ್ತಿಯ ಮರೆ ಹೊಕ್ಕಿತು. ಆತನು ಅದನ್ನು ಸಲಹುವುದಾಗಿ ಅಭಯ ಕೊಡುತ್ತಿರುವಷ್ಟರಲ್ಲಿ ಗಿಡಗವೂ ಅಲ್ಲಿಗೆ ಬಂದು "ಎಲೈ ಧರ್ಮಿಷ್ಠನಾದ ದೊರೆಯೇ ! ನನಗೆ ಬಹಳ ಹಸಿವಾಗಿರುವುದು ; ನನ್ನ ಆಹಾರವಾದ ಈ ಪಾರಿವಾಳವನ್ನು ಬಿಟ್ಟುಕೊಡು ; ಇಲ್ಲದಿದ್ದರೆ ನನ್ನ ಪ್ರಾಣವು ಉಳಿ ಯದು ; ಯಾವ ಧರ್ಮವು ಮತ್ತೊಂದು ಧರ್ಮಕ್ಕೆ ಬಾಧಕವಾಗುವುದೋ ಅದು ಕುತ್ಸಿತವಾದದ್ದು ; ಪರಸ್ಪರವಾಗಿ ವಿರೋಧವಿಲ್ಲದಂತೆ ಆಚರಿಸಿದ

ಧರ್ಮಗಳೇ ಸದ್ಧರ್ಮಗಳೆನಿಸಿಕೊಳ್ಳುವುವು" ಎಂದು ಮೊದಲಾಗಿ ಹೇಳಿತು.

ಇದನ್ನು ಕೇಳಿ ಶಿಬಿಚಕ್ರವರ್ತಿಯು ಆ ಪಾರಿವಾಳವಲ್ಲದೆ ಮತ್ತಾವ ಪ್ರಾಣಿಯ ಮಾಂಸವನ್ನಾದರೂ ಕೊಡಿಸುವೆನೆಂದು ಗಿಡಗಕ್ಕೆ ಹೇಳಲು ಆ ಪಕ್ಷಿಯು "ನಮ್ಮ ಜಾತಿಗೆ ದೈವನಿಯಾಮಕವಾದ ಆಹಾರವು ಪಾರಿವಾಳ; ಅದನ್ನು ಬಿಟ್ಟು ಮತ್ತೆ ಯಾವುದೂ ನನಗೆ ಬೇಡ; ನೀನು ಹಟ ಹಿಡಿಯುವುದಾದರೆ ನಿನ್ನ ಶರೀರದಿಂದ ಆ ಪಾರಿವಾಳದ ತೂಕದಷ್ಟು ಮಾಂಸವನ್ನು ಕೊಯ್ದುಕೊಡು" ಎಂದು ಹೇಳಿತು. ಇದಕ್ಕೆ ದೊರೆಯು ಬಹಳ ಸಂತೋಷದಿಂದ ಒಪ್ಪಿಕೊಂಡು ತಕ್ಕಡಿಯ ಒಂದು ಕಡೆಯಲ್ಲಿ ಪಾರಿವಾಳವನ್ನಿಟ್ಟು ಮತ್ತೊಂದು ಕಡೆಯಲ್ಲಿ ತನ್ನ ಶರೀರದಿಂದ ಕೊಯ್ದು ತೆಗೆದ ಮಾಂಸವನ್ನು ಹಾಕುತ್ತ ಬಂದನು. ಎಷ್ಟು ಮಾಂಸವನ್ನು ಹಾಕಿದರೂ ಪಾರಿವಾಳದ ತೂಕಕ್ಕೆ ಸಮವಾಗದೆ ಹೋದುದರಿಂದ ತಾನೇ ತಕ್ಕಡಿಯಲ್ಲಿ ಕುಳಿತುಕೊಳ್ಳಲು ತೂಕವು ಸರಿಹೋಯಿತು.

ಆಗ ಇಂದ್ರಾಗ್ನಿಗಳು ತಮ್ಮ ನಿಜರೂಪವನ್ನು ತೋರಿ ಎದುರಿಗೆ ನಿಂತು ಎಲೈ ದೊರೆಯೇ ! ನಾವಿಬ್ಬರೂ ಇಂದ್ರಾಗ್ನಿಗಳು; ನಿನ್ನ ಸತ್ಯವನ್ನು ಪರೀಕ್ಷಿಸುವುದಕ್ಕಾಗಿ ಪಕ್ಷಿಗಳಾಗಿ ಬಂದೆವು; ಮರೆಹೊಕ್ಕವರನ್ನು ಬಿಡದೆ ಸಲಹುವ ನಿನ್ನ ಧರ್ಮವನ್ನು ಕಂಡು ನಾವು ಬಹಳ ಸಂತೋಷಪಟ್ಟೆವು; ನಿನ್ನ ಕೀರ್ತಿಯು ಆಚಂದ್ರಾರ್ಕವಾಗಿ ಸಕಲ ಲೋಕಗಳಲ್ಲಿಯೂ ಹರಡುವುದು; ನಿನಗೆ ಶಾಶ್ವತವಾದ ಸ್ವರ್ಗಸುಖವು ಲಭಿಸುವುದು" ಎಂದು ಹೇಳಿ ಹೊರಟುಹೋದರು.

---

೨೫. ಸಿರಿಯಾಳನ ಕಥೆ

ಕಾಂಚೀ ಪಟ್ಟಣದಲ್ಲಿ ಸಿರಿಯಾಳನೆಂಬ ಶಿವಭಕ್ತನಿದ್ದನು. ಆತನು ಅತಿಥಿಗಳನ್ನು ಬಹಳವಾಗಿ ಆದರಿಸುತ್ತ ಅವರಿಗೆ ಮೃಷ್ಟಾನ್ನ ಭೋಜನ ಮಾಡಿಸಿ, ಕೇಳಿದುದನ್ನೆಲ್ಲ ಕೊಟ್ಟು ಸಂತೋಷಪಡಿಸುತ್ತಿದ್ದನು. ಹೀಗಿರುವಲ್ಲಿ ಪರಮೇಶ್ವರನು ಸಿರಿಯಾಳನ ಭಕ್ತಿಯ ಆಳವನ್ನು ಪರೀಕ್ಷಿಸುವು

ದಕ್ಕಾಗಿ ಮುನಿಯ ವೇಷವನ್ನು ಹಾಕಿಕೊಂಡು ಅವನ ಮನೆಗೆ ಬಂದನು. ಸಿರಿಯಾಳನು ಆ ಮುನಿಯನ್ನು ಬಹಳ ಭಕ್ತಿ ಶ್ರದ್ಧೆಗಳಿಂದ ಉಪಚರಿಸಿ, ತನ್ನ ಮನೆಯಲ್ಲಿ ಆತಿಥ್ಯವನ್ನು ಕೈಕೊಂಡು ತನ್ನನ್ನು ಅನುಗ್ರಹಿಸಬೇಕೆಂದು ಕೇಳಿಕೊಂಡನು. ಅದಕ್ಕೆ ಆ ಮುನಿಯು "ಅಯ್ಯಾ ಭಕ್ತನೆ! ನಮ್ಮದೊಂದು ವ್ರತವಿರುವುದು, ಅದನ್ನು ನೀನು ನಡೆಯಿಸಿಕೊಡುವುದಾದರೆ ನಿಮ್ಮ ಮನೆಯಲ್ಲಿ ಆರೋಗಣೆ ಮಾಡುವೆವು" ಎಂದು ಹೇಳಿದನು. ಅದಕ್ಕೆ ಸಿರಿಯಾಳನು ತಡಮಾಡದೆ ಒಡಂಬಡಲು, ಮುನಿಯು, "ಶೈವಾಚಾರವನ್ನವಲಂಬಿಸಿದ ಗಂಡ ಹೆಂಡಿರೂ, ಮಗನೂ ಇರುವ ಮನೆಯಲ್ಲಿ ನರಮಾಂಸವನ್ನು ಅಡಿಗೆ ಮಾಡಿಟ್ಟರೆ ನಾವು ಊಟಮಾಡಿ ತೃಪ್ತಿ ಹೊಂದುವೆವು" ಎನ್ನಲು, ಸಿರಿಯಾಳನು "ಮುನಿಶ್ರೇಷ್ಠರೆ! ತಾವು ಅಪ್ಪಣೆ ಕೊಡಿಸಿದ ಮೇರೆಯೇ ಮಾಡುವೆನು; ಅಂತಹ ನರಮಾಂಸಕ್ಕಾಗಿ ಬೇರೆಯ ಕಡೆಗೆ ಹೋಗಲೇಕೆ? ನನ್ನ ದೇಹದ ಮಾಂಸವನ್ನೇ ಅರ್ಪಿಸುವೆನು" ಎನ್ನಲು, ಮುನಿಯು ಅದಕ್ಕೊಪ್ಪದೆ, "ತಂದೆತಾಯಿಗಳು ಜೀವದಿಂದಿರುವ ಬಾಲಕನ ಮಾಂಸವೇ ಆಗಬೇಕು" ಎಂದನು. ಅದಕ್ಕೆ ಸಿರಿಯಾಳನು "ನನ್ನ ಮಗನನ್ನೇ ತಮ್ಮ ಸೇವೆಗಾಗಿ ಉಪಯೋಗಿಸುವೆನು" ಎಂದು ಹೇಳಿ ಮುನಿಯನ್ನು ಒಪ್ಪಿಸಿದನು.

ಈ ವೃತ್ತಾಂತವನ್ನು ಸಿರಿಯಾಳನು ತನ್ನ ಮಡದಿಗೆ ಹೇಳಲು, ಪತಿವ್ರತೆಯಾದ ಆಕೆಯು ಹಾಗೆಯೇ ಆಗಲೆಂದೊಪ್ಪಿದಳು. ತರುವಾಯ ಆ ದಂಪತಿಗಳು ತಮ್ಮ ಮಗನಿಗೆ ಈ ವಿಚಾರವನ್ನು ತಿಳಿಸಿದರು. ಆ ಬಾಲಕನು ತನ್ನ ಶರೀರವು ಮುನಿಯ ಭೋಜನಕ್ಕೆ ಉಪಯೋಗವಾದರೆ ತಾನು ಧನ್ಯನಾಗುವುದು ಮಾತ್ರವೇ ಅಲ್ಲದೆ ತನ್ನ ತಾಯಿ ತಂದೆಗಳೂ ಮುಕ್ತಿಯನ್ನು ಪಡೆಯುವರು ಎಂದು ತಿಳಿದು ಬಹಳ ಸಂತೋಷದಿಂದ ಅವರ ಅಭಿಪ್ರಾಯಕ್ಕೆ ಸಮ್ಮತಿ ಕೊಟ್ಟನು.

ತರುವಾಯ ಸಿರಿಯಾಳನು ತನ್ನ ಅಡಿಗೆಯವನನ್ನು ಕರೆಯಿಸಿ ತನ್ನ ಮಗನ ಶರೀರವನ್ನು ಕೊಯ್ದು ಸಾರವಾದ ಅಡಿಗೆಯನ್ನು ಮಾಡುವಂತೆ ಅಪ್ಪಣೆಯಿತ್ತನು. ಅಡಿಗೆಯು ಸಿದ್ಧವಾಗುತ್ತಲೆ ದಂಪತಿಗಳು ಮುನಿಯನ್ನು ಭಕ್ತಿಯಿಂದ ಕರೆತಂದು ಮಣೆಯ ಮೇಲೆ ಕುಳ್ಳಿರಿಸಿ

ಆತನಿಗೆ ಅಡಿಗೆಯನ್ನು ಬಡಿಸಿದರು. ಮುನಿಯು ಅವರ ಮನೋದಾರ್ಢ್ಯಕ್ಕೆ ಮೆಚ್ಚಿದರೂ ಅವರನ್ನು ಇನ್ನೂ ಪರೀಕ್ಷೆ ಮಾಡಬೇಕೆಂದು ಅವರನ್ನು ಕುರಿತು "ನಾವು ಒಬ್ಬರೇ ಈ ಅಡಿಗೆಯನ್ನು ಊಟಮಾಡುವುದು ನಮಗೆ ಒಪ್ಪದು, ನೀವೂ ನಮ್ಮ ಪಙ್ಕ್ತಿಯಲ್ಲಿ ಕುಳಿತು ಶಿವಾರ್ಚನೆ ಮಾಡಿ ಪ್ರಸಾದವನ್ನು ತೆಗೆದುಕೊಳ್ಳಬೇಕು" ಎನ್ನಲು, ಸಿರಿಯಾಳನು ಬಹಳ ದುಃಖಿತನಾಗಿ ಹೆಂಡತಿಯ ಮುಖವನ್ನು ನೋಡಿದನು. ಆಕೆಯು, "ಇದಕ್ಕೇಕೆ ಇಷ್ಟು ಚಿಂತೆ? ಹಾಗೆಯೇ ಮಾಡೋಣ" ಎಂದು ಹೇಳಿದಳು. ಇದನ್ನು ನೋಡಿ ಮುನಿಯು "ನಮ್ಮ ಪಙ್ಕ್ತಿಯಲ್ಲಿ ಮನೆಯ ದಂಪತಿಗಳು ತಮ್ಮ ಪುತ್ರನೊಡನೆ ಕುಳಿತು ಊಟಮಾಡಬೇಕು ; ನಿಮ್ಮ ಮಗನನ್ನು ಕರೆಯಿರಿ" ಎನ್ನಲು, ಅವರು "ನಮ್ಮ ಒಬ್ಬ ಮಗನನ್ನು ತಮ್ಮ ಆರೋಗಣೆಗಾಗಿ ಉಪಯೋಗಿಸಿದೆವು, ನಮಗೆ ಬೇರೆ ಮಗನಿಲ್ಲ" ಎಂದರು. ಅದಕ್ಕೆ ಆ ಮುನಿಯು "ಪುತ್ರನಿಲ್ಲದ ಮನೆಯಲ್ಲಿ ನಮಗೆ ಭೋಜನವು ಸಲ್ಲದು ; ಆದುದರಿಂದ ನಿಮ್ಮ ಎಡೆಯನ್ನು ನಾವು ಒಲ್ಲೆವು" ಎಂದು ಹೇಳಿ ಹೊರಡಲುದ್ಯುಕ್ತನಾದನು. ಆಗ ಸಿರಿಯಾಳನು ಮುನಿಯನ್ನು ನಾನಾ ಬಗೆಯಾಗಿ ಪ್ರಾರ್ಥಿಸಿ ಆತಿಥ್ಯವನ್ನು ಸ್ವೀಕರಿಸುವುದರಿಂದ ತಮ್ಮನ್ನು ಕೃತಾರ್ಥರನ್ನಾಗಿ ಮಾಡಬೇಕೆಂದು ಕೇಳಿಕೊಂಡನು. ಆಗ ಪರಮೇಶ್ವರನು ಆ ದಂಪತಿಗಳ ಭಕ್ತಿಗೂ ಮನೋದಾರ್ಢ್ಯಕ್ಕೂ ಮೆಚ್ಚಿ ಆ ಹುಡುಗನ ತಾಯಿಯನ್ನು ಕುರಿತು, "ಅಮ್ಮಾ! ತಾಯಿಯಾದ ನೀನು ನಿನ್ನ ಮಗನನ್ನು ಕರೆ; ತಾಯಿ ಕರೆದರೆ ಬಾರದ ಮಗನುಂಟೆ?" ಎನ್ನಲು, ಆಕೆಯು ಮಗನನ್ನು ಹಲವು ಬಗೆಯಿಂದ ಬಣ್ಣಿಸಿ ನಾಲ್ಕೂ ದಿಕ್ಕುಗಳಲ್ಲಿ ಕೂಗಿ ಕರೆದಳು. ಕೂಡಲೆ ಪರಮೇಶ್ವರನ ಅನುಗ್ರಹದಿಂದ ಆ ಬಾಲಕನು ಮೊದಲಿದ್ದಂತೆಯೇ ಅವರೆದುರಿಗೆ ಬ[illegible]ದಂಪತಿಗಳ ಸಂತೋಷಕ್ಕೆ ಪಾರವಿಲ್ಲದೇ ಹೋ[illegible]ವುಂಟಾಯಿತು. ಆಗ ಪರಮೇಶ್ವ[illegible] ಅವರನ್ನು ಹರಸಿ ಅವರಿಗೆ ದೀಕ್ಷ[illegible]ನ್ನು ಕೊಟ್ಟು ಕಡೆಗೆ ಶಿವಸಾಲೋಕ್ಯವನ್ನು [illegible]

೨೬. ನಾರದನ ಗರ್ವ ಭಂಗ

ವೈಕುಂಠದಲ್ಲಿ ಮಹಾಲಕ್ಷ್ಮಿಯು ಶ್ರೀ ವಿಷ್ಣುವಿನ ಸೇವೆಯನ್ನು ಮಾಡುತ್ತಿದ್ದ ಒಂದಾನೊಂದು ಸಮಯದಲ್ಲಿ ನಾರದನು ಅಲ್ಲಿಗೆ ಬಂದನು. ಆತನನ್ನು ನೋಡಿದ ಕೂಡಲೆ ಲಕ್ಷ್ಮಿಯು ಒಳಕ್ಕೆ ಹೊರಟು ಹೋದಳು. ಅದನ್ನು ಕಂಡು ನಾರದನು ಅಸಮಾಧಾನಪಟ್ಟು, ಲಕ್ಷ್ಮಿಯು ಹಾಗೆ ಹೊರಟು ಹೋದುದಕ್ಕೆ ಕಾರಣವೇನೆಂದು ವಿಷ್ಣುವನ್ನು ಕೇಳಲು, ಸ್ತ್ರೀಯರು ಸಾಮಾನ್ಯವಾಗಿ ಪರ ಪುರುಷನ ಎದುರಿಗೆ ನಿಲ್ಲಬಾರದೆಂಬ ನಿಯಮವಿರುವುದರಿಂದ ಲಕ್ಷ್ಮಿಯು ಹಾಗೆ ನಡೆದಿರಬೇಕೆಂದು ವಿಷ್ಣುವು ಉತ್ತರ ಕೊಟ್ಟನು. ಇದನ್ನು ಕೇಳಿ ನಾರದನು "ನಾರಾಯಣನೆ! ಪ್ರಪಂಚಕ್ಕೆ ಕಾರಣಭೂತರಾದ ನಿಮಗೂ, ಜ್ಞಾನಿಯಾದ ನನಗೂ ಮಾಯಾವರಣವುಂಟೆ?" ಎಂದು ಪ್ರಶ್ನೆ ಮಾಡಲು, ಎಂಥವರನ್ನೂ ಮಾಯೆ ಬಿಡದೆಂದು ವಿಷ್ಣುವು ಉತ್ತರ ಹೇಳಿದನು. ನಾರದನು ಇದಕ್ಕೊಪ್ಪದೆ ತನಗೆ ಆ ವಿಷಯವನ್ನು ನಿದರ್ಶನ ಮಾಡಿ ಕೊಡಬೇಕೆಂದು ಕೇಳಲು ವಿಷ್ಣುವು ಹಾಗೆಯೇ ಆಗಲೆಂದು ಹೇಳಿದನು.

ಒಂದಾನೊಂದು ದಿನ ವಿಷ್ಣುವು ನಾರದನನ್ನು ಕರೆದುಕೊಂಡು ಸಂಚಾರ ಹೊರಟು ಮಧ್ಯಾಹ್ನದ ಹೊತ್ತಿಗೆ ಒಂದು ರಮ್ಯವಾದ ಸರೋವರದ ಬಳಿ ಇಳಿದು ಆ ಸರೋವರದಲ್ಲಿ ಸ್ನಾನ ಆಹ್ನಿಕಗಳನ್ನು ತೀರಿಸಿಕೊಂಡು ಮುಂದಕ್ಕೆ ಹೊರಡೋಣವೆಂದು ನಾರದನೊಡನೆ ಹೇಳಿದನು. ನಾರದನು ಅದಕ್ಕೊಪ್ಪಿ ಸರೋವರದಲ್ಲಿಳಿದು ನೀರಿನಲ್ಲಿ ಮುಳುಗಿ ಮೇಲಕ್ಕೆದ್ದು ನೋಡುವಲ್ಲಿ ತಾನು ಸರ್ವಾಂಗ ಸುಂದರಿಯಾದ ಸ್ತ್ರೀಯಾಗಿ ಮಾರ್ಪಟ್ಟಿದ್ದುದು ಮಾತ್ರವಲ್ಲದೆ ತನ್ನ ಪೂರ್ವ ವೃತ್ತಾಂತವು ಯಾವುದೂ ಜ್ಞಾಪಕವಿಲ್ಲದೆ ಹೋಯಿತು. ಅಷ್ಟರಲ್ಲಿ ವಿಷ್ಣುವು ನಾರದನ ಕೃಷ್ಣಾಜಿನ, ದಂಡ, ಕಮಂಡಲಗಳನ್ನೂ, ವೀಣೆಯನ್ನೂ ತೆಗೆದುಕೊಂಡು ಹೊರಟು ಹೋಗಿದ್ದನು.

ಸುತ್ತುಮುತ್ತಲೂ ಯಾರೂ ಇಲ್ಲದೆಯಿದ್ದುದರಿಂದಲೂ, ಆ ಪ್ರದೇಶವು ಅರಣ್ಯವಾಗಿದ್ದುದರಿಂದಲೂ ಹೆಂಗಸಿಗೆ ಸ್ವಾಭಾವಿಕವಾಗಿ ಹುಟ್ಟುವ ಭಯಗಳೆಲ್ಲವೂ ಹುಟ್ಟಿ ಆ ಸ್ತ್ರೀಯು ಅಳತೊಡಗಿದಳು. ಅಷ್ಟರಲ್ಲಿ ಆ

ಕಾಡಿಗೆ ಬೇಟೆಯಾಡಲು ಬಂದಿದ್ದ ತಾಲಧ್ವಜನೆಂಬ ದೊರೆಯು ಅಕಸ್ಮಾ
ತ್ತಾಗಿ ಆ ಪ್ರದೇಶಕ್ಕೆ ಬಂದು ಅಸಾಧಾರಣ ಸೌಂದರ್ಯದಿಂದ ಮೆರೆಯು
ತ್ತಿದ್ದ ಆ ಹೆಂಗಸನ್ನು ಕಂಡು ನೀನು ಯಾರೆಂದು ಕೇಳಲು, ಆಕೆಯು
ತಾನು ಯಾರೆಂಬುದನ್ನೂ, ತನ್ನ ಸಮಾಚಾರವೇನೆಂಬುದನ್ನೂ ಸ್ವಲ್ಪವೂ
ಅರಿಯೆನೆಂದು ಹೇಳಿದಳು. ಆಗ ದೊರೆಯು ಆಕೆಯನ್ನು ಕುರಿತು,
"ನೀನು ನನ್ನನ್ನು ಮದುವೆ ಮಾಡಿಕೊಳ್ಳುವುದಾದರೆ ನಿನ್ನನ್ನು ನನ್ನ
ಪಟ್ಟದರಸಿಯನ್ನಾಗಿ ಮಾಡುವೆನು" ಎಂದು ಹೇಳಲು, ಆಕೆಯು
ಅದಕ್ಕೊಪ್ಪಿ ತಾಲಧ್ವಜನೊಡನೆ ಆತನ ರಾಜಧಾನಿಗೆ ಹೊರಟು
ಹೋದಳು.

ತಾಲಧ್ವಜನಿಗೆ ತನ್ನ ಹೊಸ ಮಡದಿಯಲ್ಲಿ ದಿನೇದಿನೇ ಅನು
ರಾಗವು ಹೆಚ್ಚುತ್ತ ಬಂದು ಆತನು ರಾಜಕಾರ್ಯಗಳಿಗೆ ಗಮನ ಕೊಡದೆ
ಯಾವಾಗಲೂ ಆಕೆಯೊಡನೆ ಲೀಲಾಜಾಲದಲ್ಲಿರುತ್ತಿದ್ದನು. ಕಾಲಕ್ರಮ
ದಲ್ಲಿ ಅವರಿಗೆ ಗಂಡುಮಕ್ಕಳು ಹುಟ್ಟಿ ಪ್ರವರ್ಧಮಾನರಾಗುತ್ತಾ ಬಂದರು.
ರಾಜ್ಯಭಾರವು ಕ್ರಮವಾಗಿ ನಡೆಯದೆ ಇರುವುದನ್ನು ನೋಡುತ್ತಿದ್ದ
ಸುತ್ತುಮುತ್ತಲಿನ ರಾಜರು ತಾಲಧ್ವಜನ ಪಟ್ಟಣಕ್ಕೆ ಮುತ್ತಿಗೆ ಹಾಕಿ
ದರು. ಇವರೊಡನೆ ತಾಲಧ್ವಜನ ಸೇನಾನಾಯಕರು ಯುದ್ಧಮಾಡಿ
ಅನೇಕ ಮಂದಿ ಸತ್ತರು. ಕಡೆಗೆ ದೊರೆಯು ತನ್ನ ಮಕ್ಕಳನ್ನೂ
ಯುದ್ಧಕ್ಕೆ ಕಳುಹಿಸಬೇಕಾಯಿತು. ಅವರೂ ಯುದ್ಧಮಾಡಿ ಮಡಿದರು.
ಈ ವಾರ್ತೆಯನ್ನು ಕೇಳಿ ರಾಣಿಯು ಹಿಡಿಯಲಾರದಷ್ಟು ದುಃಖವುಳ್ಳವ
ಳಾಗಿ ನಿದ್ರಾಹಾರಗಳನ್ನು ತೊರೆದು ಯಾರು ಸಮಾಧಾನ ಹೇಳಿದರೂ
ಕೇಳದೇ ಅಳುತ್ತಿದ್ದಳು.

ಈ ಸಂದರ್ಭದಲ್ಲಿ ವಿಷ್ಣುವು ಒಬ್ಬ ಮುದಿ ಬ್ರಾಹ್ಮಣನ ವೇಷದಿಂದ
ಅರಮನೆಗೆ ಬಂದು ರಾಣಿಗೆ ಸಮಾಧಾನ ಹೇಳಿ ದೊರೆಯ ಅಪ್ಪಣೆ
ಪಡೆದು ಆಕೆಯನ್ನು ಒಂದು ಪುಣ್ಯತೀರ್ಥಕ್ಕೆ ಕರೆದುಕೊಂಡು ಹೋದನು.
ರಾಣಿಯು ಬ್ರಾಹ್ಮಣನು ಹೇಳಿದಂತೆ ತೀರ್ಥದಲ್ಲಿ ಮುಳುಗಿ ಮೇಲಕ್ಕೆ
ಳಲು ನಾರದನು ನಿಜರೂಪವನ್ನು ಹೊಂದಿದನು. ಆಗ ಹಿಂದಣ ಕಥೆ
ಯೆಲ್ಲವೂ ಜ್ಞಾಪಕಕ್ಕೆ ಬಂದು ನಾರದನು ತನ್ನ ಅಹಂಕಾರವು ಮುರಿಯಿ

ತೆಂದು ಹೇಳಿ ಅಪರಾಧಕ್ಕಾಗಿ ತನ್ನನ್ನು ಕ್ಷಮಿಸಬೇಕೆಂದು ವಿಷ್ಣುವನ್ನು ಪ್ರಾರ್ಥಿಸಿ ಸ್ತೋತ್ರ ಮಾಡಿದನು.

---

೨೭. ಪುಷ್ಪದಂತನ ಕಥೆ

ಒಂದಾನೊಂದು ಕಾಲದಲ್ಲಿ ತಿಲೋತ್ತಮೆಯೆಂಬ ಅಪ್ಸರಸ್ತ್ರೀಯು ದೇವೇಂದ್ರನ ಅಪ್ಪಣೆಯ ಮೇರೆಗೆ ಇಂದ್ರ ಸಭೆಗೆ ಹೋಗುತ್ತಿರುವಲ್ಲಿ ಪುಷ್ಪದಂತನೆಂಬ ಗಂಧರ್ವನು ಆಕೆಯನ್ನು ನೋಡಿ ಮೋಹಿಸಿ ತನ್ನ ಬಳಿಗೆ ಬರುವಂತೆ ಬಲಾತ್ಕರಿಸಿದನು. ಇದಕ್ಕೆ ತಿಲೋತ್ತಮೆಯು ಬಹಳ ಸಿಟ್ಟಾಗಿ “ಎಲೈ ಗಂಧರ್ವನೆ! ಸ್ವಾಮಿಕಾರ್ಯಕ್ಕಾಗಿ ಹೋಗುತ್ತಿರುವ ನನ್ನನ್ನು ರಾಕ್ಷಸನಂತೆ ಪೀಡಿಸಿದೆಯಾದುದರಿಂದ ನೀನು ರಾಕ್ಷಸನಾಗಿ ಹೋಗು” ಎಂದು ಶಾಪವಿತ್ತಳು. ಈ ಕಾರಣದಿಂದ ಪುಷ್ಪದಂತನು ಮೂಕನೆಂಬ ದಾನವನಾಗಿ ಹಂದಿಯ ರೂಪದಿಂದ ಹುಟ್ಟಿದನು.

ಆ ಕಾಲದಲ್ಲಿ ಅರ್ಜುನನು ಪಾಶುಪತಾಸ್ತ್ರವನ್ನು ಪಡೆಯುವುದಕ್ಕಾಗಿ ಈಶ್ವರನನ್ನು ಕುರಿತು ಇಂದ್ರಕೀಲ ಪರ್ವತದಲ್ಲಿ ತಪಸ್ಸು ಮಾಡುತ್ತಿದ್ದನು. ಅರ್ಜುನನನ್ನು ಅನುಗ್ರಹಿಸುವುದಕ್ಕಾಗಿ ಬೇಡರವನ ವೇಷದಿಂದ ಬಂದ ಈಶ್ವರನು ಹಂದಿಯ ರೂಪದಿಂದಿದ್ದ ಮೂಕ ದಾನವನನ್ನು ಅಟ್ಟಿಕೊಂಡು ಬಂದು ಬಾಣಪ್ರಯೋಗ ಮಾಡಲು ಆ ಹಂದಿಯು ತಪಸ್ಸು ಮಾಡುತ್ತಿದ್ದ ಅರ್ಜುನನ ಕಡೆಗೆ ಆರ್ಭಟದೊಡನೆ ನುಗ್ಗಿತು. ಅದನ್ನು ನೋಡಿ ಅರ್ಜುನನು ಅದರ ಮೇಲೆ ತನ್ನ ಬಾಣವನ್ನೆಸೆಯಲು ಹಂದಿಯು ಸತ್ತುಬಿದ್ದಿತು.

ಆಗ ಹಂದಿಯನ್ನು ಕೊಂದವನು ಯಾರೆಂಬ ವಿಷಯದಲ್ಲಿ ಈಶ್ವರನಿಗೂ, ಅರ್ಜುನನಿಗೂ ಚರ್ಚೆ ಹುಟ್ಟಿ ಯುದ್ಧ ನಡೆದು ಕಡೆಗೆ ಈಶ್ವರನು ಅರ್ಜುನನ ಶೌರ್ಯಕ್ಕೆ ಮೆಚ್ಚಿ ಪ್ರಸನ್ನನಾಗಿ ಆತನಿಗೆ ಪಾಶುಪತಾಸ್ತ್ರವನ್ನು ಕೊಟ್ಟು ಹರಸಿ ಅಂತರ್ಧಾನನಾದನು.

---

೨೮. ಕರ್ಣನಿಗೆ ಪರಶುರಾಮನು ಶಾಪ ಕೊಟ್ಟಿದ್ದು

ಕೌರವ ಪಾಂಡವರು ದ್ರೋಣಾಚಾರ್ಯನ ಬಳಿಯಲ್ಲಿ ಧನುರ್ವಿದ್ಯೆಯನ್ನು ಕಲಿಯುತ್ತಿದ್ದಾಗ ದುರ್ಯೋಧನನ ಗೆಳೆಯನಾದ ಕರ್ಣನು ತನಗೆ ಬ್ರಹ್ಮಾಸ್ತ್ರ ಪ್ರಯೋಗವನ್ನು ಉಪದೇಶ ಮಾಡಬೇಕೆಂದು ದ್ರೋಣಾಚಾರ್ಯನನ್ನು ಕೇಳಿಕೊಂಡನು. ಅದಕ್ಕೆ ದ್ರೋಣಾಚಾರ್ಯನು "ಬ್ರಹ್ಮಾಸ್ತ್ರ ಪ್ರಯೋಗವನ್ನು ಬ್ರಹ್ಮ ಕ್ಷತ್ರಿಯ ವೈಶ್ಯರಿಗಲ್ಲದೆ ಇತರರಿಗೆ ಉಪದೇಶ ಮಾಡಕೂಡದು; ಆದಕಾರಣ ಅಂಬಿಗನ ಮಗನಾದ ನಿನಗೆ ಉಪದೇಶ ಮಾಡೆನು" ಎಂದು ಹೇಳಿದನು. ಈ ತಿರಸ್ಕಾರವನ್ನು ಸಹಿಸಲಾರದೆ ಕರ್ಣನು ಹೇಗಾದರೂ ಆ ವಿದ್ಯೆಯನ್ನು ಕಲಿಯಬೇಕೆಂದು ಸಂಕಲ್ಪ ಮಾಡಿ ಬ್ರಾಹ್ಮಣ ವೇಷವನ್ನು ಧರಿಸಿ, ದ್ರೋಣಾಚಾರ್ಯನ ಗುರುವಾದ ಪರಶುರಾಮನ ಬಳಿಗೆ ಹೋಗಿ ಶಿಷ್ಯನಾಗಿ ನಿಂತು ಆತನಿಂದ ಸಕಲ ಮಂತ್ರಾಸ್ತ್ರಗಳ ಉಪದೇಶವನ್ನು ಹೊಂದಿದನು.

ಹೀಗಿರಲು ಒಂದಾನೊಂದು ದಿನ ಪರಶುರಾಮನು ತನ್ನ ವಿಶ್ವಾಸಕ್ಕೆ ಪಾತ್ರನಾದ ಕರ್ಣನ ತೊಡೆಯ ಮೇಲೆ ತಲೆಯನ್ನಿಟ್ಟುಕೊಂಡು ಸುಖ ನಿದ್ರೆ ಮಾಡುತ್ತಿರುವಲ್ಲಿ ಇಂದ್ರನು ಒಂದು ವಜ್ರಕೀಟದ ರೂಪವನ್ನು ತಾಳಿ ಬಂದು ಕರ್ಣನ ತೊಡೆಯನ್ನು ಕೊರೆಯಲಾರಂಭಿಸಿದನು. ಕರ್ಣನು ತಾನು ಅಲುಗಿದರೆ ಗುರುವಿಗೆ ನಿದ್ರಾಭಂಗವಾಗುವುದೆಂದು ಬಾಧೆಯನ್ನು ಸಹಿಸಿಕೊಂಡು ಕದಲದೆಯಿದ್ದನು ಆದರೆ ಅವನ ತೊಡೆಯಿಂದ ಹೊರಟ ನೆತ್ತರಿನಿಂದ ಪರಶುರಾಮನ ಮೈ ನೆನೆಯಲು ಆತನು ಎಚ್ಚತ್ತು ನಡೆದ ಸಂಗತಿಯನ್ನರಿತು ಅವನು ಬ್ರಾಹ್ಮಣನಾಗಿರಲಾರನೆಂದು ಅನುಮಾನಿಸಿ, ನಿಶ್ಚಯವನ್ನು ಹೇಳೆಂದು ಅವನನ್ನು ಕೇಳಿದನು. ಆಗ ಕರ್ಣನು ನಿಶ್ಚಯಾಂಶವನ್ನು ತಿಳಿಸಲು ಪರಶುರಾಮನು ಸಿಟ್ಟಾಗಿ, "ಎಲೈ ಕರ್ಣನೆ! ನಿನಗೆ ನಾನು ಉಪದೇಶ ಮಾಡಿದ ಅಸ್ತ್ರಗಳು ಸಮಯದಲ್ಲಿ ಸಿದ್ಧಿಸದೆ ಹೋಗಲಿ" ಎಂದು ಶಾಪವನಿತ್ತನು.

---

೨೯. ಇಲ್ವಲ ವಾತಾಪಿಗಳ ಕಥೆ

ಪೂರ್ವದಲ್ಲಿ ಹಿರಣ್ಯಕಶಿಪುವೆಂಬ ಬಹಳ ಪರಾಕ್ರಮಿಯಾದ ರಾಕ್ಷಸನು ತಪಸ್ಸು ಮಾಡಿ ಬ್ರಹ್ಮನಿಂದ ಅನೇಕ ವರಗಳನ್ನು ಪಡೆದು ಮೂರು ಲೋಕಗಳನ್ನೂ ಗೆದ್ದು ದೇವತೆಗಳನ್ನು ಬಹಳವಾಗಿ ಪೀಡಿಸುತ್ತಿದ್ದನು. ಅವನ ಕಾಟವನ್ನು ತಾಳಲಾರದೆ ದೇವತೆಗಳೆಲ್ಲರೂ ವಿಷ್ಣುವಿನ ಮರೆ ಹೊಕ್ಕರು. ವಿಷ್ಣುವು ನೃಸಿಂಹಾವತಾರ ಮಾಡಿ ಹಿರಣ್ಯಕಶಿಪುವನ್ನು ಕೊಂದು ಜಗತ್ತಿಗೆ ಸೌಖ್ಯವನ್ನುಂಟುಮಾಡಿದನು. ಆ ರಾಕ್ಷಸನ ಮೊಮ್ಮಕ್ಕಳೇ ಇಲ್ವಲ ವಾತಾಪಿಗಳು.

ದೇವತೆಗಳು ದೈತ್ಯರನ್ನು ಆಗಾಗ ನಾಶಮಾಡುತ್ತಿದ್ದುದನ್ನು ಕಂಡು ಕನಿಕರಪಟ್ಟು ದೈತ್ಯರ ಗುರುವಾದ ಶುಕ್ರಾಚಾರ್ಯನು ಇಲ್ವಲ ವಾತಾಪಿಗಳಿಗೆ ಸತ್ತವರನ್ನು ಬದುಕಿಸುವ ಮೃತ ಸಂಜೀವನ ಮಂತ್ರವನ್ನು ಉಪದೇಶಿಸಿದನು. ಈ ಮಂತ್ರವು ಸತ್ತ ರಾಕ್ಷಸರನ್ನು ಬದುಕಿಸಲು ಮಾತ್ರ ಉಪಯೋಗವಾಗಬೇಕೆಂಬ ಅಭಿಪ್ರಾಯವು ಶುಕ್ರಾಚಾರ್ಯನಿಗಿದ್ದಿತು. ಆದರೆ ದುಷ್ಟರಾದ ಆ ರಾಕ್ಷಸರು ಆ ಮಂತ್ರವನ್ನು ದುರುಪಯೋಗ ಮಾಡತೊಡಗಿದರು.

ಇಲ್ವಲನು ತನ್ನ ಬಳಿಗೆ ಬಂದ ಪ್ರತಿಯೊಬ್ಬ ಬ್ರಾಹ್ಮಣನನ್ನೂ ತೋರಿಕೆಯ ಮರ್ಯಾದೆಯಿಂದ ಆದರಿಸುತ್ತ ತನ್ನ ತಮ್ಮನಾದ ವಾತಾಪಿಯನ್ನು ಕುರಿಯಾಗಿ ಮಾಡಿ ಅದರ ಮಾಂಸವನ್ನು ಬೇಯಿಸಿ ಬ್ರಾಹ್ಮಣನಿಗೆ ಬಡಿಸಿ ಅವನು ಊಟಮಾಡಿದ ಬಳಿಕ ತನ್ನ ಮೃತ ಸಂಜೀವನ ವಿದ್ಯೆಯನ್ನುಪಯೋಗಿಸಿ, "ವಾತಾಪೀ! ಹೊರಗೆ ಹೊರಟು ಬಾ" ಎಂದು ಕರೆಯುವನು. ಕೂಡಲೆ ವಾತಾಪಿಯು ಬ್ರಾಹ್ಮಣನ ಹೊಟ್ಟೆಯನ್ನು ಸೀಳಿಕೊಂಡು ಹೊರಗೆ ಬರುವನು. ತರುವಾಯ, ಸತ್ತುಹೋದ ಬ್ರಾಹ್ಮಣನ ಮಾಂಸವನ್ನು ಅವರಿಬ್ಬರೂ ತಿಂದು ಅವನ ಸರ್ವಸ್ವವನ್ನೂ ಅಪಹರಿಸುವರು. ಈ ರೀತಿಯಾಗಿ ಆ ದುಷ್ಟರು ಅನೇಕ ಮಂದಿ ಬ್ರಾಹ್ಮಣರನ್ನು ಕೊಂದರು.

ಅಗಸ್ತ್ಯ ಋಷಿಯನ್ನೂ ಹೀಗೆಯೇ ಕೊಲ್ಲಬೇಕೆಂದು ಆಲೋಚಿಸಿ ಇಲ್ವಲನು ಆತನಿಗೂ ಇತರ ಬ್ರಾಹಣರಿಗೆ ಮಾಡಿದಂತೆಯೇ ಆತಿಥ್ಯ

ಮಾಡಿ ಕಡೆಗೆ ಪದ್ಧತಿಯಂತೆ, "ವಾತಾಪೀ! ಹೊರಗೆ ಹೊರಟು ಬಾ" ಎನ್ನಲು, ಆ ಋಷಿಯು ಇವರ ಮೋಸವನ್ನು ಅರಿತಿದ್ದವನಾದುದರಿಂದ ತನ್ನ ಮಂತ್ರ ಶಕ್ತಿಯನ್ನುಪಯೋಗಿಸಿ ತಾನು ತಿಂದಿದ್ದ ಆಹಾರವನ್ನು ಜೀರ್ಣಿಸಿಕೊಂಡು "ವಾತಾಪೀ! ಜೀರ್ಣೋಭವ" (ವಾತಾಪಿ ಜೀರ್ಣ ವಾಗಿ ಹೋಗು) ಎಂದನು. ಇಲ್ವಲನು ಭಯಪಟ್ಟು ಅಗಸ್ತ್ಯನಿಗೆ ಮರ್ಯಾದೆ ಮಾಡಿ ತನ್ನಲ್ಲಿದ್ದ ಧನವನ್ನೆಲ್ಲ ಕೊಟ್ಟು ಕಳುಹಿಸಿದನು. ಇಷ್ಟು ಮಾಡಿ ಸುಮ್ಮನಿರದೆ ಇಲ್ವಲನು ಅಗಸ್ತ್ಯನನ್ನು ದಾರಿಯಲ್ಲಿ ಅಡ್ಡ ಗಟ್ಟಿ ಕೊಲ್ಲಬೇಕೆಂದು ಯತ್ನಿಸಲು ಆ ಋಷಿಯು ಹುಂಕಾರದಿಂದ ಅವ ನನ್ನು ಸುಟ್ಟು ಬೂದಿ ಮಾಡಿದನು.

ಈ ವೃತ್ತಾಂತವನ್ನು ದೈತ್ಯ ಗುರುವಾದ ಶುಕ್ರಾಚಾರ್ಯನು ಕೇಳಿ ತಾನು ಉಪದೇಶಿಸಿದ ವಿದ್ಯೆಯನ್ನು ಸರಿಯಾದ ಮಾರ್ಗದಲ್ಲಿ ಉಪ ಯೋಗಿಸದೆ ಇದ್ದುದರಿಂದ ಇಲ್ವಲ ವಾತಾಪಿಗಳು ಸತ್ತುಹೋದುದ ಕ್ಕಾಗಿ ಬಹಳ ನೊಂದುಕೊಂಡನು.

---

೩೦. ಜರತ್ಕಾರುವಿನ ಕಥೆ

ಪೂರ್ವದಲ್ಲಿ ಯಾಯಾವರರೆಂಬ ಮುನೀಶ್ವರರ ಕುಲದಲ್ಲಿ ಹುಟ್ಟಿ ಸಕಲ ವ್ರತಗಳನ್ನೂ ಆಚರಿಸಿ ಬ್ರಹ್ಮಚರ್ಯ ವ್ರತವನ್ನು ಹಿಡಿದು ಬ್ರಹ್ಮ ನಿಗೆ ಸಮಾನನಾದ ಜರತ್ಕಾರುವೆಂಬ ಒಬ್ಬ ಮುನೀಂದ್ರನಿದ್ದನು. ಅವನು ಒಂದು ದಿನ ಅಡವಿಯಲ್ಲಿ ಅಡ್ಡಾಡುತ್ತಿದ್ದಾಗ ಒಂದು ಹಾಳು ಬಾವಿಯಲ್ಲಿ ಕಾಲು ಮೇಲಾಗಿಯೂ, ತಲೆ ಕೆಳಗಾಗಿಯೂ ಜೋತಾಡು ತ್ತಿದ್ದ ಪಿತೃಗಳನ್ನು ಕಂಡು, "ಅಯ್ಯಾ! ನೀವು ಯಾರು? ನಿಮಗೆ ಈ ಗತಿ ಬರಲು ಕಾರಣವೇನು?" ಎಂದು ಕೇಳಲು, ಅವರು "ಎಲೈ ಮುನಿ ಕುಮಾರನೆ! ನಾವು ಯಾಯಾವರರೆಂಬ ಮುನಿಗಳು; ನಮ್ಮ ಕುಲ ದಲ್ಲಿ ಗಂಡು ಮಕ್ಕಳಿಲ್ಲದುದರಿಂದ ನಮಗೆ ಈ ಗತಿ ಬಂದಿದೆ; ಭಾಗ್ಯ ಹೀನವಾದ ನಮ್ಮ ಕುಲದಲ್ಲಿ ಜರತ್ಕಾರುವೆಂಬ ಅಯೋಗ್ಯನು ಹುಟ್ಟಿ ವಂಶಾಭಿವೃದ್ಧಿಗೆ ಯತ್ನಿಸದೆ ಬ್ರಹ್ಮಚಾರಿಯಾಗಿರುವುದರಿಂದ ನಾವು

ಈ ದುರ್ಗತಿಯನ್ನು ಅನುಭವಿಸಬೇಕಾಗಿದೆ” ಎಂದರು. ಇದನ್ನು ಕೇಳಿ ಜರತ್ಕಾರುವು “ಅಯ್ಯಾ! ನೀವು ನನ್ನ ಪಿತೃದೇವತೆಗಳು, ನಾನೇ ಜರತ್ಕಾರುವೆಂಬುವನು; ಇನ್ನುಮೇಲೆ ನಿಮ್ಮ ಅಪ್ಪಣೆಯಂತೆ ನಡೆದು ಕೊಂಡು ವಂಶಾಭಿವೃದ್ಧಿಗೆ ಪ್ರಯತ್ನ ಮಾಡುವೆನು” ಎನ್ನಲು, ಅವರು “ನೀನು ಹೇಗಾದರೂ ಆ ಕಾರ್ಯವನ್ನು ನಡೆಯಿಸಿ ನಮಗೆ ಸದ್ಗತಿ ಬರುವಂತೆ ಮಾಡು; ಪುತ್ರಹೀನರಿಗೆ ಪುಣ್ಯಲೋಕ ದೊರೆಯದು” ಎಂದು ಹೇಳಿದರು. ಅದಕ್ಕೆ ಜರತ್ಕಾರುವು, “ಪಿತೃಗಳಿರಾ ನನಗೆ ಮದುವೆಯಾಗಬೇಕೆಂಬ ಇಷ್ಟವು ಸ್ವಲ್ಪವೂ ಇಲ್ಲ; ಆದರೆ ನಿಮಗೆ ಸದ್ಗತಿಯನ್ನುಂಟುಮಾಡಬೇಕೆಂದು ಈಗ ಅದಕ್ಕೆ ಒಡಂಬಟ್ಟಿರುವೆನು; ನನ್ನ ಸಮಯವನ್ನರಿತು ನನ್ನ ಹೆಸರುಳ್ಳ ಕನ್ನಿಕೆಯನ್ನು ನನಗೆ ಯಾರಾದರೂ ತಾವಾಗಿಯೇ ತಂದುಕೊಟ್ಟರೆ ಮದುವೆ ಮಾಡಿಕೊಳ್ಳುವೆನು; ಸಂತಾನ ಲಾಭವಾದರೆ ನಿಮಗೆ ಪುಣ್ಯಲೋಕ ಪ್ರಾಪ್ತಿಯಾಗುವುದು” ಎಂದು ಹೇಳಿದನು.

ಅಂದಿನಿಂದ ಜರತ್ಕಾರು ಕನ್ಯಾರ್ಥಿಯಾಗಿ ಅರಣ್ಯದಲ್ಲಿ ಸಂಚರಿಸುತ್ತಿರಲು, ಈ ಉದ್ದೇಶಕ್ಕನುಕೂಲಿಸುವಂತೆ ಸಲಹಿ ಬೆಳೆಯಿಸಿ ಇಟ್ಟುಕೊಂಡಿದ್ದ ಜರತ್ಕಾರುವೆಂಬ ಕನ್ಯೆಯನ್ನು ಆಕೆಯ ಅಣ್ಣನಾದ ವಾಸುಕಿಯು ಜರತ್ಕಾರುವಿಗೆ ತಂದೊಪ್ಪಿಸಿ ಆಕೆಯನ್ನು ಪರಿಗ್ರಹಿಸೆಂದು ಕೇಳಿಕೊಂಡನು. ಅದಕ್ಕೆ ಜರತ್ಕಾರು “ಎಲೈ ವಾಸುಕಿಯೆ! ನಾನು ಇವಳನ್ನು ಸಂರಕ್ಷಿಸುವುದಿಲ್ಲ; ಇವಳು ನನಗೆ ಅಪ್ರಿಯವನ್ನು ಮಾಡಬಾರದು, ನುಡಿಯಲೂ ಬಾರದು; ಇದಕ್ಕೆ ತಪ್ಪಿದರೆ ನಾನು ಇವಳನ್ನು ಕೂಡಲೆ ಬಿಟ್ಟುಹೋಗುವೆನು; ಈ ಕಟ್ಟಳೆಗೆ ಒಪ್ಪುವೆಯಾದರೆ ಇವಳನ್ನು ಮದುವೆಯಾಗುವೆನು” ಎಂದು ಹೇಳಲು ವಾಸುಕಿಯೂ ಜರತ್ಕಾರುವೂ ಇದಕ್ಕೆ ಸಮ್ಮತಿಸಿದರು. ಮದುವೆಯಾದನಂತರ ಕಾಲಕ್ರಮದಲ್ಲಿ ಜರತ್ಕಾರು ಗರ್ಭವತಿಯಾದಳು.

ಒಂದಾನೊಂದು ದಿನ ಆ ಮುನಿಯು ಹೆಂಡತಿಯ ತೊಡೆಯ ಮೇಲೆ ತಲೆಯಿಟ್ಟುಕೊಂಡು ನಿದ್ರಿಸುತ್ತಿರಲು, ಸಂಧ್ಯಾ ಸಮಯವಾದುದನ್ನರಿತು ಪತಿಗೆ ಧರ್ಮ ಲೋಪವಾದೀತೆಂಬ ಆಲೋಚನೆಯಿಂದ